ಗುರುವಾರ, ಡಿಸೆಂಬರ್ 21, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಾಲೀಮು

ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಭಾರತ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರು ಸಹ ಆಟಗಾರ್ತಿಯರ ಜೊತೆ ಬುಧವಾರ ಅಭ್ಯಾಸ ನಡೆಸಿದರು



In a world gone tame, the new Sonet is here to set you free. Sleek in design, throbbing with power, gloriously polished and spacious on the inside; it's packed with tech & features you'll be hard-pressed to find anywhere else in the segment. So, climb into the new Sonet and let your wild side come out to play.

Technology. Redefined. Leading the segment, yet again.

Star Map LED Connected Tail Lamps

make the rear look impressive and distinctive as you drive away

26.03 cm (10.25") HD Touchscreen Navigation + 26.04 cm (10.25") Full Digital Cluster

offer detailed car information so that you are always in charge

4-Way Power Driver's Seat



helps you get the perfect driving stance and maximum comfort at the touch of a button

360 Degree Camera

keeps you aware of your surroundings at all times

Smart Pure Air Purifier with Virus and Bacteria Protection˜

ensures you and your loved ones breathe the cleanest of air inside

Bose Premium 7-speaker System

lets your favourite tracks calm you through the chaos on the streets with the finest music quality

Safety. Redefined. The beast with 10 Autonomous ADAS Features# + Robust 15 Standard Safety Features across variants

Forward Collision Warning (FCW)

alerts the driver and prevents imminent collision

Forward Collision-Avoidance Assist (FCA)

alerts the driver of imminent collision with a car/ cyclist/ pedestrian ahead, and applies brakes

Lane Departure Warning and Keep Assist (LDW and LKA)



alerts the driver whenever the car is out of its lane, and counter steers to keep it centered

High Beam Assist (HBA)

automatically adjusts the high beam/ low beam based on the oncoming vehicle's headlamp intensity

Leading Vehicle Departure Alert (LVDA)

informs the driver if the vehicle in front starts moving and driver does not react

Driver Attention Warning (DAW)

alerts the driver based on driver's attention level

Robust 15 Hi-Safety Package
STANDARD ACROSS ALL VARIANTS

Front Dual Airbags | Front Seat Side Airbags | Side Curtain Airbags | Front Ventilated Seats | ABS (Anti-lock Brake System) with EBD | BAS (Brake Force Assist System) | ESC (Electronic Stability Control) | VSM (Vehicle Stability Management) | HAC (Hill-start Assist Control) | Rear Parking Sensors | ESS (Emergency Stop Signal) | Highline Tyre Pressure Monitor | Speed Sensing Auto Door Lock | Impact Sensing Auto Door Unlock | Front & Rear All Seat 3-point Seat Belts | Seatbelt Reminder - Front & Rear All Seat

Host of Other Wild Features: Electric Sunroof | Find My Car with Surround View Monitoring | Powerful Smartstream G1.0 T-GDi Petrol Engine (88 kW & 6 000 rpm) | Refined 1.5 l CRDi VGT Diesel Engine (85 kW & 4 000 rpm) | Rear Disc Brakes | Advance Kia Connect^^ with Alexa Home to Car Connectivity | Sleek LED Fog Lamps | LED Ambient Sound Lighting | GT Line & X-Line Differentiated Body Kit | Exclusive Matte Graphite Exterior Color

Kia Service Connected · Adaptive · Responsive · Engage	3 Years Unlimited km Warranty	Extended Warranty up to 5 Years	My Convenience Plus Best-in-class Cost of Ownership^^	Scratch Care Program˜	IoT Based Smart Services##	24x7 | 3 Years Nationwide RSA**

Pre-book now Call 1800 108 5000 | 093195 91407 | Visit www.kia.com | Kia Sonet | kiacare@kiaindia.net | Look for "Kia India" @

Scan to know more

*Terms & Conditions Apply. This ad features a fictional "claw mark" on a road sign for entertainment purposes only. We do not endorse vandalism or illegal activities related to road safety. Safety is a top priority, and we urge responsible behaviour regarding traffic regulations and road safety. The product & feature images shown in this ad is for representation purpose only. Features and specifications as shown may not be part of standard fitment and may vary. The colors shown are subject to availability and may not be available across all variants and may differ slightly from those shown in this ad. Segment is defined as vehicle with length between 3 990 mm – 3 999 mm and height - 1 570 mm. ˜The tests of protection from Virus & Bacteria are conducted with a defined process, under particular circumstances in a controlled environment and the results may vary. #Available only with GTX+ and X-Line variants. Advanced Driver Assistance System (ADAS) is not a substitute for human eye and driver vigilance. It is an assistance feature that enhances driving experience and safety. Effectiveness of ADAS may vary based on actual situation and all objects around vehicle may not be detected. The driver shall remain responsible for safe, vigilant, and attentive driving. ^^Kia Connect comes with 3 years free subscription. Amazon Alexa and Smartwatch device are not standard car accessories & the customer needs to purchase from a third party. Kia Connect features may vary depending on the variant, device compatibility, software and network availability both in the vehicle and Alexa device. Kia Connect skill is only available in India and can be interacted with in English and Hindi. ^^Computed cumulatively with all benefits from comprehensive coverage. ˜Program coverage includes 1 scratch repair free of cost in an ownership period of 12 month from date of sale, applicable for new Sonet retailed up to 30th April, 2024. ##IoT based workshops for live vehicle tracking for digital experience. **RSA coverage across India except Andaman & Nicobar Islands and Lakshadweep. The specifications and features may vary depending on models/ variants. Kia India Pvt. Ltd. (Formerly known as Kia Motors India Private Limited) reserves the right to make any changes with respect to the trims, colors, specifications, Kia Connect features and other details of any model as mentioned in this brochure or to discontinue any model without prior notice. For more details visit your local Kia dealership. Kia India Pvt. Ltd. (Formerly known as Kia Motors India Private Limited) urges you to follow traffic rules, these are meant to keep you safe on roads.

FOR INFORMATION CONTACT: BENGALURU: JSP KIA, HOSUR ROAD, PH: 9606011244, BELLANDUR, PH: 9071077717, **NAARA KIA,** J.P NAGAR, PH: 7406528200, **PPS KIA,** MYSORE ROAD, PH: 6309990010, **TAAPASI KIA,** KALYAN NAGAR, PH: 8095537777, **VST KIA,** PALACE ROAD, PH: 9606988123, YESHWANTHPUR, PH: 9606988124, **ADVAITH KIA,** LALBAGH MAIN ROAD, PH: 9611006006, **EPITOME KIA,** WHITEFIELD: PH: 9606970216, YELAHANKA, PH: 7406343339, **BELGAUM: MIRACULUM KIA,** PH: 08312439111, **BELLARY: ATHENA KIA,** PH: 6364922832, **BIJAPUR: KUMAR KIA,** PH: 080 45849192, **DAVANGERE: JANSI KIA,** PH: 9538018155, **GULBARGA: KUMAR KIA,** PH: 080 45849191, **HASSAN: AADARSH KIA,** PH: 9606034050, **HOSPET: BHADRA KIA,** PH: 7760888885, **HUBLI: NAGSHANTI KIA,** PH: 9148432469, **KUSHALNAGAR: ARM KIA,** PH: 9606055314, **KOLAR: EPITOME KIA,** PH: 8951903224, **MANGALORE: ARM KIA,** PH: 9606013152, **MANDYA: AADARSH KIA,** PH: 9606034070, **MYSORE: AADARSH KIA,** PH: 9606034060, **SHIMOGA: JANSI KIA,** PH: 9538416666, **TUMKUR: PPS KIA,** PH: 6303622210, **UDUPI: ARM KIA,** PH: 9606055296

INNOCEAN-081/23

‘ಪ್ರಭಾವಿಗಳಿಗಷ್ಟೇ ಬಿಲ್ ಪಾವತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಈ ಸರ್ಕಾರದಲ್ಲಿ ಪ್ರಭಾವಿ ಗುತ್ತಿಗೆದಾರರು ಮಾತ್ರ ಹಣ ಬಿಡುಗಡೆ ಮಾಡಿಸಿಕೊಳ್ಳುತ್ತಿದ್ದಾರೆ. ಅಲ್ಲದೇ, ಜನಪ್ರತಿನಿಧಿಗಳು ಮಧ್ಯ ಪ್ರವೇಶಿಸಿ, ಜ್ಯೇಷ್ಠತೆ ಉಲ್ಲಂಘಿಸಿ ಹಣ ಬಿಡುಗಡೆಗೆ ಒತ್ತಡ ಹೇರುತ್ತಿರುವುದರಿಂದ ಸಾಮಾನ್ಯ ಗುತ್ತಿಗೆದಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ’ ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ.ಕೆಂಪಣ್ಣ ಹೇಳಿದರು.

ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರನ್ನು ಬುಧವಾರ ಭೇಟಿ ಮಾಡಿ ಗುತ್ತಿಗೆದಾರರ ಪರವಾಗಿ ಮನವಿಯೊಂದನ್ನು ಅರ್ಪಿಸಿದರು. ಹಲವು ಗುತ್ತಿಗೆದಾರರು ಎಲ್ಲವನ್ನೂ ಕಳೆದುಕೊಂಡು ಆತ್ಮಹತ್ಯೆಯ ಹಾದಿಯನ್ನು ಹಿಡಿದಿದ್ದಾರೆ ಎಂದೂ ವಿವರಿಸಿದರು.

ವಿವಿಧ ಕಾಮಗಾರಿಗಳ ಗುತ್ತಿಗೆಯನ್ನು ಪ್ಯಾಕೇಜ್ ಮೂಲಕ ನೆರೆಯ ರಾಜ್ಯಗಳ ಗುತ್ತಿಗೆದಾರರಿಗೆ ನೀಡಲಾಗುತ್ತಿದ್ದು, ಇದರಿಂದ ಸ್ಥಳೀಯ ಗುತ್ತಿಗೆದಾರರಿಗೆ ಕೆಲಸವೇ ಸಿಗದಂತಾಗಿದೆ. ನೆರೆಯ ರಾಜ್ಯದ ಗುತ್ತಿಗೆದಾರರನ್ನು ಓಲೈಸಲೆಂದೇ ಅಧಿಕಾರಿಗಳು ಪ್ಯಾಕೇಜ್ ಪದ್ಧತಿ ಜಾರಿ ಮಾಡಿದ್ದು, ಪ್ಯಾಕೇಜ್ ಪದ್ಧತಿಯನ್ನು ರದ್ದು ಮಾಡಬೇಕು ಎಂದು ಒತ್ತಾಯಿಸಿದರು.

ಲೋಕೋಪಯೋಗಿ ಇಲಾಖೆಯಿಂದ ಸುಮಾರು ₹5,000 ಕೋಟಿಗೂ ಹೆಚ್ಚು ಬಿಲ್ ಬಾಕಿ ಪಾವತಿ ಆಗಬೇಕಿದೆ. ಆದಷ್ಟು ಬೇಗ ಬಿಲ್ ಪಾವತಿಗೆ ಕ್ರಮ ತೆಗೆದುಕೊಳ್ಳಬೇಕು ಎಂದೂ ಆಗ್ರಹಿಸಿದರು.

ತುರ್ತು ಸಂದರ್ಭದಲ್ಲಿ ಎಬಿಎಆರ್‌ಕೆ ಯೋಜನೆಯಡಿ ಸವಾಲಾದ ವೈದ್ಯಕೀಯ ಸೇವೆ

ಹತ್ತಿರದ ಆಸ್ಪತ್ರೆ ಪತ್ತೆಗಿಲ್ಲ ವ್ಯವಸ್ಥೆ

• ವರುಣ ಹೆಗಡೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ (ಎಬಿಎಆರ್‌ಕೆ) ಯೋಜನೆಯಡಿ ಸಾವಿರಾರು ಆಸ್ಪತ್ರೆಗಳು ನೋಂದಾಯಿಸಿಕೊಂಡು, ಸೇವೆ ನೀಡುತ್ತಿವೆ. ಆದರೆ, ಆಸ್ಪತ್ರೆಗಳ ಜಾಲ ಗುರುತಿಸಲು ರಾಜ್ಯ ಸರ್ಕಾರ ಸೂಕ್ತ ವ್ಯವಸ್ಥೆ ರೂಪಿಸಿಲ್ಲ. ಹೀಗಾಗಿ, ತುರ್ತು ಸಂದರ್ಭದಲ್ಲಿ ರೋಗಿಗಳು ಹಾಗೂ ಅವರ ಕಡೆಯವರು ಪರದಾಟ ನಡೆಸುವ ಸ್ಥಿತಿ ಇದೆ.

ವಿವಿಧ ಖಾಸಗಿ ವಿಮಾ ಕಂಪನಿಗಳು ನೋಂದಾಯಿತ ಆಸ್ಪತ್ರೆಗಳನ್ನು ಗುರುತಿಸಲು ಮೊಬೈಲ್ ಆ್ಯಪ್ ಹಾಗೂ ಜಾಲತಾಣಗಳನ್ನು ಅಭಿವೃದ್ಧಿಪಡಿಸಿವೆ. ಇದರಿಂದಾಗಿ ತುರ್ತು ಸಂದರ್ಭದಲ್ಲಿ ಸುಲಭವಾಗಿ ಹತ್ತಿರದ ನೋಂದಾಯಿತ ಆಸ್ಪತ್ರೆ ಗುರುತಿಸಲು ಸಾಧ್ಯ. ರಾಜ್ಯ ಸರ್ಕಾರವು ಈ ರೀತಿಯ ವ್ಯವಸ್ಥೆಯನ್ನು ರೂಪಿಸಿಲ್ಲ. ಇದರಿಂದಾಗಿ ಫಲಾನುಭವಿಗಳು ಯೋಜನೆಯಡಿ ಕಾರ್ಡ್ ಹೊಂದಿದ್ದರೂ ಹತ್ತಿರದ ಆಸ್ಪತ್ರೆ ಗುರುತಿಸುವುದು ಸವಾಲಾಗಿ ಪರಿಣಮಿಸಿದ್ದು, ತುರ್ತು ಸಂದರ್ಭದಲ್ಲಿ ಯೋಜನೆಯಡಿ ಸೇವೆ ಪಡೆಯಲು ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಡಬೇಕಾಗಿದೆ.

ಯೋಜನೆ ಪ್ರಾರಂಭವಾದಾಗ ‘ಆರೋಗ್ಯ ಕರ್ನಾಟಕ’ ಜಾಲತಾಣದಲ್ಲಿ ನೋಂದಾಯಿತ ಆಸ್ಪತ್ರೆಗಳ ಪಟ್ಟಿಯನ್ನು ಅಳವಡಿಸಲಾಗಿತ್ತು. ಯೋಜನೆ ನಿರ್ವಹಿಸುತ್ತಿರುವ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಜಾಲತಾಣದಲ್ಲಿಯೂ ಆಸ್ಪತ್ರೆಗಳ ಪಟ್ಟಿಯನ್ನು ಹಾಕಿ, ಹುಡುಕುವ ಅವಕಾಶ ನೀಡಲಾಗಿತ್ತು. ಈಗ ಈ ಎರಡೂ ಜಾಲತಾಣಗಳು ಕಾರ್ಯನಿರ್ವಹಿಸುತ್ತಿಲ್ಲ. ಕೇಂದ್ರ ಸರ್ಕಾರದ ಪಿಎಂಜೆಎವೈ (ಪ್ರಧಾನ್ ಮಂತ್ರಿ ಜನ್ ಆರೋಗ್ಯ ಯೋಜನಾ) ಜಾಲತಾಣ ಹಾಗೂ ಆ್ಯಪ್ ಮೂಲಕ ಯೋಜನೆಯಡಿಯ ಆಸ್ಪತ್ರೆಗಳನ್ನು ಹುಡುಕಬೇಕಾಗಿದೆ. ಆ್ಯಪ್ ಕಾರ್ಯವಿಧಾನದ ಬಗ್ಗೆ ಬಳಕೆದಾರರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ತುರ್ತು ಸಂದರ್ಭದಲ್ಲಿ ಅವಕಾಶ: ‘ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ’ ಯೋಜನೆ 2018ರಲ್ಲಿ ಆರಂಭವಾಗಿದ್ದು, ಯೋಜನೆ ಯಡಿ ಬಿಪಿಎಲ್ ಕುಟುಂಬದವರಿಗೆ ವರ್ಷಕ್ಕೆ ₹ 5 ಲಕ್ಷದವರೆಗೆ ಆರೋಗ್ಯ ವಿಮೆಗೆ ಅವಕಾಶವಿದೆ. ರಾಜ್ಯದಲ್ಲಿ 62.09 ಲಕ್ಷ ಕುಟುಂಬಗಳು ‘ಆಯುಷ್ಮಾನ್ ಭಾರತ್’ ಯೋಜನೆ ಅಡಿ ಬರಲಿವೆ. ಉಳಿದ ಕುಟುಂಬಗಳನ್ನು ‘ಆರೋಗ್ಯ ಕರ್ನಾಟಕ’ ಯೋಜನೆಯಡಿ ಸೇರ್ಪಡೆ ಮಾಡಲಾಗಿದೆ. ಎಪಿಎಲ್ ಕುಟುಂಬದ ಸದಸ್ಯರಿಗೆ ಗರಿಷ್ಠ ₹ 1.50 ಲಕ್ಷ ಚಿಕಿತ್ಸಾ ವೆಚ್ಚ ನಿಗದಿ ಮಾಡಿದ್ದು, ಶೇ 30ರಷ್ಟು ಹಣವನ್ನು ಪಾವತಿಸಲಾಗುತ್ತದೆ.

ಈ ಯೋಜನೆಯ ಲಾಭ ಪಡೆಯಲು ಫಲಾನುಭವಿಗಳು ಮೊದಲು ಸರ್ಕಾರಿ ಆಸ್ಪತ್ರೆಗಳಿಗೆ ತೆರಳಬೇಕು. ಅಲ್ಲಿ ಸೇವೆ ಇಲ್ಲದಿದ್ದಲ್ಲಿ ಶಿಫಾರಸು ಆಧಾರದಲ್ಲಿ ಸೂಚಿಸಿದ ಖಾಸಗಿ ಆಸ್ಪತ್ರೆಗೆ ಹೋಗಿ, ಚಿಕಿತ್ಸೆ ಪಡೆದುಕೊಳ್ಳಬೇಕು. ತುರ್ತು ಸಂದರ್ಭದಲ್ಲಿ ನೇರವಾಗಿ ಖಾಸಗಿ ಆಸ್ಪತ್ರೆಗೆ ದಾಖಲಾಗುವ ಅವಕಾಶವಿದ್ದರೂ ಆಸ್ಪತ್ರೆ ಗುರುತಿಸುವಿಕೆ ಸಮಸ್ಯೆಯಿಂದ ಕೆಲವರಿಗೆ ಯೋಜನೆಯ ಸೌಲಭ್ಯ ದೊರೆಯುತ್ತಿಲ್ಲ.

‘ಯೋಜನೆಯಡಿ ನೋಂದಾಯಿಸಲ್ಪಟ್ಟ ಸಮೀಪದ ಆಸ್ಪತ್ರೆ ಗುರುತಿಸುವ ವ್ಯವಸ್ಥೆಯನ್ನು ಸರ್ಕಾರ ರೂಪಿಸಬೇಕು. ಆಗ ತುರ್ತು ಸಂದರ್ಭದಲ್ಲಿ ಯೋಜನೆ ನೆರವಾಗಲಿದೆ. ತಂತ್ರಜ್ಞಾನ ಮುಂದುವರಿದಿದ್ದು, ಕೆಲ ವಿಮೆ ಕಂಪನಿಗಳು ಜಿಪಿಎಸ್ ತಂತ್ರಜ್ಞಾನದ ನೆರವಿನಿಂದ ಸುಲಭವಾಗಿ ಹತ್ತಿರದ ಆಸ್ಪತ್ರೆ ಗುರುತಿಸುವ ವ್ಯವಸ್ಥೆ ರೂಪಿಸಿವೆ. ಆದರೆ, ಈ ಬಗ್ಗೆ ಗಮನಹರಿಸದೆ, ಕಾರ್ಡ್ ವಿತರಣೆಯಂತಹ ಕ್ರಮಕ್ಕೆ ಆದ್ಯತೆ ನೀಡಲಾಗುತ್ತಿದೆ’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಇಲಾಖೆಯ ನಿವೃತ್ತ ಅಧಿಕಾರಿಯೊಬ್ಬರು ತಿಳಿಸಿದರು.

ಇಲಾಖೆ ಸಚಿವ ದಿನೇಶ ಗುಂಡೂರಾವ್ ದೂರವಾಣಿ ಸಂಪರ್ಕಕ್ಕೆ ಲಭ್ಯರಾಗಿಲ್ಲ.

ಅಂಕಿ–ಅಂಶ

2,942 ಯೋಜನೆಯಡಿ ನೋಂದಾಯಿಸಲ್ಪಟ್ಟ ಸರ್ಕಾರಿ ಆಸ್ಪತ್ರೆಗಳು

522 ಯೋಜನೆಯಡಿ ನೋಂದಾಯಿಸಲ್ಪಟ್ಟ ಖಾಸಗಿ ಆಸ್ಪತ್ರೆಗಳು

1,650 ಯೋಜನೆಯಡಿಯ ಚಿಕಿತ್ಸಾ ಪ್ಯಾಕೇಜ್‌ಗಳು

ಖಾಸಗಿ ಆಸ್ಪತ್ರೆಗಳು ನಿರಾಸಕ್ತಿ

ಹೃದಯಾಘಾತ, ರಸ್ತೆ ಅಪಘಾತದಂತಹ ಪ್ರಕರಣಗಳಲ್ಲಿ ತುರ್ತು ಚಿಕಿತ್ಸೆ ಅಗತ್ಯ. ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ ಯೋಜನೆಯಡಿ 3 ಸಾವಿರಕ್ಕೂ ಅಧಿಕ ಆಸ್ಪತ್ರೆಗಳು ನೋಂದಾಯಿಸಲ್ಪಟ್ಟಿವೆ. ಆದರೆ, ಬಹುತೇಕವು ಸರ್ಕಾರಿ ಆಸ್ಪತ್ರೆಗಳೇ ಆಗಿವೆ. ಚಿಕಿತ್ಸೆಯ ಪ್ಯಾಕೇಜ್ ದರ ಪರಿಷ್ಕರಿಸದ ಕಾರಣಕ್ಕೆ ಖಾಸಗಿ ಆಸ್ಪತ್ರೆಗಳು ನಿರಾಸಕ್ತಿ ತಾಳಿವೆ. ಇದರಿಂದಾಗಿ ತುರ್ತು ಸಂದರ್ಭದಲ್ಲಿ ಯೋಜನೆಯಡಿ ಚಿಕಿತ್ಸೆ ಪಡೆಯಲು ಖಾಸಗಿ ಆಸ್ಪತ್ರೆಗಳ ಆಯ್ಕೆ ಇಲ್ಲವಾಗಿದೆ.

ಆರೋಗ್ಯ ಇಲಾಖೆ ಮಾಹಿತಿ ಪ್ರಕಾರ ರಾಜ್ಯದಲ್ಲಿ ಪ್ರತಿ ವರ್ಷ ಸುಮಾರು 96 ಸಾವಿರ ಮಂದಿ ಹಠಾತ್ ಹೃದಯಾಘಾತದಿಂದ ಮೃತಪಡುತ್ತಿದ್ದಾರೆ. ರಸ್ತೆ ಅಪಘಾತದ ಗಾಯಗಳೂ ರಾಜ್ಯದಲ್ಲಿ ಹೆಚ್ಚಾಗುತ್ತಿದೆ. ರಾಜ್ಯ ಅಪರಾಧ ದಾಖಲೆಗಳ ಬ್ಯೂರೊ ಮಾಹಿತಿ ಪ್ರಕಾರ ರಸ್ತೆ ಅಪಘಾತದಿಂದ ವಾರ್ಷಿಕ ಸರಾಸರಿ 13 ಸಾವಿರ ಮರಣ ಪ್ರಕರಣಗಳು ವರದಿಯಾಗುತ್ತವೆ. 4 ಲಕ್ಷ ಗಂಭೀರ ಗಾಯ ಪ್ರಕರಣಗಳು ದಾಖಲಾಗುತ್ತಿವೆ.

ಸುದ್ದಿ 2 ನಿಮಿಷ

ಮೋದಿ ವರ್ಸಸ್ ಖರ್ಗೆ ಪರಿಣಾಮ ಬೀರಲಿದೆ- ಸತೀಶ ಜಾರಕಿಹೊಳಿ

ಬೆಂಗಳೂರು: ‘ಇಲ್ಲಿಯವರೆಗೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪರ್ಯಾಯವಾಗಿರುವ ನಾಯಕ ಸಿಕ್ಕಿರಲಿಲ್ಲ. ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಮಲ್ಲಿಕಾರ್ಜುನ ಖರ್ಗೆ ಸರಿಸಮ ನಾಯಕರಾಗಿ ಬಿಂಬಿತರಾಗಲಿದ್ದಾರೆ. ಮೋದಿ ವರ್ಸಸ್ ಖರ್ಗೆ ಎಂಬುದು ಖಂಡಿತ ಪರಿಣಾಮ ಬೀರಲಿದೆ’ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, ‘ವಿರೋಧ ಪಕ್ಷಗಳ ಮೈತ್ರಿಕೂಟ ‘ಇಂಡಿಯಾ’ದ ಸದಸ್ಯರು ಖರ್ಗೆ ಅವರನ್ನು ಪ್ರಧಾನಿ ಅಭ್ಯರ್ಥಿಯನ್ನಾಗಿ ಪ್ರಸ್ತಾಪ ಮಾಡಿರುವುದು ಒಳ್ಳೆಯ ಬೆಳವಣಿಗೆ’ ಎಂದರು.

‘ಖರ್ಗೆ ಮತ್ತೊಮ್ಮೆ ಲೋಕಸಭೆ ಪ್ರವೇಶಿಸಬೇಕೆಂಬ ಆಸೆ ನಮಗೂ ಇದೆ. ಅವರು ಚುನಾವಣೆಗೆ ಸ್ಪರ್ಧಿಸುವುದಿಲ್ಲ ಎಂದು ನಮಗೆ ಎಲ್ಲೂ ಹೇಳಿಲ್ಲ. ದೇಶ ಇಡೀ ಓಡಾಡಿ ಪಕ್ಷ ಕಟ್ಟುತ್ತಿದ್ದಾರೆ. ಖರ್ಗೆಯವರು ಮಾಡಿದ ಕೆಲಸಗಳು ಈಗ ಜನರಿಗೆ ತಿಳಿಯುತ್ತಿವೆ’ ಎಂದರು.

ಸಚಿವರು ಸಹಿ ಹಾಕಿದ್ದರಲ್ಲಿ ತಪ್ಪಿಲ್ಲ: ‘ಸಚಿವರು ಸಹಿ ಹಾಕಿದ್ದರಲ್ಲಿ ಯಾವುದೇ ತಪ್ಪಿಲ್ಲ. ಅವರ ಸಮುದಾಯದ ಪರವಾಗಿ ಸಚಿವರು ನಿಲ್ಲಬೇಕಾಗುತ್ತದೆ. ಯಾವ ಸಚಿವರೂ ಜಾತಿ ಗಣತಿಗೆ ವಿರೋಧ ಮಾಡುತ್ತಿಲ್ಲ. ಈಗಿನ ವರದಿಯಲ್ಲಿ ಲೋಪ ಇದೆ ಎನ್ನುತ್ತಿದ್ದಾರೆ. ವರದಿ ಸ್ವೀಕರಿಸಿದ ಬಳಿಕ ಚರ್ಚೆಯಾಗಲಿ. ಲೋಪ ಸರಿಮಾಡಲು ಅವಕಾಶವಿದೆ’ ಎಂದರು.

‘ಅನುದಾನಿತ ಶಾಲೆಗಳಿಗೆ ತಾರತಮ್ಯ’

ಬೆಂಗಳೂರು: ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತಿದೆ ಎಂಬ ನೆಪ ನೀಡಿ ನೂರಾರು ಅನುದಾನಿತ ಕನ್ನಡ ಶಾಲೆಗಳನ್ನು ಮುಚ್ಚಿಸಲಾಗುತ್ತಿದೆ ಎಂದು ನೋಂದಾಯಿತ ಅನುದಾನ ರಹಿತ ಖಾಸಗಿ ಶಾಲೆಗಳ ಆಡಳಿತ ಮಂಡಳಿ ಸಂಘ (ರುಪ್ಸ) ಆರೋಪಿಸಿದೆ.

ಅನುದಾನಿತ ಶಿಕ್ಷಣ ಸಂಸ್ಥೆಗಳು ನಡೆಸುತ್ತಿರುವ ಶಾಲೆಗಳಲ್ಲಿ ಸಾಕಷ್ಟು ಹುದ್ದೆಗಳು ಖಾಲಿ ಇವೆ. ದಶಕದಿಂದ ಹುದ್ದೆಗಳ ಭರ್ತಿಗೆ ಸರ್ಕಾರ ಅನುಮತಿ ನೀಡಿಲ್ಲ. ಶಿಕ್ಷಕರ ಕೊರತೆಯಿಂದಾಗಿ ಪಾಠಗಳು ನಡೆಯದೆ ಬೇರೆ ಶಾಲೆಗಳತ್ತ ವಿದ್ಯಾರ್ಥಿಗಳು ಮುಖ ಮಾಡಿದ್ದಾರೆ. ಹಾಗಾಗಿ, ಶಿಕ್ಷಕರ ಸಂಖ್ಯೆ ಕಡಿಮೆಯಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬರೆದ ಪತ್ರದಲ್ಲಿ ರುಪ್ಸ ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ ವಿವರಿಸಿದ್ದಾರೆ.

ಕನಿಷ್ಠ 70 ವಿದ್ಯಾರ್ಥಿಗಳು ಇದ್ದರೆ ಮಾತ್ರ ಅನುದಾನಿತ ಶಾಲೆಗಳ ಮಾನ್ಯತೆ ನೀಡಲಾಗುತ್ತದೆ. ಕಡಿಮೆಯಾದ ಶಾಲೆಗಳ ಮಾನ್ಯತೆ ರದ್ದು ಮಾಡಲಾಗುತ್ತಿದೆ. ಅದೇ ನೀತಿ ಸರ್ಕಾರಿ ಶಾಲೆಗಳಿಗೆ ಇಲ್ಲ. ತರಗತಿವಾರು ಮಕ್ಕಳ ಸಂಖ್ಯೆ ಕಡಿಮೆ ಇದೆ ಎಂಬ ನೆಪ ನೀಡಿ ನಾಲ್ಕು ತಿಂಗಳಿನಿಂದ ಶಿಕ್ಷಕರ ವೇತನವನ್ನೂ ನೀಡಿಲ್ಲ. ಸಮವಸ್ತ್ರ, ಪುಸ್ತಕ ಮತ್ತಿತರ ಸೌಲಭ್ಯಗಳಲ್ಲೂ ತಾರತಮ್ಯ ನೀತಿ ಅನುಸರಿಸಲಾಗುತ್ತಿದೆ ಎಂದು ದೂರಿದ್ದಾರೆ.

ನಿಗಮ–ಮಂಡಳಿಗೆ ನೇಮಕ: ಮತ್ತಷ್ಟು ತಡ?

ಹೈಕಮಾಂಡ್ ಜತೆ ಸಿ.ಎಂ, ಡಿಸಿಎಂ ಸಮಾಲೋಚನೆ • ಕಾರ್ಯಕರ್ತರಿಗೆ ಅಧಿಕಾರ: ರಾಹುಲ್

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ನಿಗಮ–ಮಂಡಳಿಗಳಿಗೆ ಅಧ್ಯಕ್ಷರುಗಳ ನೇಮಕ ಪ್ರಕ್ರಿಯೆ ಇನ್ನಷ್ಟು ತಡವಾಗುವ ಸಾಧ್ಯತೆ ಇದೆ. ನಿಗಮ–ಮಂಡಳಿಗಳಲ್ಲಿ ಶಾಸಕರ ಜತೆಗೆ ಕಾರ್ಯಕರ್ತರಿಗೂ ಮೊದಲ ಹಂತದಲ್ಲೇ ಅಧಿಕಾರ ನೀಡಬೇಕು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸೂಚಿಸಿದ್ದಾರೆ.

ನಿಗಮ–ಮಂಡಳಿಗಳಿಗೆ ಅಧ್ಯಕ್ಷರ ಹೆಸರನ್ನು ಅಖೈರುಗೊಳಿಸಲು ಸಿ.ಎಂ- ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಹಲವು ಸುತ್ತಿನ ಸಮಾಲೋಚನೆ ನಡೆಸಿದ್ದರು. ಮೊದಲ ಹಂತದಲ್ಲಿ ಶಾಸಕರಿಗೆ ಅಧಿಕಾರ ನೀಡಬೇಕು ಎಂದು ಸಿದ್ದರಾಮಯ್ಯ ಪ್ರತಿಪಾದಿಸಿದ್ದರೆ, ಕಾರ್ಯಕರ್ತರಿಗೂ ಅವಕಾಶ ನೀಡಬೇಕು ಎಂದು ಶಿವಕುಮಾರ್ ಪಟ್ಟು ಹಿಡಿದಿದ್ದರು. ಮೊದಲ ಹಂತದಲ್ಲಿ 35 ನಿಗಮ–ಮಂಡಳಿಗಳಿಗೆ ಶಾಸಕರನ್ನು ಅಧ್ಯಕ್ಷರನ್ನು ನೇಮಿಸಲು ಉಭಯ ನಾಯಕರು ಸಹಮತಕ್ಕೆ ಬಂದಿದ್ದರು. ಶಿವಕುಮಾರ್ ನಿವಾಸದಲ್ಲಿ ಮಂಗಳವಾರ ರಾತ್ರಿ ಇಬ್ಬರು ನಾಯಕರು ಸಭೆ ಸೇರಿ ಪಟ್ಟಿಗೆ ಅಂತಿಮ ರೂಪ ನೀಡಿದ್ದರು.

ರಾಹುಲ್ ಗಾಂಧಿ ಅವರನ್ನು ಬುಧವಾರ ಮಧ್ಯಾಹ್ನ ಭೇಟಿ ಮಾಡಿದ ಸಿದ್ದರಾಮಯ್ಯ, ರಾಜ್ಯದಿಂದ ಅಖೈರುಗೊಳಿಸಿರುವ ಪಟ್ಟಿಯನ್ನು ನೀಡಿದರು. ಮೊದಲ ಹಂತದಲ್ಲಿ ಶಾಸಕರನ್ನು ಅಧ್ಯಕ್ಷ ರನ್ನಾಗಿ ನೇಮಕ ಮಾಡಲು ಉದ್ದೇಶಿಸಿದ್ದನ್ನು ಪ್ರಸ್ತಾಪಿಸಿದರು. ಈ ಮಾತಿಗೆ ರಾಹುಲ್ ಒಪ್ಪಲಿಲ್ಲ. ‘ರಾಜ್ಯದಲ್ಲಿ ಪಕ್ಷ ಅಭೂತಪೂರ್ವ ಜಯ ಗಳಿಸಲು ಕಾರ್ಯಕರ್ತರ ಶ್ರಮವೂ ಕಾರಣ. ಶಾಸಕರ ಜತೆಗೆ ಕಾರ್ಯಕರ್ತರಿಗೂ ಅಧಿಕಾರ ನೀಡಬೇಕು. ಲೋಕಸಭಾ ಚುನಾವಣೆಗೆ ಕೆಲವೇ ತಿಂಗಳುಗಳು ಉಳಿದಿವೆ. ಈ ಹಂತದಲ್ಲಿ ಕಾರ್ಯಕರ್ತರಿಗೆ ಅಧಿಕಾರ ನೀಡದಿದ್ದರೆ ತಪ್ಪು ಸಂದೇಶ ಹೋಗುತ್ತದೆ. ಹೀಗಾಗದಂತೆ ಎಚ್ಚರ ವಹಿಸಿ’ ಎಂದು ರಾಹುಲ್ ಕಿವಿಮಾತು ಹೇಳಿದರು ಎಂದು ಗೊತ್ತಾಗಿದೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಬುಧವಾರ ರಾತ್ರಿ ಭೇಟಿ ಮಾಡಿ ಸಮಾಲೋಚನೆ ನಡೆಸಿದರು. ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಸಿದ್ದರಾಮಯ್ಯ, ‘ನಾವು ಅಖೈರುಗೊಳಿಸಿದ ಪಟ್ಟಿಯನ್ನು ಪಕ್ಷದ ವರಿಷ್ಠರಿಗೆ ನೀಡಿದ್ದೇವೆ. ಪಟ್ಟಿಯನ್ನು ಇನ್ನೂ ನೋಡಿಲ್ಲ ಎಂದು ಖರ್ಗೆಯವರು ತಿಳಿಸಿದ್ದಾರೆ. ನೋಡಿ ತಿಳಿಸುವುದಾಗಿ ಭರವಸೆ ನೀಡಿದ್ದಾರೆ’ ಎಂದರು. ಶಿವಕುಮಾರ್ ಸಹ ಧ್ವನಿಗೂಡಿಸಿದರು.

‘ಈ ಪಟ್ಟಿಗೆ ಒಂದೆರಡು ದಿನಗಳಲ್ಲಿ ವರಿಷ್ಠರ ಒಪ್ಪಿಗೆ ಸಿಕ್ಕರೂ ಸಿಗಬಹುದು. ಇಲ್ಲದಿದ್ದರೆ 15 ದಿನಗಳೂ ಆಗಬಹುದು’ ಎಂದು ರಾಜ್ಯದ ಉನ್ನತ ನಾಯಕರೊಬ್ಬರು ತಿಳಿಸಿದರು.

ನಮ್ಮ ಕೈಗೂ ಅಧಿಕಾರ ಕೊಡಿ: ಮುಖಂಡರು

‘ಪಕ್ಷ ಅಧಿಕಾರಕ್ಕೆ ಬಂದ ಕೆಲವೇ ದಿನಗಳಲ್ಲಿ ಕಾರ್ಯಕರ್ತರ ಕೈಗೆ ಅಧಿಕಾರ ನೀಡುವುದಾಗಿ ಡಿ.ಕೆ. ಶಿವಕುಮಾರ್ ಭರವಸೆ ನೀಡಿದ್ದರು. ಪಕ್ಷ ಅಧಿಕಾರಕ್ಕೆ ಬಂದು ಏಳು ತಿಂಗಳುಗಳು ಕಳೆದಿವೆ. ಈಗ ನಿಗಮ–ಮಂಡಳಿಗಳಿಗೆ ಶಾಸಕರನ್ನು ನೇಮಕ ಮಾಡಲು ಹೊರಟಿದ್ದಾರೆ’.

ಹೀಗೆಂದು ಅಸಮಾಧಾನ ವ್ಯಕ್ತಪಡಿಸಿದವರು ಬಳ್ಳಾರಿ, ಹಾಸನ ಹಾಗೂ ಮೈಸೂರು ಭಾಗದ ಕಾಂಗ್ರೆಸ್ ಮುಖಂಡರು.

ನಿಗಮ–ಮಂಡಳಿಗಳ ಅಧ್ಯಕ್ಷ ಸ್ಥಾನಕ್ಕೆ ಲಾಬಿ ನಡೆಸಲು ನವದೆಹಲಿಗೆ ದೌಡಾಯಿಸಿರುವ ಈ ಮುಖಂಡರು ಕೆಪಿಸಿಸಿ ಅಧ್ಯಕ್ಷರು, ಮುಖ್ಯಮಂತ್ರಿ ಹಾಗೂ ಸಚಿವರ ಧೋರಣೆಗೆ ತೀವ್ರ ಬೇಸರ ವ್ಯಕ್ತಪಡಿಸಿದರು. ಕರ್ನಾಟಕ ಭವನದಲ್ಲಿ ಬುಧವಾರ ಸಂಜೆ ಮುಖ್ಯಮಂತ್ರಿ ಅವರನ್ನು ಭೇಟಿಯಾಗಲು ಕಾದು ಕುಳಿತಿದ್ದ ಈ ಮುಖಂಡರು, ‘ನಮ್ಮ ಹಿರಿಯ ನಾಯಕರೆಲ್ಲ ಅಧಿಕಾರದ ಸುಖ ಅನುಭವಿಸುತ್ತಿದ್ದಾರೆ. ನಾವು ಇನ್ನೂ ಬೀದಿಯಲ್ಲೇ ಇದ್ದೇವೆ. ನಮ್ಮ ಕೈಗೆ ಅಧಿಕಾರ ಕೊಡುವುದು ಯಾವಾಗ?’ ಎಂದರು.

‘ವಿಧಾನಸಭಾ ಚುನಾವಣೆಗೆ ಒಂದೊಂದು ಕ್ಷೇತ್ರಕ್ಕೆ 10–15 ಆಕಾಂಕ್ಷಿಗಳು ಇದ್ದೆವು. ಕೆಪಿಸಿಸಿ ಸೂಚಿಸಿದಷ್ಟು ಹಣ ತುಂಬಿ ಅರ್ಜಿ ಸಲ್ಲಿಸಿದ್ದೆವು. ಪಕ್ಷದ ಭಾರತ್ ಜೋಡೊ ಭವನ ನಿರ್ಮಾಣಕ್ಕೆ ನೆರವು ನೀಡಿದ್ದೆವು. ಚುನಾವಣೆ ಸಂದರ್ಭದಲ್ಲಿ ನಮ್ಮನ್ನು ಕರೆದು ಶಿವಕುಮಾರ್ ಮಾತನಾಡಿಸಿದ್ದರು. ಅಧಿಕಾರಕ್ಕೆ ಬಂದ ಕೂಡಲೇ ನಿಮಗೆಲ್ಲ ಅಧಿಕಾರ ನೀಡುತ್ತೇವೆ ಎಂದು ಅಭಯ ನೀಡಿದ್ದರು. ಈಗ ನಮ್ಮ ಕಡೆಗೆ ಗಮನ ಹರಿಸುತ್ತಿಲ್ಲ’ ಎಂದು ಹಾಸನ ಭಾಗದ ಮುಖಂಡರೊಬ್ಬರು ಅಸಮಾಧಾನ ವ್ಯಕ್ತಪಡಿಸಿದರು.

‘ನಮ್ಮ ಅಭ್ಯರ್ಥಿಗಳ ಗೆಲುವಿಗೆ ತನು ಮನ ಧನದ ಸಹಾಯ ಮಾಡಿದ್ದೇವೆ. ಈಗ ಅದನ್ನೆಲ್ಲ ಮರೆತು ಬಿಟ್ಟಿದ್ದಾರೆ. ಸಚಿವರು ಸಹ ನಮ್ಮ ಕೆಲಸಗಳನ್ನು ಮಾಡಿಕೊಡುತ್ತಿಲ್ಲ. ಕೆಲವು ಸಚಿವರನ್ನು ಭೇಟಿ ಮಾಡುವುದೇ ಅಸಾಧ್ಯ ಎಂಬ ಪರಿಸ್ಥಿತಿ ಇದೆ. ಲೋಕಸಭಾ ಚುನಾವಣೆಗೆ ಮುನ್ನ ನಮ್ಮ ಕೈಗೆ ಅಧಿಕಾರ ಕೊಡಬೇಕು’ ಎಂದು ಮತ್ತೊಬ್ಬ ಮುಖಂಡರು ಆಗ್ರಹಿಸಿದರು.

‘ನಿಗಮ–ಮಂಡಳಿಗಳಿಗೆ ಶಾಸಕರನ್ನು ನೇಮಕ ಮಾಡುವುದು ಬೇಡ ಎಂದೇನೂ ನಾವು ಹೇಳುತ್ತಿಲ್ಲ. 100ಕ್ಕೂ ಅಧಿಕ ನಿಗಮ ಮಂಡಳಿಗಳಿವೆ. ಅದರಲ್ಲಿ 40 ನಿಗಮ ಮಂಡಳಿಗಳಿಗೆ ಶಾಸಕರ ನೇಮಕ ಮಾಡಲಿ. ಉಳಿದ ಮಂಡಳಿಗಳಿಗೆ ನಮ್ಮನ್ನು ಪರಿಗಣಿಸಲಿ. ಎರಡು ವರ್ಷಗಳ ಬಳಿಕ ಮತ್ತಷ್ಟು ಮಂದಿಗೆ ಅಧಿಕಾರ ಕೊಡಲಿ’ ಎಂದು ಮೈಸೂರಿನ ಮುಖಂಡರೊಬ್ಬರು ಒತ್ತಾಯಿಸಿದರು.

ಸೂರಜ್ ಆಯ್ಕೆ ಅಸಿಂಧು ಕೋರಿದ್ದ ಅರ್ಜಿ ವಜಾ

ಬೆಂಗಳೂರು: ‘ಹಾಸನ ಕ್ಷೇತ್ರದ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾಗಿರುವ ಜೆಡಿಎಸ್‌ನ ಸೂರಜ್ ರೇವಣ್ಣ ಅವರ ಆಯ್ಕೆಯನ್ನು ಅಸಿಂಧು ಎಂದು ಘೋಷಿಸಬೇಕು’ ಎಂದು ಕೋರಲಾಗಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಕುರಿತಂತೆ ಹೊಳೆನರಸೀಪುರ ತಾಲ್ಲೂಕಿನ ಕಾಮಸಮುದ್ರ ಗ್ರಾಮದ ಎಲ್.ಹನುಮೇಗೌಡ ಸಲ್ಲಿಸಿದ್ದ ಚುನಾವಣಾ ತಕರಾರು ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ಪ್ರಕಟಿಸಿತು. ಸೂರಜ್ ರೇವಣ್ಣ ಪರ ಹೈಕೋರ್ಟ್ ವಕೀಲ ಎ.ವಿ. ನಿಶಾಂತ್ ಹಾಗೂ ಅರ್ಜಿದಾರರ ಪರ ಹಿರಿಯ ವಕೀಲೆ ಪ್ರಮೀಳಾ ನೇಸರ್ಗಿ ವಾದ ಮಂಡಿಸಿದ್ದರು.

ಆರೋಪ ಏನಿತ್ತು?: ‘ಸೂರಜ್ ರೇವಣ್ಣ 2017ರ ಮಾರ್ಚ್ 4ರಂದು ಹೈಕೋರ್ಟ್ ನ್ಯಾಯಮೂರ್ತಿಯೊಬ್ಬರ ಪುತ್ರಿಯನ್ನು ಮದುವೆಯಾಗಿದ್ದಾರೆ. ಆದರೆ, ನಾಮಪತ್ರ ಸಲ್ಲಿಕೆ ವೇಳೆ ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರದ ಅರ್ಜಿ ನಮೂನೆ 26ರಲ್ಲಿ ತಮ್ಮ ಪತ್ನಿಗೆ ಸಂಬಂಧಿಸಿದ ಯಾವುದೇ ಮಾಹಿತಿಗಳನ್ನು ವಿವರಿಸಿಲ್ಲ’ ಎಂದು ಅರ್ಜಿದಾರರು ಆರೋಪಿಸಿದ್ದರು.

ಸ್ವಾಮೀಜಿಗೆ ಹೈಕೋರ್ಟ್ ತರಾಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ನ್ಯಾಯಾಲಯ ಮತ್ತು ನ್ಯಾಯಮೂರ್ತಿಗಳ ಬಗ್ಗೆ ಉಪೇಕ್ಷೆಯಿಂದ ಮಾತನಾಡಿದ್ದಾರೆ’ ಎಂಬ ಹಿನ್ನೆಲೆಯಲ್ಲಿ ಶಿವಮೊಗ್ಗ ಜಿಲ್ಲೆ ಹೊನ್ನಾಳಿ ತಾಲ್ಲೂಕಿನ ರಾಮಲಿಂಗೇಶ್ವರ ಮಠದ ಪೀಠಾಧಿಪತಿ ನೀಲಕಂಠ ಸಾರಂಗ ದೇಶಿಕೇಂದ್ರ ಸ್ವಾಮೀಜಿಯನ್ನು ತೀವ್ರ ತರಾಟೆಗೆ ತೆಗೆದುಕೊಂಡ ಹೈಕೋರ್ಟ್, ‘ನಿಮ್ಮಂಥ ಶ್ರೇಷ್ಠ ಸ್ಥಾನದಲ್ಲಿರುವ ಸ್ವಾಮೀಜಿಗಳು ನ್ಯಾಯಾಧೀಶರು, ನ್ಯಾಯಾಲಯದ ಬಗ್ಗೆ ಗೌರವ ಬರುವ ರೀತಿಯಲ್ಲಿ ನಡೆದುಕೊಳ್ಳಬೇಕು, ಇಲ್ಲವಾದಲ್ಲಿ ನಮ್ಮ ಕೆಲಸ ನಾವು ಮಾಡಬೇಕಾಗುತ್ತದೆ’ ಎಂದು ಎಚ್ಚರಿಸಿತು.

ಸ್ವಾಮೀಜಿ ವಿರುದ್ಧ ದಾಖಲಾಗಿದ್ದ ನ್ಯಾಯಾಂಗ ನಿಂದನೆ ಮೊಕದ್ದಮೆ ವಿಚಾರಣೆ ವೇಳೆ ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ, ಸ್ವಾಮೀಜಿ ಸಲ್ಲಿಸಿದ್ದ ಕ್ಷಮೆಯಾಚನೆ ಪರಿಶೀಲಿಸಿ, ‘ಸಾಮಾನ್ಯ ಮನುಷ್ಯ ನ್ಯಾಯಾಲಯದ ಬಗ್ಗೆ ಹಗುರವಾಗಿ ಮಾತನಾಡಿದ್ದಾನೆ ಎಂದರೆ ನಾವು ಅರ್ಥ ಮಾಡಿಕೊಳ್ಳುತ್ತಿದ್ದೆವು. ಆದರೆ, ನಿಮ್ಮಂಥವರೇ ನ್ಯಾಯಾಲಯ ಮತ್ತು ನ್ಯಾಯಮೂರ್ತಿಗಳನ್ನು ಹೀಗಳೆದರೆ ನ್ಯಾಯಾಂಗ ಹೇಗೆ ಕಾರ್ಯ ನಿರ್ವಹಿಸಬೇಕು’ ಎಂದು ಪ್ರಶ್ನಿಸಿತು.

ಅಂತಿಮವಾಗಿ ಸ್ವಾಮೀಜಿಯವರ ಕ್ಷಮೆಯನ್ನು ಮಾನ್ಯ ಮಾಡಿ ನ್ಯಾಯಾಂಗ ನಿಂದನೆ ಕೈಬಿಟ್ಟಿತು.

25 ಅಡಿ ಎತ್ತರದ ಕಬ್ಬು ಬೆಳೆ

• ಚಂದ್ರಶೇಖರ ಕೋಳೇಕರ

ನಿಡಗುಂದಿ (ವಿಜಯಪುರ ಜಿಲ್ಲೆ): ತಾಲ್ಲೂಕಿನ ಗೊಳಸಂಗಿ ಗ್ರಾಮದ ಸಾಳುಂಕೆ ಪರಿವಾರದ ನಿವೃತ್ತ ಸೈನಿಕ ನಾರಾಯಣ ಹಾಗೂ ಅವರ ಸಹೋದರ ಸಿದ್ದುಬಾ ಅವರು 23ರಿಂದ 25 ಅಡಿ ಎತ್ತರದ ಕಬ್ಬು ಬೆಳೆದಿದ್ದಾರೆ.

5 ಎಕರೆ ಗದ್ದೆಯಲ್ಲಿ 686 ಟನ್ ಕಬ್ಬು ಬೆಳೆದಿದ್ದಾರೆ. ಸಾಮಾನ್ಯವಾಗಿ ಒಂದು ಕಬ್ಬು 12 ಅಡಿ ಎತ್ತರ ಮತ್ತು 2 ಕೆಜಿ ತೂಕ ಇರುತ್ತದೆ. ಆದರೆ ಇಸ್ರೇಲ್ ತಂತ್ರಜ್ಞಾನ ಬಳಸಿ ಬೆಳೆಸಲಾದ ಕಬ್ಬು 3 ರಿಂದ 4.7 ಕೆಜಿ ತೂಗುತ್ತದೆ. 28 ರಿಂದ 32 ಗಣಿಕೆಯಿದ್ದು, 23 ರಿಂದ 25 ಅಡಿ ಎತ್ತರ ಬೆಳೆದಿದೆ.

ಈ ಕಬ್ಬು ನೋಡಲು ಮಂಗಳವಾರ ಉತ್ತರ ಪ್ರದೇಶದಿಂದ ರೈತರಾದ ರವಿಂದರ್‌ಸಿಂಗ್, ಮಹಾರಾಜಸಿಂಗ್, ಮುನೇಂದ್ರಸಿಂಗ್, ಮುಖೇಶಸಿಂಗ್, ಅಮ್ರೋಹಾ ಅವರು ಗ್ರಾಮಕ್ಕೆ ಭೇಟಿ ನೀಡಿದರು. ಈ ಕಬ್ಬು ಬೆಳೆಯ ಸಮಗ್ರ ಮಾಹಿತಿ ಕಲೆ ಹಾಕಿದ ಅವರು ಇಲ್ಲಿಯ ಮಾದರಿಯನ್ನು ತಮ್ಮ ಊರಿನಲ್ಲೂ ಅಳವಡಿಸಿಕೊಳ್ಳುವುದಾಗಿ ತಿಳಿಸಿದರು.

ನಾರಾಯಣ ಸಾಳುಂಕೆ ಸಹೋದರರು ಬೆಳೆದ 25 ಅಡಿ ಎತ್ತರದ ಕಬ್ಬಿನ ಬೆಳೆಯನ್ನು ಉತ್ತರ ಪ್ರದೇಶದ ರೈತರು ಮಂಗಳವಾರ ವೀಕ್ಷಿಸಿದರು

ಕಬ್ಬಿನ ಬೆಳೆಯ ಬೀಜ ವಿತರಕ ಮಹಾರಾಷ್ಟ್ರ ಕಾಗವಾಡದ ಸುರೇಶ ಕಾಂಬಳೆ ಮಾತನಾಡಿ, ‘ಅಕ್ಕಪಕ್ಕದ ರಾಜ್ಯಗಳ ರೈತರು ನಮ್ಮ ಬಳಿ ಕಬ್ಬಿನ ಬೀಜ ಒಯ್ದು ನಾಟಿ ಮಾಡಿದ್ದಾರೆ. ಆದರೆ, ಗೊಳಸಂಗಿಯ ಸಾಳುಂಕೆ ಸಹೋದರರು ಬೆಳೆದಿರುವುದೇ ವಿಶಿಷ್ಟವಾದದ್ದು’ ಎಂದರು.

‘ಇಷ್ಟು ಹೆಚ್ಚಿನ ಪ್ರಮಾಣದ ಬೆಳೆ ಬೆಳೆಯಲು ವಿಜ್ಞಾನಿಗಳಾದ ಸಂಜಯ ಪಾಟೀಲ, ಎಸ್.ಎಂ. ಮರೆಗುದ್ದಿ ಮತ್ತು ರವೀಂದ್ರ ಗಡಾದ ಅವರ ಮಾರ್ಗದರ್ಶನ ಕಾರಣ. ಎಸ್‌ಎನ್‌ಕೆ 13374 ಬೀಜದ ನಾಟಿ ಮಾಡಿ ಆರಂಭದಲ್ಲಿ ಹನಿ ನೀರಾವರಿ ಪದ್ಧತಿ ಅನುಸರಿಸಿದೆವು. ತಿಪ್ಪೆ ಗೊಬ್ಬರ, ನ್ಯೂಟ್ರಿಮೆಂಟ್ ರಸಗೊಬ್ಬರ ಬಳಸಿದ್ದೇವೆ. ಸಾಲಿನಿಂದ ಸಾಲಿಗೆ 7 ಅಡಿ ಮತ್ತು ಗಿಡದಿಂದ ಗಿಡಕ್ಕೆ 2 ಅಡಿ ಅಂತರದಲ್ಲಿ ಜಿಗ್‌ಜಾಗ್ ಮಾದರಿಯಲ್ಲಿ ಬೆಳೆಸಿದೆವು’ ಎಂದು ರೈತ ನಾರಾಯಣ ಅರ್ಜುನ ಸಾಳುಂಕೆ ತಿಳಿಸಿದರು.

ಗರಗಸ ಕುತ್ತಿಗೆಗೆ ತಾಗಿ ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ

ಪ್ರಶಾಂತ

ಬೆಳ್ತಂಗಡಿ (ದಕ್ಷಿಣ ಕನ್ನಡ): ಸಮೀಪದ ಸಾವ್ಯ ಗ್ರಾಮದಲ್ಲಿ ಮರ ಕತ್ತರಿಸುತ್ತಿದ್ದ ವೇಳೆ ಗರಗಸ ಕುತ್ತಿಗೆಗೆ ತಗುಲಿ ಪ್ರಶಾಂತ ಪೂಜಾರಿ (36) ಮೃತಪಟ್ಟಿದ್ದಾರೆ.

ಮರ ಕತ್ತರಿಸುತ್ತಿದ್ದಾಗ ಪ್ರಶಾಂತ ಆಯತಪ್ಪಿ ಕೆಳಗೆ ಬಿದ್ದರು. ಯಂತ್ರವು ಅವರ ಕೈಯಿಂದ ಜಾರಿ ಕುತ್ತಿಗೆ ಭಾಗಕ್ಕೆ ತಗುಲಿತು. ಯಂತ್ರ ಚಾಲನೆಯಲ್ಲಿದ್ದ ಕಾರಣ ಗಂಭೀರವಾಗಿ ಗಾಯಗೊಂಡರು. ತಕ್ಷಣವೇ ಅವರನ್ನು ಮಂಗಳೂರಿನ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ಬದುಕುಳಿಯಲಿಲ್ಲ.

ಮೃತರ ಸಹೋದರ ಪ್ರಮೋದ್ ನೀಡಿರುವ ದೂರಿನಂತೆ ವೇಣೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಯುವನಿಧಿ: ಜ. 12ಕ್ಕೆ ಸಿ.ಎಂ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಚುನಾವಣೆ ವೇಳೆ ಕಾಂಗ್ರೆಸ್ ನೀಡಿದ್ದ ಐದನೇ ‘ಗ್ಯಾರಂಟಿ’ ಭರವಸೆ ‘ಯುವನಿಧಿ’ಗೆ ಇದೇ 26ರಿಂದ ನೋಂದಣಿ ಆರಂಭವಾಗಲಿದೆ. ಜನವರಿ 12 ಎಂದು ಶಿವಮೊಗ್ಗದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಯೋಜನೆಗೆ ಚಾಲನೆ ನೀಡಲಿದ್ದಾರೆ.

2022-23ನೇ ಸಾಲಿನಲ್ಲಿ ಯಾವುದೇ ವೃತ್ತಿಪರ ಕೋರ್ಸ್, ಪದವಿ, ಡಿಪ್ಲೊಮಾ ಉತ್ತೀರ್ಣರಾಗಿ, ಆರು ತಿಂಗಳಲ್ಲಿ ಉದ್ಯೋಗ ಸಿಗದವರಿಗೆ ಈ ಯೋಜನೆ ಅನ್ವಯವಾಗಲಿದೆ. ಮುಂದಿನ 24 ತಿಂಗಳು ಪದವೀಧರರಿಗೆ ಮಾಸಿಕ ₹ 3 ಸಾವಿರ, ಡಿಪ್ಲೊಮಾ ಮುಗಿಸಿದವರಿಗೆ ಮಾಸಿಕ ₹ 1,500 ನಿರುದ್ಯೋಗ ಭತ್ಯೆ ನೀಡಲಾಗುತ್ತದೆ. ಉದ್ಯೋಗ ಸಿಕ್ಕಿದ ಕೂಡಲೇ ಈ ಸೌಲಭ್ಯ ಸ್ಥಗಿತಗೊಳ್ಳಲಿದೆ.

ಈ ಯೋಜನೆಗೆ ಐದು ಲಕ್ಷ ಯುವಕ, ಯುವತಿಯರು ಅರ್ಹತೆ ಪಡೆಯುವ ನಿರೀಕ್ಷೆ ಇದೆ. ಪ್ರಸಕ್ತ ವರ್ಷ ₹ 250 ಕೋಟಿಯಿಂದ ₹ 300 ಕೋಟಿ ವೆಚ್ಚ ಅಂದಾಜಿಸಲಾಗಿದ್ದು, ಮುಂದಿನ ವರ್ಷ ₹ 1 ಸಾವಿರ ಕೋಟಿ ಖರ್ಚಾಗಲಿದೆ.

ಅರ್ಜಿ ಸಲ್ಲಿಸಲು ಮತದಾರರ ಗುರುತಿನ ಚೀಟಿ, ಪದವಿ ಅಭ್ಯರ್ಥಿಗಳಾಗಿದ್ದರೆ ಅಂಕಪಟ್ಟಿ ಮತ್ತು ವಿಶ್ವವಿದ್ಯಾಲಯದ ಪದವಿ ಪ್ರಮಾಣಪತ್ರ, ಡಿಪ್ಲೊಮಾ ಹೊಂದಿದ್ದರೆ ಸಂಬಂಧಿಸಿದ ಶಿಕ್ಷಣ ಇಲಾಖೆಯಿಂದ ನೀಡಿದ ಅಂಕಪಟ್ಟಿ ಮತ್ತು ಪ್ರಮಾಣಪತ್ರ, ಆಧಾರ್ ಕಾರ್ಡ್, ಬ್ಯಾಂಕ್ ಖಾತೆ ಮತ್ತು ಅದರ ಮಾಹಿತಿ ಅಗತ್ಯವಿದೆ. ಯಾವುದೇ ಅಪ್ರೆಂಟೀಸ್ ಹುದ್ದೆಯಲ್ಲಿದ್ದು, ವೇತನ ಪಡೆಯುತ್ತಿರುವವರು, ಸರ್ಕಾರಿ– ಖಾಸಗಿ ವಲಯದಲ್ಲಿ ಉದ್ಯೋಗ ಪಡೆದಿರುವವರು, ಸರ್ಕಾರದ ನಾನಾ ಯೋಜನೆಗಳಡಿ ಬ್ಯಾಂಕ್ ಸಾಲ ಪಡೆದು ಸ್ವ ಉದ್ಯೋಗ ಆರಂಭಿಸಿದವರು ಈ ಯೋಜನೆಗೆ ಅರ್ಹರಾಗುವುದಿಲ್ಲ.

ಅರ್ಜಿ ಸಲ್ಲಿಸಲು ಮಾನದಂಡಗಳೇನು?

- ಕರ್ನಾಟಕದಲ್ಲಿ ವಾಸಿಸುವ ಕನ್ನಡಿಗ ಅಭ್ಯರ್ಥಿಗಳಿಗೆ ಮಾತ್ರ
- 2023ರ ವರ್ಷದಲ್ಲಿ ತೇರ್ಗಡೆಯಾಗಿದ್ದು, ಉತ್ತೀರ್ಣರಾಗಿ 180 ದಿನಗಳು ಕಳೆದರೂ ಉದ್ಯೋಗ ಲಭಿಸದವರು ಅರ್ಜಿ ಸಲ್ಲಿಸಬಹುದು
- ಅರ್ಜಿ ಸಲ್ಲಿಸಿದ ದಿನದಿಂದ ಉದ್ಯೋಗ ಸಿಗುವವರೆಗೆ ಮಾತ್ರ ಅಥವಾ ಎರಡು ವರ್ಷ ಗರಿಷ್ಠ ಅವಧಿವರೆಗೆ ಮಾತ್ರ ಈ ಭತ್ಯೆ ಸಿಗಲಿದೆ
- ‘ಸೇವಾ ಸಿಂಧು’ ಪೋರ್ಟಲ್ ಮೂಲಕವೇ ಅರ್ಜಿ ಸಲ್ಲಿಸಬೇಕು. ಭತ್ಯೆಯನ್ನು ಡಿಬಿಟಿ ಮೂಲಕ ನೀಡಲಾಗುವುದು
- ನಿರುದ್ಯೋಗ ಸ್ಥಿತಿ ಬಗ್ಗೆ ಸ್ವಯಂ ಘೋಷಿಸಬೇಕು. ಉದ್ಯೋಗ ಪಡೆದ ನಂತರ ತಪ್ಪು ಘೋಷಣೆ ಅಥವಾ ಘೋಷಿಸಲು ವಿಫಲವಾದರೆ ದಂಡ ವಿಧಿಸಲಾಗುವುದು
- ಅಭ್ಯರ್ಥಿಗಳು ಅರ್ಜಿ ಹಾಕುವ ವೇಳೆ ತಾವು ಉತ್ತೀರ್ಣರಾದ ದಿನದಿಂದ 6 ತಿಂಗಳವರೆಗಿನ ತಮ್ಮ ಬ್ಯಾಂಕ್ ಖಾತೆಯ ವಹಿವಾಟು (ಸ್ಟೇಟ್‌ಮೆಂಟ್) ಪ್ರತಿ ನೀಡಬೇಕು
- ಪದವಿ, ಡಿಪ್ಲೊಮಾ ಬಳಿಕ ಉನ್ನತ ಶಿಕ್ಷಣ ಮುಂದುವರಿಸಿದರೆ ಈ ಭತ್ಯೆಗೆ ಅರ್ಹರಾಗಿರುವುದಿಲ್ಲ

ತನಿಖೆ ವಿಸ್ತರಿಸಿದ ಲೋಕಾಯುಕ್ತ

ಪ್ರಜಾವಾಣಿ ವಾರ್ತೆ

ವಿದ್ಯುತ್ ಅವಘಡ

ಬೆಂಗಳೂರು: ರಾಜ್ಯದ ಎಲ್ಲ ವಿದ್ಯುತ್ ಸರಬರಾಜು ಕಂಪನಿಗಳ (ಎಸ್ಕಾಂ) ವ್ಯಾಪ್ತಿಗಳಲ್ಲಿ ಕರ್ತವ್ಯ ನಿರ್ಲಕ್ಷ್ಯದ ಕಾರಣದಿಂದ ವಿದ್ಯುತ್ ಅವಘಡಗಳು ಸಂಭವಿಸಿ, ಪ್ರಾಣ ಹಾನಿಯಾದ ಪ್ರಕರಣಗಳ ಕುರಿತು ವಿಸ್ತೃತವಾದ ವಿಚಾರಣೆ ನಡೆಸಲು ಲೋಕಾಯುಕ್ತ ನಿರ್ಧರಿಸಿದೆ.

ಬಿ.ಎಸ್. ಪಾಟೀಲ್

ನಗರದ ವೈಟ್ ಫೀಲ್ಡ್ ಸಮೀಪದ ಹೋಪ್ ಫಾರ್ಮ್ ಬಳಿ ಪಾದಚಾರಿ ಮಾರ್ಗದ ಮೇಲೆ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿ ತುಳಿದು 23 ವರ್ಷದ ಮಹಿಳೆ ಮತ್ತು ಅವರ ಒಂಬತ್ತು ತಿಂಗಳ ಮಗು ಸಜೀವ ದಹನಗೊಂಡಿದ್ದರು. ಈ ಘಟನೆ ಕುರಿತು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿ ಕೊಂಡಿರುವ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ, ವಿಚಾರಣೆ ಆರಂಭಿಸಿದ್ದಾರೆ. ಅದೇ ಮಾದರಿಯ ಹಳೆಯ ಘಟನೆಗಳ ಬಗ್ಗೆಯೂ ವಿಚಾರಣೆಯನ್ನು ವಿಸ್ತರಿಸಲು ಅವರು ಮುಂದಾಗಿದ್ದಾರೆ.

ಬೆಸ್ಕಾಂ ವ್ಯಾಪ್ತಿಯಲ್ಲೇ ಪ್ರತಿ ವರ್ಷ ಇಂತಹ 200ರಿಂದ 280 ಘಟನೆಗಳು ಸಂಭವಿಸುತ್ತಿವೆ. ಇದಕ್ಕೆ ವಿದ್ಯುತ್ ಪ್ರಸರಣ ಮಾರ್ಗಗಳ ನಿರ್ವಹಣೆಯಲ್ಲಿ ನಿರ್ಲಕ್ಷ್ಯವೇ ಕಾರಣ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತಿದೆ. ವಿದ್ಯುತ್ ಮಾರ್ಗಗಳನ್ನು ಸುಸ್ಥಿತಿಯಲ್ಲಿಟ್ಟು, ಸಾರ್ವಜನಿಕರು ಭಯವಿಲ್ಲದೇ ಓಡಾಡಲು ಅವಕಾಶ ಕಲ್ಪಿಸಬೇಕಿದೆ. ಇದಕ್ಕಾಗಿ ಈ ಹಿಂದಿನ ಪ್ರಕರಣಗಳ ಬಗ್ಗೆಯೂ ವಿಚಾರಣೆ ನಡೆಸಿ, ಶಿಫಾರಸು ನೀಡುವ ಅಗತ್ಯವಿದೆ ಎಂದು ಲೋಕಾಯುಕ್ತರು ತಿಳಿಸಿದ್ದಾರೆ.

‘ವರ್ಷಾಂತ್ಯದೊಳಗೆ ವರದಿ’

‘ಹೋಪ್ ಫಾರ್ಮ್ ಬಳಿ ವಿದ್ಯುತ್ ಪ್ರವಹಿಸುತ್ತಿದ್ದ ತಂತಿ ತುಳಿದು ತಾಯಿ ಮತ್ತು ಮಗು ಮೃತಪಟ್ಟ ಘಟನೆಗೆ ಸಂಬಂಧಿಸಿದಂತೆ ಲೋಕಾಯುಕ್ತದ ತನಿಖಾಧಿಕಾರಿ ಪ್ರಾಥಮಿಕ ವರದಿ ಸಲ್ಲಿಸಿದ್ದಾರೆ. ಡಿಸೆಂಬರ್ 31ರೊಳಗೆ ಅಂತಿಮ ವರದಿ ಸಲ್ಲಿಸುವ ನಿರೀಕ್ಷೆ ಇದೆ’ ಎಂದು ನ್ಯಾಯಮೂರ್ತಿ ಬಿ.ಎಸ್. ಪಾಟೀಲ ತಿಳಿಸಿದರು.

ಹೇಗೆ ನಡೆಯಲಿದೆ ವಿಚಾರಣೆ?

- ವಿದ್ಯುತ್ ಅವಘಡದಿಂದ ಪ್ರಾಣಹಾನಿ ಸಂಭವಿಸಿದ ಪ್ರಕರಣಗಳ ಕುರಿತು ಲೋಕಾಯುಕ್ತ ಅಧಿಕಾರಿಗಳು ಮಾಹಿತಿ ಸಂಗ್ರಹಿಸಿ, ತಜ್ಞರೊಂದಿಗೆ ಸ್ಥಳಕ್ಕೆ ಭೇಟಿನೀಡಿ ತನಿಖೆ
- ಘಟನೆಗೆ ಕಾರಣವಾದವರನ್ನು ಪತ್ತೆಹಚ್ಚಿ ಕ್ರಮಕ್ಕೆ ಶಿಫಾರಸು ಮಾಡುವುದು
- ವಿದ್ಯುತ್ ಅವಘಡಗಳು ಸಂಭವಿಸಿದಂತೆ ಮುನ್ನೆಚ್ಚರಿಕೆ ಕ್ರಮಗಳಿಗೆ ಶಿಫಾರಸು

ಈ ಕುರಿತು ‘ಪ್ರಜಾವಾಣಿ’ ಜತೆ ಮಾತನಾಡಿದ ಬಿ.ಎಸ್. ಪಾಟೀಲ, ‘ವಿದ್ಯುತ್ ಅವಘಡಗಳಿಂದ ಪ್ರಾಣ ಹಾನಿ ಸಂಭವಿಸುತ್ತಿರುವುದು ದೀರ್ಘ ಕಾಲದಿಂದ ಇರುವ ಸಮಸ್ಯೆ. ಇದರ ಹಿಂದಿರುವ ಕಾರಣಗಳನ್ನು ಅರಿತು, ಪರಿಹಾರ ಸೂಚಿಸಬೇಕಿದೆ. ಆ ಕಾರಣದಿಂದ ಹಿಂದಿನ ಪ್ರಕರಣಗಳ ಬಗ್ಗೆಯೂ ವಿಚಾರಣೆ ನಡೆಸಲಾಗುವುದು’ ಎಂದರು.

ರಾಜ್ಯ ಮಸಣ ಕಾರ್ಮಿಕರ ಸಂಘದ ನೇತೃತ್ವದಲ್ಲಿ ಪ್ರತಿಭಟನೆ

‘ರುದ್ರಭೂಮಿ ಕಾರ್ಮಿಕರಿಗೆ ಸೌಲಭ್ಯ ಕಲ್ಪಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದು ರುದ್ರಭೂಮಿಗೆ ಒಬ್ಬ ಕಾವಲುಗಾರ ಹಾಗೂ ನಿರ್ವಾಹಕರನ್ನು ನೇಮಿಸುವುದೂ ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ, ರಾಜ್ಯ ಮಸಣ ಕಾರ್ಮಿಕರ ಸಂಘದಿಂದ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಯಿತು.

‘ಮಸಣ ಕಾರ್ಮಿಕರಿಗೆ ಸೌಲಭ್ಯಗಳು ಮರೀಚಿಕೆಯಾಗಿವೆ. ರುದ್ರಭೂಮಿಯಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಪೈಕಿ 45 ವರ್ಷ ದಾಟಿದವರಿಗೆ ತಿಂಗಳ ಸಹಾಯಧನ ಅಥವಾ ಪಿಂಚಣಿಯಾಗಿ ಕನಿಷ್ಠ ₹3 ಸಾವಿರ ನೀಡಬೇಕು’ ಎಂದು ಆಗ್ರಹಿಸಿದರು.

‘ಮಸಣ (ಸ್ಮಶಾನ) ಕಾರ್ಮಿಕರ ಗಣತಿ ನಡೆಸಬೇಕು ಹಾಗೂ ಪುನರ್ವಸತಿ ಕಲ್ಪಿಸಬೇಕು. ಪ್ರತಿ ಕುಣಿ (ಗುಂಡಿ) ತೆಗೆಯುವ ಮತ್ತು ಮುಚ್ಚುವ ಕೆಲಸವನ್ನು ಉದ್ಯೋಗ ಖಾತ್ರಿ ಯೋಜನೆ ಅಡಿ ‘ಉದ್ಯೋಗ’ ಎಂದು ಪರಿಗಣಿಸಬೇಕು. ಅಲ್ಲದೇ ಕಾರ್ಮಿಕರಿಗೆ ಸ್ಥಳೀಯ ಸಂಸ್ಥೆಗಳ ಮೂಲಕ ₹3 ಸಾವಿರ ಕೂಲಿ ಪಾವತಿಸಬೇಕು’ ಎಂದು ಪ್ರತಿಭಟನಕಾರರು ಕೋರಿದರು.

ತಿಂಗಳ ಸಹಾಯಧನ ಸೇರಿದಂತೆ ಹಲವು ಬೇಡಿಕೆ ಈಡೇರಿಸಲು ಆಗ್ರಹಿಸಿ, ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ರಾಜ್ಯ ಮಸಣ ಕಾರ್ಮಿಕರ ಸಂಘದ ಸದಸ್ಯರು ಪ್ರತಿಭಟನೆ ನಡೆಸಿದರು — ಪ್ರಜಾವಾಣಿ ಚಿತ್ರ

ಮಸಣದಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಸುರಕ್ಷತಾ ಕ್ರಮ ಕೈಗೊಳ್ಳಬೇಕು. ಶುಚಿತ್ವಕ್ಕೆ ಸಾಬೂನು ನೀಡಬೇಕು ಎಂದು ಆಗ್ರಹಿಸಿದರು.

ಭವಿಷ್ಯ ನಿಧಿ ಸೇರಿದಂತೆ ಯಾವುದೇ ಸೌಲಭ್ಯಗಳಿಲ್ಲದೇ ಕಾರ್ಮಿಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಅವರಿಗೆ ಭವಿಷ್ಯ ನಿಧಿಯಂತಹ ಸೌಲಭ್ಯ ಕಲ್ಪಿಸಬೇಕು ಎಂದು ಕೋರಿದರು.

ಮಸಣ ಕಾರ್ಮಿಕರಿಗೆ ಆದಾಯ ಮೂಲಗಳಿಲ್ಲ. ಕಾರ್ಮಿಕರಿಗೆ ತಲಾ ಐದು ಎಕರೆಯಂತೆ ಜಮೀನು ಮಂಜೂರು ಮಾಡಬೇಕು. ಜತೆಗೆ, ವಸತಿ ಸೌಲಭ್ಯ ಕಲ್ಪಿಸಬೇಕು ಎಂದು ಸಂಘದ ಸಂಚಾಲಕ ಯು.ಬಸವರಾಜ ಆಗ್ರಹಿಸಿದರು.

ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸಕ್ಕೆ ವಸತಿ ಶಾಲೆಗಳಲ್ಲಿ ಮೀಸಲಾತಿ ನೀಡಬೇಕು. ವಿದ್ಯಾಭ್ಯಾಸ ಪೂರ್ಣಗೊಂಡ ಮೇಲೆ ಉದ್ಯೋಗದಲ್ಲಿ ಮೀಸಲಾತಿ ಕಲ್ಪಿಸಬೇಕು. 25 ವರ್ಷವಾದ ಬಳಿಕ ಸರ್ಕಾರಿ ಉದ್ಯೋಗ ಸಿಗದಿದ್ದರೆ ತಲಾ ₹10 ಸಾವಿರ ನಿರುದ್ಯೋಗ ಭತ್ಯೆ ನೀಡಬೇಕು ಎಂದು ಕೋರಿದರು.

ಪ್ರತಿಭಟನೆಯಲ್ಲಿ ಸಂಘದ ಸಹ ಸಂಚಾಲಕರಾದ ಬಿ.ಮಾಳಮ್ಮ, ಕೆ.ಜಿ.ವೀರೇಶ್, ಎ.ಸ್ವಾಮಿ, ಎಚ್. ರುದ್ರಪ್ಪ ಮೊದಲಾದವರು ಪಾಲ್ಗೊಂಡಿದ್ದರು.

ಗುರುವಾರ, ಡಿಸೆಂಬರ್ 21, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 351 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ತೋಟಗಾರಿಕಾ ಕ್ಷೇತ್ರದಲ್ಲಿರುವ ವಿವಿಧ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯ ವಿವರ ಇಲ್ಲಿದೆ

ಆಳ-ಅಗಲ
ಆರ್‌ಬಿಐನಲ್ಲಿದೆ ನಿಷ್ಕ್ರಿಯ ಖಾತೆಗಳ ₹ 62,224 ಕೋಟಿ

ಮೋದಿ ವಿರುದ್ಧ ಪ್ರಿಯಾಂಕಾ ಕಣಕ್ಕೆ? 9
ಮತ್ತಿಬ್ಬರು ಸಂಸದರ ಅಮಾನತು 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
70,506	21,150	₹64,420 (ಬೆಂಗಳೂರು)	₹76,200 (ಬೆಂಗಳೂರು)	83.18

ಬ್ರಿಟಿಷ್ ಕಾಲದ ಕಾನೂನುಗಳ ಬದಲಿಗೆ ಜಾರಿಗೆ ತರುವ ಉದ್ದೇಶ: ಲೋಕಸಭೆಯಲ್ಲಿ ಶಾ

ಅಪರಾಧ ಮಸೂದೆಗಳಿಗೆ ಅಸ್ತು

ಪ್ರಜಾವಾಣಿ ವಾರ್ತೆ

ನವದೆಹಲಿ: ಕ್ರಿಮಿನಲ್ ಅಪರಾಧಗಳಿಗೆ ಸಂಬಂಧಿಸಿದ ಕಾನೂನುಗಳಲ್ಲಿ ಆಮೂಲಾಗ್ರ ಬದಲಾವಣೆಯನ್ನು ತರುವ ಉದ್ದೇಶ ಹೊಂದಿರುವ ಮೂರು ಮಸೂದೆಗಳಿಗೆ ಲೋಕಸಭೆಯು ಬುಧವಾರ ಅಂಗೀಕಾರ ನೀಡಿದೆ. ಭಾರತೀಯ ನ್ಯಾಯ (ಎರಡನೆಯ) ಸಂಹಿತಾ ಮಸೂದೆ, ಭಾರತೀಯ ನಾಗರಿಕ ಸುರಕ್ಷಾ (ಎರಡನೆಯ) ಸಂಹಿತಾ ಮಸೂದೆ ಮತ್ತು ಭಾರತೀಯ ಸಾಕ್ಷ್ಯ (ಎರಡನೆಯ) ಮಸೂದೆ, ದೇಶದ ಜನರನ್ನು ವಸಾಹತು ಕಾಲದ ಮನಃಸ್ಥಿತಿಯಿಂದ ಮುಕ್ತಗೊಳಿಸಲಿವೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

ಈ ಮೂರು ಮಸೂದೆಗಳು ಭಾರತೀಯ ದಂಡ ಸಂಹಿತೆ (ಐಪಿಸಿ), ಅಪರಾಧ ದಂಡಪ್ರಕ್ರಿಯಾ ಸಂಹಿತೆ ಮತ್ತು ಭಾರತೀಯ ಸಾಕ್ಷ್ಯ ಕಾಯ್ದೆಯ ಬದಲಿಗೆ ಜಾರಿಗೆ ಬರಲಿವೆ. 'ಬ್ರಿಟಿಷರ ಕಾಲದಲ್ಲಿ ಈ ಮೂರು ಕಾನೂನುಗಳನ್ನು ರಚಿಸಲಾಯಿತು. ಈ ಕಾನೂನುಗಳನ್ನು ತೆಗೆದುಹಾಕುವವರೆಗೆ ಬ್ರಿಟನ್ನಿನ ಕಾನೂನುಗಳು ದೇಶದಲ್ಲಿ ಮುಂದುವರಿಯುತ್ತವೆ' ಎಂದು ಶಾ ಅವರು ಹೊಸ ಮಸೂದೆಗಳ ವಿಚಾರವಾಗಿ ಮಾತನಾಡುವ ಸಂದರ್ಭದಲ್ಲಿ ಹೇಳಿದರು.

ಮೂರು ಮಸೂದೆಗಳು 'ಸಂತ್ರಸ್ತರನ್ನು ಕೇಂದ್ರೀಕರಿಸಿಕೊಂಡ', 'ಸಾಕ್ಷ್ಯ ಆಧಾರಿತ' ಹಾಗೂ ನ್ಯಾಯ ಪಡೆಯುವುದನ್ನು ಸುಲಲಿತವಾಗಿಸುವ ವ್ಯವಸ್ಥೆಯನ್ನು ಸೃಷ್ಟಿಸಲಿವೆ ಎಂದು ಶಾ ಹೇಳಿದರು. ಸುಪ್ರೀಂ ಕೋರ್ಟ್, ಹೈಕೋರ್ಟ್‌ಗಳು, ಸಂಸದರು, ಶಾಸಕರು, ಐಪಿಎಸ್ ಅಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳಿಂದ ಒಟ್ಟು 3,200ಕ್ಕೂ ಹೆಚ್ಚು ಸಲಹೆಗಳನ್ನು ಪಡೆದು ಇವುಗಳನ್ನು ರೂಪಿಸಲಾಗಿದೆ ಎಂಬ ಮಾಹಿತಿ ನೀಡಿದರು.

2014ರ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ್ದ ಎಲ್ಲ ಭರವಸೆಗಳನ್ನು ಈಡೇರಿಸಿರುವುದು ಬಿಜೆಪಿ ಮಾತ್ರ ಎಂದು ಕೂಡ ಅವರು ಹೇಳಿದರು. 'ನಾವು ಅಯೋಧ್ಯೆಯ ಬಗ್ಗೆ ಹೇಳಿದ್ದೆವು. ಆದಷ್ಟು ಬೇಗ ರಾಮಮಂದಿರವನ್ನು ನಿರ್ಮಿಸುವುದಾಗಿ ಹೇಳಿದ್ದೆವು. ಜನವರಿ 22ರಂದು ರಾಮನ ವಿಗ್ರಹ ಪ್ರತಿಷ್ಠಾಪನೆ ನಡೆಯಲಿದೆ' ಎಂದು ಶಾ ಅವರು ಹೇಳಿದಾಗ ಆಡಳಿತ ಪಕ್ಷದ ಸದಸ್ಯರ ಕಡೆಯಿಂದ 'ಜೈ ಶ್ರೀರಾಂ' ಎಂಬ ಘೋಷಣೆಗಳು ಕೇಳಿಬಂದವು.

'ಇದು ಹೇಳಿದ್ದನ್ನು ಮಾಡಿ ತೋರಿಸುವ ಪ್ರಧಾನಿ ಮೋದಿ ನೇತೃತ್ವದ ಸರ್ಕಾರ. ಸಂಸತ್ತು ಹಾಗೂ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇಕಡ 33ರಷ್ಟು ಮೀಸಲಾತಿ ನೀಡುವುದಾಗಿ ಹೇಳಿದ್ದೆವು. ಅದನ್ನು ಮಾಡಿದ್ದೇವೆ. ಸಂವಿಧಾನದ 370ನೆಯ ವಿಧಿಯ ಅಡಿಯಲ್ಲಿ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ಹಿಂಪಡೆಯುವುದಾಗಿ ಹೇಳಿದ್ದೆವು. ಅದನ್ನೂ ಮಾಡಿದ್ದೇವೆ. ಭಯೋತ್ಪಾದನೆಯ ವಿಚಾರದಲ್ಲಿ ಯಾವ ಸಹನೆಯನ್ನೂ ತೋರುವುದಿಲ್ಲ ಎಂದಿದ್ದೆವು. ಈಗ ಜಮ್ಮು ಮತ್ತು ಕಾಶ್ಮೀರದಲ್ಲಿ, ಈಶಾನ್ಯ ರಾಜ್ಯಗಳಲ್ಲಿ ಹಾಗೂ ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ಭಯೋತ್ಪಾದಕ ಕೃತ್ಯಗಳು ಗಣನೀಯವಾಗಿ ಕಡಿಮೆ ಆಗಿವೆ. ತ್ರಿವಳಿ ತಲಾಖ್ ರದ್ದು ಮಾಡಲಾಗುವುದು ಎಂದಿದ್ದೆವು. ಅದನ್ನೂ ಮಾಡಿದ್ದೇವೆ' ಎಂದು ಶಾ ಹೇಳಿದರು.

97ಕ್ಕೂ ಹೆಚ್ಚು ಮಂದಿ ಸಂಸದರನ್ನು ಅಮಾನತು ಮಾಡಲಾಗಿರುವ ಕಾರಣ, ವಿರೋಧ ಪಕ್ಷಗಳ ಸಾಲಿನಲ್ಲಿ ಮೂರನೆಯ ಎರಡರಷ್ಟು ಸದಸ್ಯರು ಸದನದಲ್ಲಿ ಇರಲಿಲ್ಲ. ಅವರ ಅನುಪಸ್ಥಿತಿಯಲ್ಲಿ ಮಸೂದೆಯ ಬಗ್ಗೆ ಚರ್ಚೆ ನಡೆಯಿತು. ಎಐಎಂಐಎಂ ಸದಸ್ಯ ಅಸಾದುದ್ದೀನ್ ಒವೈಸಿ, ಶಿರೋಮಣಿ ಅಕಾಲಿದಳದ ಹರಸಿಮ್ರತ್ ಬಾದಲ್, ಬಿಜೆಡಿ ಸದಸ್ಯ ಭರ್ತೃಹರಿ ಮೆಹ್ತಾಬ್ ಸೇರಿದಂತೆ ಕೆಲವು ಸದಸ್ಯರು ಇದ್ದರು.

ಮೇಲ್ಮನವಿ ಸಲ್ಲಿಸುವ ಹಾಗೂ ಅರ್ಜಿ ಹಿಂಪಡೆಯುವ ಬಗ್ಗೆ ತೀರ್ಮಾನಿಸಲು ಪ್ರತಿ ಜಿಲ್ಲೆಯಲ್ಲಿಯೂ ಒಬ್ಬ ಅಭಿಯೋಜನಾ ನಿರ್ದೇಶಕ ಇರುತ್ತಾರೆ. ಮಸೂದೆಗಳಿಂದ ಬರಲಿರುವ ಸುಧಾರಣೆಯು ತ್ವರಿತ ನ್ಯಾಯದಾನಕ್ಕೆ ಹೆಸರುವಾಸಿ ಆಗಲಿದೆ ಎಂದು ವಿವರಿಸಿದರು.

ವಿಚಾರಣೆಗಳು ಮತ್ತೆ ಮತ್ತೆ ಮುಂದಕ್ಕೆ ಹೋಗುತ್ತ ಇರುತ್ತವೆ ಎಂಬ ಮಾತನ್ನು ನ್ಯಾಯ ಕೋರಿದವರು ಹೇಳುತ್ತಿರುತ್ತಾರೆ. ಹೊಸ ಮಸೂದೆಗಳು ಜಾರಿಗೆ ಬಂದ ನಂತರದಲ್ಲಿ, ವಿಚಾರಣೆಯ ಹಂತವು 45 ದಿನಗಳಲ್ಲಿ ಪೂರ್ಣಗೊಳ್ಳಬೇಕಾಗುತ್ತದೆ. ಶಿಕ್ಷೆ ನಿಗದಿ ಮಾಡುವ ಪ್ರಕ್ರಿಯೆಯು 60 ದಿನಗಳಲ್ಲಿ ಆಗಬೇಕಾಗುತ್ತದೆ. ವಕೀಲರು ಎರಡಕ್ಕಿಂತ ಹೆಚ್ಚು ಬಾರಿಗೆ ದಿನಾಂಕವನ್ನು ಮರುನಿಗದಿ ಮಾಡಿಕೊಳ್ಳಲು ಅವಕಾಶ ಇಲ್ಲ ಎಂದು ಶಾ ಹೇಳಿದರು.

9ನೇ ಪುಟ ನೋಡಿ

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಲೋಕಸಭೆಯಲ್ಲಿ ಬುಧವಾರ ಮಾತನಾಡಿದರು –ಪಿಟಿಐ ಚಿತ್ರ

'ವಿಸ್ತೃತ ಚರ್ಚೆ ಆಗಿದೆ'

ಮೂರು ಮಸೂದೆಗಳ ಬಗ್ಗೆ ವಿಸ್ತೃತವಾದ ಚರ್ಚೆ ನಡೆದಿದೆ. ರಾಜ್ಯಪಾಲರು, ಮುಖ್ಯಮಂತ್ರಿಗಳು, ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೆಐ), ಹೈಕೋರ್ಟ್‌ಗಳ ಮುಖ್ಯ ನ್ಯಾಯಮೂರ್ತಿಗಳು, ಶಾಸಕರು ಮತ್ತು ಸಂಸದರು, ಕಾನೂನು ಸಂಸ್ಥೆಗಳಿಂದ ಅಭಿಪ್ರಾಯ ಕೋರಲಾಗಿತ್ತು ಎಂದು ಅಮಿತ್ ಶಾ ತಿಳಿಸಿದರು.

2019ರಲ್ಲಿ ಈ ಪ್ರಕ್ರಿಯೆ ಶುರುವಾಯಿತು. 2020ರ ಮಾರ್ಚ್ ವೇಳೆಗೆ ಸಲಹೆಗಳು ಬಂದವು. 18 ರಾಜ್ಯಗಳು, ಆರು ಕೇಂದ್ರಾಡಳಿತ ಪ್ರದೇಶಗಳು, ಸುಪ್ರೀಂ ಕೋರ್ಟ್, 16 ಹೈಕೋರ್ಟ್‌ಗಳು, ಐದು ಕಾನೂನು ಅಕಾಡೆಮಿಗಳು, 22 ನ್ಯಾಷನಲ್ ಲಾ ಯೂನಿವರ್ಸಿಟಿಗಳು, 42 ಸಂಸದರು, 200 ಮಂದಿ ಐಪಿಎಸ್ ಅಧಿಕಾರಿಗಳು ಸಲಹೆಗಳನ್ನು ನೀಡಿದ್ದಾರೆ ಎಂದರು.

ಕೆಂಪು ಘಾಟು ಕೊಪ್ಪಳ ತಾಲ್ಲೂಕಿನ ಬಿಸರಳ್ಳಿ ಗ್ರಾಮದ ಹೊಲದಲ್ಲಿ ರೈತ ಮಹಿಳೆಯರು ಬುಧವಾರ ಮೆಣಸಿನಕಾಯಿ ಒಣಗಿಸಿದರು ಪ್ರಜಾವಾಣಿ ಚಿತ್ರ/ ಭರತ್ ಕಂದಕೂರ

ಪನ್ನೂ ಹತ್ಯೆಗೆ ಸಂಚು: ಭಾರತೀಯನ ವಿರುದ್ಧದ ಆರೋಪ

ಅಮೆರಿಕ ಮಾಹಿತಿ ನೀಡಿದರೆ ಪರಿಶೀಲನೆ: ಪ್ರಧಾನಿ ಮೋದಿ

ನವದೆಹಲಿ(ಪಿಟಿಐ): 'ಭಾರತದಲ್ಲಿ ಕಾನೂನು ಪ್ರಕಾರವೇ ಆಡಳಿತ ನಡೆಯುತ್ತದೆ. ಇಲ್ಲಿ ಕಾನೂನಿಗಿಂತ ಯಾರೂ ದೊಡ್ಡವರಲ್ಲ. ಯಾವುದೇ ಆರೋಪಗಳ ಕುರಿತು ಯಾರಾದರೂ ಮಾಹಿತಿ ನೀಡಿದಲ್ಲಿ ಆ ಬಗ್ಗೆ ಖಂಡಿತ ಪರಿಶೀಲಿಸಲಾಗುವುದು' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ತನ್ನ ನೆಲದಲ್ಲಿ ಸಿಖ್ ಪ್ರತ್ಯೇಕತಾವಾದಿ ನಾಯಕ ಗುರುಪತ್ವಂತ್ ಸಿಂಗ್ ಪನ್ನೂ ಹತ್ಯೆಗೆ ರೂಪಿಸಿದ್ದ ಸಂಚಿಗೆ ಭಾರತೀಯ ಪ್ರಜೆಗೆ ನಂಟಿದೆ ಎಂಬ ಅಮೆರಿಕದ ಆರೋಪ ಕುರಿತು ಅವರು ಇದೇ ಮೊದಲ ಬಾರಿ ಹೀಗೆ ಪ್ರತಿಕ್ರಿಯಿಸಿದ್ದಾರೆ.

ನಿಖಿಲ್ ಗುಪ್ತಾ ಎಂಬಾತ ಪನ್ನೂ ಹತ್ಯೆಗೆ ಸಂಚು ರೂಪಿಸಿದ್ದ ಎಂದು ಅಮೆರಿಕ ಆರೋಪಿಸಿದೆ. ಈತ, ಭಾರತೀಯ ನೌಕರನ ಬಳಿ ಕೆಲಸಕ್ಕಿದ್ದ ಎಂದು ಸರ್ಕಾರಿ ವಕೀಲರು ಅಮೆರಿಕದ ನ್ಯಾಯಾಲಯಕ್ಕೆ ಸಲ್ಲಿಸಿರುವ ಆರೋಪ ಪಟ್ಟಿಯಲ್ಲಿ ತಿಳಿಸಿದ್ದಾರೆ.

ಬ್ರಿಟನ್ ದೈನಿಕ ಫೈನಾನ್ಶಿಯಲ್ ಟೈಮ್ಸ್‌ಗೆ ನೀಡಿರುವ ಸಂದರ್ಶನದಲ್ಲಿ ಪ್ರಧಾನಿ ಮೋದಿ ಅವರು ಪನ್ನೂ ಹತ್ಯೆಗೆ ಸಂಚು ಸೇರಿದಂತೆ ಹಲವು ವಿಷಯಗಳ ಕುರಿತು ಮಾತನಾಡಿದ್ದಾರೆ.

'ಭಾರತೀಯ ಪ್ರಜೆಯೊಬ್ಬ ಯಾವುದೇ ಒಳ್ಳೆಯ ಅಥವಾ ಕೆಟ್ಟ ಕೆಲಸ ಮಾಡಿದ್ದರೆ, ಆ ಬಗ್ಗೆ ಪರಿಶೀಲನೆ ನಡೆಸಲು ನಾವು ಸಿದ್ಧ' ಎಂದು ಸ್ಪಷ್ಟಪಡಿಸಿದ್ದಾರೆ.

'ಕೆಲವು ಘಟನೆಗಳಿಗೆ ಹಾಗೂ ಉಭಯ ದೇಶಗಳ ನಡುವಿನ ರಾಜತಾಂತ್ರಿಕ ಸಂಬಂಧಕ್ಕೆ ತಳುಕು ಹಾಕುವುದು ಸರಿಯಲ್ಲ. ಅಮೆರಿಕ ಮತ್ತು ಭಾರತ ನಡುವಿನ ಬಾಂಧವ್ಯ ಗಟ್ಟಿಗೊಳಿಸುವುದಕ್ಕೆ ಎರಡೂ ದೇಶಗಳು ಒತ್ತು ನೀಡುತ್ತಿವೆ. ಇದು ಉಭಯ ದೇಶಗಳು ಪ್ರಬುದ್ಧತೆಯಿಂದ ವರ್ತಿಸುತ್ತಿರುವುದು ಹಾಗೂ ದೃಢವಾದ ಪಾಲುದಾರಿಕೆ ಹೊಂದಿರುವುದನ್ನು ಸೂಚಿಸುತ್ತದೆ' ಎಂದು ಮೋದಿ ವಿವರಿಸಿದ್ದಾರೆ.

'ದೇಶದ ಭದ್ರತೆ ಹಾಗೂ ಭಯೋತ್ಪಾದನೆ ವಿರುದ್ಧದ ಹೋರಾಟವೇ ನಮ್ಮ ಪಾಲುದಾರಿಕೆಯ ಮುಖ್ಯ ಅಂಶವಾಗಿದೆ' ಎಂದೂ ತಿಳಿಸಿದ್ದಾರೆ.

9ನೇ ಪುಟ ನೋಡಿ

ತೋಳ್ಪಾಡಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸಾಹಿತ್ಯ ಅಕಾಡೆಮಿಯ 2023ನೇ ಸಾಲಿನ ಪ್ರಶಸ್ತಿಗೆ ಸಾಹಿತಿ ಲಕ್ಷ್ಮೀಶ ತೋಳ್ಪಾಡಿ ಆಯ್ಕೆಯಾಗಿದ್ದಾರೆ.

ಅವರ 'ಮಹಾಭಾರತ ಅನುಸಂಧಾನದ ಭಾರತಯಾತ್ರೆ' ಕೃತಿಗೆ ಈ ಪ್ರಶಸ್ತಿ ಲಭಿಸಿದೆ. ಈ ಪ್ರಶಸ್ತಿಯು ₹1 ಲಕ್ಷ ನಗದು ಹಾಗೂ ಪ್ರಶಸ್ತಿಪತ್ರ ಒಳಗೊಂಡಿದೆ. ನವದೆಹಲಿಯಲ್ಲಿ ಮಾರ್ಚ್ 12ರಂದು ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ತೋಳ್ಪಾಡಿ ಸೇರಿದಂತೆ 24 ಭಾಷೆಗಳ ಲೇಖಕರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಸಾಹಿತ್ಯ ಅಕಾಡೆಮಿಯ ಪ್ರಕಟಣೆ ತಿಳಿಸಿದೆ.

ಕನ್ನಡ ವಿಭಾಗದ ಆಯ್ಕೆ ಸಮಿತಿಯಲ್ಲಿ ನಾಗೇಶ ಹೆಗಡೆ, ಆನಂದ ಝುಂಜರವಾಡ ಹಾಗೂ ಜ.ನಾ.ತೇಜಶ್ರೀ ಇದ್ದರು.

'ಪ್ರಶಸ್ತಿಯ ನಿರೀಕ್ಷೆ ಇರಲಿಲ್ಲ'



ಮಂಗಳೂರು: 'ನನ್ನ ಕೃತಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬರುತ್ತದೆ ಎಂದು ನಿರೀಕ್ಷೆ ಮಾಡಿರಲಿಲ್ಲ. 'ಪ್ರಜಾವಾಣಿ'ಯ ಸಾಹಿತ್ಯ ಪುರವಣಿ ಮುಕ್ತಛಂದದಲ್ಲಿ ಪ್ರಕಟವಾದ 'ಮಹಾಭಾರತ ಅನುಸಂಧಾನ' ಅಂಕಣ ಬರಹಗಳ ಸಂಗ್ರಹವೇ 'ಭಾರತ ಯಾತ್ರೆ' ಕೃತಿ' ಎಂದು ಸಾಹಿತಿ ಲಕ್ಷ್ಮೀಶ ತೋಳ್ಪಾಡಿ ಹೇಳಿದರು.

'ನನ್ನ ಬರಹಗಳನ್ನು ಓದಿ ಅನೇಕ ಓದುಗರು ಚೆನ್ನಾಗಿದೆ ಎಂದು ಪ್ರತಿಕ್ರಿಯಿಸಿದ್ದರು. ಅದೇ ನನಗೆ ಬಹಳ ಖುಷಿಕೊಟ್ಟ ವಿಚಾರ. ಸಾಹಿತ್ಯ ಅಕಾಡೆಮಿಯು ನನ್ನ ಕೃತಿಯನ್ನು ಪ್ರಶಸ್ತಿಗೆ ಆಯ್ಕೆ ಮಾಡಿರುವುದು ಸಂತಸ ತಂದಿದೆ' ಎಂದು ಪ್ರತಿಕ್ರಿಯಿಸಿದರು.

ಲಕ್ಷ್ಮೀಶ ತೋಳ್ಪಾಡಿ ಅವರು ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ಬಳಿಯ ಶಾಂತಿಗೋಡು ಗ್ರಾಮದವರು.

8ನೇ ಪುಟ ನೋಡಿ

ಹೊಟ್ಟೆಯಲ್ಲಿ ₹20 ಕೋಟಿ ಮೌಲ್ಯದ ಕೊಕೇನ್ ಕ್ಯಾಪ್ಸೂಲ್!

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಇಲ್ಲಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನೈಜೀರಿಯಾದ ಡ್ರಗ್ ಪೆಡ್ಲರ್‌ನನ್ನು ಬಂಧಿಸಿರುವ ವೈಮಾನಿಕ ಗುಪ್ತಚರ ನಿರ್ದೇಶನಾಲಯ ಅಧಿಕಾರಿಗಳು ಆತನಿಂದ ₹20 ಕೋಟಿಗೂ ಹೆಚ್ಚು ಮೌಲ್ಯದ ಎರಡು ಕೆ.ಜಿ. ಮಾದಕವಸ್ತು (ಕೊಕೇನ್) ವಶಪಡಿಸಿಕೊಂಡಿದ್ದಾರೆ.

ಡಿ.11ರಂದು ಇಥಿಯೋಪಿಯಾ ಏರ್‌ಲೈನ್ಸ್‌ನಲ್ಲಿ ಬೆಂಗಳೂರು ವಿಮಾನ ನಿಲ್ದಾಣಕ್ಕೆ ಬಂದಿಳಿದ ಆರೋಪಿಯನ್ನು ಸಿಬ್ಬಂದಿ ತಪಾಸಣೆ ನಡೆಸಿದಾಗ ಆತನ ಹೊಟ್ಟೆಯಲ್ಲಿ ಕೊಕೇನ್ ತುಂಬಿದ್ದ 99 ಕ್ಯಾಪ್ಸೂಲ್ ಪತ್ತೆಯಾಗಿದ್ದವು.

8 ನೇ ಪುಟ ನೋಡಿ

ಮಾಡಾಳ್ ವಿರುದ್ಧದ ಲಂಚ ಪ್ರಕರಣ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸಾಬೂನು ಮತ್ತು ಮಾರ್ಜಕ ಕಾರ್ಖಾನೆಗೆ (ಕೆಎಸ್‌ಡಿಎಲ್) ರಾಸಾಯನಿಕ ತೈಲ ಪೂರೈಸುವ ಗುತ್ತಿಗೆಯ ಕಾರ್ಯಾದೇಶ ನೀಡಲು ಲಂಚಕ್ಕೆ ಬೇಡಿಕೆಯಿಟ್ಟ ಆರೋಪದಡಿ ಚನ್ನಗಿರಿ ಕ್ಷೇತ್ರದ ಮಾಜಿ ಶಾಸಕ ಕೆ.ಮಾಡಾಳ್ ವಿರೂಪಾಕ್ಷಪ್ಪ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ.

ಪ್ರಕರಣ ರದ್ದುಪಡಿಸುವಂತೆ ಕೋರಿ ಕೆ.ಮಾಡಾಳ್ ವಿರೂಪಾಕ್ಷಪ್ಪ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ಪ್ರಕಟಿಸಿದೆ. ಅರ್ಜಿದಾರರ ವಿರುದ್ಧದ ಎಫ್‌ಐಆರ್ ಮತ್ತು ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ಬಾಕಿಯಿದ್ದ ವಿಚಾರಣೆಯನ್ನು ರದ್ದುಪಡಿಸಿ ಆದೇಶಿಸಿದೆ.

'ತೀರ್ಪಿನಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳು ವಿರೂಪಾಕ್ಷಪ್ಪನವರ ಪ್ರಕರಣಕ್ಕೆ ಮಾತ್ರವೇ ಅನ್ವಯಿಸಲಿದ್ದು, ಇತರೆ ಆರೋಪಿಗಳ ವಿರುದ್ಧದ ತನಿಖೆ ಮತ್ತು ಯಾವುದೇ ನ್ಯಾಯಾಲಯದಲ್ಲಿನ ವಿಚಾರಣೆ ಮೇಲೆ ಪ್ರಭಾವ ಬೀರುವುದಿಲ್ಲ ಹಾಗೂ ಅನ್ವಯವಾಗುವುದೂ ಇಲ್ಲ. ಪ್ರಕರಣದಲ್ಲಿ ಎರಡನೇ ಆರೋಪಿಯಾಗಿರುವ ವಿರೂಪಾಕ್ಷಪ್ಪ ಅವರ ಪುತ್ರ ಎಂ.ವಿ.ಪ್ರಶಾಂತ್ ಕುಮಾರ್ ಮೇಲಿನ ಆರೋಪಗಳಿಗೆ ಸಾಕ್ಷ್ಯ ಇರುವುದು ಮೇಲ್ನೋನೋಟಕ್ಕೆ ಕಂಡುಬರುತ್ತಿದೆ. ಹೀಗಾಗಿ, ಅವರ ವಿರುದ್ಧದ ವಿಚಾರಣೆ ನಡೆಯಬೇಕಿದೆ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

'ಭ್ರಷ್ಟಾಚಾರ ನಿಗ್ರಹ ಕಾಯ್ದೆಯ ಕಲಂ 7ರ ಪ್ರಕಾರ ಪ್ರಯೋಜನೆಗಳನ್ನು ಕಲ್ಪಿಸಲು ಲಂಚಕ್ಕೆ ಬೇಡಿಕೆ ಇಟ್ಟಿರಬೇಕು ಹಾಗೂ ಲಂಚ ಪಡೆದಿರಬೇಕಾಗುತ್ತದೆ. ಆದರೆ, ಅರ್ಜಿದಾರರು ಎರಡನೇ ಆರೋಪಿ ಎಂ.ವಿ. ಪ್ರಶಾಂತ್ ಕುಮಾರ್ ಅವರನ್ನು ಭೇಟಿ ಮಾಡುವಂತೆ ಸೂಚಿಸಿರುವುದನ್ನು ಬಿಟ್ಟರೆ ಅವರ ವಿರುದ್ಧ ಬೇರಾವುದೇ ಆರೋಪ ಇಲ್ಲ. ಪುತ್ರನ ಬಳಿ ದೊರೆತ ಹಣಕ್ಕೆ ಅಪ್ಪನನ್ನು ವಿಚಾರಣೆಗೆ ಒಳಪಡಿಸುವುದು ಸರಿಯಲ್ಲ' ಎಂದು ನ್ಯಾಯಪೀಠ ಆದೇಶದಲ್ಲಿ ವಿವರಿಸಿದೆ. ಮಾಡಾಳ್ ವಿರೂಪಾಕ್ಷಪ್ಪ ಪರ ಹಿರಿಯ ವಕೀಲ ಪ್ರಭುಲಿಂಗ ಕೆ.ನಾವದಗಿ ವಾದ ಮಂಡಿಸಿದ್ದರು.

ಮನೋರಂಜನ್ ಸಹಪಾಠಿ ಸಾಯಿಕೃಷ್ಣ ಪೊಲೀಸ್ ವಶಕ್ಕೆ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಲೋಕಸಭೆ ಕಲಾಪದ ವೇಳೆ ಪ್ರೇಕ್ಷಕರ ಗ್ಯಾಲರಿಯಿಂದ ಜಿಗಿದಿದ್ದ ಆರೋಪಿ ಡಿ. ಮನೋರಂಜನ್ ಡೈರಿಯಲ್ಲಿ ಹೆಸರಿರುವ ಬಾಗಲಕೋಟೆಯ ಸಾಯಿಕೃಷ್ಣ ಅವರನ್ನು ದೆಹಲಿ ಪೊಲೀಸರು ಬುಧವಾರ ರಾತ್ರಿ ವಶಕ್ಕೆ ತೆಗೆದುಕೊಂಡಿದ್ದಾರೆ.

ವಿದ್ಯಾಗಿರಿಯ 11ನೇ ಕ್ರಾಸ್ ನಿವಾಸಿ ಸಾಯಿಕೃಷ್ಣ ಅವರನ್ನು ದೆಹಲಿ ಪೊಲೀಸರು ವಶಕ್ಕೆ ಪಡೆದಿರುವುದನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಮರನಾಥ ರೆಡ್ಡಿ ಖಚಿತಪಡಿಸಿದ್ದಾರೆ.

'ನಿವೃತ್ತ ಡಿವೈಎಸ್‌ಪಿ ವಿಠ್ಠಲ ಜಗಲಿ ಅವರ ಪುತ್ರ ಸಾಯಿಕೃಷ್ಣ, ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಹಿರಿಯ ಎಂಜಿನಿಯರ್ ಆಗಿದ್ದಾರೆ. ವರ್ಕ್ ಫ್ರಂ ಹೋಂ ಇದ್ದ ಕಾರಣ ಬಾಗಲಕೋಟೆಯಲ್ಲೇ ಇದ್ದರು' ಎಂದು ಮೂಲಗಳು ತಿಳಿಸಿವೆ.

ಬೆಂಗಳೂರಿನ ಬಿಐಟಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಸಹಪಾಠಿಗಳಾಗಿದ್ದಲ್ಲದೇ, ಒಂದೇ ಕೊಠಡಿಯಲ್ಲಿ ವಾಸವಾಗಿದ್ದರು ಎಂದು ಗೊತ್ತಾಗಿದೆ.

'ಮನೋರಂಜನ್‌ನ ಸಹಪಾಠಿ ಎಂಬ ಕಾರಣಕ್ಕೆ ಪೊಲೀಸರು ನನ್ನ ತಮ್ಮನನ್ನು ವಿಚಾರಣೆ ಮಾಡುತ್ತಿದ್ದಾರೆ. ಕಾಲೇಜಿನ ತರುವಾಯ ಅವರ ನಡುವೆ ಯಾವುದೇ ಸಂಬಂಧವಿಲ್ಲ' ಎಂದು ಸಾಯಿಕೃಷ್ಣ ಸಹೋದರಿ ಸ್ಪಂದನಾ ಜಗಲಿ ತಿಳಿಸಿದ್ದಾರೆ.

ಸಾತ್ವಿಕ್-ಚಿರಾಗ್ ಜೋಡಿಗೆ ಖೇಲ್ ರತ್ನ: ಶಮಿಗೆ ಅರ್ಜುನ

ನವದೆಹಲಿ (ಪಿಟಿಐ): ಬ್ಯಾಡ್ಮಿಂಟನ್ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರನ್ನು ಮೇಜರ್ ಧ್ಯಾನಚಂದ್ ಖೇಲ್ ರತ್ನ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಕ್ರಿಕೆಟಿಗ ಮೊಹಮ್ಮದ್ ಶಮಿ ಸೇರಿದಂತೆ 26 ಕ್ರೀಡಾಪಟುಗಳು ಅರ್ಜುನ ಪ್ರಶಸ್ತಿಗೆ ಭಾಜನಾಗಿದ್ದಾರೆ ಎಂದು ಕೇಂದ್ರ ಕ್ರೀಡಾ ಸಚಿವಾಲಯವು ಬುಧವಾರ ಪ್ರಕಟಿಸಿದೆ.

ಜನವರಿ 9ರಂದು ನವದೆಹಲಿಯಲ್ಲಿ ನಡೆಯಲಿರುವ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಚಿರಾಗ್ ಮತ್ತು ಸಾತ್ವಿಕ್ ಅವರು ಈಚೆಗೆ ಏಷ್ಯನ್ ಗೇಮ್ಸ್ ಬ್ಯಾಡ್ಮಿಂಟನ್ ಡಬಲ್ಸ್‌ನಲ್ಲಿ ಚಿನ್ನ ಗೆದ್ದಿದ್ದರು. ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚು ಮತ್ತು ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಬೆಳ್ಳಿ ಪದಕ ಜಯಿಸಿದ್ದರು.

ಈಚೆಗೆ ನಡೆದಿದ್ದ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ 24 ವಿಕೆಟ್ ಗಳಿಸಿದ್ದ ಶಮಿ, ಹಾಕಿ ಆಟಗಾರರಾದ ಕೃಷನ್ ಬಹಾದ್ದೂರ್ ಪಾಠಕ್, ಸುಶೀಲಾ ಚಾನು, ಚೆಸ್ ಆಟಗಾರ್ತಿ ಆರ್. ವೈಶಾಲಿ, ಕುಸ್ತಿಪಟು ಅಂತಿಮ ಪಂಘಾಲ್, ಪ್ಯಾರಾ ಆರ್ಚರಿಪಟು ಶೀತಲ್ ದೇವಿ ಅವರನ್ನೂ ಅರ್ಜುನ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಐವರು ತರಬೇತುದಾರರಾದ ಲಲಿತ್ ಕುಮಾರ್ (ಕುಸ್ತಿ), ಆರ್. ಬಿ. ರಮೇಶ್ (ಚೆಸ್), ಮಹಾವೀರ್ ಪ್ರಸಾದ್ ಸೈನಿ (ಪ್ಯಾರಾ ಅಥ್ಲೆಟಿಕ್ಸ್), ಶಿವೇಂದ್ರ ಸಿಂಗ್ (ಹಾಕಿ) ಹಾಗೂ ಗಣೇಶ್ ಪ್ರಭಾಕರ್ ದೇವರುಕಾಕರ್ (ಮಲ್ಲಕಂಬ) ಅವರನ್ನು ದ್ರೋಣಾಚಾರ್ಯ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ

ಸಾಮಾಜಿಕ ಜಾಲತಾಣಗಳಲ್ಲಿ ಆರೋಪ- ಪ್ರತ್ಯಾರೋಪ

ಬಣ ಕಿತ್ತಾಟ: ಹಳಿ ತಪ್ಪಿದ 'ಅತಿಥಿ' ಹೋರಾಟ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಸೇವಾ ಭದ್ರತೆಗೆ ಆಗ್ರಹಿಸಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರು ನಡೆಸುತ್ತಿರುವ ಹೋರಾಟ, ಬಣಗಳ ನಡುವಿನ ತಿಕ್ಕಾಟದಿಂದಾಗಿ ಹಳಿ ತಪ್ಪಿದೆ.

ಅತಿಥಿ ಉಪನ್ಯಾಸಕರಲ್ಲೇ ಐದು ಬಣಗಳು ಸೃಷ್ಟಿಯಾಗಿದ್ದು, ಕೆಲ ಬಣಗಳು ಸಾಮಾಜಿಕ ಜಾಲತಾಣಗಳಲ್ಲಿ ಪರಸ್ಪರ ಆರೋಪ- ಪ್ರತ್ಯಾರೋಪಗಳಲ್ಲಿ ತೊಡಗಿವೆ. ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ಒಕ್ಕೂಟ, ಸರ್ಕಾರಿ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರ ರಾಜ್ಯ ಸಮನ್ವಯ ಸಮಿತಿ, ಅತಿಥಿ ಉಪನ್ಯಾಸಕರ ಹಿತರಕ್ಷಣಾ ಸಮಿತಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಉಪನ್ಯಾಸಕರ ಸಂಘ ಹಾಗೂ ಕರ್ನಾಟಕ ರಾಜ್ಯ ಅತಿಥಿ ಉಪನ್ಯಾಸಕರ ಸಂಘಗಳು ಅಸ್ತಿತ್ವದಲ್ಲಿವೆ. ಸಕ್ರಿಯವಾಗಿರುವ ಬಣಗಳ ನಡುವಿನ ಸಂಘರ್ಷದಿಂದ ಬಹುತೇಕ ಅತಿಥಿ ಉಪನ್ಯಾಸಕರು ತಟಸ್ಥರಾಗಿ ಉಳಿದಿದ್ದಾರೆ.

ಕನಿಷ್ಠ ಮೂರು ವರ್ಷಗಳು ಸೇವೆ ಸಲ್ಲಿಸಿದ ಅತಿಥಿ ಉಪನ್ಯಾಸಕರನ್ನು ಕಾಯಂ ಮಾಡಬೇಕು. ಅಲ್ಲಿಯವರೆಗೂ 2018 ರಲ್ಲಿ ವಿಶ್ವವಿದ್ಯಾಲಯ ಅನುದಾನ ಆಯೋಗ ಹೊರಡಿಸಿದ್ದ ಆದೇಶದಂತೆ ಪ್ರತಿ ಗಂಟೆಗೆ ₹1,500 ವೇತನದಂತೆ ಮಾಸಿಕ ₹50 ಸಾವಿರ ವೇತನ ನಿಗದಿ ಮಾಡಬೇಕು. ಪ್ರತಿ ವರ್ಷ ಕೌನ್ಸೆಲಿಂಗ್ ನಡೆಸುವ ಬದಲು ಸೇವಾ-ಜ್ಯೇಷ್ಠತೆಯ ಆಧಾರದಲ್ಲಿ ನೇಮಕ ಮಾಡಿಕೊಳ್ಳಬೇಕು. ಆರೋಗ್ಯ ವಿಮೆ ಜಾರಿ ಮಾಡಬೇಕು ಎಂಬುದು ಅತಿಥಿ ಉಪನ್ಯಾಸಕರ ಪ್ರಮುಖ ಬೇಡಿಕೆಗಳಾಗಿವೆ.

ಬೇಡಿಕೆ ಈಡೇರಿಕೆಗಾಗಿ ರಾಜ್ಯದಾದ್ಯಂತ ನವೆಂಬರ್‌ನಿಂದಲೇ ತರಗತಿಗಳನ್ನು ಬಹಿಷ್ಕರಿಸಿ ಹೋರಾಟಕ್ಕೆ ಇಳಿದಿದ್ದರು. ಈಗ ಬಣ ರಾಜಕೀಯದಿಂದಾಗಿ ಬಹುತೇಕರು ತಟಸ್ಥರಾಗಿ ಉಳಿದಿದ್ದಾರೆ. ಕೆಲವರು ತರಗತಿಗಳಿಗೆ ಮರಳುತ್ತಿದ್ದಾರೆ. ಕೆಲವು ಕಾಲೇಜುಗಳಲ್ಲಿ ಒಂದು ತಿಂಗಳನಿಂದ ಪಾಠಗಳು ನಡೆದಿಲ್ಲ. ಅವ್ಯವಸ್ಥೆ ಖಂಡಿಸಿ ವಿದ್ಯಾರ್ಥಿಗಳೂ ಪ್ರತಿಭಟನೆ ನಡೆಸಿದ್ದಾರೆ.

8ನೇ ಪುಟ ನೋಡಿ

ಪ್ರಜಾವಾಣಿ ವಿಶೇಷ

ಕೆಲಸ ಬೇಕು ಎಂದರೆ ಹಣ ಕೊಡಬೇಕು!

'ಕೆಲಸ ಕಾಯಂ ಮಾಡಲು ಪ್ರತಿಯೊಬ್ಬರೂ ಹಣ ನೀಡಬೇಕು. ತಂದೆ– ತಾಯಿ ಪ್ರೀತಿ ಬಿಟ್ಟರೆ ಪ್ರಪಂಚದಲ್ಲಿ ಯಾವುದೂ ಉಚಿತವಾಗಿ ಸಿಗದು. ಸರ್ಕಾರದಲ್ಲಿ ತಳಮಟ್ಟದಿಂದಲೂ ಹಣ ಖರ್ಚು ಮಾಡಬೇಕು. ಇದನ್ನು ಎಲ್ಲರೂ ಅರ್ಥಮಾಡಿಕೊಂಡು ಸಹಕರಿಸಬೇಕು' ಎಂದು ಅತಿಥಿ ಉಪನ್ಯಾಸಕರ ಸಂಘವೊಂದರ ಅಧ್ಯಕ್ಷ, ಉಪನ್ಯಾಸಕರ ಬಳಿ ಹಣಕ್ಕೆ ಬೇಡಿಕೆ ಇಟ್ಟಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಪ್ರಣಾಳಿಕೆಯ ಭರವಸೆಗೆ ಬದ್ಧ: ಸುಧಾಕರ್

'ಅತಿಥಿ ಉಪನ್ಯಾಸಕರಿಗೆ ಸೇವಾ ಭದ್ರತೆ ಒದಗಿಸುವುದಾಗಿ ಚುನಾವಣಾ ಪ್ರಣಾಳಿಕೆಯಲ್ಲೇ ಹೇಳಿದ್ದೇವೆ. ಎರಡು ದಶಕಗಳ ಈ ಸಮಸ್ಯೆ ಬಗೆಹರಿಸಲು ಸ್ವಲ್ಪ ಸಮಯ ಬೇಕಿದೆ. ಕಾನೂನು ವ್ಯಾಪ್ತಿಯಲ್ಲಿನ ಎಲ್ಲ ಸಾಧ್ಯತೆಗಳನ್ನೂ ಪರಿಶೀಲಿಸಿ, ಅನುಕೂಲ ಮಾಡಿಕೊಡಲಾಗುವುದು. ಆದರೆ, ಕೆಲ ಸಂಘಟನೆಗಳು ಮಾತುಕತೆಗೂ ಬಾರದೇ, ಸಮಯವನ್ನೂ ನೀಡದೆ ತರಗತಿ ಬಹಿಷ್ಕರಿಸುವ ಮೂಲಕ ವಿದ್ಯಾರ್ಥಿಗಳ ಭವಿಷ್ಯದ ಜತೆ ಆಟವಾಡುತ್ತಿದ್ದಾರೆ. ಇದೇ ಪರಿಸ್ಥಿತಿ ಮುಂದುವರಿದರೆ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸರ್ಕಾರ ಪರ್ಯಾಯ ಯೋಚನೆ ಮಾಡಲಿದೆ' ಎನ್ನುತ್ತಾರೆ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್

ಅಂಕಿ–ಅಂಶ

430 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು

10,600 ಅತಿಥಿ ಉಪನ್ಯಾಸಕರು

5,000 ಕಳೆದ ವರ್ಷ ಕೆಲಸ ಕಳೆದುಕೊಂಡವರು

ಒಳ ಪುಟ

ಷೇರು ಸೂಚ್ಯಂಕಗಳು ಭಾರಿ ಕುಸಿತ 8

ಚಿನಕುರಳಿ

ಪ್ರಕಾಶ್ ಶೆಟ್ಟಿ



ಕೆಎಸ್‌ಆರ್‌ಟಿಸಿ ಟ್ರಕ್ 'ನಮ್ಮ ಕಾರ್ಗೊ' ಸೇವೆ 23ಕ್ಕೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಸ್‌ಆರ್‌ಟಿಸಿ ಇದೇ ಮೊದಲ ಬಾರಿಗೆ ಪಾರ್ಸೆಲ್ ಸೇವೆಗೆ ಟ್ರಕ್‌ಗಳನ್ನು ಬಳಸಲಿದ್ದು, ಡಿ.23ರಂದು 'ನಮ್ಮ ಕಾರ್ಗೊ' ಸೇವೆ ಪ್ರಾರಂಭವಾಗಲಿದೆ.

ಕೆಎಸ್‌ಆರ್‌ಟಿಸಿ 20 ಟ್ರಕ್‌ಗಳನ್ನು ಖರೀದಿಸಿದೆ. ಈ ಟ್ರಕ್‌ಗಳನ್ನು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ನಿಗಮದ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ಪರಿಶೀಲನೆ ನಡೆಸಿದ್ದಾರೆ. ಇಲ್ಲಿವರೆಗೆ ಬಸ್‌ಗಳಲ್ಲಿಯೇ ನೀಡುತ್ತಿದ್ದ ಕಾರ್ಗೊ ಸೇವೆ ಇನ್ನು ಮುಂದೆ ಟ್ರಕ್‌ಗಳಿಗೆ ವಿಸ್ತರಣೆಗೊಳ್ಳಲಿದೆ.

ಆಕರ್ಷಕ ವಿನ್ಯಾಸದ, ಉತ್ತಮ ಗುಣಮಟ್ಟದ ಟ್ರಕ್‌ಗಳನ್ನು ಆರಿಸಲಾಗಿದೆ. ಟಾಟಾ ಕಂಪನಿಯ ಪುಣೆ ಶಾಖೆಯಲ್ಲಿ ಟ್ರಕ್‌ಗಳು ತಯಾರಾಗಿವೆ. ಬಸ್‌ಗಳಲ್ಲಿ ಸಾಗಿಸುವ ಪಾರ್ಸೆಲ್‌ಗಳನ್ನು ಬಸ್ ನಿಲ್ದಾಣಗಳಿಗೆ ಬಂದು ಸಂಬಂಧಪಟ್ಟವರು ಒಯ್ಯಬೇಕಿತ್ತು. ಟ್ರಕ್‌ಗಳಲ್ಲಿ ನಿಗದಿತ ಸ್ಥಳಕ್ಕೇ ತಲುಪಿಸುವ ಕಾರ್ಯವಾಗಲಿದೆ. ಬಸ್‌ಗಳಲ್ಲಿಯೂ ಪಾರ್ಸೆಲ್ ಸೇವೆ ಮುಂದುವರಿಯಲಿದೆ ಎಂದು ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ಮಾಹಿತಿ ನೀಡಿದರು.

ಕೆಎಸ್‌ಆರ್‌ಟಿಸಿ ಪಾರ್ಸೆಲ್ ಸೇವೆ ನೀಡಲು ಸಜ್ಜಾಗಿರುವ 'ನಮ್ಮ ಕಾರ್ಗೊ' ಟ್ರಕ್

ಸಾರ್ವಜನಿಕರ ಸಮಸ್ಯೆ ಆಲಿಸಲು ಕರೆದ ಸಭೆಯಲ್ಲಿ ಜನರ ಆಕ್ರೋಶ

ರೈತರ ಮಕ್ಕಳಿಗೆ ಸಿಗದ ಉದ್ಯೋಗ

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: ಕೈಗಾರಿಕಾ ಪ್ರದೇಶಕ್ಕಾಗಿ ಜಮೀನು ನೀಡಿದ ರೈತರ ಮಕ್ಕಳಿಗೆ ಉದ್ಯೋಗ ನೀಡಲಾಗುವುದು, ಆಸ್ಪತ್ರೆ ಕಟ್ಟಿಕೊಡಲಾಗುವುದು ಎಂದು ಜಮೀನು ಸ್ವಾಧೀನ ಪಡಿಸಿಕೊಳ್ಳುವ ಮೊದಲು ಭರವಸೆಗಳನ್ನು ನೀಡಲಾಗಿತ್ತು. ಈಗ ಆಸ್ಪತ್ರೆಯೂ ಇಲ್ಲ, ರೈತರ ಮಕ್ಕಳಿಗೆ ಉದ್ಯೋಗವೂ ಇಲ್ಲ!

ಇದು ಸೋಂಪುರ 5ನೇ ಹಂತದ ಕೈಗಾರಿಕಾ ಪ್ರದೇಶಕ್ಕೆ ಜಮೀನು ಸ್ವಾಧೀನ ಪಡಿಸಿಕೊಂಡಿರುವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಪರಿಸರ ಇಲಾಖೆ ಬುಧವಾರ ಹಮ್ಮಿಕೊಂಡಿದ್ದ ಸಾರ್ವಜನಿಕರ ಅಹವಾಲು ಆಲಿಸುವ ಸಭೆಯಲ್ಲಿ ರೈತರು ಆಕ್ರೋಶ ವ್ಯಕ್ತ ಪಡಿಸಿದ ಪರಿ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು(ಕೆಐಎಡಿಬಿ) ಸೋಂಪುರ ಹೋಬಳಿಯ ಕೆಂಗಲ್ ಕೆಂಪೋಹಳ್ಳಿ, ಗೆದ್ದಲಹಳ್ಳಿ, ಮಾಚನಹಳ್ಳಿ, ಬಿಲ್ಲಿನಕೋಟೆ ಮತ್ತು ಅವೇರಹಳ್ಳಿ ಗ್ರಾಮಗಳ ರೈತರ 239.49 ಎಕರೆ ಜಮೀನು ಸ್ವಾಧೀನ ಪಡಿಸಿಕೊಂಡಿತ್ತು. ಈ ಸಂಬಂಧ ಸಾರ್ವಜನಿಕರಿಂದ ಅಹವಾಲು ಆಲಿಸುವ ಸಭೆ ಆಯೋಜಿಸಲಾಗಿತ್ತು.

> ಕೈಗಾರಿಕೆಗಳಿಗೆ ಭೂಮಿ ನೀಡಿದ ರೈತರ ಮಕ್ಕಳಿಗೆ ಶೈಕ್ಷಣಿಕ ಅರ್ಹತೆ ಆಧಾರದಲ್ಲಿ ಉದ್ಯೋಗ ನೀಡಲು ಕಾರ್ಖಾನೆಗಳ ಆಡಳಿತ ಮಂಡಳಿಗಳಿಗೆ ತಿಳಿಸಲಾಗುವುದು
> **ಡಾ. ಶಿವಶಂಕರ,** ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ

ಸಭೆಯಲ್ಲಿದ್ದ ಬಿಲ್ಲಿನಕೋಟೆ ಗ್ರಾಮಸ್ಥ ಮಾಳಯ್ಯ, 'ಕೆಐಎಡಿಬಿಯಲ್ಲಿ ದಲ್ಲಾಳಿಗಳ ಹಾವಳಿ ಜಾಸ್ತಿಯಾಗಿದೆ. ಸಂಬಂಧವಿಲ್ಲದವರಿಂದ ನ್ಯಾಯಾಲಯದಲ್ಲಿ ಕೇಸು ಹಾಕಿಸುತ್ತಾರೆ' ಎಂದು ಅಳಲು ತೋಡಿಕೊಂಡರು.

'ಸೋಂಪುರ ಕೈಗಾರಿಕಾ ಪ್ರದೇಶದಲ್ಲಿ 540 ಕಂಪನಿಗಳು ಕಾರ್ಯನಿರ್ವಹಿಸುತ್ತಿವೆ. ಆದರೆ ಯಾವ ಕಂಪನಿಯೂ ರೈತರಿಗೆ ಕೆಲಸ ನೀಡುತ್ತಿಲ್ಲ. ಕಳೆದ ಬಾರಿ ಸಭೆ ಕರೆದಾಗ, ಉದ್ಯೋಗ ಕೊಡುತ್ತೇವೆ, ಆಸ್ಪತ್ರೆ ಕಟ್ಟಿಕೊಡುತ್ತೇವೆ ಎಂದು ಆಶ್ವಾಸನೆ ಕೊಟ್ಟಿದ್ದರು. ಆದರೆ ಯಾವುದೂ ಆಗಿಲ್ಲ' ಎಂದು ಗ್ರಾಮಸ್ಥ ಗಣೇಶ್ ದೂರಿದರು.

'ನಮ್ಮ ಮನೆ ಹತ್ತಿರದ ಜಮೀನನ್ನು ಕೆಐಎಡಿಬಿ ಸ್ವಾಧೀನ ಮಾಡಿಕೊಂಡಿದೆ. ಈಗ ಅದನ್ನು ಬಿಡಿಸಿಕೊಳ್ಳಲು ನ್ಯಾಯಾಲಯಕ್ಕೆ ಹೋಗಬೇಕು. ನೀವು ಕೊಡುತ್ತಿರುವ ಪುಡಿಗಾಸಿಗೆ ದಾಬಸ್ ಪೇಟೆಯಲ್ಲಿ ಒಂದು ನಿವೇಶನ ಕೊಳ್ಳಲು ಸಾಧ್ಯವಾಗಲ್ಲ' ಎಂದು ರಮೇಶ್ ಆಕ್ರೋಶ ವ್ಯಕ್ತಪಡಿಸಿದರು.

ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಡಾ. ಶಿವಶಂಕರ ಮಾತನಾಡಿ, 'ರೈತರಿಂದ ಸ್ವಾಧೀನ ಪಡಿಸಿಕೊಂಡ ಭೂಮಿಗೆ ಪರಿಹಾರ ನೀಡಲಾಗುತ್ತಿದೆ. ಕೇಸ್ ನೋಂದಣಿಯಾಗಿ ವ್ಯಾಜ್ಯ ಇತ್ಯರ್ಥವಾಗದೇ ಇದ್ದರೆ, ಅಂತಹ ಜಮೀನುಗಳಿಗೆ ನೀಡಬೇಕಾದ ಪರಿಹಾರ ಮೊತ್ತವನ್ನು ಕೆಐಎಡಿಬಿಯಲ್ಲೇ ಇಟ್ಟುಕೊಳ್ಳಲು ಸಲಹೆ ನೀಡಲಾಗುವುದು ಎಂದರು.

ನೆಲಮಂಗಲ ತಹಶೀಲ್ದಾರ್ ಕೆ. ಅರುಂಧತಿ, ನೆಲಮಂಗಲ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪರಿಸರ ಅಧಿಕಾರಿ ಭೀಮ್‌ಸಿಂಗ್ ಗೋಗಿ, ಹಿರಿಯ ಪರಿಸರ ಅಧಿಕಾರಿ ಅನಿಲ್ ಕುಮಾರ್, ದಾಬಸ್ ಪೇಟೆ ಪೊಲೀಸ್ ಠಾಣೆಯ ಬಿ.ರಾಜು, ಉಪ ತಹಶೀಲ್ದಾರ್ ಬಿ.ಸಿ. ಶಶಿಧರ ಪಾಲ್ಗೊಂಡಿದ್ದರು.

ಸಾರ್ವಜನಿಕರ ಅಹವಾಲು ಆಲಿಸುವ ಸಭೆಯಲ್ಲಿ ಬಿಲ್ಲಿನಕೋಟೆ ಗ್ರಾಮಸ್ಥ ಮಾಳಯ್ಯ ಮಾತನಾಡಿದರು

ಸುದ್ದಿ 2 ನಿಮಿಷ

'ಸಿರಿಧಾನ್ಯ ಮೇಳದಲ್ಲಿ ಗುಣಮಟ್ಟಕ್ಕೆ ಆದ್ಯತೆ ನೀಡಿ'

ಬೆಂಗಳೂರು: ನಗರದ ಅರಮನೆ ಮೈದಾನದಲ್ಲಿ ಜನವರಿ 5 ರಿಂದ 7ರವರೆಗೆ ನಡೆಯಲಿರುವ ಅಂತರರಾಷ್ಟ್ರೀಯ ಸಾವಯವ ಸಿರಿಧಾನ್ಯ ಮೇಳದಲ್ಲಿ, ಸಿರಿಧಾನ್ಯಗಳ ಕೃಷಿ, ಉತ್ಪನ್ನಗಳ ಮೌಲ್ಯವರ್ಧನೆ, ವಿಶೇಷ ಖಾದ್ಯಗಳ ತಯಾರಿಕೆ ಕುರಿತು ಮಾಹಿತಿ ನೀಡುವಂತಹ ಪ್ರಾತ್ಯಕ್ಷಿಕೆ, ವಿಚಾರ ಸಂಕಿರಣಗಳನ್ನು ಆಯೋಜಿಸುವಂತೆ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಹೆಬ್ಬಾಳದಲ್ಲಿರುವ ಕೃಷಿ ಆಯುಕ್ತಾಲಯದ ಸಭಾಂಗಣದಲ್ಲಿ ನಡೆದ 'ಅಂತರ ರಾಷ್ಟ್ರೀಯ ಸಾವಯವ ಸಿರಿಧಾನ್ಯ ಮೇಳ'ದ ಸಿದ್ಧತೆಯ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

'ದೇಶ ವಿದೇಶದ ವಿಜ್ಞಾನಿಗಳು, ತಜ್ಞರು ಮೇಳದಲ್ಲಿ ಪಾಲ್ಗೊಳ್ಳುತ್ತಾರೆ. ಎಲ್ಲಾ ಕಾರ್ಯಕ್ರಮಗಳು ಗುಣಾತ್ಮಕವಾಗಿ ಹಾಗೂ ರಚನಾತ್ಮಕವಾಗಿರಲಿ. ರೈತ ಸ್ನೇಹಿ, ಗ್ರಾಹಕ ಸ್ನೇಹಿ ವಾತಾವರಣ ಸೃಷ್ಟಿ ಮಾಡಿ. ಹೆಚ್ಚಿನ ಪ್ರಮಾಣದಲ್ಲಿ ರೈತರು ಮೇಳದಲ್ಲಿ ಭಾಗವಹಿಸಲು ವ್ಯವಸ್ಥೆ ಮಾಡಿ, ಸೌಲಭ್ಯ ಕಲ್ಪಿಸಬೇಕು' ಎಂದು ಸಚಿವರು ನಿರ್ದೇಶನ ನೀಡಿದರು.

ಅಂಗವಿಕಲರಿಗೆ ಆದಾಯ ಮಿತಿ: ಖಂಡನೆ

ಬೆಂಗಳೂರು: ಗ್ಯಾರಂಟಿಗಳಿಗೆ ಇಲ್ಲದ ಆದಾಯ ಮಿತಿ ಅಂಗವಿಕಲರ ಮಾಸಾಶನಕ್ಕೆ ಏಕೆ ಎಂದು ಕರ್ನಾಟಕ ವಿಕಲಚೇತನರ ರಕ್ಷಣಾ ಸಮಿತಿ ಪ್ರಶ್ನಿಸಿದೆ.

ಸಾಮಾಜಿಕ ಭದ್ರತಾ ಯೋಜನೆಯಲ್ಲಿ ಸಮಾಜದ ಅತ್ಯಂತ ದುರ್ಬಲ ವರ್ಗವಾದ ಅಂಗವಿಕಲರಿಗೆ ₹800, ₹1,400, ₹1,200 ಮಾಸಿಕ ಪಿಂಚಣಿ ನೀಡಲಾಗುತ್ತಿದೆ. ಮಾಸಾಶನ ಪಡೆಯಲು ಬಿಪಿಎಲ್ ಕಾರ್ಡ್ ಇರಬೇಕು ಅಥವಾ ಕುಟುಂಬದ ವಾರ್ಷಿಕ ಆದಾಯ ₹32 ಸಾವಿರ ಇರಬೇಕು. ₹1 ಸಾವಿರ ಮೇಲ್ಪಟ್ಟ ಮಾಸಾಶನ ಪಡೆಯಲು ವಾರ್ಷಿಕ ಆದಾಯ ₹11,200 ಇರಬೇಕು ಎಂಬ ನಿಯಮವಿದೆ. ವೃದ್ಧಾಪ್ಯ ವೇತನಕ್ಕೆ ಬಿಪಿಎಲ್ ಕಾರ್ಡ್ ಕಡ್ಡಾಯ ಮಾಡಲಾಗಿದೆ.

ಸ್ವಯಂ ಉದ್ಯೋಗಕ್ಕೆ ₹50 ಸಾವಿರ ಸಬ್ಸಿಡಿ ಪಡೆಯಲು, ಶೇ 75ರಷ್ಟು ಅಂಗವಿಕಲತೆ ಇರುವವರಿಗೆ ಸ್ವಯಂಚಾಲಿತ ಯಂತ್ರ ಪಡೆಯಲು ಆದಾಯ ಮಿತಿ ₹2ಲಕ್ಷ ನಿಗದಿ ಮಾಡಲಾಗಿದೆ. ಆದರೆ, ಆದಾಯಮಿತಿ ಇಲ್ಲದೇ ಗೃಹ ಲಕ್ಷ್ಮಿ ಯೋಜನೆಯಲ್ಲಿ ಮಾಸಿಕ ₹2ಸಾವಿರ, ಕೋಟ್ಯಧಿಪತಿಗಳಿಗೂ ಉಚಿತ ವಿದ್ಯುತ್ ನೀಡಲಾಗುತ್ತಿದೆ. ಇಂತಹ ತಾರತಮ್ಯ ತೆಗೆದುಹಾಕಬೇಕು ಎಂದು ಸಮಿತಿ ಕಾರ್ಯಾಧ್ಯಕ್ಷ ಚಂದ್ರಶೇಖರ ಪುಟ್ಟಪ್ಪ ಒತ್ತಾಯಿಸಿದ್ದಾರೆ.

ಶಾ.ಮಂ.ಕೃಷ್ಣರಾಯರಿಗೆ ಕಸಾಪ ದತ್ತಿ ಪ್ರಶಸ್ತಿ



ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 'ಪಿ. ಕೆ.ನಾರಾಯಣ ದತ್ತಿ ಪ್ರಶಸ್ತಿ'ಗೆ ಸಾಹಿತಿ ಶಾ.ಮಂ. ಕೃಷ್ಣರಾಯ ಆಯ್ಕೆಯಾಗಿದ್ದಾರೆ.

ಕಸಾಪ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದೆ. ಈ ಪ್ರಶಸ್ತಿ ₹ 15 ಸಾವಿರ ನಗದು ಒಳಗೊಂಡಿದೆ. 1961ರಲ್ಲಿ ಗೋವಾ ಸ್ವತಂತ್ರವಾದ ನಂತರ ಅಲ್ಲಿಗೆ ಹೋದ ಕೃಷ್ಣರಾಯರು, ಮಡಗಾಂವ್, ಪಣಜಿ, ವಾಸ್ಕೊ, ಸಾವರ್ಜಿ, ತಿಸ್ಕಗಳಲ್ಲಿ ಕನ್ನಡ ಶಾಲೆಗಳನ್ನು ಆರಂಭಿಸಿದರು. 'ಗೋವಾ ಕನ್ನಡ ಸಂಘ', 'ಗೋಮಾಂತ ಭಾರತಿ', ಕರ್ನಾಟಕ ಸಂಘ' ಮೊದಲಾದ ಸಂಘಗಳನ್ನು ಕಟ್ಟಿ, ಗೋವಾದಲ್ಲಿ ಕನ್ನಡ ಸಂಸ್ಕೃತಿಯನ್ನು ಬೆಳೆಸಿದರು. ಅವರು ನೂರಕ್ಕೂ ಹೆಚ್ಚು ಕೃತಿಗಳನ್ನು ರಚನೆ ಮಾಡಿದ್ದಾರೆ. 'ನೂತನ' ಮತ್ತು 'ಕರ್ಮವೀರ' ಪತ್ರಿಕೆಗಳ ಸಂಪಾದಕರಾಗಿ ಕೂಡ ಕೆಲಸ ಮಾಡಿದ್ದಾರೆ ಎಂದು ಕಸಾಪ ಪ್ರಕಟಣಾ ಸಮಿತಿ ಸಂಚಾಲಕ ಎನ್.ಎಸ್.ಶ್ರೀಧರ ಮೂರ್ತಿ ತಿಳಿಸಿದ್ದಾರೆ.

ತ್ಯಾಜ್ಯ ವಿಲೇವಾರಿಗೆ ಸಹಾಯವಾಣಿ

ಬೆಂಗಳೂರು: ಘನತ್ಯಾಜ್ಯ ನಿರ್ವಹಣೆ ಹಾಗೂ ವಿಲೇವಾರಿಗೆ ಸಂಬಂಧಿಸಿದಂತೆ ಅಗತ್ಯ ಮಾಹಿತಿ ನೀಡಲು ಬಿಬಿಎಂಪಿ ಸಹಯೋಗದಲ್ಲಿ ಸರ್ಕಾರೇತರ ಸಂಸ್ಥೆ 'ಸಾಹಸ್' ಸಹಾಯವಾಣಿ ಪ್ರಾರಂಭಿಸಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಸ್ಥೆಯ ಯೋಜನೆ ಸಲಹೆಗಾರ್ತಿ ಶಾಂತಿ, 'ಬೆಂಗಳೂರಿನಲ್ಲಿ ಹಸಿ ಕಸ, ಒಣ ಕಸ ನಿರ್ವಹಣೆ ಬಗ್ಗೆ ಸಾರ್ವಜನಿಕರಿಗೆ ಸೂಕ್ತ ಮಾಹಿತಿ ನೀಡಿ, ಸಮರ್ಪಕವಾಗಿ ಘನತ್ಯಾಜ್ಯ ವಿಲೇವಾರಿ ಮಾಡುವ ಉದ್ದೇಶದಿಂದ '93539 02092' ಸಹಾಯವಾಣಿ ರೂಪಿಸಿದ್ದೇವೆ. ಕನ್ನಡ ಹಾಗೂ ಆಂಗ್ಲ ಭಾಷೆಯಲ್ಲಿ ಮಾಹಿತಿ ನೀಡಲಾಗುತ್ತದೆ. ತ್ಯಾಜ್ಯದಿಂದ ಗೊಬ್ಬರ ಮಾಡುವ ವಿಧಾನ, ಮನೆ-ಸಮಾರಂಭದಲ್ಲಿ ಶೂನ್ಯ ಕಸ ನಿರ್ವಹಣೆ ಸೇರಿ ವಿವಿಧ ವಿಷಯಗಳ ಬಗ್ಗೆ ತಿಳಿಸಿಕೊಡಲಾಗುತ್ತದೆ' ಎಂದು ಹೇಳಿದರು. 'ಸಂಸ್ಥೆಯು ಹಲವು ಸಮಾಜಮುಖಿ ಕೆಲಸಗಳನ್ನು ಮಾಡುತ್ತಿದ್ದು, ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಲು ಹೊಸ ಸಹಾಯವಾಣಿ ಪ್ರಾರಂಭಿಸಿದೆ' ಎಂದು ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ನಗರದಲ್ಲಿ ಇಂದು, ನಾಳೆ ವಿದ್ಯುತ್ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಪಿಟಿಸಿಎಲ್ ವತಿಯಿಂದ ನಿರ್ವಹಣಾ ಕಾರ್ಯವನ್ನು ಹಮ್ಮಿಕೊಂಡಿರುವುದರಿಂದ ಡಿ.21 ಮತ್ತು 22ರಂದು ನಗರದ ಕೆಲವು ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ಡಿಎಲ್‌ಎಫ್ (ಅನ್ನಾಬೆಲ್) ಫೀಡರ್ ವ್ಯಾಪ್ತಿಯ ಡಿಎಲ್‌ಎಫ್ ಅಪಾರ್ಟ್‌ಮೆಂಟ್, ಬೇಗೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಡಿ.21ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 3ರ ವರೆಗೆ ವಿದ್ಯುತ್ ಸ್ಥಗಿತಗೊಳ್ಳಲಿದೆ.

ಇಸ್ಕಾನ್ ಫೀಡರ್ ವ್ಯಾಪ್ತಿಯ ಮಂತ್ರಿ ಅಪಾರ್ಟ್‌ಮೆಂಟ್, ತಲಘಟ್ಟಪುರ, ರಘುವನಹಳ್ಳಿ, ಗುಬ್ಬಲ, ಕುವೆಂಪು ನಗರ, ವಿ.ವಿ. ನಗರ, ವಿ.ವಿ. ಲೇಔಟ್, ಬಾಲಾಜಿ ಲೇಔಟ್, ರಾಯಲ್ ಫಾರಂ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಡಿ.22ರಂದು ಬೆಳಿಗ್ಗೆ 11ರಿಂದ ಮಧ್ಯಾಹ್ನ 3ರ ವರೆಗೆ ವಿದ್ಯುತ್ ಪೂರೈಕೆ ಇರುವುದಿಲ್ಲ ಎಂದು ಕೆಪಿಟಿಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

23-24ರಂದು 2ನೇ ಆವೃತ್ತಿಯ ವಿಶ್ವ ಯೋಗ ಶೃಂಗ

ಬೆಂಗಳೂರು: ರೋಟರಿ ಬೆಂಗಳೂರು ಗ್ಲೋಬಲ್ ಯೋಗ ಕ್ಲಬ್ ಇದೇ 23 ಮತ್ತು 24ರಂದು ಬೆಂಗಳೂರು ಅರಮನೆ ಮೈದಾನದಲ್ಲಿ (ಗೇಟ್ ಸಂಖ್ಯೆ 9) ಎರಡನೇ ಆವೃತ್ತಿಯ ವಿಶ್ವ ಯೋಗ ಶೃಂಗ ಹಮ್ಮಿಕೊಂಡಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಯೋಗ ಶೃಂಗದ ಅಧ್ಯಕ್ಷ ಯೋಗಿ ದೇವರಾಜ್, 'ಈ ಶೃಂಗದಲ್ಲಿ ದೇಶ ವಿದೇಶಗಳಿಂದ ವೈದ್ಯರು, ಯೋಗ ಗುರುಗಳು, ವೇದ ಪಂಡಿತರು, ಶಿಕ್ಷಣ ತಜ್ಞರು ಹಾಗೂ ಯೋಗಾಸಕ್ತರು ಭಾಗವಹಿಸುತ್ತಾರೆ.

'ಮಾನಸಿಕ ಆರೋಗ್ಯಕ್ಕಾಗಿ ಯೋಗ' ಎನ್ನುವುದು ಈ ವರ್ಷದ ಘೋಷವಾಕ್ಯವಾಗಿದೆ. ಮೂರು ಸಾವಿರದಿಂದ ನಾಲ್ಕು ಸಾವಿರ ಮಂದಿ ಪಾಲ್ಗೊಳ್ಳುವ ನಿರೀಕ್ಷೆಯಿದೆ' ಎಂದು ಹೇಳಿದರು. 'ಎರಡು ದಿನಗಳ ಶೃಂಗದಲ್ಲಿ ಆರೋಗ್ಯ ವಸ್ತುಪ್ರದರ್ಶನವನ್ನೂ ಆಯೋಜಿಸಲಾಗಿದೆ. ಯೋಗ ಮತ್ತು ಚಿಕಿತ್ಸೆಗೆ ಸಂಬಂಧಿಸಿದ ವಿವಿಧ ಉತ್ಪನ್ನಗಳು ಲಭ್ಯವಾಗುತ್ತವೆ.

ಮಾನಸಿಕ ಶಾಂತಿಗಾಗಿ ಅಗ್ನಿಹೋತ್ರ, ಸೂರ್ಯ ನಮಸ್ಕಾರ, ಲಲಿತಾ ಸಹಸ್ರನಾಮ ಪಠಣ, ವಿಷ್ಣು ಸಹಸ್ರನಾಮ ಪಠಣ, ಸೌಂದರ್ಯ ಲಹರಿ ಪಾರಾಯಣ, ಭಗವದ್ಗೀತೆ ಪಠಣ ಸೇರಿ ವಿವಿಧ ಮಂತ್ರ ಪಠಣ ನಡೆಯಲಿದೆ. ಅನಾರೋಗ್ಯ ಸಮಸ್ಯೆಗಳಿಗೆ ಚಿಕಿತ್ಸೆ ಪಡೆಯಲೂ ಅವಕಾಶವಿದೆ' ಎಂದು ತಿಳಿಸಿದರು.

ನಗರಸಭೆ ಕಾರ್ಯಾಲಯ, ಕೋಲಾರ

ಸಂಖ್ಯೆ: ನಸಕೋ/ತಾಂತ್ರಿಕ/ಟೆಂಡರ್/ಸಿಆರ್/09/2023-24 ದಿನಾಂಕ: 15.12.2023

ಟೆಂಡರ್ ಪ್ರಕಟಣೆ

(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಬಂಧನೆಗಳಿಗೆ ಒಳಪಟ್ಟು ಇ-ಟೆಂಡರ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ-1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಕೋಲಾರ ನಗರಸಭೆ ವತಿಯಿಂದ 2023-24ನೇ ಸಾಲಿನ 15ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನದ 5 ಕಾಮಗಾರಿಗಳಿಗೆ 2ನೇ ಕರೆಯಾಗಿ ಮತ್ತು ಪೌರಕಾರ್ಮಿಕರ ಗೃಹಭಾಗ್ಯ ಯೋಜನೆಯ 1ನೇ ಕಾಮಗಾರಿಗೆ 2ನೇ ಕರೆಯಾಗಿ, ಕೊಳವೆ ಬಾವಿಗಳ ವಾರ್ಷಿಕ ನಿರ್ವಹಣೆಯ 5 ಕಾಮಗಾರಿಗಳಿಗೆ 2ನೇ ಕರೆಯಾಗಿ ಹಾಗೂ ನಗರಸಭೆ ನಿಧಿಯ 3 ಕಾಮಗಾರಿಗಳಿಗೆ ಮತ್ತು 1 ಸಂಖ್ಯೆ ಸೇವೆಗಳಿಗೆ ಏಕ/ದ್ವಿ ಲಕೋಟೆ ಪದ್ಧತಿಯಲ್ಲಿ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಸಾಮಾನ್ಯ ವರ್ಗಕ್ಕೆ 14 ಸಂಖ್ಯೆ, ಪರಿಶಿಷ್ಟ ಪಂಗಡಕ್ಕೆ 1 ಸಂಖ್ಯೆ ಒಟ್ಟು 15 ಪ್ಯಾಕೇಜ್‌ಗಳಿಗೆ ಈ ಕೆಳಕಂಡ ಸಹಿ ಮಾಡಿರುವವರು ಟೆಂಡರ್‌ನ್ನು ಆಹ್ವಾನಿಸಿರುತ್ತಾರೆ. ಇಲಾಖಾ ವೆಬ್‌ಸೈಟ್ **http://kppp.karnataka.gov.in** ರಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು ಹಾಗೂ ವಿವರಗಳನ್ನು ಪಡೆಯಬಹುದಾಗಿದೆ. (1) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 29.12.2023ರ ಸಂಜೆ 17.30 ಗಂಟೆವರೆಗೆ.** (2) ಏಕಲಕೋಟೆ ಪದ್ಧತಿಯ ಪ್ಯಾಕೇಜ್ ಸಂಖ್ಯೆ: 6, 7 ಮತ್ತು 8ರ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ನ್ನು ತೆರೆಯುವ **ದಿನಾಂಕ: 01.01.2024ರ ಬೆಳಿಗ್ಗೆ 11.00 ಗಂಟೆಗೆ.** (3) ದ್ವಿ ಲಕೋಟೆ ಪದ್ಧತಿಯ ಪ್ಯಾಕೇಜ್ ಸಂಖ್ಯೆ: 1 ರಿಂದ 5 ಮತ್ತು 9 ರಿಂದ 15ರ ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ: 01.01.2024ರ ಬೆಳಿಗ್ಗೆ 11.00 ಗಂಟೆಗೆ.** ಹಾಗೂ ಆರ್ಥಿಕ ಬಿಡ್‌ನ್ನು ತೆರೆಯುವ **ದಿನಾಂಕ: 03.01.2024ರ ಬೆಳಿಗ್ಗೆ 11.00 ಗಂಟೆಗೆ. ಸೂಚನೆ:** ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ತಾಂತ್ರಿಕ ವಿಭಾಗದಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು ಹಾಗೂ **www.kolarcity.mrc.gov.in** ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು.

ಸಹಿ/- ಪೌರಾಯುಕ್ತರು, ನಗರಸಭೆ, ಕೋಲಾರ.

ವಾ.ಸಾ.ಸಂ.ಇ./ ಕೋಲಾರ/ ಆರ್.ಓ.ಸಂಖ್ಯೆ 269/ ಕೆಎಸ್‌ಎಂಸಿಎ/ 2023-24.

ನೈಋತ್ಯ ರೈಲ್ವೆ

ಇ-ಟೆಂಡರು ಸೂಚನೆ ಸಂ.: ECN-TRD-14-2023

ದಿನಾಂಕ: 15.12.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ನೈಋತ್ಯ ರೈಲ್ವೆ / ನಿರ್ಮಾಣ ದ ವಿವಿಧ ವಿಭಾಗಗಳಲ್ಲಿ ವಿದ್ಯುದೀಕರಣ ಕಾರ್ಯಕ್ಕಾಗಿ ಸಮೀಕ್ಷಾ ಕಾರ್ಯ.	ರೂ. 1,15,23,673/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 09.01.2024, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್ ಟ್ರ್ಯಾಕ್ಷನ್ ವಿನಿಯೋಗ (ನಿರ್ಮಾಣ), ಬೆಂಗಳೂರು

PUB/575/AAD/PRB/SWR/2023-24

South Western Railway - SWR | SWRRLY | SWRRLY

ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿ.,

H.O:#156, 8th Main, 17th Cross, Malleswaram, Bengaluru - 560 055. Ph: 080- 23341972/ 2344 9450/ 2344 2648

ಸ್ಥಿರಾಸ್ತಿ ಸ್ವಾಧೀನತೆಯ ಪ್ರಕಟಣೆ

ಕೆಳಸಹಿದಾರರು ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯಾಗಿದ್ದು, ಸೆಕ್ಯೂರಿಟೈಸೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ (ಸೆಕೆಂಡ್) ಆರ್ಡಿನೆನ್ಸ್ 2002 (ಆದೇಶ 3 ರ 2002) ರಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸೆಕ್ಷನ್ 13 (2) & 13(12) ನಿಯಮ 8 & 9 ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರಂತೆ ದಿನಾಂಕ: **06-09-2023**ರಂದು ಈ ಕೆಳಗಿನ ಸಾಲಗಾರರರಾದ **ಶ್ರೀಮತಿ ಸುಧಾ ಆರ್, ಶ್ರೀ ಜಯರಾಮ ರೆಡ್ಡಿ ಜಿ ಅವರ ಪತ್ನಿ,** ನಂ. 137, 'ಮಾರುತಿ ಮಹಲ್', ಗೋಕುಲ 1ನೇ ಹಂತ, 2ನೇ ಫೇಸ, ಮತ್ತಿಕೆರೆ, ಬೆಂಗಳೂರು 560054. ಇವರಿಗೆ ದಿನಾಂಕ **06-09-2023**ರ ನೋಟೀಸ್‌ನಲ್ಲಿ ಸೂಚಿಸಿರುವ ಮೊತ್ತವಾದ **ರೂ.78,01,842/-+ರೂ.35,17,688/-+1,31,433/- ಒಟ್ಟು ಮೊತ್ತ ರೂ.1,14,75,963/- (ಒಂದು ಕೋಟಿ ಹದಿನಾಲ್ಕು ಲಕ್ಷ ಎಪ್ಪತ್ತೈದು ಸಾವಿರದ ಒಂಬತ್ತು ನೂರ ಅರವತ್ತುಮೂರು ರೂಗಳು ಮಾತ್ರ)** ಈ ಮೇಲೆ ತಿಳಿಸಿದ ನೋಟೀಸ್ ತಲುಪಿದ 60 ದಿನಗಳ ಒಳಗಾಗಿ ಪಾವತಿಸಲು ತಿಳಿಸಲಾಗಿತ್ತು.

ಸಾಲಗಾರರು ಹಣವನ್ನು ಮರುಪಾವತಿಸಲು ವಿಫಲವಾಗಿದ್ದರಿಂದ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಈ ಕೆಳಸಹಿದಾರರು ಸೆಕ್ಷನ್ **13(4)ರ ನಿಯಮ 8 ಮತ್ತು 9ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 15.12.2023 ರಂದು** ಈ ಕೆಳಗೆ ವಿವರಿಸಿದ ಆಸ್ತಿಯನ್ನು ಕೆಳಸಹಿದಾರರು ಸ್ವಾಧೀನಪಡಿಸಿಕೊಂಡಿದ್ದಾರೆ.

ಸಾಲಗಾರರು, ಅಡಮಾನದಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಆಸ್ತಿಯ ಬಗ್ಗೆ ಯಾರೂ ವ್ಯವಹರಿಸಕೂಡದು, ವ್ಯವಹರಿಸಿದ್ದೇ ಆದಲ್ಲಿ, **ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್,** 156, 8ನೇ ಮೈನ್ ರೋಡ್, 17ನೇ ಕ್ರಾಸ್, ಮಲ್ಲೇಶ್ವರಂ ಪಶ್ಚಿಮ, ಬೆಂಗಳೂರು-560 055ಗೆ ದಿನಾಂಕ **31.08.2023** ರವರೆಗೆ ಬರಬೇಕಾದ ಬಾಕಿ **ರೂ.78,01,842/-+ರೂ.35,17,688/-+1,31,433/- ಒಟ್ಟು ಮೊತ್ತ ರೂ.1,14,75,963/- (ಒಂದು ಕೋಟಿ ಹದಿನಾಲ್ಕು ಲಕ್ಷ ಎಪ್ಪತ್ತೈದು ಸಾವಿರದ ಒಂಬತ್ತು ನೂರ ಅರವತ್ತುಮೂರು ರೂಗಳು ಮಾತ್ರ)** ಪಾವತಿಸಬೇಕು (ಯಾವುದೇ ಹಣವನ್ನು ಪಾವತಿಸಿದ್ದಲ್ಲಿ, ಅದನ್ನು ಅಂತಿಮ ಸೆಟಲ್‌ಮೆಂಟ್ ಸಮಯದಲ್ಲಿ) ಹಾಗೂ ಬಡ್ಡಿಯನ್ನು ಪರಿಗಣಿಸಲಲಾಗುವುದು.

ಸ್ಥಿರಾಸ್ತಿಯ ವಿವರ

ಬಿ.ಬಿ.ಎಮ್.ಪಿ ವಾರ್ಡ್ ನಂ.4 (ಮತ್ತಿಕೆರೆ) , (ಪಿ.ಐ.ಡಿ. ನಂ.4-114-4) ನಲ್ಲಿರುವ ಹೊಸ ನಂ. 4, ಹಳೆ ನಂ. 137, ದಕ್ಷಿಣ ಭಾಗ ಆಸ್ತಿ 8ನೇ ಮೈನ್ ರಸ್ತೆ, ಗೋಕುಲ 1ನೇ ಹಂತ, 2ನೇ ಫೇಸ್, ಬೆಂಗಳೂರು ಇಲ್ಲಿದ್ದು ಪೂರ್ವದಿಂದ ಪಶ್ಚಿಮಕ್ಕೆ: (38.9+44)2 ಅಡಿ, ಉತ್ತರದಿಂದ ದಕ್ಷಿಣಕ್ಕೆ 45 ಅಡಿ ಮತ್ತು ಚಕ್ಕುಬಂದಿ: ಪೂರ್ವಕ್ಕೆ – ರಸ್ತೆ; ಪಶ್ಚಿಮಕ್ಕೆ – ಸ್ಥಿರಾಸ್ತಿ ನಂ. 126ಎ, 127, 128; ಉತ್ತರಕ್ಕೆ – ಇದೇ ಸ್ಥಿರಾಸ್ತಿ ಉತ್ತರ ಭಾಗ; ದಕ್ಷಿಣಕ್ಕೆ – ಸ್ಥಿರಾಸ್ತಿ ನಂ.136.

ದಿನಾಂಕ: 15.12.2023
ಬೆಂಗಳೂರು.

ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿ.
ಅಧಿಕೃತ ಅಧಿಕಾರಿ

ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಸ್ಥಾಪನೆ: 1969

ನಂ.24, ಸುವರ್ಣ ಭವನ, 1ನೇ ಮುಖ್ಯರಸ್ತೆ, ಹಕ್ಕ ರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು-560104.

ದೂ. 23300497 41159606, 23359600, ಇ-ಮೇಲ್ : jscbinfo@jscbl.com

ಸ್ಥಿರಾಸ್ತಿ ಬಹಿರಂಗ ಹರಾಜು

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಬ್ಯಾಂಕಿನ ಮಾಲೀಕತ್ವದಲ್ಲಿರುವ ಈ ಕೆಳಕಂಡ ಕಟ್ಟಡ "ಎಲ್ಲಿ ಹೇಗಿದೆಯೋ ಹಾಗೆಯೇ" ಮತ್ತು "ಏನಿದೆಯೋ ಹಾಗೆ" ಆಧಾರದ ಮೇಲೆ ಹರಾಜು ನಡೆಸಿ ಮಾರಾಟ ಮಾಡಲಾಗುವುದು.

ಹರಾಜಿಗಿರುವ ಸ್ಥಿರಾಸ್ತಿಯ ವಿವರ	ಕನಿಷ್ಠ ಮೀಸಲು ಬೆಲೆ ಮತ್ತು ಮುಂಗಡ ಠೇವಣಿ (ಇ.ಎಂ.ಡಿ)	ಹರಾಜಿನ/ಮಾರಾಟ ದಿನಾಂಕ ವೇಳೆ ಮತ್ತು ಸ್ಥಳ
All that piece and parcel of Immovable Commercial Property bearing No.14, Rajatha Bhavan, 1st Main, Hakka Road, Hampinagar, Vijayanagar 2nd stage, Bangalore-560104. As per Schedule Physical Features of the property, East to West : 9.14 Mtrs. (30.0 Ft.), North to South: 13.72 Mtrs. (45.0 Ft), **Totally 125.40 Sq.Mtrs or (1350.0 Sq.Ft)**. With Four Floors of Super Built up Area of **4929.00 Sq.Ft** of Building.	**ರೂ.4,00,10,000/-** (ರೂಪಾಯಿ ನಾಲ್ಕು ಕೋಟಿ ಹತ್ತು ಸಾವಿರ ಮಾತ್ರ) **ಇಎಂಡಿ:** ಮೀಸಲು ಬೆಲೆಯ 10% **ರೂ.40,01,000/-** (ರೂಪಾಯಿ ನಲವತ್ತು ಲಕ್ಷದ ಒಂದು ಸಾವಿರ ಮಾತ್ರ)	**ದಿನಾಂಕ: 24.01.2024 ರ ಬುಧವಾರ ಬೆಳಗ್ಗೆ 11.30ಕ್ಕೆ** ಸ್ಥಳ: ವಿಜಯನಗರ ಶಾಖೆ, **ನಂ.14, ರಜತ ಭವನ, 1ನೇ ಮುಖ್ಯರಸ್ತೆ, ಹಕ್ಕ ರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು-560104.**

ಹರಾಜು/ಮಾರಾಟ ಷರತ್ತು ಮತ್ತು ನಿಬಂಧನೆಗಳು

1. ಹರಾಜಿನಲ್ಲಿ ಭಾಗವಹಿಸುವ ಆಸಕ್ತರು ಹಿಂತಿರುಗಿಸಲಾಗುವ ಇ.ಎಂ.ಡಿಗಾಗಿ, ಕಾಯ್ದಿಟ್ಟ ಬೆಲೆಯ ಶೇಕಡ 10% ರಷ್ಟನ್ನು ಡಿ.ಡಿ/ಆರ್.ಟಿ.ಜಿ.ಎಸ್/ಪೇ ಆರ್ಡರ್ ಮುಖಾಂತರ **ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ.,** ವಿಜಯನಗರ ಶಾಖೆ, ಬೆಂಗಳೂರು: ದಿನಾಂಕ: **23.01.2024, ಸಂಜೆ 5.30ರ** ಒಳಗೆ ಪಾವತಿಸಿ ರಸೀದಿ ಮತ್ತು ಟೆಂಡರ್ ಫಾರಂ ಅನ್ನು ಪಡೆಯುವುದು ಜೊತೆಗೆ ಕೆವೈಸಿ ದಾಖಲೆಗಳು ಮತ್ತು ಇತ್ತೀಚಿನ ಭಾವಚಿತ್ರ ಸಲ್ಲಿಸುವುದು, ವಿಜಯಿ ಬಿಡ್ಡುದಾರರು ಹರಾಜಿನ ನಿಯಮಗಳನ್ನು ಪಾಲಿಸದಿದ್ದಲ್ಲಿ ಮುಂಗಡವಾಗಿ ಕೊಟ್ಟ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಮುಂಗಡವಾಗಿ ಶೇಕಡ 10% ಇ.ಎಂ.ಡಿ ಮೊತ್ತವನ್ನು ಪಾವತಿಸಲಾಗದ ಬಿಡ್ಡುದಾರರನ್ನು ಹರಾಜಿನಲ್ಲಿ ಭಾಗವಹಿಸಲು ಅನುಮತಿ ನೀಡುವುದಿಲ್ಲ. ಹರಾಜಿನಲ್ಲಿ ಭಾಗವಹಿಸುವ ಆಸಕ್ತರು ಅರ್ಜಿಗಳನ್ನು ಬ್ಯಾಂಕಿನ ಕೇಂದ್ರ ಕಛೇರಿಯಲ್ಲಿ ಪಡೆಯಬಹುದು.
2. ಮುಂಗಡ ಠೇವಣಿಯನ್ನು ಪಾವತಿಸಿದ ಬಿಡ್ಡುದಾರರು ದಿನಾಂಕ: **24.01.2024 ಬುಧವಾರ,** ಬೆಳಗ್ಗೆ **11.30** ಗಂಟೆಗೆ ಮೇಲೆ ತಿಳಿಸಿರುವ ವಿಳಾಸದಲ್ಲಿ ಬಹಿರಂಗ ಹರಾಜಿನ ಮೂಲಕ ಭಾಗವಹಿಸಬಹುದಾಗಿದ್ದು, ಅತಿ ಹೆಚ್ಚು ಬಿಡ್ ಮಾಡಿದವರನ್ನು ವಿಜಯಿ ಬಿಡ್ಡುದಾರರೆಂದು ಪರಿಗಣಿಸಲಾಗುವುದು.
3. ಬಿಡ್ಡಿನಲ್ಲಿ ಯಶಸ್ವಿಯಾಗದ ಬಿಡ್ಡುದಾರರಿಗೆ ಇ.ಎಂ.ಡಿ, ಹಣವನ್ನು ತಕ್ಷಣವೇ ಮರುಪಾವತಿಸಲಾಗುವುದು, ಸ್ಥಿರ ಸ್ವತ್ತನ್ನು ಯಾವುದೇ ಕಾರಣಕ್ಕೂ ಮೀಸಲು ಬೆಲೆಗಿಂತ ಕಡಿಮೆ ಮೌಲ್ಯಕ್ಕೆ ಮಾರಾಟ ಮಾಡಲಾಗುವುದಿಲ್ಲ.
4. ವಿಜಯಿ ಬಿಡ್ಡುದಾರರು ಹರಾಜಿನ ಮೊಬಲಗಿನ ಶೇ.25 ರಷ್ಟು (ಮುಂಗಡವಾಗಿ ಪಾವತಿಸಿದ ಹಣವನ್ನು ಸೇರಿ) ಮೊತ್ತವನ್ನು ಹರಾಜಿನ ದಿನವೇ ಪಾವತಿಸತಕ್ಕದ್ದು, ಆ ಹಣವನ್ನು ಸ್ವೀಕರಿಸಿದ ಮತ್ತು ಕೆವೈಸಿ ದಾಖಲೆಗಳ ಮೂಲ ಪ್ರತಿಗಳನ್ನು (ಫೋಟೋ, ಆಧಾರ್ ಕಾರ್ಡ್, ಪಾನ್ ಕಾರ್ಡ್ ಮತ್ತು ವಿಳಾಸದ ದಾಖಲೆ) ಪರಿಶೀಲಿಸಿದ ನಂತರ ಮಾರಾಟ ದೃಢೀಕರಣ ಪತ್ರವನ್ನು ನೀಡಲಾಗುವುದು. ಉಳಿದ ಹಣವನ್ನು 45 ದಿನಗಳ ಒಳಗಾಗಿ ಪಾವತಿಸಬೇಕು.
5. ವಿಜಯಿ ಬಿಡ್ಡುದಾರರು ಈ ಪ್ರಕಟಣೆಯ ಹಾಗೂ ಟೆಂಡರ್ form ನಿಯಮಗಳನ್ನು ಪಾಲಿಸದಿದ್ದರೆ ಮತ್ತು ಯಾವುದೇ ರೀತಿಯಲ್ಲಾದರೂ ತಪ್ಪುಗಳನ್ನು ಮಾಡಿದರೆ ಅವರು ಪಾವತಿಸಿದ ಹಣವನ್ನು ಬ್ಯಾಂಕ್ ಯಾವುದೇ ಸೂಚನೆ ನೀಡದೆ ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ ಹಾಗೂ ಪುನಃ ಹರಾಜು ಮಾಡಲಾಗುತ್ತದೆ.
6. ವಿಜಯಿ ಬಿಡ್ಡುದಾರರು ತನ್ನ ಪರವಾಗಿ ನೋಂದಣಿ ಮಾರಾಟ ಪತ್ರವನ್ನು ಪಡೆದುಕೊಳ್ಳಲು ತೆರಿಗೆಗಳು, ನೋಂದಣಿ ಶುಲ್ಕ ಮತ್ತು ಸಾಮಾನ್ಯ ಮುದ್ರಾಂಕ, ಟಿ.ಡಿ.ಎಸ್. ಮತ್ತಿತರ ಖರ್ಚುಗಳನ್ನು ಭರಿಸತಕ್ಕದ್ದು.
7. ಸದರಿ ಪ್ರಕಟಣೆಯಲ್ಲಿ ಏನಾದರು ಬದಲಾವಣೆ ಇದ್ದರೆ ಅದನ್ನು ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಬಿಡ್‌ದಾರರು ಟೆಂಡರ್‌ನ ಹೆಚ್ಚಿನ ಮಾಹಿತಿಗಾಗಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ/ವ್ಯವಸ್ಥಾಪಕರು, **ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ.,** ನಂ.24, 'ಸುವರ್ಣ ಭವನ', 1ನೇ ಮುಖ್ಯರಸ್ತೆ ಹಕ್ಕ ರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು-560104, ದೂರವಾಣಿ: **080-23300497, 41159606, 9845022879 & 9945052783,** ವೆಬ್‌ಸೈಟ್: **www.jscbl.com,** ಇ-ಮೇಲ್ ಐಡಿ: **jscbinfo@jscbl.com** ರವರನ್ನು ಸಂಪರ್ಕಿಸತಕ್ಕದ್ದು.

ದಿನಾಂಕ : 21.12.2023
ಸ್ಥಳ : ಬೆಂಗಳೂರು

ಸಹಿ/- ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164 9845114560 / 9731810277/ 9886213331

PUBLIC NOTICE

PUBLIC NOTICE

This is to inform the general public that my client, **Mr. M. Karthik Kumar,** son of Mr. M.V. Narayana Raju is the absolute owner in possession and enjoyment of the immovable property mentioned and described in the Schedule hereunder. My client represents that the Schedule Property is situated in the residential layout formed by The State Bank of Mysore Employees' Housing Co-operative Society Limited, ("Society") having its office at Avenue Road, Bengaluru. The Society had earlier allotted the Schedule Property to one Shri. K. Sangappa Setty, resident of Chikkamagaluru and he was put in possession of the Schedule Property on 05-05-1971. Thereafter, Sri. Sangappa Setty obtained no objection from the Society and sold the Schedule Property through the registered sale deed in favour of Smt. Ranganayaki Prasad and thereafter several sale transactions have taken place between the erstwhile owners of the Schedule Property and ultimately, my client has acquired title to the Schedule Property through the registered gift deed executed by his father, Mr. M.V. Narayana Raju. Any person asserting any right, title or interest to the Schedule Property shall lodge their objection/s or claim/s with documentary evidence **within Fifteen (15) days** from the date of publication of this Notice with the Undersigned.

SCHEDULE

All that piece and parcel of the residential property bearing No. 68, BBMP PID No. 96-3-68, situated in the residential layout formed by the State Bank of Mysore Employees' Housing Co-operative Society Limited, known as SBM Private Layout (formerly known as Hebbal Layout), 3rd Cross, Bengaluru, measuring East to West 40 feet, North to South 50 feet, measuring in total 2000 square feet and is bounded on the:
East by : 30 feet wide Road
West by : Site No. 67
North by : 30 feet wide Road
South by: Property belonging to Mr. George

Vinay K. S.
Advocate,
Jayanth Pattanshetti Associates LLP
102, Ground Floor, "Rams Infantry Manor", No. 70, Infantry Road, Bengaluru-560 001. Ph: 080 41238367

Bengaluru
Date: 20-12-2023

JOB OPPORTUNITIES

Accounts & Finance

WANTED FEMALE Accounts Assistant with Tally Knowledge B.COM Below 40 Years Known Kannada English Hindi in and around Rajajinagar Contact: 9108458798/ 080-23384085

Marketing & Sales

SALES EXECUTIVE Experience in kitchen sink industry for Bangalore. 9370090700, hr@sincoresinks.com

BUSINESS

Business Offers

Finance

WANTED BUSINESS Partners Saree Business 12 Lakhs Investment Monthly Income 2 Lakhs Contact: 8892501007/ 9606701007

EDUCATIONAL

Training

NURSERY TEACHERS TRAINING Course at JNANABHARATHI,with in Class Training 6 Months/1 year (offline/online),100% Job Assurance. Call:6363032729

REAL ESTATE SELLING

Farm House/ Land/ Resorts

Multiple Locations

NANDI HILLS rd 1/2 acre converted land 15 furnished AC rooms lawn garden villa sale 9Cr Ph: 7019346409

PERSONAL

Lost

DOCUMENT LOST

I, **KASTURI RANGAN,** R/at # 37, 3rd Cross, 3rd Main, Srinidhi Layout, Konanakunte, Bangalore-62, have lost my original **Property Sale Deed / Identification No. 4684/ 1984-85.** while It's lost by the Canara Bank. *Finders please Contact:* **9845504111**

CONNECT

ವೆಡ್ಡಿಂಗ್ ಸೀಸನ್ ಸ್ಪೆಷಲ್
ಸಾಂಪ್ರದಾಯಿಕ & ಜೀವನಶೈಲಿ ಆಧಾರಿತ
ನ್ಯಾಷನಲ್ ಸಿಲ್ಕ್ ಎಕ್ಸ್‌ಪೋ
ಪ್ರದರ್ಶನ ಮತ್ತು ಮಾರಾಟ
ಭಾರತದ 100+ ನುರಿತ ನೇಕಾರರು ಮತ್ತು ಅತ್ಯುತ್ತಮ ವಿನ್ಯಾಸಕಾರರು
16 ರಿಂದ 25 Dec.
ಸಮಯ: ಬೆಳಿಗ್ಗೆ 11 ರಿಂದ ರಾತ್ರಿ 9 ರವರೆಗೆ
ಸ್ಥಳ: ಶಿಲ್ಪ ಕಲಾ ಮಂಟಪ
9ನೇ ಅಡ್ಡ ರಸ್ತೆ, ಜೆಪಿ ನಗರ, 3ನೇ ಹಂತ ಬನ್ನೇರುಘಟ್ಟ ಮುಖ್ಯರಸ್ತೆ, ಶಾಪರ್ಸ್ ಸ್ಟಾಪ್ ಎದುರು, ಜಯದೇವ ಆಸ್ಪತ್ರೆ ಸಮೀಪ, ಬೆಂಗಳೂರು
ದೇಶಾದ್ಯಂದತ ಕೈಮಗ್ಗ ರೇಷ್ಮೆ ಸೀರೆಗಳು ಮತ್ತು ಕಾಟನ್ ಸೀರೆಗಳು, ಆಕರ್ಷಕ ವಿನ್ಯಾಸ, ಸಾಂಪ್ರದಾಯಿಕ, ಪಾಶ್ಚಿಮಾತ್ಯ ಉಡುಪುಗಳು, ಫ್ಯಾಷನ್ ಜ್ಯುವೆಲ್ಲರಿ, ಹೋಮ್ ಲಿನೆನ್ ಮತ್ತು ಇನ್ನೂ ಅನೇಕ ಉತ್ಪನ್ನಗಳು ಲಭ್ಯ.
UP TO 40% Discount by Weavers
M: 9441987009 | ALL DEBIT & CREDIT CARDS ACCEPTED | ENTRY FREE

DOCUMENT LOST

I, **SHABARI. K** W/o Late. **K.KUMAR** No. 11/1 B 6th Cross, BV Nagar, Magadi Road, B-23. have lost original Property Sale deed document identification **No. BLN-1-27928-2004-05,** site No. 458, Nagavara Village, Kasaba Hobli, Bengaluru North Tq. While in transit. Finders Please **Contact: 9886801055**

CHANGE OF NAME

I, **RASHMI V** W/o. M. Suresh R/a Hirandahalli Village, Virgonagar Post, Bidarahalli Hobli, Bangalore East Taluk, Bangalore-560049. Declare that **RASHMI V** and **REKHA V** both names one and the same person, i.e. myself only. Henceforth, i will be known as **REKHA V** only. Vide affidavit dated: 20.12.2023 Sworn before Notary L. Gopalkrishna, Bangalore.

CHANGE OF NAME

I, **JAYARAM NAIK S.** S/o Sannarama Naik S, R/a #03, Muneshwara Layout, Doddabidarakallu, Nagasandra Post, Bangalore- 560073 Declare that in **my Son's NIKHIL J** 10th marksheet issued by ICSE Board, New Delhi, my name wrongly Spelt out as **JAIRAM NAIK S,** instead of **JAYARAM NAIK S.** in future my name will be known as **JAYARAM NAIK S.** only. Vide affidavit dated: 16.12.2023, Sworn before VII Addl. Chief Metropolitan Magistrate, Banglalore.

Change of Name

ANNEXURE / AFFIDAVIT SPECIMEN AFFIDAVIT FOR CHANGE IN NAME/ SURNAME

By this deed I the undersigned **KHATIJA AHMAD** (new name) previously called **KHATIJA IMRAN** (Old Name), DOB: 25.01.2005, D/o. Imran Ahmed, Residing at No.63/14, Hennur Residency, Flat No. 304, Block 3, Kacharakanahalli, Bangalore-560084, solemnly declare.

I AMIT S/o, Naresh Kumar R/o 67, 2nd-Floor, 9th- Main, 2nd- Cross, Koramangala 4th- Block, 560034 have changed my name to Amit Kumar for all purposes.

I, BHASKAR VARMA. C., Residing at #379, Officers Mess, Airforce Station, Jalahalli East, Bangalore-560014 have changed my name as C.BHASKAR VARMA, vide affidavit dated 21/12/2023 before Notary V.Anjanappa, Bangalore

I, THOTAPALLY SUJAY SEKHAR, residing at D2-501, White House Apartments 6th Main 15th Cross, Near Patels Inn, R.T.Nagar, Bengaluru-560032 have changed my daughter'sname from THOTAPALLY SIVA SAHITHI to THOTAPALLY SAHITHI, vide affidavit dated:18-12-2023 before Notary SIVAKUMARA M N, Bengaluru.

I, NISHAL LINGARAJU D/o Lingaraju D.A, age 31 years, R/o No. 183/24, 3rd Main, 6th Cross, Agrahara Layout, Bangalore North, Bangalore-64 do hereby declare that I have changed my name from NISHAL to NISHAL LINGARAJU, vide affidavit dated 20-12-2023, sworn before Advocate and Notary G.N. VENKATARAVANAPPA, Bangalore.

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd.
Bengaluru

CHANGE OF NAME

We, **JC-340796H, SM. RAJESH S** & **SADHANA R** Residing at No. 25, Raghavappa Garden, Opp ITC Colony, Cox Town, Jeevanahalli, Bangalore North, B'lore-560005 have changed our minor son's name from **LITHIESH ASHVIK R** to **AJAY VIHAN R** vide affidavit dated 2.11.2023 before Notary Sivakumara M.N, Bangalore. Henceforth he shall be known as **AJAY VIHAN R** only.

DH DECCAN HERALD | ಪ್ರಜಾವಾಣಿ
Classifieds — More value, more impact
REAL ESTATE
The 1st thing to do when Selling/Buying your Property
#1 PLACE YOUR AD HERE
www.dhclassifieds.com BOOK NOW
Book your ad with us now! For more details contact:
+91 9886213331 | +91 9901641752 | +91 9845114560 | +91 9900428036 | +91 9731810277 | 080- 45557163/164

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಯುಕ್ತರಿಗೆ ಹೈಕೋರ್ಟ್ ಸೂಚನೆ

ಸ್ಥಿರಾಸ್ತಿ ದಾಖಲೆಗಳಿಗೆ ಕ್ಯೂ ಆರ್ ಕೋಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯ ಸ್ಥಿರಾಸ್ತಿಗಳ ಕುರಿತು ಸುಳ್ಳು ಮಾಹಿತಿ ನೀಡುವ ಅಧಿಕಾರಿಗಳ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಹೈಕೋರ್ಟ್, 'ಎಲ್ಲ ಆಸ್ತಿಗಳಿಗೂ ಆಧಾರ್ ಕಾರ್ಡ್ ಮೂಲಕ ಕ್ಯೂ ಆರ್ (ಕ್ವಿಕ್ ರೆಸ್ಪಾನ್ಸ್) ಕೋಡ್‌ನಂತಹ ತಂತ್ರಜ್ಞಾನ ವ್ಯವಸ್ಥೆಯನ್ನು ಜಾರಿಗೆ ತನ್ನಿ' ಎಂದು ಪಾಲಿಕೆ ಆಯುಕ್ತರಿಗೆ ನಿರ್ದೇಶಿಸಿದೆ.

ಈ ಕುರಿತಂತೆ ಬನಶಂಕರಿ ನಿವಾಸಿ ಬಿ.ಕೆ.ಶರ್ಮದಾ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯ ಮೂರ್ತಿ ಸೂರಜ್ ಗೋವಿಂದ ರಾಜು ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಖಾತೆ ಬದಲಾವಣೆ ಕೋರಿ ಅರ್ಜಿದಾರರು ಸಲ್ಲಿಸಿರುವ ಮನವಿಯನ್ನು 30 ದಿನಗಳ ಒಳಗಾಗಿ ಪರಿಗಣಿಸಬೇಕು' ಎಂದು ಆದೇಶಿಸಿದೆ.

'ಅರ್ಜಿದಾರರು ಸಲ್ಲಿಸಿರುವ ದಾಖಲೆಗಳು ನಕಲಿ ಮತ್ತು ಸುಳ್ಳು ಎಂದು ಸಹಾಯಕ ಕಂದಾಯ ಅಧಿಕಾರಿ (ಎಆರ್‌ಒ) ತಮ್ಮ ವಕೀಲರ ಮೂಲಕ ಹೈಕೋರ್ಟ್‌ಗೆ ತಿಳಿಸಿದ್ದಾರೆ. ಇದೊಂದು ಗಂಭೀರ ಆರೋಪ. ಹಾಗಾಗಿ, ಬಿಬಿಎಂಪಿ ಮುಖ್ಯ ಆಯುಕ್ತರು ಪ್ರಕರಣವನ್ನು ಪರಿಶೀಲಿಸಿ ಪಾಲಿಕೆ ಪರ ವಕೀಲರಿಗೆ ಸುಳ್ಳು ಮಾಹಿತಿ ನೀಡುವ ಮೂಲಕ ನ್ಯಾಯಾಲಯವನ್ನು ತಪ್ಪು ದಾರಿಗೆ ಎಳೆದ ಸಹಾಯಕ ಕಂದಾಯ ಅಧಿಕಾರಿ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದು ನ್ಯಾಯಪೀಠ ಆದೇಶಿಸಿದೆ.

'ಬಿಬಿಎಂಪಿಯ ಎಲ್ಲ ದಾಖಲೆಗಳನ್ನು ಡಿಜಿಟಲ್ ಲಾಕರ್ ಯಾಂತ್ರೀಕೃತ ವಿಧಾನದ ಮೂಲಕ ದಾಖಲು ಮಾಡುವಂತೆ ಬಿಬಿಎಂಪಿ ಮುಖ್ಯ ಆಯುಕ್ತರು, ಇ-ಆಡಳಿತ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ನಿರ್ದೇಶಿಸಿರುವ ನ್ಯಾಯಪೀಠ, ಈ ಸಂಬಂಧದ ಅನುಪಾಲನಾ ವರದಿಯನ್ನು 2024ರ ಜನವರಿ 4ರಂದು ಕೋರ್ಟ್‌ಗೆ ಸಲ್ಲಿಸಬೇಕು' ಎಂದು ತಾಕೀತು ಮಾಡಿದೆ.

'ತೆರಿಗೆ ಪಾವತಿಗೂ ಕ್ಯೂ ಆರ್ ಕೋಡ್ ಬಳಕೆ ಮಾಡಲಾಗುತ್ತಿರುವ ಇಂದಿನ ದಿನಗಳಲ್ಲಿ ಬಿಬಿಎಂಪಿ ಕೂಡಾ ತನ್ನ ವ್ಯಾಪ್ತಿಯಲ್ಲಿರುವ ಜಮೀನಿನ ಖಾತೆಗಳು, ಯೋಜನೆಯ ಮಂಜೂರಾತಿಗಳು, ತೆರಿಗೆ ಪಾವತಿ ಸೇರಿದಂತೆ ಎಲ್ಲಾ ನಮೂನೆಯ ದಸ್ತಾವೇಜು ಪ್ರಕ್ರಿಯೆಗಳನ್ನು ಡಿಜಿಟಲೀಕರಣ ವ್ಯವಸ್ಥೆಯ ಅಡಿಗೆ ತರಬೇಕು' ಎಂದು ತಿಳಿಸಿದೆ.

ಪ್ರಕರಣವೇನು?: ತಮ್ಮ ಹೆಸರಿಗೆ ಖಾತೆ ವರ್ಗಾವಣೆ ಮಾಡಿಕೊಡುವಂತೆ ಬಿ.ಕೆ.ಶರ್ಮದಾ ಬಿಬಿಎಂಪಿಗೆ ಮನವಿ ಸಲ್ಲಿಸಿದ್ದರು. ಆದರೆ ಪದ್ಮನಾಭ ನಗರದ ಸಹಾಯಕ ಕಂದಾಯ ಅಧಿಕಾರಿ ತಿರಸ್ಕರಿಸಿದ್ದರು. ಇದನ್ನು ಪ್ರಶ್ನಿಸಿ ಶರ್ಮದಾ ಹೈಕೋರ್ಟ್ ಮೆಟ್ಟಿಲೇರಿದ್ದರು.

ಜ.12,13ಕ್ಕೆ ಸಾವಯವ ಕೃಷಿ ಸಮಾವೇಶ

ಬೆಂಗಳೂರು: ಸಾವಯವ ಕೃಷಿ ಪರಿವಾರ ಮತ್ತು ಸುಭಿಕ್ಷಾ ಆರ್ಗ್ಯಾನಿಕ್ ಫಾರ್ಮರ್ಸ್ ಮಲ್ಟಿಸ್ಟೇಟ್ ಕೋ ಆಪರೇಟಿವ್ ಸೊಸೈಟಿ ಜಂಟಿಯಾಗಿ 2024ರ ಜ.12, 13ರಂದು 'ಭೂತಾಯ ಕಾಯಕಕ್ಕೆ ಧರ್ಮ ಕಾಯ್ವರ ಹೆಗಲು' ಎಂಬ ಶೀರ್ಷಿಕೆಯಡಿ ಕೊಲ್ಲಾಪುರ ಸಮೀಪದ ಕನ್ನೇರಿಯ ಸಿದ್ಧಗಿರಿ ಸಂಸ್ಥಾನದಲ್ಲಿ ಸಮಾವೇಶ ಹಮ್ಮಿಕೊಂಡಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕನ್ನೇರಿಯ ಸಿದ್ಧಗಿರಿ ಸಂಸ್ಥಾನ ಮಠದ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ, 'ಸಮಾವೇಶದಲ್ಲಿ ಸಾವಯವ ಕೃಷಿ, ಜೀವ ವೈವಿಧ್ಯ, ಗ್ರಾಮ ಜೀವನ ಸುಧಾರಣೆ, ಗೋ ಸಂರಕ್ಷಣೆ, ಪರಿಸರ ಸಂರಕ್ಷಣೆ, ಸಾವಯವ ಮಾರುಕಟ್ಟೆ, ಗ್ರಾಮೀಣ ಯುವಜನರಲ್ಲಿ ಕೃಷಿ ಮಹತ್ವದ ಅರಿವು, ಕೃಷಿಕರಿಗೆ ಕಂಕಣ ಭಾಗ್ಯ ಸೇರಿ ವಿವಿಧ ವಿಷಯಗಳ ಬಗ್ಗೆ ಚರ್ಚಿಸಲಾಗುತ್ತದೆ' ಎಂದು ಹೇಳಿದರು.

'ಒಂದೂವರೆ ಎಕರೆಯಲ್ಲಿ 180 ಬೆಳೆಗಳ ಸಂಯೋಜನೆ ಸಮಾವೇಶದ ಆಕರ್ಷಣೆಯಾಗಿದೆ. ಸಾವಯವ ಉತ್ಪನ್ನ, ವೈವಿಧ್ಯಮಯ ಮೇವಿನ ತಾಕು, ಗೋ ಶಾಲೆ, ದೇಸಿ ಬೀಜ ವೈವಿಧ್ಯ ಸೇರಿ ಹಲವು ವಿಶೇಷತೆಯನ್ನು ಸಮಾವೇಶ ಹೊಂದಿರಲಿದೆ' ಎಂದರು.

ಶಾಸಕ ಮಂಜುನಾಥ್ ಅರ್ಜಿ ತಿರಸ್ಕೃತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾತಿ ಪ್ರಮಾಣ ಪತ್ರ ಸಿಂಧುತ್ವಕ್ಕೆ ಸಂಬಂಧಿಸಿದಂತೆ ಕೋಲಾರ ಜಿಲ್ಲಾಧಿಕಾರಿ ನೇತೃತ್ವದ ಜಾತಿ ಪರಿಶೀಲನಾ ಸಮಿತಿ ಕೈಗೊಂಡಿದ್ದ ನಿರ್ಣಯವನ್ನು ಪ್ರಶ್ನಿಸಿ ಕೋಲಾರ ವಿಧಾನ ಸಭಾ ಕ್ಷೇತ್ರದ ಶಾಸಕ ಕಾಂಗ್ರೆಸ್ ಪಕ್ಷದ ಜಿ.ಮಂಜುನಾಥ್ (ಕೊತ್ತೂರು ಮಂಜುನಾಥ್) ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಹೈಕೋರ್ಟ್ ತಿರಸ್ಕರಿಸಿದೆ.

ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ಬುಧವಾರ ಪ್ರಕಟಿಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಈ ಆದೇಶದಿಂದ ಮಂಜುನಾಥ್ ಅವರ ಹಾಲಿ ಶಾಸಕ ಸ್ಥಾನಕ್ಕೆ ಯಾವುದೇ ಬಾಧೆ ಆಗುವುದಿಲ್ಲ. ಆದರೆ, 2013ರಲ್ಲಿ ಮುಳಬಾಗಿಲು ಮೀಸಲು ಕ್ಷೇತ್ರದಿಂದ ಗೆದ್ದಾಗ ಪಡೆದುಕೊಂಡಿದ್ದ ಸೌಲಭ್ಯಗಳನ್ನು ಪೂರ್ವಾನ್ವಯವಾಗುವಂತೆ ಅವರಿಂದ ವಾಪಸು ಪಡೆದುಕೊಳ್ಳಬಹುದು' ಎಂದು ಸ್ಪಷ್ಟಪಡಿಸಿದೆ. ಸರ್ಕಾರದ ಪರ ವಕೀಲ ಸಿ.ಜಗದೀಶ್ ವಾದ ಮಂಡಿಸಿದ್ದರು.

ಜಾತಿ ಪ್ರಮಾಣ ಪತ್ರ ಸಿಂಧುತ್ವ

'ಜಿ.ಮಂಜುನಾಥ್ ಬುಡಗ ಜಂಗಮ ಜಾತಿಗೆ ಸೇರಿಲ್ಲ. ಅವರು ಬೈರಾಗಿ ಜಾತಿಗೆ ಸೇರಿದವರು' ಎಂದು ಜಿಲ್ಲಾಧಿಕಾರಿ ನೇತೃತ್ವದ ಜಾತಿ ಪರಿಶೀಲನಾ ಸಮಿತಿ ನಿರ್ಣಯ ಕೈಗೊಂಡಿತ್ತು. ಬುಡಗ ಜಂಗಮ ಪರಿಶಿಷ್ಟ ಜಾತಿಗೆ ಸೇರಿದರೆ, ಬೈರಾಗಿ ಒಬಿಸಿ ಪ್ರವರ್ಗ-1ಕ್ಕೆ ಸೇರುತ್ತದೆ.

ಪ್ರಕರಣವೇನು?: ಜಿ.ಮಂಜುನಾಥ್ 2013ರಲ್ಲಿ ಮುಳಬಾಗಿಲು ಮೀಸಲು ಕ್ಷೇತ್ರದಿಂದ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆದ್ದಿದ್ದರು. ಜೆಡಿಎಸ್‌ನ ಪರಾಜಿತ ಅಭ್ಯರ್ಥಿ ಮುನಿನಂಜಪ್ಪ ಇವರ ಜಾತಿ ಪ್ರಮಾಣದ ಸಿಂಧುತ್ವ ಪ್ರಶ್ನಿಸಿದ್ದರು. ಈ ಪ್ರಕರಣ ತಹಶೀಲ್ದಾರ್, ಜಿಲ್ಲಾಧಿಕಾರಿ, ಸಿವಿಲ್ ನ್ಯಾಯಾಲಯ ಮತ್ತು ಹೈಕೋರ್ಟ್‌ನಲ್ಲಿ ವಿಚಾರಣೆಗೆ ಒಳಪಟ್ಟಿತ್ತು. ಅಂತಿಮವಾಗಿ ಹೈಕೋರ್ಟ್ ಮಂಜುನಾಥ್ ಅರ್ಜಿಯನ್ನು ವಜಾಗೊಳಿಸಿತ್ತು.

ಇದರ ವಿರುದ್ಧ ಮಂಜುನಾಥ್ ಸುಪ್ರೀಂ ಕೋರ್ಟ್‌ಗೆ ವಿಶೇಷ ಮೇಲ್ಮನವಿ ಸಲ್ಲಿಸಿದ್ದರು. ಈ ಮೇಲ್ಮನವಿಯನ್ನು ವಜಾಗೊಳಿಸಿದ್ದ ಸುಪ್ರೀಂ ಕೋರ್ಟ್, ಜಾತಿ ಪರಿಶೀಲನೆ ನಡೆಸುವಂತೆ ಜಿಲ್ಲಾಧಿಕಾರಿಗೆ ನಿರ್ದೇಶಿಸಿತ್ತು. ಒಂದು ವೇಳೆ ಜಾತಿ ಪರಿಶೀಲನಾ ಸಮಿತಿಯ ನಿರ್ಣಯದ ಬಗ್ಗೆ ಆಕ್ಷೇಪವಿದ್ದರೆ ಪುನಃ ಅದನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಬಹುದು ಎಂದು ಹೇಳಿತ್ತು. ಈ ನಿರ್ದೇಶನದ ಅನುಸಾರ ಮಂಜುನಾಥ್ ಜಾತಿ ಪರಿಶೀಲನಾ ಸಮಿತಿಯ ನಿರ್ಣಯವನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು.

'ಸಾರಿಗೆ ಸಂಸ್ಥೆಯ ಬಸ್ ಸಂಖ್ಯೆ ಹೆಚ್ಚಿಸಿ'

ಸ್ವಾತಂತ್ರ್ಯ ಉದ್ಯಾನದಲ್ಲಿ ಭಾರತೀಯ ಮಹಿಳಾ ಒಕ್ಕೂಟದಿಂದ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಿಗೆ ಸಂಸ್ಥೆಯಲ್ಲಿ ಬಸ್‌ಗಳ ಕೊರತೆ ಇದ್ದು, ತಕ್ಷಣವೇ ಬಸ್‌ಗಳ ಸಂಖ್ಯೆಯನ್ನು ಹೆಚ್ಚಿಸಬೇಕು ಎಂದು ಆಗ್ರಹಿಸಿ ಭಾರತೀಯ ಮಹಿಳಾ ಒಕ್ಕೂಟದ (ಎನ್‌ಎಫ್‌ಐಡಬ್ಲ್ಯು) ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

'ಶಕ್ತಿ' ಯೋಜನೆ ಪ್ರಯಾಣಿಕರಿಗೆ ತುಂಬ ಉಪಯುಕ್ತವಾಗಿದೆ. ಆದರೆ, ನಾಲ್ಕು ನಿಗಮಗಳ ಬಸ್‌ಗಳಲ್ಲಿ ಪ್ರಯಾಣಿಕರ ದಟ್ಟಣೆ ಹೆಚ್ಚಾಗಿದ್ದು ಹೆಜ್ಜೆಯಿಡಲು ಸಾಧ್ಯವಾಗುತ್ತಿಲ್ಲ. ಈಗಿರುವ ಬಸ್‌ಗಳ ಸಂಖ್ಯೆ ಸಾಲುತ್ತಿಲ್ಲ' ಎಂದು ಪ್ರತಿಭಟನಕಾರರು ಹೇಳಿದರು.

'ಬಸ್‌ಗಳ ಕೊರತೆಯಿಂದಾಗಿ ವಿದ್ಯಾರ್ಥಿಗಳು ಸಮಯಕ್ಕೆ ಸರಿಯಾಗಿ ಶಾಲಾ-ಕಾಲೇಜು ತಲುಪಲಾಗುತ್ತಿಲ್ಲ. ದಟ್ಟಣೆ ಅವಧಿಯಲ್ಲಿ ಬಸ್‌ಗಳು ಜನರಿಂದ ತುಂಬಿರುತ್ತವೆ. ಎಷ್ಟೋ ವಿದ್ಯಾರ್ಥಿಗಳಿಗೆ ಬಸ್ ಹತ್ತಲೂ ಆಗದೇ ತರಗತಿಗಳು ತಪ್ಪಿ ಹೋಗುತ್ತಿವೆ. ವೃದ್ಧರು, ಮಹಿಳೆಯರು ಮತ್ತು ಮಕ್ಕಳಿಗೆ ಬಹಳ ಅನನುಕೂಲವಾಗಿದೆ. ದೂರದ ಪ್ರಯಾಣವಂತೂ ಬಲು ದುಸ್ತರವಾಗಿದೆ. ಶಕ್ತಿ ಯೋಜನೆಯು ಪ್ರಯೋಜನವನ್ನು ಪಡೆಯಲು ಮಹಿಳೆಯರಿಗೆ ಕಷ್ಟವಾಗುತ್ತಿದೆ' ಎಂದು ಅಳಲು ತೋಡಿಕೊಂಡರು.

ಈ ಕೂಡಲೇ ಸಾರಿಗೆ ನಿಗಮಗಳು ಪ್ರಯಾಣಿಕರಿಗೆ ಹೆಚ್ಚಿನ ಬಸ್‌ಗಳನ್ನು ಒದಗಿಸಬೇಕು. ಬಸ್‌ಗಳ ಸಂಖ್ಯೆಗೆ ತಕ್ಕಂತೆ ಸಿಬ್ಬಂದಿ ನೇಮಕ ಮಾಡಿಕೊಳ್ಳಬೇಕು. ಆಗ ಮಾತ್ರ ಶಕ್ತಿ ಯೋಜನೆ ಸದುಪಯೋಗವಾಗಲು ಸಾಧ್ಯವಾಗಲಿದೆ ಎಂದು ಹೇಳಿದರು.

ಭಾರತೀಯ ಮಹಿಳಾ ಒಕ್ಕೂಟದ ರಾಜ್ಯ ಅಧ್ಯಕ್ಷೆ ಜ್ಯೋತಿ ಎ.,ಬೆಂಗಳೂರು ಜಿಲ್ಲಾ ಅಧ್ಯಕ್ಷೆ ದಿವ್ಯಾ ಎಸ್. ಬಿರಾದಾರ, ಕಾರ್ಯದರ್ಶಿ ಮಾಲಾ, ಜಿಲ್ಲಾ ಉಪಾಧ್ಯಕ್ಷೆ ಉಮಾ, ಖಜಾಂಚಿ ರಾಧಾ, ಗುಣಾ ಮೊದಲಾದವರು ಪಾಲ್ಗೊಂಡಿದ್ದರು.

ಪ್ರತಿಭಟನೆಯ ನಂತರ ಬೆಂಗಳೂರು ನಗರ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಯಿತು.

ಸಾರಿಗೆ ಸಂಸ್ಥೆಯಲ್ಲಿ ಬಸ್‌ಗಳ ಸಂಖ್ಯೆ ಹೆಚ್ಚಿಸುವಂತೆ ಆಗ್ರಹಿಸಿ ಭಾರತೀಯ ಮಹಿಳಾ ಒಕ್ಕೂಟದ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಧರಣಿ ನಡೆಸಿದರು. –ಪ್ರಜಾವಾಣಿ ಚಿತ್ರ

ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ

Azadi Ka Amrit Mahotsav | G20

ಚಂದ್ರಮುಖಿ ನಿರ್ಮಾಣ ಪಾಯಿಂಟ್ ಮುಂಬೈ–400 021

ಫೋನ್:022-66387680 ಫ್ಯಾಕ್ಸ್: 022-22044336 ವೆಬ್‌ಸೈಟ್: centralbankofindia.co.in

ಸಫಾಯಿ ಕರ್ಮಚಾರಿ ಕಂ ಸಬ್–ಸ್ಟಾಫ್ ಮತ್ತು/ಅಥವಾ ಸಬ್–ಸ್ಟಾಫ್ 2024–25 ನೇಮಕಾತಿ

ಪ್ರಮುಖ ಸಾರ್ವಜನಿಕ ಕ್ಷೇತ್ರಗಳಲ್ಲಿ ಒಂದಾಗಿರುವ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ, ಭಾರತದಾದ್ಯಂತ ತನ್ನ ಶಾಖಾ ಜಾಲ ಹೊಂದಿದ್ದು, ಸುಮಾರು 4500ಕ್ಕೂ ಹೆಚ್ಚು ಶಾಖೆಗಳ ಮೂಲಕ ಒಟ್ಟಾರೆ ರೂ. 6,00,000 ಕೋಟಿಗೂ ಅಧಿಕ ವ್ಯವಹಾರ ನಡೆಸುತ್ತಿದೆ ಮತ್ತು 32000ಕ್ಕೂ ಅಧಿಕ ಉದ್ಯೋಗಿಗಳು ಇಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇದೀಗ ಈ ಬ್ಯಾಂಕ್‌ನಲ್ಲಿ ಸಫಾಯಿ ಕರ್ಮಚಾರಿ ಕಂ ಸಬ್–ಸ್ಟಾಫ್ ಮತ್ತು / ಅಥವಾ ಸಬ್–ಸ್ಟಾಫ್ ನೇಮಕಾತಿ ಮಾಡಿಕೊಳ್ಳಲು ಉದ್ದೇಶಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಅಭ್ಯರ್ಥಿಗಳು ಬ್ಯಾಂಕ್‌ನ https://www.centralbankofindia.co.in ವೆಬ್‌ಸೈಟ್ ಪರಿಶೀಲಿಸಬೇಕೆಂದು ಕೋರಲಾಗಿದೆ.

ಮುಂಬೈ
ದಿನಾಂಕ: 19.12.2023

ಮಹಾ ಪ್ರಬಂಧಕರು (ಎಚ್‌ಸಿಎಂ)

ಜನವರಿ 5ರಿಂದ ಕಸಾಪ ಪರೀಕ್ಷೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು 2023–24ನೇ ಸಾಲಿನ ಕನ್ನಡ ಪ್ರವೇಶ, ಕಾವ, ಜಾಣ, ರತ್ನ ಪರೀಕ್ಷೆಗಳನ್ನು 2024ರ ಜ.5ರಿಂದ ಜ7ರವರೆಗೆ ಹಮ್ಮಿಕೊಂಡಿದೆ.

ಪರೀಕ್ಷೆಗಳು ರಾಜ್ಯದ 20 ಕೇಂದ್ರಗಳಲ್ಲಿ ನಡೆಯಲಿವೆ. ಪರೀಕ್ಷಾ ಪ್ರವೇಶ ಪತ್ರಗಳನ್ನು ವಿದ್ಯಾರ್ಥಿಗಳಿಗೆ ಅಂಚೆ ಮೂಲಕ ಕಳುಹಿಸಲಾಗಿದೆ. 2023ರ ಡಿ.22ರ ಒಳಗೆ ಪ್ರವೇಶ ಪತ್ರ ತಲುಪದಿದ್ದಲ್ಲಿ ಪರಿಷತ್ತಿನ ಕೇಂದ್ರ ಕಚೇರಿಯಲ್ಲಿ ವಿಚಾರಿಸಬಹುದು. ಇಲ್ಲವಾದಲ್ಲಿ, ದೂರವಾಣಿ ಸಂಖ್ಯೆ 080 26612991 ಅಥವಾ 86182 96186ಕ್ಕೆ ಸಂಪರ್ಕಿಸಬಹುದು.

ಪರಿಷತ್ತಿನ ಅಂತರ್ಜಾಲ ತಾಣ www.kasapa.inನಲ್ಲಿ ಕೂಡ ಪರೀಕ್ಷಾ ಕೇಂದ್ರಗಳು ಸೇರಿದಂತೆ ವಿವಿಧ ಮಾಹಿತಿಗಳು ಲಭ್ಯವಿರಲಿವೆ ಎಂದು ಪರಿಷತ್ತಿನ ಪ್ರಕಟಣಾ ವಿಭಾಗದ ಸಂಚಾಲಕ ಎನ್.ಎಸ್.ಶ್ರೀಧರ ಮೂರ್ತಿ ತಿಳಿಸಿದ್ದಾರೆ.

ನಿಧನ ವಾರ್ತೆ

ಸವಿತಾ ಪ್ರಸಾದ್

ಬೆಂಗಳೂರು: ಕನ್ನಡ ಗೀತರಚನೆಕಾರ ವಿಜಯನಾರಸಿಂಹ ಅವರ ಪುತ್ರಿ, ಅನುವಾದಕ ಶಾರದಾ ಪ್ರಸಾದ್ ಅವರ ಪತ್ನಿ ಸವಿತಾ ಪ್ರಸಾದ್ (72) ಅನಾರೋಗ್ಯದಿಂದ ಬುಧವಾರ ಗಿರಿನಗರದ ಸ್ವಗೃಹದಲ್ಲಿ ನಿಧನರಾದರು.

ಸವಿತಾ ಪ್ರಸಾದ್

ಮದ್ರಾಸ್‌ನಲ್ಲಿ ವಿದ್ಯಾಭ್ಯಾಸ ನಡೆಸಿದ್ದರೂ ಮಕ್ಕಳಲ್ಲಿ ಕನ್ನಡ ಪ್ರೇಮ ಬೆಳೆಸಿದ್ದರು. ಅವರಿಗೆ ಪುತ್ರ, ಪುತ್ರಿ ಇದ್ದಾರೆ. ಮೃತರ ಅಂತ್ಯಕ್ರಿಯೆ ಗುರುವಾರ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಮೆ. ಸೆರೆಂಟಿಕಾ ರಿನ್ಯೂವೇಬಲ್ಸ್ ಇಂಡಿಯಾ 1 ಪ್ರೈವೇಟ್ ಲಿಮಿಟೆಡ್ (SRIPL-1)

ಕಾರ್ಪೊ. ಆಫೀಸು : ಡಿಎಲ್‌ಎಫ್ ಸೈಬರ್ ಪಾರ್ಕ್ ಟವರ್ ಬಿ, 9ನೇ ಮಹಡಿ, ಸೆಕ್ಟರ್ 20, ಉದ್ಯೋಗ ವಿಹಾರ ಫೇಸ್–III, ಗುರುಗ್ರಾಮ–122008, ಹರಿಯಾಣಾ, ಭಾರತ. | **CIN :** U40106HR2022PTC101427 | **ಫೋನ್ ನಂ.:** 0124-4562000.

ಸಾರ್ವಜನಿಕ ನೋಟೀಸು

ಮೆ. ಸೆರೆಂಟಿಕಾ ರಿನ್ಯೂವೇಬಲ್ಸ್ ಇಂಡಿಯಾ 1 ಪ್ರೈವೇಟ್ ಲಿಮಿಟೆಡ್ (SRIPL-1), ತಮ್ಮ ಕಾರ್ಪೊರೇಟ್ ಆಫೀಸನ್ನು ಡಿಎಲ್‌ಎಫ್ ಸೈಬರ್ ಪಾರ್ಕ್ ಟವರ್ ಬಿ, 9ನೇ ಮಹಡಿ, ಸೆಕ್ಟರ್ 20, ಉದ್ಯೋಗ ವಿಹಾರ ಫೇಸ್-III, ಗುಡಗಾಂವ್–122008, ಹರಿಯಾಣಾ, ಭಾರತ, ಇಲ್ಲಿ ಹೊಂದಿದ್ದು, ವಿದ್ಯುತ್ತಿನ ಪರಿವಹನೆಗಾಗಿ ಇಲೆಕ್ಟ್ರಿಕಲ್ ಲೈನ್ಸ್ ಅಥವಾ ಇಲೆಕ್ಟ್ರಿಕಲ್ ಪ್ಲಾಂಟ್‌ನ್ನು ಸ್ಥಾಪಿಸಲಿಕ್ಕಾಗಿ/ಅಳವಡಿಸಲಿಕ್ಕಾಗಿ, ಅಥವಾ ಟೆಲಿಫೋನ್ ಅಥವಾ ಟೆಲಿಗ್ರಾಫ್ ಮೂಲಕ ಸಂಪರ್ಕಕ್ಕಾಗಿ ಕೆಲಸದ ಸರಿಯಾದ ಸಮನ್ವಯಕ್ಕಾಗಿ, ಇಂಡಿಯನ್ ಟೆಲಿಗ್ರಾಫ್ ಆ್ಯಕ್ಟ್, 1885 ಅಂತರ್ಗತ ಟೆಲಿಗ್ರಾಫ್ ಪ್ರಾಧಿಕಾರದ ಅಧಿಕಾರದ ಅನುಸಾರ ಟೆಲಿಗ್ರಾಫ್ ಲೈನ್‌ಗಳು ಮತ್ತು ಪೋಸ್ಟ್‌ಗಳನ್ನು ಅಳವಡಿಸುವುದಕ್ಕೆ ಸಂಬಂಧಪಟ್ಟಂತೆ ಮತ್ತು ನಿರ್ಮಾಣಕ್ಕಾಗಿ ಸರ್ವೇಕ್ಷಣೆ, ಸ್ಥಾಪನೆ, ಪರಿವೀಕ್ಷಣೆ, ನಿರ್ಮಾಣ ಮತ್ತು ಇತರ ಕೆಲಸಗಳ ಹಿಂದೆಯೇ ವ್ಯವಸ್ಥಾಪನೆ, ಕಾರ್ಯ ನಿರ್ವಹಣೆ, ಉಸ್ತುವಾರಿ ಮತ್ತು ಇತರ ಕೆಲಸಗಳಿಗಾಗಿ ಇಲೆಕ್ಟ್ರಿಸಿಟಿ ಆ್ಯಕ್ಟ್, 2003ರ ಸೆಕ್ಷನ್–164 ಅಂತರ್ಗತ ಎಲ್ಲಾ ಅಧಿಕಾರಗಳನ್ನು SRIPL-1ಗೆ ದಯಪಾಲಿಸಬೇಕು ಎಂದು ಕೋರಿಕೊಳ್ಳಲು ಬಯಸಿದೆ.

ಟ್ರಾನ್ಸ್‌ಮಿಶನ್ ಕಂಪೆನಿಯ ಹೆಸರು– ಸೆರೆಂಟಿಕಾ ರಿನ್ಯೂವೇಬಲ್ಸ್ ಇಂಡಿಯಾ 1 ಪ್ರೈವೇಟ್ ಲಿಮಿಟೆಡ್ (SRIPL-1)

ಸ್ಕೀಮ್‌ನ ಹೆಸರು– ''ಕೊಪ್ಪಲ, ಕರ್ನಾಟಕದಲ್ಲಿ ತಮ್ಮ 399.8MW ಹೈಬ್ರಿಡ್ (ಸೋಲಾರ್:– 195MW ಮತ್ತು ವಿಂಡ್:– 204 MW) ಪವರ್ ಪ್ರಾಜೆಕ್ಟ್‌ಗಾಗಿ ಮೆ. ಸೆರೆಂಟಿಕಾ ರಿನ್ಯೂವೇಬಲ್ಸ್ ಇಂಡಿಯಾ 1 ಪ್ರೈವೇಟ್ ಲಿಮಿಟೆಡ್‌ಗೆ ಕನೆಕ್ಟಿವಿಟಿಯನ್ನು ಒದಗಿಸಲಿಕ್ಕಾಗಿ ಟ್ರಾನ್ಸ್‌ಮಿಶನ್ ಸಿಸ್ಟಮ್‌ನಲ್ಲಿ ಸೇರಿಸಿದ ಡೆಡಿಕೇಟೆಡ್ ಓವರ್‌ಹೆಡ್ ಟ್ರಾನ್ಸ್‌ಮಿಶನ್ ಲೈನ್‌ನ ಅಳವಡಿಸುವಿಕೆ.''

ಕಂಪೆನಿಯ ಅಂತರ್ಗತ ಆವರಿಸಿರುವ ಕೆಲಸಗಳು–

a) ಕೊಪ್ಪಳದಲ್ಲಿ ಸೆರೆಂಟಿಕಾ ರಿನ್ಯೂವೇಬಲ್ಸ್ ಇಂಡಿಯಾ 1 ಪ್ರೈವೇಟ್ ಲಿಮಿಟೆಡ್‌ನ ಸ್ವಿಚ್ ಯಾರ್ಡ್ ಪೂಲಿಂಗ್ ಸ್ಟೇಷನ್ ನಿಂದ ಕೊಪ್ಪಳ PS (ISTS ಸಬ್ ಸ್ಟೇಷನ್) ವರೆಗೆ D/c ಟವರಗಳಲ್ಲಿ (ರೂಟ್‌ನ ಉದ್ದ 5km ಸುಮಾರು 220KC s/c ಲೈನ್ ಕೊಪ್ಪಳದ ಕವಲೂರ ಗ್ರಾಮ ಅಳವಂಡಿ ಹೋಬಳಿ ಕೊಪ್ಪಳ ಕರ್ನಾಟಕ)

(ಟಿಪ್ಪಣಿ – ISTS ಸಬ್‌ಸ್ಟೇಶನ್ ಎಂಟ್ರಿಯ ಬಳಿ M/C ಟವರ್‌ಗಳ ಮೂಲಕ ಕಾರ್ಯರತಗೊಳಿಸಬೇಕಾದ ಕನೆಕ್ಟಿವಿಟಿ ಮಂಜೂರಾದ 400/220 kV ಲುನ್‌ಗಳ ಅನುಸಾರ)*

b) ಮೆ. ಸೆರೆಂಟಿಕಾ ರಿನ್ಯೂವೇಬಲ್ಸ್ ಇಂಡಿಯಾ 1 ಪ್ರೈ. ಲಿ.ನ ವಿಂಡ್ ಪ್ರಾಜೆಕ್ಟ್‌ನಿಂದ (ತಿಪ್ಪನಾಲಾ ಗ್ರಾಮ, ಸಿರೇವಂಕಲ್‌ಕುಂಟ ಹೋಬ್ಳಿ, ಎಲಬುರ್ಗ ತಾಲೂಕು, ಕೊಪ್ಪಲ, ಕರ್ನಾಟಕ) ಕೊಪ್ಪಲದಲ್ಲಿ ಮೆ. ಸೆರೆಂಟಿಕಾ ರಿನ್ಯೂವೇಬಲ್ಸ್ ಇಂಡಿಯಾ 1 ಪ್ರೈ. ಲಿ.ನ ಪೂಲಿಂಗ್ ಸ್ಟೇಶನ್ (ಕವಲೂರ ಗ್ರಾಮ, ಅಲವಂಡಿ ಹೋಬ್ಳಿ, ಕೊಪ್ಪಲ, ಕರ್ನಾಟಕದಲ್ಲಿ ಸೋಲಾರ್ ಜನರೇಶನ್ ಸ್ವಿಚ್‌ಯಾರ್ಡ್) ವರೆಗೆ Dic ಟವರ್‌ಗಳಲ್ಲಿ [ರೂಟ್‌ನ ಉದ್ದ 55 ಕಿಮೀ (ಸುಮಾರು)] 220 kV S/c ಲೈನ್.

ಮೇಲ್ಕಾಣಿಸಿದ ಟ್ರಾನ್ಸ್‌ಮಿಶನ್ ಪ್ರಾಜೆಕ್ಟ್‌ಗೆ ಮಿನಿಸ್ಟ್ರಿ ಆಫ್ ಪವರ್, ಭಾರತ ಸರಕಾರವು ಇಲೆಕ್ಟ್ರಿಸಿಟಿ ಆ್ಯಕ್ಟ್, 2003ಯ ಸೆಕ್ಷನ್ 68(1) ಅಂತರ್ಗತ 17.11.2023ರ ತಮ್ಮ ಪತ್ರ ಮುಖೇನ ಅನುಮೋದನೆಯನ್ನು ದಯಪಾಲಿಸಿದೆ.

ಈ ಸ್ಕೀಮ್‌ನ ಅಂತರ್ಗತ ಆವರಿಸಲ್ಪಟ್ಟಿರುವ ಟ್ರಾನ್ಸ್‌ಮಿಶನ್ ಲೈನ್ ಈ ಕೆಳಗಿನ ತಹಶೀಲ್ದಾರ, ತಾಲೂಕು, ಮಂಡಲಗಳು, ಬ್ಲಾಕ್, ಗ್ರಾಮ, ಊರು ಮತ್ತು ನಗರಗಳ ಮೂಲಕ, ಮೇಲಿಂದ, ಸುತ್ತ ಮತ್ತು ನಡುವಿನಿಂದ ಸಾಗಲಿವೆ.

1. ಸೆರೆಂಟಿಕಾ ರಿನ್ಯೂವೇಬಲ್ಸ್ ಇಂಡಿಯಾ 1 ಪ್ರೈ. ಲಿ., ಕೊಪ್ಪಲದ ಪೂಲಿಂಗ್ ಸ್ಟೇಶನ್ ಸ್ವಿಚ್‌ಯಾರ್ಡ್ - ಕೊಪ್ಪಲ ಪಿಎಸ್ (ISTS ಸಬ್‌ಸ್ಟೇಶನ್) D/C ಮತ್ತು M/C ಟವರ್‌ಗಳಲ್ಲಿ 220 kV S/C ಲೈನ್.

ಕ್ರಮ. ಸಂ.	ಗ್ರಾಮದ ಹೆಸರು	ತಹಶೀಲ್ದಾರ	ಜಿಲ್ಲೆ	ರಾಜ್ಯ/ಕೇ.ಶಾ.ಪ್ರ
1	ಕವಲೂರ	ಕೊಪ್ಪಳ	ಕೊಪ್ಪಳ	ಕರ್ನಾಟಕ
2	ಅಡವಿಹಳ್ಳಿ, ತಲಕಲ	ಕುಕನೂರ	ಕೊಪ್ಪಳ	ಕರ್ನಾಟಕ

2. ಕೊಪ್ಪಲದಲ್ಲಿ 204 MW ವಿಂಡ್ ಪ್ರಾಜೆಕ್ಟ್ ಸ್ವಿಚ್‌ಯಾರ್ಡ್‌ನಿಂದ ಮೆ. ಸೆರೆಂಟಿಕಾ ರಿನ್ಯೂವೇಬಲ್ಸ್ ಇಂಡಿಯಾ 1 ಪ್ರೈ. ಲಿ.ನ ಪೂಲಿಂಗ್ ಸ್ಟೇಶನ್ ವರೆಗೆ D/C ಟವರ್‌ಗಳಲ್ಲಿ 220 kV S/C ಲೈನ್.

ಕ್ರಮ. ಸಂ.	ಗ್ರಾಮದ ಹೆಸರು	ತಹಶೀಲ್ದಾರ	ಜಿಲ್ಲೆ	ರಾಜ್ಯ/ಕೇ.ಶಾ.ಪ್ರ
1	ಕವಲೂರ, ಹಲಿಗೇರಿ, ಮುದ್ದಾಪುರ, ಕಿನ್ನಲ (ಕಿನ್ನಾಲು), ಮದನೂರು (ಮಧಿನೂರ), ಸಿದ್ದನಹಳ್ಳಿ	ಕೊಪ್ಪಳ	ಕೊಪ್ಪಳ	ಕರ್ನಾಟಕ
2	ಅಡವಿಹಳ್ಳಿ (ಅಡವಳ್ಳಿ), ತಡಕಲ್", ಕೋಮಲಪುರ, ಚಿತ್ತಪುರ, ಲಕ್ಷ್ಮಪುರ (ಲಕ್ಮಪುರ), ಭಾನಪುರ, ವಿರಾಪುರ, ಹಿರೇಬೀಡಿನಹಾಲು, ಚಿಕ್ಕಬೀಡಿನಹಾಲು, ಹೊನ್ನಹುಣಸಿ, ಕಾದರಹಳ್ಳಿ, ಕುದ್ರಿಮುಟಿ, ನೆಲ್ಜೆರಿ, ಚೆನ್ನಹಾಲು, ಬೈರೆನಕನಹಳ್ಳಿ, ವಾಟ್ಪರ್ವಿ (ವಟಪರಿವಿ), ವಾಟ್ಪರ್ವಿ ತಂಡ	ಕುಕನೂರ	ಕೊಪ್ಪಳ	ಕರ್ನಾಟಕ
3	ಕೊಲಿಹಾಳ (ಕೊಲೆಹಾಳ್), ಕುನ್ನಲ (ಗನ್ನಾಲ್), ತಿಮ್ಮಪುರ, ಬುಕನಹಟ್ಟಿ, ಹಿರೇಬಾಮನಹಾಲ್, ತಿಪ್ಪನಹಾಲ (ತಿಪ್ಪನ್ನಾಲ್), ಮೆದ್ನೇರಿ, ಕಟ್ಗಿಹಳ್ಳಿ, ಉಚಲ್ಕುಂಟಿ, ಬೇವುರ್	ಯಲಬುರ್ಗ	ಕೊಪ್ಪಳ	ಕರ್ನಾಟಕ

ರೂಟ್ ಅಲೈನ್‌ಮೆಂಟ್‌ನ ಪ್ರತಿಯು ಈ ಕೆಳಗೆ ಸಹಿ ಮಾಡಿರುವವರ ಆಫೀಸಿನಲ್ಲಿ ಲಭ್ಯವಿರುತ್ತದೆ. ಈ ಜಾಹೀರಾತನ್ನು ಪ್ರಕಟಿಸಿದ ತಾರೀಖಿನಿಂದ ಎರಡು ತಿಂಗಳ ಒಳಗೆ, ಪ್ರಸ್ತಾವಿತ ಟ್ರಾನ್ಸ್‌ಮಿಶನ್ ಸಿಸ್ಟಮ್ ಬಗ್ಗೆ ತಮ್ಮ ಅವಲೋಕನೆ/ಪ್ರತಿನಿಧೀಕರಣವನ್ನು ಈ ಕೆಳಗೆ ಸಹಿ ಮಾಡಿರುವವರ ಆಫೀಸಿಗೆ ಲಿಖಿತವಾಗಿ ಮಂಡಿಸಬೇಕಾಗಿ ಸಾರ್ವಜನಿಕರಿಗೆ ಈ ಮೂಲಕ ನೋಟೀಸನ್ನು ಜಾರಿಪಡಿಸಲಾಗುತ್ತಿದೆ. ಇನ್ನೂ ಹೆಚ್ಚಿನ ವಿವರಗಳು ಮತ್ತು ಸ್ಪಷ್ಟೀಕರಣಕ್ಕಾಗಿ ದಯವಿಟ್ಟು ಸಂಪರ್ಕಿಸಿರಿ :

ಛೋಟೂ ಚೌಧರಿ, ಆಫ್ ಆಪರೇಟಿಂಗ್ ಆಫೀಸರ್
chhotoo.chaudhary@serenticaglobal.com,
ಅಧಿಕೃತ ಸಹಿ ಮಾಡುವವರು
ಸೂಚಿತ ಸಂಪರ್ಕದ ವ್ಯಕ್ತಿಯ ನಂಬರ್ – 9350111274

ಮೆ. ಸೆರೆಂಟಿಕಾ ರಿನ್ಯೂವೇಬಲ್ಸ್ ಇಂಡಿಯಾ 1 ಪ್ರೈವೇಟ್ ಲಿಮಿಟೆಡ್ (SRIPL-1)
ಡಿಎಲ್‌ಎಫ್ ಸೈಬರ್ ಪಾರ್ಕ್ ಟವರ್ ಬಿ, 9ನೇ ಮಹಡಿ, ಸೆಕ್ಟರ್ 20, ಉದ್ಯೋಗ ವಿಹಾರ ಫೇಸ್–III, ಗುರುಗ್ರಾಮ–122008, ಹರಿಯಾಣಾ, ಭಾರತ.



ತಾಯಿ ಕೊಂದ ಪುತ್ರನಿಗೆ ಜೀವಾವಧಿ ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ತಿಗಾಗಿ ತಾಯಿಯನ್ನು ಉಸಿರುಗಟ್ಟಿಸಿ ಕೊಲೆ ಮಾಡಿದ್ದ ಪುತ್ರನಿಗೆ ಸಿಟಿ ಸಿವಿಲ್ ಹಾಗೂ ಸೆಷನ್ಸ್ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿದೆ.

ಶ್ರೀರಾಮಪುರದ ನಿವಾಸಿ ಶರತ್ ಕುಮಾರ್ ಶಿಕ್ಷೆಗೆ ಒಳಗಾದ ಅಪರಾಧಿ.

'ಅಪರಾಧಿ ವಿಪರೀತವಾಗಿ ಮದ್ಯ ಸೇವಿಸುತ್ತಿದ್ದ. ಕುಡಿತದ ಚಟಕ್ಕೆ ಹಣ ನೀಡುವಂತೆ ತಾಯಿ ಬಳಿ ಬಲವಂತ ಮಾಡುತ್ತಿದ್ದ. ಹಣ ಕೊಡದಿದ್ದರೆ ಮದುವೆ ಮಾಡು ಎಂದು ಪೀಡಿಸುತ್ತಿದ್ದ. ಅದಾದ ಮೇಲೆ ಮನೆ ಮಾರಾಟ ಮಾಡುವಂತೆ ಒತ್ತಾಯ ಹೇರುತ್ತಿದ್ದ. ನನ್ನ ಉಸಿರು ನಿಂತರೂ ಮನೆ ಮಾರಾಟ ಮಾಡುವುದಿಲ್ಲ ಎಂದು ತಾಯಿ ಹೇಳಿದ್ದರು. ಶಾಶ್ವತವಾಗಿಯೇ ಉಸಿರು ನಿಲ್ಲಿಸುತ್ತೇನೆ ಎಂದು ಹೇಳಿದ್ದ ಅಪರಾಧಿ, 2018ರ ಜೂನ್ 13ರಂದು ಉಸಿರುಗಟ್ಟಿಸಿ ಕೊಲೆ ಮಾಡಿದ್ದ. ಅದಾದ ಮೇಲೆ ಕೊಲೆ ಮಾಡಿಲ್ಲ ಎಂದು ನಾಟಕವಾಡಿದ್ದ' ಎಂದು ಮೂಲಗಳು ಹೇಳಿವೆ.

ನ್ಯಾಯಾಧೀಶರಾದ ಎಂ.ಎಸ್.ಕಲ್ಪನಾ ಅವರು ಶಿಕ್ಷೆ ಪ್ರಕಟಿಸಿ ಆದೇಶ ಹೊರಡಿಸಿದ್ದಾರೆ. ಸರ್ಕಾರಿ ವಕೀಲರಾಗಿ ಎಂ.ವಿ. ತ್ಯಾಗರಾಜ ವಾದ ಮಂಡಿಸಿದ್ದರು.

ಪೊಲೀಸರ ಸೋಗಿನಲ್ಲಿ ವಂಚಿಸಿದ್ದ 10 ಮಂದಿ ವಶಕ್ಕೆ • ಕೃತ್ಯದಲ್ಲಿ ಮತ್ತಷ್ಟು ಮಂದಿ ಕೈವಾಡ ಶಂಕೆ

ಉದ್ಯಮಿ ಮನೆಯಲ್ಲಿ ದರೋಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸರ ಸೋಗಿನಲ್ಲಿ ಉದ್ಯಮಿಯ ಮನೆಗೆ ನುಗ್ಗಿ ಚಿನ್ನಾಭರಣ ಹಾಗೂ ನಗದು ದೋಚಿ ಪರಾರಿ ಆಗಿದ್ದ 10 ಮಂದಿಯನ್ನು ಪೀಣ್ಯ ಠಾಣೆ ಪೊಲೀಸರು ಬುಧವಾರ ವಶಕ್ಕೆ ಪಡೆದಿದ್ದಾರೆ.

'ಪ್ರಕರಣದಲ್ಲಿ ಇನ್ನೂ ಹೆಚ್ಚಿನ ಆರೋಪಿಗಳ ಕೈವಾಡವಿರುವ ಶಂಕೆಯಿದ್ದು, ತನಿಖೆ ಮುಂದುವರಿದಿದೆ' ಎಂದು ಮೂಲಗಳು ಹೇಳಿವೆ.

ಎಚ್‌ಎಂಟಿ ಲೇಔಟ್‌ನ ಎಸ್‌ಎನ್‌ಆರ್ ಪಾಲಿಫಿಲಮ್ಸ್ ಪ್ಯಾಕೇಜಿಂಗ್ ಕಂಪನಿ ಮಾಲೀಕ ಮನೋಹರ್ ಅವರ ಮನೆಗೆ ನುಗ್ಗಿದ ದುಷ್ಕರ್ಮಿಗಳು, 700 ಗ್ರಾಂ ಚಿನ್ನಾಭರಣ ಹಾಗೂ ₹60 ಲಕ್ಷ ನಗದು ದೋಚಿ ಪರಾರಿಯಾಗಿದ್ದರು ಎಂದು ಮೂಲಗಳು ಹೇಳಿವೆ.

'ಮನೆಯಲ್ಲಿ ಮನೋಹರ್ ಅವರ ಪತ್ನಿ ಸುಜಾತಾ ಹಾಗೂ ಅವರ ಪುತ್ರ ರೂಪೇಶ್ ಇದ್ದರು. ಆಗ, ಪೊಲೀಸ್ ಸೋಗಿನಲ್ಲಿ ಬಂದ ಆರೋಪಿಗಳು ಚಿನ್ನಾಭರಣ ದೋಚಿದ್ದರು. ಮನೋಹರ್ ಅವರ ಕುಟುಂಬದಲ್ಲಿ ಸಹೋದರರ ನಡುವೆ ಜಗಳವಿತ್ತು. ಇದನ್ನು ವಿಚಾರಿಸಲು ಪೊಲೀಸರು ಬಂದಿರಬಹುದು ಎಂದು ಆರಂಭದಲ್ಲಿ ಮನೆಯವರು ಭಾವಿಸಿದ್ದರು. ಮನೆಯೊಳಗೆ ಬಂದ ಆರೋಪಿಗಳು ಮಾರಕಾಸ್ತ್ರ ತೋರಿಸಿ ಹಲ್ಲೆಗೆ ಮುಂದಾಗಿದ್ದರು. ಅದಾದ ಮೇಲೆ ರೂಪೇಶ್ ಮೇಲೆ ಹಲ್ಲೆ ಮಾಡಿ, ಸುಜಾತಾ ಅವರ ಮಾಂಗಲ್ಯ ಸರ ಸಹಿತ ಚಿನ್ನಾಭರಣ ಹಾಗೂ ನಗದು ದೋಚಿದ್ದರು. ಮನೆಯಲ್ಲಿದ್ದ ಸಿಸಿ ಟಿ.ವಿ ಕ್ಯಾಮೆರಾದ ಡಿವಿಆರ್ ಅನ್ನು ಕದೊಯ್ದಿದ್ದಾರೆ' ಎಂದು ಮೂಲಗಳು ಹೇಳಿವೆ.

ಆರೋಪಿಗಳ ಪೈಕಿ ನಾಗರಾಜ್ ಎಂಬಾತ ವರ್ಷದ ಹಿಂದೆ ಕಂಪನಿಯಲ್ಲಿ ಎರಡು ತಿಂಗಳು ಕೆಲಸ ಮಾಡಿದ್ದ. ಇತರೆ ಆರೋಪಿಗಳ ಜತೆಗೆ ಸಂಚು ರೂಪಿಸಿ ದರೋಡೆ ನಡೆಸಿರುವುದು ಪೊಲೀಸ್ ವಿಚಾರಣೆಯಲ್ಲಿ ತಿಳಿದುಬಂದಿದೆ.

ಕ್ರಿಪ್ಟೊ ಕರೆನ್ಸಿ ಪ್ರಕರಣ ಮಾಹಿತಿ ಕೋರಿದ ಎಸ್‌ಐಟಿ

ಅಪರಾಧ ಸುದ್ದಿಗಳು

ಬೆಂಗಳೂರು: ಬಿಟ್ ಕಾಯಿನ್ (ಬಿಟಿಸಿ) ಅಕ್ರಮದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡದ (ಎಸ್‌ಐಟಿ) ಅಧಿಕಾರಿಗಳು ಪ್ರಕರಣ ಸಂಬಂಧ ಸಾರ್ವಜನಿಕರಿಂದ ಮತ್ತಷ್ಟು ದಾಖಲೆ ಸಂಗ್ರಹಿಸಲು ಮುಂದಾಗಿದ್ದಾರೆ.

ದಾಖಲೆ ಹಾಗೂ ಮಾಹಿತಿ ಗಳಿದ್ದರೆ ಎಸ್‌ಐಟಿ ಅಧಿಕಾರಿಗಳಿಗೆ ತಿಳಿಸಬಹುದು. ಅವರ ಹೆಸರನ್ನು ಯಾರಿಗೂ ತಿಳಿಸುವುದಿಲ್ಲ. ಕಳೆದ ಆಗಸ್ಟ್‌ನಿಂದ ಎಸ್‌ಐಟಿ ಈ ಪ್ರಕರಣದ ತನಿಖೆ ನಡೆಸುತ್ತಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕ್ರಿಪ್ಟೊ ಕರೆನ್ಸಿಯ ವ್ಯವಹಾರದ ಮಾಹಿತಿ, ಪುರಾವೆಗಳಿದ್ದರೆ ಅರಮನೆ ರಸ್ತೆಯಲ್ಲಿರುವ ಸಿಐಡಿ ಕಚೇರಿಗೆ ನೀಡಬಹುದು. ಇ–ಮೇಲ್: sitcid2023@ksp.gov.in ಅಥವಾ 94808 00151 ವಾಟ್ಸ್‌ಆ್ಯಪ್ ಮಾಡಬಹುದು ಎಂದು ಅಧಿಕಾರಿಗಳು ಕೋರಿದ್ದಾರೆ.

ಕೆಂಪೇಗೌಡ ನಗರ ಠಾಣೆಯಲ್ಲಿ 2020–21ರಲ್ಲಿ ದಾಖಲಾಗಿದ್ದ ಪ್ರಕರಣ ಸಂಬಂಧ ತನಿಖೆ ನಡೆಸಲಾಗುತ್ತಿದೆ. ಇತ್ತೀಚೆಗೆ ಪ್ರಮುಖ ಆರೋಪಿಗಳ ಮನೆ, ಕಚೇರಿಗಳ ಮೇಲೆ ದಾಳಿ ನಡೆಸಿದ್ದ ಎಸ್‌ಐಟಿ ತಂಡವು ಡಿಜಿಟಲ್ ದಾಖಲೆ ಹಾಗೂ ನಗದು ಜಪ್ತಿ ಮಾಡಿಕೊಂಡಿತ್ತು. ಅಂತರರಾಷ್ಟ್ರೀಯ ಹ್ಯಾಕರ್ ಸೇರಿದಂತೆ ಸ್ಥಳೀಯ ಆರೋಪಿಗಳು, ಏಜೆನ್ಸಿಗಳ ಸರ್ವರ್ ಹ್ಯಾಕ್ ಮಾಡಿ ಬಿಟ್ ಕಾಯಿನ್‌ಗಳನ್ನು ಸಂಪಾದಿಸಿದ್ದರು. ಆ ಪ್ರಕರಣದಲ್ಲಿ ಎಸ್‌ಐಟಿ ತನಿಖೆ ಚುರುಕುಗೊಳಿಸಿದೆ.

ರೌಡಿಪಟ್ಟಿಗೆ 'ರೀಲ್ಸ್' ದಾಸ

ಬೆಂಗಳೂರು: ಮೈತುಂಬಾ ಬಂಗಾರ ಧರಿಸಿಕೊಂಡು ವಿಡಿಯೊ ಮಾಡಿ ಸಾಮಾಜಿಕ ಮಾಧ್ಯಮಕ್ಕೆ ಅಪ್‌ಲೋಡ್ ಮಾಡುತ್ತಿದ್ದ ಮಂಜುನಾಥ್ ಅಲಿಯಾಸ್ ದಾಸನ ವಿರುದ್ಧ ಚಿಕ್ಕಜಾಲ ಪೊಲೀಸ್ ಠಾಣೆಯಲ್ಲಿ ರೌಡಿಪಟ್ಟಿ ತೆರೆಯಲಾಗಿದೆ.

ಯಲಹಂಕ ಹಾಗೂ ಚಿಕ್ಕಜಾಲ ಠಾಣಾ ವ್ಯಾಪ್ತಿಯಲ್ಲಿ ಈತ ರೌಡಿ ಚಟುವಟಿಕೆಯಲ್ಲಿ ತೊಡಗಿದ್ದ. ಅದನ್ನು ಆಧರಿಸಿ ರೌಡಿಪಟ್ಟಿ ತೆರೆಯಲಾಗಿದೆ ಎಂದು ಮೂಲಗಳು ಹೇಳಿವೆ.

ಆಸ್ತಿ ವ್ಯಾಜ್ಯದಲ್ಲಿ ಮಧ್ಯ ಪ್ರವೇಶಿಸಿ ಮಹಿಳೆಯರಿಬ್ಬರ ಮೇಲೆ ಹಲ್ಲೆ ಮಾಡಿ ಜೀವ ಬೆದರಿಕೆ ಒಡ್ಡಿದ್ದ ಪ್ರಕರಣದಲ್ಲಿ ದಾಸನನ್ನು ಯಲಹಂಕ ಠಾಣೆ ಪೊಲೀಸರು ಈಚೆಗೆ ಬಂಧಿಸಿದ್ದರು.

'ದಾಸ, ಇನ್‌ಸ್ಟಾಗ್ರಾಮ್ ಹಾಗೂ ಫೇಸ್‌ಬುಕ್ ಸಾಮಾಜಿಕ ಮಾಧ್ಯಮಗಳಲ್ಲಿ ರೀಲ್ಸ್ ವಿಡಿಯೊ ಮಾಡುತ್ತಿದ್ದ. ಪದೇ ಪದೇ ಅಪರಾಧ ಕೃತ್ಯದಲ್ಲಿ ಭಾಗಿಯಾಗುತ್ತಿದ್ದ' ಎಂದು ಪೊಲೀಸರು ಹೇಳಿದರು.

ನಟಿ ತಾರಾ ಫೇಸ್‌ಬುಕ್ ಹ್ಯಾಕ್

ಬೆಂಗಳೂರು: ನಟಿ ತಾರಾ ಅನುರಾಧಾ ಅವರ ಫೇಸ್‌ಬುಕ್ ಖಾತೆಯನ್ನು ಸೈಬರ್ ವಂಚಕರು ಹ್ಯಾಕ್ ಮಾಡಿದ್ದು ಈ ಸಂಬಂಧ ದಕ್ಷಿಣ ವಿಭಾಗದ ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಎರಡು ಫೇಸ್‌ಬುಕ್ ಖಾತೆಗಳಿದ್ದವು. ಅದರಲ್ಲಿ ಒಂದನ್ನು ಸಕ್ರಿಯವಾಗಿ ಬಳಸುತ್ತಿದ್ದೆ. ಆ ಖಾತೆಯಲ್ಲಿ ಬೇರೆ ಬೇರೆ ರೀತಿಯ ಪೋಸ್ಟ್ ಗಮನಿಸಿದ ಅಭಿಮಾನಿ ಒಬ್ಬರು ಕರೆ ಮಾಡಿ ತಿಳಿಸಿದ್ದರು. ಆ ಪೋಸ್ಟ್‌ಗಳಿಗೂ ನನಗೂ ಸಂಬಂಧ ಇಲ್ಲ. ಆರೋಪಿಯನ್ನು ಪತ್ತೆಹಚ್ಚಿ ಕ್ರಮ ಕೈಗೊಳ್ಳಿ' ಎಂದು ದೂರಿನಲ್ಲಿ ಕೋರಿದ್ದಾರೆ.

ಸುದ್ದಿ 2 ನಿಮಿಷ

ವೈದ್ಯರ ರಾಜ್ಯಮಟ್ಟದ ಕ್ರಿಕೆಟ್ 22ರಿಂದ

ಯಲಹಂಕ: ಭಾರತೀಯ ವೈದ್ಯಕೀಯ ಸಂಘ (ಐಎಂಎ) ಯಲಹಂಕ ಶಾಖೆಯ ವತಿಯಿಂದ ಡಿ.22ರಿಂದ 24ರವರೆಗೆ ರಾಜ್ಯಮಟ್ಟದ ವೈದ್ಯರ ಕ್ರಿಕೆಟ್ ಪಂದ್ಯಾವಳಿ ಏರ್ಪಡಿಸಲಾಗಿದೆ.

ಯಲಹಂಕ ಸುತ್ತಮುತ್ತಲಿನ 10 ಕ್ರೀಡಾಂಗಣಗಳಲ್ಲಿ ಪಂದ್ಯಾವಳಿ ನಡೆಯಲಿದ್ದು, ಡಿ.22ರಂದು ಬೆಳಿಗ್ಗೆ 7ಕ್ಕೆ ಎಲ್ಲ ಕ್ರೀಡಾಂಗಣಗಳಲ್ಲಿ ಏಕಕಾಲಕ್ಕೆ ಚಾಲನೆ ದೊರೆಯಲಿದೆ. ರಾಜ್ಯದ ವಿವಿಧ ಜಿಲ್ಲೆಗಳಿಂದ 40ಕ್ಕೂ ಹೆಚ್ಚು ವೈದ್ಯರ ತಂಡಗಳು ಭಾಗವಹಿಸಲಿವೆ ಎಂದು ಸಂಘದ ಅಧ್ಯಕ್ಷ ಡಾ. ಪವನ್‌ಕುಮಾರ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಪ್ರತಿದಿನ 40 ಪಂದ್ಯಗಳಂತೆ ಎರಡು ದಿನಗಳಕಾಲ ಲೀಗ್ ಹಂತದ ಪಂದ್ಯಗಳು ನಡೆಯಲಿವೆ. ಡಿ.24ರಂದು ಭಾನುವಾರ ಥಣಿಸಂದ್ರದ ಸಂಪ್ರಸಿದ್ಧಿ ಕ್ರೀಡಾಂಗಣದಲ್ಲಿ ಅಂತಿಮ ಪಂದ್ಯ ನಡೆಯಲಿದೆ. ಸಮಾರೋಪ ಸಮಾರಂಭಕ್ಕೆ ಮಾಜಿ ಕ್ರಿಕೆಟಿಗ ಸೈಯದ್ ಕಿರ್ಮಾನಿ ಹಾಗೂ ಐಎಂಎ ರಾಜ್ಯಘಟಕದ ಅಧ್ಯಕ್ಷ ಡಾ. ಶ್ರೀನಿವಾಸ್ ಭಾಗವಹಿಸುವರು ಎಂದು ಸಂಘಟನಾ ಸಮಿತಿ ಅಧ್ಯಕ್ಷ ಡಾ.ಶಂಕರ್ ನಾರಾಯಣ್ ತಿಳಿಸಿದರು.

40 ವರ್ಷ ದಾಟಿದ ವೈದ್ಯರಿಗಾಗಿ ಲೆಜೆಂಡ್ಸ್ ಕಪ್ ಆಯೋಜಿಸಲಾಗಿದ್ದು, 6 ಹಿರಿಯ ವೈದ್ಯರ ತಂಡಗಳು ಪಾಲ್ಗೊಳ್ಳುತ್ತಿವೆ ಎಂದು ಅವರು ಮಾಹಿತಿ ನೀಡಿದರು.

ಸಂಘದ ಮಾಜಿ ಅಧ್ಯಕ್ಷ ಡಾ.ವೈ.ಎಂ.ವೆಂಕಟೇಶ್, ಈವೆಂಟ್ ಮ್ಯಾನೇಜರ್ ಪ್ರಹ್ಲಾದ್ ಪಿ.ಆರ್. ಭಾಗವಹಿಸಿದ್ದರು.

₹14 ಕೋಟಿ ವೆಚ್ಚದ ಒಳಚರಂಡಿ ಕಾಮಗಾರಿಗೆ ಚಾಲನೆ

ರಾಜರಾಜೇಶ್ವರಿನಗರ: ರಾಮೋಹಳ್ಳಿ ಮತ್ತು ವಿನಾಯಕನಗರದಲ್ಲಿ ₹14 ಕೋಟಿ ವೆಚ್ಚದಲ್ಲಿ ಕೈಗೊಂಡಿರುವ ಒಳಚರಂಡಿ ಕಾಮಗಾರಿಗೆ ಶಾಸಕ ಎಸ್.ಟಿ. ಸೋಮಶೇಖರ್ ಚಾಲನೆ ನೀಡಿದರು.

ಇದೇ ವೇಳೆ, ₹46 ಲಕ್ಷ ವೆಚ್ಚದ ವ್ಯವಸಾಯ ಸೇವಾ ಸಹಕಾರ ಬ್ಯಾಂಕ್‌ನ ಕಟ್ಟಡ ಲೋಕಾರ್ಪಣೆ ಮಾಡಿದ ಶಾಸಕರು, 94 ಸಿ.ಸಿ. ಯೋಜನೆಯಲ್ಲಿ ನೀಡಲಾದ ಹಕ್ಕು ಪತ್ರಗಳಿಗೆ ಇ–ಖಾತಾಗಳನ್ನು ವಿತರಿಸಿದರು.

ರಾಮೋಹಳ್ಳಿಯಲ್ಲಿ ನಡೆದ ಗ್ರಾಮಸಭೆ ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರದ ಸವಲತ್ತು ನಿಜವಾದ ಫಲಾನುಭವಿಗಳಿಗೆ ತಲುಪಬೇಕು. ಆಗ ಮಾತ್ರ ಗ್ರಾಮಸಭೆಗಳಿಗೆ ಅರ್ಥ ಬರುತ್ತದೆ ಎಂದರು.

ಗ್ರಾಮ ಪಂಚಾಯಿತಿ ಅಧ್ಯಕ್ಷ ಹಾಗೂ ರೈತ ಸೇವಾ ಸಹಕಾರ ಬ್ಯಾಂಕ್ ಅಧ್ಯಕ್ಷ ವಿ.ವೇಣುಗೋಪಾಲ್ 33 ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸಿ ಮಾತನಾಡಿ, 'ಗ್ರಾಮಪಂಚಾಯಿತಿ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿರುವ ವಸತಿ, ನಿವೇಶನ ರಹಿತರಿಗೆ 30 ಎಕರೆ ಪ್ರದೇಶದಲ್ಲಿ ನಿವೇಶನ ನೀಡಲು ಶಾಸಕರು ಮುಂದಾಗಿದ್ದಾರೆ' ಎಂದರು.

ಬಿಡಿಸಿಸಿ ಬ್ಯಾಂಕ್‌ನ ನಿರ್ದೇಶಕ ಡಿ.ಹನುಮಂತಯ್ಯ, ಗ್ರಾ.ಪಂ. ಉಪಾಧ್ಯಕ್ಷೆ ಗೌರಮ್ಮ ಕೃಷ್ಣಪ್ಪ, ಬ್ಯಾಂಕ್ ಉಪಾಧ್ಯಕ್ಷೆ ಶೋಭಾ ತಿಮ್ಮೇಗೌಡ, ನಿರ್ದೇಶಕ ಚೌಡರೆಡ್ಡಿ, ಗ್ರಾ.ಪಂ. ಮಾಜಿ ಅಧ್ಯಕ್ಷರಾದ ಆರ್.ಚಂದ್ರಪ್ಪ, ಬಿ.ಎಚ್.ಪ್ರಭು, ರವಿಕುಮಾರ್, ವಿಜಯಲಕ್ಷ್ಮಿ, ಹನುಮಂತಯ್ಯ, ಸುಶೀಲನಾಗರಾಜು, ಮುಖಂಡರಾದ ಚೇತನ್‌ಗೌಡ, ಆಂಜನೇಯಗೌಡ, ಯಲ್ಲಪ್ಪ, ರಾಕೇಶ್, ಮಾಜಿ ಅಧ್ಯಕ್ಷ ಟಿ.ವೆಂಕಟೇಶ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಅಪಘಾತ: ಅಮೆಜಾನ್ ಕಂಪನಿ ವ್ಯವಸ್ಥಾಪಕ ಸಾವು

ಬೆಂಗಳೂರು: ಮಾಗಡಿ ರೋಡ್‌ನ ನೈಸ್ ರಸ್ತೆಯ ಜಂಕ್ಷನ್ ಬಳಿ, ಬುಧವಾರ ಮುಂಜಾನೆ ಸಂಭವಿಸಿದ ಅಪಘಾತದಲ್ಲಿ ಅಮೆಜಾನ್ ಕಂಪನಿಯ ವ್ಯವಸ್ಥಾಪಕ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಎಚ್‌ಎಸ್‌ಆರ್ ಲೇಔಟ್‌ನ ನಿವಾಸಿ ಸಂತೋಷ್ (35) ಮೃತಪಟ್ಟವರು.

'ಹಲವು ವರ್ಷಗಳಿಂದ ಅಮೆಜಾನ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಮಂಗಳವಾರ ರಾತ್ರಿ ಪಾಳಿಯಲ್ಲಿ ಕೆಲಸ ಮಾಡಿದ್ದ ಅವರು, ಬುಧವಾರ ಮುಂಜಾನೆ ಮನೆಗೆ ಕಾರಿನಲ್ಲಿ ಹೊರಟಿದ್ದರು. ಮುಂಜಾನೆ ಮಂಜು ಮುಸುಕಿದ ವಾತಾವರಣದಲ್ಲಿ ತೆರಳುತ್ತಿದ್ದರು. ಜಂಕ್ಷನ್‌ನಲ್ಲಿ ನಿಂತಿದ್ದ ಲಾರಿ ಕಾಣದೇ ಹಿಂದಿನಿಂದ ಡಿಕ್ಕಿ ಹೊಡೆದಿದ್ದಾರೆ. ಕಾರು ಸಂಪೂರ್ಣ ಜಖಂಗೊಂಡು ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಕಾರನ್ನು ಚಾಲಕ ಅತಿವೇಗವಾಗಿ ಚಲಾಯಿಸುತ್ತಿದ್ದರು' ಎಂದು ಪೊಲೀಸರು ಹೇಳಿದರು.

ಕಾಮಾಕ್ಷಿಪಾಳ್ಯ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪತ್ರಿಕೆ ವಿತರಕರಿಗೆ ವಿಮೆ ನೋಂದಣಿಗೆ ಸೂಚನೆ

ಬೆಂಗಳೂರು: 'ದಿನಪತ್ರಿಕೆ ವಿತರಿಸುವ ಕಾರ್ಮಿಕರಿಗೆ ಅಪಘಾತ ಪರಿಹಾರ ಮತ್ತು ವೈದ್ಯಕೀಯ ಸೌಲಭ್ಯ ಯೋಜನೆಗೆ 'ಇ–ಶ್ರಮ್' ಪೋರ್ಟಲ್ ಹಾಗೂ ಗಿಗ್ ಕಾರ್ಮಿಕರ ಜೀವ ವಿಮೆ ಮತ್ತು ಅಪಘಾತ ಪರಿಹಾರ ಯೋಜನೆಗೆ 'ಸೇವಾ ಸಿಂಧು' ಪೋರ್ಟಲ್‌ನಲ್ಲಿ ನೋಂದಣಿ ಮಾಡಿಸಲು ತಂತ್ರಾಂಶ ಅಭಿವೃದ್ಧಿಪಡಿಸಲಾಗಿದೆ' ಎಂದು ಕಾರ್ಮಿಕ ಇಲಾಖೆಯ ಆಯುಕ್ತ ಎಚ್.ಎನ್. ಗೋಪಾಲಕೃಷ್ಣ ತಿಳಿಸಿದ್ದಾರೆ.

'ಸಾಮಾಜಿಕ ಭದ್ರತೆ ಒದಗಿಸುವ ಉದ್ದೇಶದ ಈ ಯೋಜನೆಗಳಡಿ ಹೆಚ್ಚಿನ ಸಂಖ್ಯೆಯಲ್ಲಿ ಗಿಗ್ ಮತ್ತು ದಿನಪತ್ರಿಕೆ ವಿತರಿಸುವ ಕಾರ್ಮಿಕರನ್ನು ನೋಂದಾಯಿಸಲು ಎಲ್ಲ ಜಿಲ್ಲೆಗಳ ಕಾರ್ಮಿಕ ಅಧಿಕಾರಿಗಳು, ಹಿರಿಯ ಕಾರ್ಮಿಕ ನಿರೀಕ್ಷಕರು ಮತ್ತು ಕಾರ್ಮಿಕ ನಿರೀಕ್ಷಕರು ಮುಂದಾಗಬೇಕು' ಎಂದು ಅವರು ಸೂಚನೆ ನೀಡಿದ್ದಾರೆ.

ಈ ಯೋಜನೆಗಳಡಿ ಗಿಗ್ ಕಾರ್ಮಿಕರಿಗೆ ₹2 ಲಕ್ಷ ಜೀವ ವಿಮೆ ಸೌಲಭ್ಯ ಮತ್ತು ₹2 ಲಕ್ಷ ಅಪಘಾತ ವಿಮಾ ಸೌಲಭ್ಯ ಸೇರಿ ಒಟ್ಟು ₹4 ಲಕ್ಷದ ವಿಮೆ ಸೌಲಭ್ಯ ಸಿಗಲಿದೆ. ದಿನಪತ್ರಿಕೆ ವಿತರಿಸುವ ಕಾರ್ಮಿಕರಿಗೆ ₹2 ಲಕ್ಷ ಅಪಘಾತ ಪರಿಹಾರ ಸೌಲಭ್ಯ ಮತ್ತು ₹1 ಲಕ್ಷದವರೆಗೆ ವೈದ್ಯಕೀಯ ಸೌಲಭ್ಯ ಸಿಗಲಿದೆ.

ಸಂಸದರ ಅಮಾನತು: ಕಾಂಗ್ರೆಸ್ ಆಕ್ರೋಶ

ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಪ್ರತಿಭಟನಕಾರರ ಅಸಮಾಧಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂಸದರನ್ನು ಅಮಾನತುಗೊಳಿಸುವ ಮೂಲಕ ಕೇಂದ್ರ ಸರ್ಕಾರ ಸರ್ವಾಧಿಕಾರಿ ಧೋರಣೆ ಅನುಸರಿಸುತ್ತಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಕಗ್ಗೊಲೆ ಮಾಡುತ್ತಿದೆ' ಎಂದು ಆಪಾದಿಸಿ ಕಾಂಗ್ರೆಸ್ ಕಾರ್ಯಕರ್ತರು ನಗರದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

'ಸಂಸತ್‌ನ ಒಳಕ್ಕೆ ಜಿಗಿದು ದಾಂದಲೆ ನಡೆಸಿದವರು ಬಿಜೆಪಿ ಬೆಂಬಲಿತರು. ಅದನ್ನು ಖಂಡಿಸಿ, ವಿರೋಧ ಪಕ್ಷದ ಸದಸ್ಯರು ಪ್ರತಿಭಟಿಸಿದರೆ ಅಮಾನತು ಮಾಡಲಾಗುತ್ತಿದೆ' ಎಂದು ಪ್ರತಿಭಟನಕಾರರು ಆಕ್ರೋಶ ಹೊರಹಾಕಿದರು.

'ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಭದ್ರತಾ ವೈಫಲ್ಯವನ್ನು ಮರೆಮಾಚುತ್ತಿದ್ದಾರೆ. ಪ್ರಧಾನಿ, ಗೃಹ ಸಚಿವರು ಭದ್ರತೆ ನೀಡುವಲ್ಲಿ ವಿಫಲ ಆಗಿದ್ದಾರೆ. ಲೋಕಸಭೆಯಲ್ಲೂ ಸ್ಪಷ್ಟ ಉತ್ತರ ನೀಡುತ್ತಿಲ್ಲ' ಎಂದು ಆಪಾದಿಸಿದರು.

'ಲೋಕಸಭೆ ಸ್ಪೀಕರ್ ವರ್ತನೆ ಸಹ ಬೇಸರ ತರಿಸಿದೆ. ಲೋಕಸಭಾ ಸದಸ್ಯರಿಗೆ ರಕ್ಷಣೆ ನೀಡಬೇಕಾದ ಸ್ಪೀಕರ್ ಅವರೇ ವಿರೋಧ ಪಕ್ಷದ ಸದಸ್ಯರನ್ನು ಸದನದಿಂದ ಹೊರಗೆ ಹಾಕುತ್ತಿದ್ದಾರೆ.

ರೇಸ್ ಕೋರ್ಸ್ ರಸ್ತೆಯ ಕಾಂಗ್ರೆಸ್ ಕಚೇರಿ ಎದುರು ಬುಧವಾರ ಕಾರ್ಯಕರ್ತರು ಪ್ರತಿಭಟನೆ ಮಾಡಿದರು

ಇದು ದೇಶದ ಇತಿಹಾಸದಲ್ಲಿ ಅತ್ಯಂತ ಕರಾಳ ದಿನ. ವಿರೋಧ ಪಕ್ಷದ ಸಂಸದರು ನ್ಯಾಯ ಸಮ್ಮತವಾಗಿ ಹೋರಾಟ ನಡೆಸುತ್ತಿದ್ದಾರೆ ಎಂಬುದು ಪ್ರತಿ ನಾಗರಿಕನಿಗೂ ಅರಿವಿದೆ. ಕೇಂದ್ರದ ವಿಫಲತೆಯನ್ನು ಸಹ ಜನರು ಕಣ್ಣಾರೆ ಕಂಡಿದ್ದಾರೆ' ಎಂದು ಹೇಳಿದರು.

'ಜನರಿಗೆ ಹಾಗೂ ದೇಶಕ್ಕೆ ರಕ್ಷಣೆ ನೀಡಲು ವಿಫಲವಾಗಿರುವ ಬಿಜೆಪಿ ಸರ್ಕಾರ ತೊಲಗದಿದ್ದರೆ ಮುಂದಿನ ದಿನಗಳಲ್ಲಿ ದೇಶದ ಜನರು ತೀವ್ರ ಸಂಕಷ್ಟಕ್ಕೆ ಸಿಲುಕುತ್ತಾರೆ' ಎಂದು ಪ್ರತಿಭಟನಕಾರರು ಎಚ್ಚರಿಸಿದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್.ಮನೋಹರ್, ಮುಖಂಡರಾದ ಜಿ.ಜನಾರ್ದನ್, ಎ.ಆನಂದ್, ಸುಧಾಕರ್ ರಾವ್, ಪ್ರಕಾಶ್, ಹೇಮರಾಜ್, ಬಾಲು, ಕೆ.ಟಿ. ನವೀನ್ ಪುಟ್ಟರಾಜು, ದರ್ಶನ್, ಚೇತನ್, ಚಿನ್ನಿಪ್ರಕಾಶ್, ಓಬಳೇಶ್ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಪ್ರಜಾವಾಣಿ
ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಕ್ಕೆ
8147623791
080 45557204
readerservicecell@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ bit.ly/40dPCqy

ಸಿಐಡಿಯಲ್ಲಿ 2 ವಿಶೇಷ ವಿಭಾಗ ರಚನೆ

ಪ್ರಜಾವಾಣಿ ವಾರ್ತೆ

ಎಂ.ಎ. ಸಲೀಂ

ಬೆಂಗಳೂರು: ಸಾರ್ವಜನಿಕರಿಗೆ ಅಧಿಕ ಲಾಭದ ಆಮಿಷವೊಡ್ಡಿ ಹಣ ದೋಚುತ್ತಿರುವ ಪ್ರಕರಣಗಳು ರಾಜ್ಯದಲ್ಲಿ ಹೆಚ್ಚುತ್ತಿದ್ದು, ಇಂತಹ ಪ್ರಕರಣಗಳಲ್ಲಿ ಆರೋಪಿಗಳ ಪತ್ತೆ, ಪ್ರಕರಣಗಳ ನಿಯಂತ್ರಣಕ್ಕೆ ಅಪರಾಧ ತನಿಖಾ ದಳವು (ಸಿಐಡಿ) ಎರಡು ವಿಶೇಷ ವಿಭಾಗಗಳನ್ನು ರಚಿಸಿದೆ.

ಆರ್ಥಿಕ ವಂಚನೆಗಳ ತನಿಖೆಗೆ 'ಠೇವಣಿ ವಂಚನೆ ವಿಭಾಗ' ಹಾಗೂ ವೃತ್ತಿಪರ ಕ್ರಿಮಿನಲ್‌ಗಳ ಮೇಲೆ ಕಣ್ಣಾವಲಿಡಲು 'ಕ್ರಿಮಿನಲ್ ಗುಪ್ತದಳ ವಿಭಾಗ' ರಚಿಸಲಾಗಿದೆ.

ಸಿಐಡಿಯಲ್ಲಿ ಹೊಸ ಎರಡು ವಿಭಾಗಗಳೂ ಸೇರಿದಂತೆ ಸದ್ಯ ಮೂರು ವಿಭಾಗಗಳು ಕೆಲಸ ಮಾಡುತ್ತಿವೆ. ರಾಜ್ಯ ವ್ಯಾಪ್ತಿ ಕಾರ್ಯಾಚರಣೆ ನಡೆಸಲಿವೆ. ಆರ್ಥಿಕ ವಂಚನೆ ಪ್ರಕರಣ ಪತ್ತೆಗೆ ಎರಡು ವಿಭಾಗಕ್ಕೂ ಎಸ್ಪಿ ದರ್ಜೆಯ ಅಧಿಕಾರಿಗಳು ನೇತೃತ್ವ ವಹಿಸಲಿದ್ದಾರೆ ಎಂದು ಸಿಐಡಿ ಡಿಜಿಪಿ ಡಾ.ಎಂ.ಎ.ಸಲೀಂ ತಿಳಿಸಿದ್ದಾರೆ.

ಆರ್ಥಿಕ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಐಡಿಯಲ್ಲಿ 903 ಪ್ರಕರಣಗಳು ತನಿಖೆ ಹಂತದಲ್ಲಿದ್ದವು. ಅದರಲ್ಲಿ, 290 ಪ್ರಕರಣಗಳ ತನಿಖೆ ಪೂರ್ಣಗೊಳಿಸಲಾಗಿದೆ. ಉಳಿದಂತೆ 615 ಪ್ರಕರಣ ತನಿಖೆ ನಡೆಯುತ್ತಿದೆ. ಹೊಸ ವಿಭಾಗಗಳ ರಚನೆಯಿಂದ ಪ್ರಕರಣಗಳ ತ್ವರಿತ ತನಿಖೆಗೆ ಸಹಕಾರಿ ಆಗಲಿದೆ ಎಂದು ಹೇಳಿದರು.

'ಸ್ಥಳೀಯ ಠಾಣೆಗಳ ರೌಡಿಪಟ್ಟಿಯಲ್ಲಿ ಹೆಸರಿರುವವರ ಮೇಲೆ ನಿಗಾ ವಹಿಸುವುದು ಹಾಗೂ ಕ್ರಿಮಿನಲ್‌ಗಳ ಚಲನವಲನ ಮಾಹಿತ ಸಂಗ್ರಹಕ್ಕೆ ಕ್ರಿಮಿನಲ್ ಗುಪ್ತದಳ ವಿಭಾಗ ಕೆಲಸ ಮಾಡಲಿದೆ. ಸಿಐಡಿಯಲ್ಲಿ 62 ಡಿವೈಎಸ್ ಹುದ್ದೆಗಳಿದ್ದವು. ಎರಡು ಹುದ್ದೆಗಳನ್ನು ವಾಪಸ್ ನೀಡಿ, ಎಸ್‌ಪಿ ಹುದ್ದೆಗಳನ್ನು ಸೃಜಿಸಲಾಗಿದೆ. ರಾಜ್ಯದಲ್ಲಿ ಆರು ವಲಯಗಳಿದ್ದು ಡಿವೈಎಸ್ಪಿ ನೇತೃತ್ವದಲ್ಲಿ ಇಬ್ಬರು ಇನ್‌ಸ್ಪೆಕ್ಟರ್‌ಗಳನ್ನು ಒಳಗೊಂಡ ತಂಡಗಳು ಕೆಲಸ ಮಾಡುತ್ತಿವೆ. ಡಿವೈಎಸ್ಪಿ ನೇತೃತ್ವದಲ್ಲಿ ವಲಯವಾರು ದಾಖಲಾದ ಪ್ರಕರಣಗಳ ಕುರಿತು ತನಿಖೆ ನಡೆಸಲಾಗುತ್ತಿದೆ' ಎಂದು ಮೂಲಗಳು ಹೇಳಿವೆ.

ವಿವಿಧ ಕಾಮಗಾರಿಗೆ ಚಾಲನೆ

ಯಲಹಂಕ: ಕ್ಷೇತ್ರ ವ್ಯಾಪ್ತಿಯ ಮಾದಪ್ಪನಹಳ್ಳಿ ಹಾಗೂ ಮಾವಳ್ಳಿಪುರ ಗ್ರಾಮಗಳಲ್ಲಿ ಲೋಕೋಪಯೋಗಿ ಇಲಾಖೆ ಅನುದಾನದಡಿ ₹10 ಕೋಟಿ ವೆಚ್ಚದ ರಸ್ತೆಗಳ ಅಭಿವೃದ್ಧಿ ಹಾಗೂ ಗೋಪಾಲಪುರ ಗ್ರಾಮದಲ್ಲಿ ಸಮಾಜಕಲ್ಯಾಣ ಇಲಾಖೆಯಡಿ ₹6.5 ಕೋಟಿ ವೆಚ್ಚದಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿನಿಯರ ವಸತಿನಿಲಯ ನಿರ್ಮಾಣ ಕಾಮಗಾರಿಗೆ ಶಾಸಕ ಎಸ್.ಆರ್. ವಿಶ್ವನಾಥ್ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, 'ಇತ್ತೀಚೆಗೆ ಈ ಭಾಗದಲ್ಲಿ ವಾಹನಗಳ ದಟ್ಟಣೆ ಹೆಚ್ಚಾಗಿದ್ದು, ಕಿರಿದಾದ ರಸ್ತೆಗಳಲ್ಲಿ ಸಂಚಾರಕ್ಕೆ ತೊಂದರೆಯಾಗುತ್ತಿದೆ. ರಸ್ತೆ ವಿಸ್ತರಿಸುವಂತೆ ಸಾರ್ವಜನಿಕರು ಮನವಿ ಸಲ್ಲಿಸಿದ್ದರು. ಅವರ ಬೇಡಿಕೆಯಂತೆ ರಸ್ತೆ ಅಭಿವೃದ್ಧಿ ಕಾರ್ಯ ಆರಂಭಿಸಲಾಗಿದೆ' ಎಂದರು.

ರಸ್ತೆ ಅಗಲೀಕರಣಕ್ಕೆ ಯಾವುದೇ ತಕರಾರಿಲ್ಲದೆ ಜಾಗ ಬಿಟ್ಟುಕೊಟ್ಟು ರೈತರು ಸಹಕರಿಸಿದ್ದಾರೆ. ರಸ್ತೆಗಳು ಅಭಿವೃದ್ಧಿಯಾದರೆ, ಸುತ್ತಲಿನ ಭೂಮಿಗೂ ಬೆಲೆ ಬರುತ್ತದೆ. ಜೊತೆಗೆ ವಾಣಿಜ್ಯ ಚಟುವಟಿಕೆಗಳು ಗರಿಗೆದರುತ್ತವೆ. ಹೆಚ್ಚಿನ ಜಾಗ ಬಿಟ್ಟುಕೊಡುವ ಬಡ ರೈತರಿಗೆ ಸರ್ಕಾರದಿಂದ ನಿವೇಶನ ಹಂಚುವ ಸಂದರ್ಭದಲ್ಲಿ ಪರಿಗಣನೆಗೆ ತೆಗೆದುಕೊಳ್ಳಲಾಗುವುದು' ಎಂದು ಭರವಸೆ ನೀಡಿದರು.

ಬಿಜೆಪಿ ಮುಖಂಡರಾದ ದಿಬ್ಬೂರು ಜಯಣ್ಣ, ಎಸ್.ಎನ್.ರಾಜಣ್ಣ, ಅದ್ದೆ ಮಂಜುನಾಥರೆಡ್ಡಿ, ಕೆ.ವಿಜಯಕುಮಾರ್, ಡಿ.ಜಿ.ಅಪ್ಪಯಣ್ಣ, ಇಟಗಲ್‌ಪುರ ಮೋಹನ್, ಗ್ರಾ. ಪಂ ಅಧ್ಯಕ್ಷರಾದ ಅಮರಾವತಮ್ಮ, ಮುನಿಲಕ್ಷಮ್ಮ ಮುನಿಬೈಲಪ್ಪ, ಉಪಾಧ್ಯಕ್ಷ ಡಿ.ಹೇಮಂತಕುಮಾರ್, ಸದಸ್ಯರಾದ ಎಸ್.ಜಿ.ಪ್ರಶಾಂತ ರೆಡ್ಡಿ, ಚೈತ್ರ ಕೆಂಪೇಗೌಡ, ಕೆ.ಬಾಬು, ಮಲ್ಲೇಶ್, ಇಂದ್ರಮ್ಮ ರಾಮಾಂಜಿನಪ್ಪ, ಟಿ.ರಮೇಶ್ ಮತ್ತಿತರರು ಉಪಸ್ಥಿತರಿದ್ದರು.

ಯಲಹಂಕ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ರಸ್ತೆ ಮತ್ತಿತರ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಎಸ್‌ಆರ್‌ವಿಶ್ವನಾಥ್ ಚಾಲನೆ ನೀಡಿದರು.

ನಿರ್ಲಕ್ಷ್ಯದಿಂದ ಸಾವು: ವೈದ್ಯರ ಶಿಕ್ಷೆ ಪ್ರಮಾಣ ಇಳಿಕೆ ಪ್ರಸ್ತಾವ

ನವದೆಹಲಿ(ಪಿಟಿಐ): ಚಿಕಿತ್ಸೆ ವೇಳೆ ನಿರ್ಲಕ್ಷ್ಯದ ಕಾರಣದಿಂದ ರೋಗಿಯ ಸಾವು ಸಂಭವಿಸಿದ ಸಂದರ್ಭದಲ್ಲಿ ವೈದ್ಯರಿಗೆ ವಿಧಿಸುತ್ತಿದ್ದ ಜೈಲು ಶಿಕ್ಷೆ ಅವಧಿಯನ್ನು ಕಡಿಮೆಗೊಳಿಸುವ ಅಂಶವನ್ನು ಲೋಕಸಭೆಯಲ್ಲಿ ಬುಧವಾರ ಅಂಗೀಕರಿಸಲಾದ ಭಾರತೀಯ ನ್ಯಾಯ (ಎರಡನೆಯ) ಸಂಹಿತೆ ತಿದ್ದುಪಡಿ ಮಸೂದೆಯು ಒಳಗೊಂಡಿದೆ.

ನಿರ್ಲಕ್ಷ್ಯದಿಂದಾಗಿ ರೋಗಿಯು ಮೃತಪಟ್ಟರೆ ಶಿಕ್ಷಾರ್ಹ ಹತ್ಯೆ ಎಂದು ಪರಿಗಣಿಸಲಾಗುತ್ತದೆ. ತಿದ್ದುಪಡಿ ಮಸೂದೆಯು ಈ ಜೈಲು ಶಿಕ್ಷೆಯನ್ನು ಎರಡು ವರ್ಷಗಳಿಗೆ ಇಳಿಸುವ ಅವಕಾಶವನ್ನು ಒಳಗೊಂಡಿದೆ.

ಮಸೂದೆ ಮಂಡಿಸಿ ಮಾತನಾಡಿದ ಕೇಂದ್ರ ಗೃಹ ಸಚಿವ ಅಮಿತ್ ಶಾ, ಈ ವಿಚಾರವಾಗಿ ಭಾರತೀಯ ವೈದ್ಯಕೀಯ ಸಂಘವು ತಮಗೆ ಪತ್ರ ಬರೆದು, ಅಹವಾಲು ಸಲ್ಲಿಸಿತ್ತು ಎಂದು ಹೇಳಿದರು.

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಕಚೇರಿಗೆ ಮುತ್ತಿಗೆ ಹಾಕಲು ಯತ್ನ

ವಿಷ್ಣುವರ್ಧನ್ ಪುಣ್ಯಭೂಮಿ ಅಭಿವೃದ್ಧಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ವಿಷ್ಣುವರ್ಧನ್ ಅವರ ಅಂತ್ಯಸಂಸ್ಕಾರ ನಡೆದ ಸ್ಥಳವನ್ನು ಪುಣ್ಯಭೂಮಿಯಾಗಿ ಅಭಿವೃದ್ಧಿಪಡಿಸುವ ವಿಚಾರದಲ್ಲಿ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಮಂಡಳಿ ಮೌನ ವಹಿಸಿದೆ ಎಂದು ಆರೋಪಿಸಿ, ವಿವಿಧ ಸಂಘಟನೆಗಳು ಬುಧವಾರ ಪ್ರತಿಭಟನೆ ನಡೆಸಿದವು. ಬಳಿಕ, ಪ್ರತಿಭಟನಕಾರರು ಮಂಡಳಿಗೆ ಮುತ್ತಿಗೆ ಹಾಕಲು ಯತ್ನಿಸಿದರು.

ಅಂಬೇಡ್ಕರ್ ಮಾನವ ಹಕ್ಕುಗಳ ಸಮಿತಿ, ಕನ್ನಡ ಪರ ಸಂಘಟನೆಗಳ ಒಕ್ಕೂಟ ಹಾಗೂ ವಿಷ್ಣುವರ್ಧನ್ ಅಭಿಮಾನಿಗಳಿಂದ ಪ್ರತಿಭಟನೆ ನಡೆಯಿತು. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಗೆ ಬೀಗ ಹಾಕಿ ಆಕ್ರೋಶ ಹೊರಹಾಕಿದರು.

ಅಭಿಮಾನ್ ಸ್ಟುಡಿಯೊ ಆವರಣದಲ್ಲಿ ವಿಷ್ಣುವರ್ಧನ್ ಅವರ ಸ್ಮಾರಕ ನಿರ್ಮಾಣ ಕುರಿತು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಪದಾಧಿಕಾರಿಗಳು ಸರ್ಕಾರದ ಜೊತೆ ಮಾತುಕತೆ ನಡೆಸದೇ ಮೌನ ವಹಿಸಿದ್ದಾರೆ. ಹೋರಾಟದಲ್ಲೂ ಭಾಗಿಯಾಗುತ್ತಿಲ್ಲ ಎಂದು ದೂರಿದರು.

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಕಚೇರಿ ಎದುರು ಬುಧವಾರ ವಿವಿಧ ಸಂಘಟನೆಗಳು ಪ್ರತಿಭಟನೆ ನಡೆಸಿದವು – ಪ್ರಜಾವಾಣಿ ಚಿತ್ರ

ಅಂಬೇಡ್ಕರ್ ಮಾನವ ಹಕ್ಕುಗಳ ಸಮಿತಿ ಅಧ್ಯಕ್ಷ ಕ್ರಾಂತಿರಾಜು ಮಾತನಾಡಿ, 'ಕನ್ನಡ ಚಿತ್ರರಂಗಕ್ಕೆ ರಾಜ್‌ಕುಮಾರ್ ಹಾಗೂ ವಿಷ್ಣುವರ್ಧನ್ ಎರಡು ಕಣ್ಣುಗಳು ಇದ್ದಂತೆ. ವಿಷ್ಣುವರ್ಧನ್ ಅವರದ್ದು ಸರಳ ವ್ಯಕ್ತಿತ್ವವಾಗಿತ್ತು. ಮಾದರಿ ವ್ಯಕ್ತಿಯಾಗಿ ಜೀವನ ಸಾಗಿಸಿದ್ದರು. ಅವರು ಮೃತಪಟ್ಟು 14 ವರ್ಷ ಕಳೆದಿದೆ. ಅಂತಿಮ ಸಂಸ್ಕಾರ ಅಭಿಮಾನ್ ಸ್ಟುಡಿಯೊ ಆವರಣದಲ್ಲಿ ನೇರವೇರಿತ್ತು. ಆ ಜಾಗದಲ್ಲಿ ಸ್ಮಾರಕವಾಗಬೇಕು ಎಂಬ ಬೇಡಿಕೆಯಿತ್ತು. ಆದರೆ, ಸರ್ಕಾರ ಯಾವುದೇ ತೀರ್ಮಾನ ಕೈಗೊಂಡಿಲ್ಲ. ನಿರ್ಲಕ್ಷ್ಯ ತೋರುತ್ತಿದೆ' ಎಂದು ದೂರಿದರು.

ಕನ್ನಡ ಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ನಟರಾಜ್ ಬೊಮ್ಮಸಂದ್ರ, ವೈಭವ ಕರ್ನಾಟಕ ಸಂಘಟನೆಯ ಅಧ್ಯಕ್ಷ ವೆಂಕಟೇಶ್ ಗೌಡ ಸೇರಿದಂತೆ ನೂರಾರು ಮಂದಿ ಮುತ್ತಿಗೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಗ್ರಾಮಸಭೆಗೆ ವಿವಿಧ ಇಲಾಖೆಗಳ ಅಧಿಕಾರಿಗಳ ಗೈರು

ಬಸ್ ನಿಲುಗಡೆಗೆ ಶಿಕ್ಷಕರ ಮನವಿ

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: ಬಸ್‌ಗಳ ಕೊರತೆಯಿಂದಾಗಿ ಸರಿಯಾದ ಸಮಯಕ್ಕೆ ಶಾಲೆಗೆ ಹೋಗಲು ತೊಂದರೆಯಾಗುತ್ತಿದ್ದು, ಮಧುಗಿರಿ ಕಡೆಯಿಂದ ಬರುವ ಕೆಎಸ್‌ಆರ್‌ಟಿಸಿ ಬಸ್‌ಗಳನ್ನು ನರಸೀಪುರ ತೋಪಿನಲ್ಲಿ ನಿಲುಗಡೆ ಮಾಡಿಸಲು ಪಂಚಾಯ್ತಿ ಆಡಳಿತ ನೆರವಾಗಬೇಕು ಎಂದು ಶಿಕ್ಷಕರು ಗ್ರಾಮಸಭೆಗೆ ಮನವಿ ಮಾಡಿದರು.

ನೆಲಮಂಗಲ ತಾಲ್ಲೂಕಿನ ನರಸೀಪುರ ಗ್ರಾಮ ಪಂಚಾಯ್ತಿಯಲ್ಲಿ ಬುಧವಾರ ನಡೆದ ಪ್ರಸಕ್ತ ಸಾಲಿನ ಗ್ರಾಮಸಭೆಯಲ್ಲಿ ಶಿಕ್ಷಕರು ಬಸ್‌ಗಳ ಕೊರತೆಯಿಂದಾಗುವ ಸಮಸ್ಯೆಗಳ ಕುರಿತು ವಿವರಿಸಿದರು.

'ಪ್ರತಿ ದಿನ 50ಕ್ಕೂ ಹೆಚ್ಚು ಶಿಕ್ಷಕರು ಹಾಗೂ 200ಕ್ಕೂ ಅಧಿಕ ವಿದ್ಯಾರ್ಥಿಗಳು ಇಲ್ಲಿಂದ ಬೇರೆ ಬೇರೆ ಕಡೆಗೆ ಸಂಚರಿಸುತ್ತಾರೆ. ಸರಿಯಾದ ಸಮಯಕ್ಕೆ ಬಸ್ ಸಿಗದೇ, ಸಕಾಲಕ್ಕೆ ಶಾಲಾ ಕಾಲೇಜುಗಳಿಗೆ ಹೋಗಲು ತೊಂದರೆಯಾಗಿದೆ. ಹಾಗಾಗಿ, ಮಧುಗಿರಿ ಕಡೆಯಿಂದ ಸಂಚರಿಸುವ ಕೆಎಸ್‌ಆರ್‌ಟಿಸಿ ಬಸ್‌ಗಳನ್ನು ನರಸೀಪುರ ತೋಪಿನಲ್ಲಿ ನಿಲುಗಡೆ ಮಾಡಿಸಲು ಪಂಚಾಯ್ತಿ ಆಡಳಿತ ನೆರವಾಗಬೇಕು' ಎಂದು ಮನವಿ ಮಾಡಿದರು.

ಗ್ರಾಮಸಭೆಗೆ ಕೆಲವೇ ಕೆಲವು ಇಲಾಖೆಗಳ ಅಧಿಕಾರಿಗಳು ಬಂದಿದ್ದಕ್ಕೆ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದರು. ಪಂಚಾಯಿತಿ ಮುಂದೆಯೇ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ. ಅಬಕಾರಿ ಇಲಾಖೆ ಏನು ಮಾಡುತ್ತಿದೆ. ನರಸೀಪುರದಲ್ಲಿರುವ ನ್ಯಾಯಬೆಲೆ ಅಂಗಡಿಯವರು ಒಂದು ದಿನ ಮಾತ್ರ ಪಡಿತರ ವಿತರಿಸುತ್ತಾರೆ. ಸಮಸ್ಯೆ ಕೇಳಲು ಇಲಾಖೆಯ ಯಾವ ಅಧಿಕಾರಿಗಳೂ ಸಭೆಗೆ ಬಂದಿಲ್ಲ ಎಂದು ಜನರು ದೂರಿದರು.

ಬೆಸ್ಕಾಂನಿಂದ ಟ್ರಾನ್ಸ್‌ಫಾರ್ಮರ್‌ಗಳಿಗೆ ಬೇಲಿ ಹಾಕದಿರುವುದು, ಬಾಗಿದ ತಂತಿಗಳ ಬಗ್ಗೆ, ಕೃಷಿ ಇಲಾಖೆಯಿಂದ ಯಂತ್ರಧಾರೆ, ಟಾರ್ಪಲ್ ವಿತರಣೆ, ಆರೋಗ್ಯ ಕೇಂದ್ರದಲ್ಲಿ ವೈದ್ಯರ ಕೊರತೆ ಸಮಸ್ಯೆಗಳ ಕುರಿತು ಗ್ರಾಮಸಭೆಯಲ್ಲಿ ಪ್ರಸ್ತಾಪವಾಯಿತು.

ಸಭೆಗೆ ಹಲವು ಇಲಾಖೆಗಳ ಅಧಿಕಾರಿಗಳು ಗೈರು ಆಗಿದ್ದು, ಆ ಇಲಾಖೆಗಳಿಗೆ, ಪಂಚಾಯಿತಿ ಮೂಲ ನೋಟಿಸ್ ನೀಡಲಾಗುವುದು. ಮುಂದೆ ಪೂರ್ಣ ಹಾಜರಾತಿ ಇರುವಂತೆ ನೋಡಿಕೊಳ್ಳಲಾಗುವುದು.
ಶಾಂತಾಬಾಯಿ, ನೋಡಲ್ ಅಧಿಕಾರಿ

ಸಿಸಿಟಿವಿ ಅಳವಡಿಕೆ, ಶೌಚಾಲಯ ದುರಸ್ತಿ, ಬೀದಿ ದೀಪಗಳ ಅಳವಡಿಕೆ ಸೇರಿ ಇನ್ನಿತರ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಲಾಗುವುದು
ರಾಮಾಂಜಿನಯ್ಯ
ಅಧ್ಯಕ್ಷ, ಗ್ರಾಮ ಪಂಚಾಯಿತಿ,ನರಸೀಪುರ

ಕೋವಿಡ್: ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಸಲಹಾ ಸಮಿತಿ ಸಭೆ ಇಂದು

‘ಜೆಎನ್.1 ಅಪಾಯಕಾರಿಯಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಹೊಸ ತಳಿ ಜೆಎನ್.1 ಸೋಂಕು ವೇಗವಾಗಿ ಹರಡುತ್ತಿದ್ದರೂ ಅದು ಅಪಾಯಕಾರಿ ಅಲ್ಲ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಕೋವಿಡ್ ಹೊಸ ತಳಿ ಹರಡುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಅವರು ಬುಧವಾರ ನಡೆಸಿದ ವರ್ಚುವಲ್ ಸಭೆಯ ಬಳಿಕ ದಿನೇಶ್ ಅವರು ಸುದ್ದಿಗಾರರ ಜತೆ ಮಾತನಾಡಿದರು.

ಕಳೆದ 24 ಗಂಟೆಗಳ ಅವಧಿಯಲ್ಲಿ 1,020 ಆರ್‌ಟಿಪಿಸಿಆರ್ ಪರೀಕ್ಷೆ ನಡೆಸಲಾಗಿದೆ. ಇದು ದೇಶದಲ್ಲೇ ಅತ್ಯಧಿಕ ಸಂಖ್ಯೆಯ ಪರೀಕ್ಷೆ ಎಂದರು.

ಶನಿವಾರದ ವೇಳೆಗೆ ಪರೀಕ್ಷೆ ಸಂಖ್ಯೆಯನ್ನು 5,000 ಕ್ಕೆ ಹೆಚ್ಚಿಸಬೇಕು ಎಂಬ ಗುರಿ ನಿಗದಿ ಮಾಡಲಾಗಿದೆ. ಕನಿಷ್ಠ 50 ಮಾದರಿಗಳನ್ನು ಸಂಗ್ರಹಿಸಿದರೆ ಜೀನೋಮ್ ಸೀಕ್ವೆನ್ಸಿಂಗ್‌ಗೆ ಅನುಕೂಲವಾಗುತ್ತದೆ. ವಿಶ್ವದ 36 ರಾಷ್ಟ್ರಗಳು ಮತ್ತು ದೇಶದ ಮೂರು ರಾಜ್ಯಗಳಲ್ಲಿ ಸೋಂಕು ತ್ವರಿತಗತಿಯಲ್ಲಿ ಹರಡುತ್ತಿದೆ ಎಂದು ಅವರು ಹೇಳಿದರು.

ರಾಜ್ಯದಲ್ಲಿ ಆರ್‌ಟಿಪಿಸಿಆರ್, ಪಿಪಿಪಿ ಮತ್ತಿತರ ಪರಿಕರಗಳು ಮತ್ತು ಔಷಧಗಳು ಒಂದು ತಿಂಗಳಿಗೆ ಹಾಗೂ ಮೂರು ತಿಂಗಳಿಗೆ ಎಷ್ಟು ಬೇಕಾಗಬಹುದು ಎಂಬುದರ ಪ್ರತ್ಯೇಕ ಯೋಜನೆ ತಯಾರಿಸಲಾಗುತ್ತಿದೆ. ಸದ್ಯಕ್ಕೆ ಇವುಗಳ ದಾಸ್ತಾನು ಇದ್ದು, ಕೊರತೆ ಇಲ್ಲ ಎಂದರು.

‘ಪಿಎಂ ಕೇರ್ ಅಡಿ ಪೂರೈಸಿದ ವೆಂಟಿಲೇಟರ್‌ಗಳ ನಿರ್ವಹಣಾ ವೆಚ್ಚ ದುಬಾರಿ ಇದ್ದು, ಕಡಿಮೆ ಮಾಡುವಂತೆ ಕೋರಿದ್ದೇವೆ. ಐಸಿಎಂಆರ್ ಪೋರ್ಟಲ್‌ನಲ್ಲಿ ಕೋವಿಡ್ ದತ್ತಾಂಶಗಳು ಸರಿಯಾಗಿ ಅಪ್‌ಡೇಟ್ ಆಗುತ್ತಿಲ್ಲ ಎಂಬುದನ್ನು ಕೇಂದ್ರ ಸಚಿವರ ಗಮನಕ್ಕೆ ತಂದಾಗ ಅವರು ಸ್ಪಂದಿಸಿದರು. ಈ ಸಂಬಂಧ ಸೂಕ್ತ ಕ್ರಮ ತೆಗೆದುಕೊಳ್ಳುವುದಾಗಿ ಭರವಸೆ ನೀಡಿದ್ದಾರೆ’ ಎಂದು ದಿನೇಶ್ ಹೇಳಿದರು.

ಮುಖ್ಯಮಂತ್ರಿ ಜತೆ ಗುರುವಾರ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸಭೆ ನಡೆಯಲಿದೆ. ಈ ಸಭೆಯಲ್ಲಿ ಕೋವಿಡ್‌ಗೆ ಸಂಬಂಧಿಸಿದ ಎಲ್ಲಾ ವಿಷಯಗಳು ಸಮಗ್ರವಾಗಿ ಚರ್ಚೆ ಆಗಲಿದೆ ಎಂದು ಅವರು ಹೇಳಿದರು.

92 ಸಕ್ರಿಯ ಪ್ರಕರಣಗಳು

ರಾಜ್ಯದಲ್ಲಿ ಬುಧವಾರ 20 ಹೊಸ ಕೋವಿಡ್ ಪ್ರಕರಣಗಳು ದೃಢಪಟ್ಟಿವೆ. ಸಕ್ರಿಯ ಪ್ರಕರಣಗಳ ಸಂಖ್ಯೆ 92ಕ್ಕೆ ಏರಿಕೆಯಾಗಿದೆ.

ಕೊರೊನಾ ಸೋಂಕಿತರಲ್ಲಿ ಇಬ್ಬರು ಮೃತಪಟ್ಟಿರುವುದು ದೃಢಪಟ್ಟಿದೆ. ಎರಡೂ ಮರಣ ಪ್ರಕರಣಗಳು ಬೆಂಗಳೂರಿನಲ್ಲಿಯೇ ವರದಿಯಾಗಿದೆ. ಹೃದಯ ಸಂಬಂಧಿ ಸಮಸ್ಯೆ ಹೊಂದಿದ್ದ 44 ವರ್ಷದ ಪುರುಷ ನ.23ರಂದು ಆಸ್ಪತ್ರೆಗೆ ದಾಖಲಾಗಿದ್ದರು. ಅವರು ಡಿ.16ರಂದು ಇಲ್ಲಿನ ಸರ್ಕಾರಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ತೀವ್ರ ಉಸಿರಾಟದ ಸಮಸ್ಯೆ ಹೊಂದಿದ್ದ 76 ವರ್ಷದ ಹಿರಿಯರೊಬ್ಬರು, ಸೆ.12ರಂದು ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು. ಅವರು ಡಿ.17ರಂದು ಮೃತಪಟ್ಟಿದ್ದಾರೆ. ಕೋವಿಡ್ ಪರೀಕ್ಷೆಯಲ್ಲಿ ಇವರು ಸೋಂಕಿತರಾಗಿದ್ದರು ಎನ್ನುವುದು ದೃಢಪಟ್ಟಿದ್ದು, ಇಬ್ಬರೂ ಕೋವಿಡ್ ಲಸಿಕೆ ಪಡೆದವರಾಗಿದ್ದಾರೆ.

24 ಗಂಟೆಗಳ ಅವಧಿಯಲ್ಲಿ ರಾಜ್ಯದಲ್ಲಿ 808 ಕೋವಿಡ್ ಪರೀಕ್ಷೆ ನಡೆಸಲಾಗಿದೆ. ಸೋಂಕು ದೃಢ ಪ್ರಮಾಣ ಶೇ 2.47ರಷ್ಟು ವರದಿಯಾಗಿದೆ. ಬೆಂಗಳೂರಿನಲ್ಲಿ 359 ಮಂದಿಗೆ ಕೋವಿಡ್ ಪರೀಕ್ಷೆ ನಡೆಸಲಾಗಿದ್ದು, 19 ಮಂದಿಗೆ ಸೋಂಕು ದೃಢಪಟ್ಟಿದೆ. ಬಳ್ಳಾರಿಯಲ್ಲಿ ಎರಡು ಹಾಗೂ ದಕ್ಷಿಣ ಕನ್ನಡದಲ್ಲಿ ಒಂದು ಪ್ರಕರಣ ವರದಿಯಾಗಿದೆ. ಸೋಂಕಿತರಲ್ಲಿ 72 ಮಂದಿ ಮನೆ ಆರೈಕೆಗೆ ಒಳಗಾದರೆ, 20 ಮಂದಿಗೆ ಆಸ್ಪತ್ರೆ ಗಳಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಏಳು ಮಂದಿ ತೀವ್ರ ನಿಗಾ ಘಟಕದಲ್ಲಿ ಇದ್ದಾರೆ. ಸೋಂಕಿತರಲ್ಲಿ 5 ಮಂದಿ ಬುಧವಾರ ಚೇತರಿಸಿಕೊಂಡಿದ್ದಾರೆ.

ಒಂದು ಸಾವು

64 ವರ್ಷ ವಯಸ್ಸಿನ ಪುರುಷರೊಬ್ಬರು ಕೋವಿಡ್‌ನಿಂದ ಮೃತಪಟ್ಟಿದ್ದು, ಇವರು ಹೃದಯ, ಶ್ವಾಸಕೋಶ, ಅಧಿಕ ರಕ್ತದೊತ್ತಡ, ಕ್ಷಯ ಸೇರಿ ಹಲವು ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದರು ಎಂದು ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಚಾಮರಾಜಪೇಟೆಯ ವರಾದ ಅವರ ಸಾವಿಗೆ ಜೆಎನ್ 1 ತಳಿ ಕಾರಣವಲ್ಲ. ಕೋವಿಡ್ ಸೋಂಕು ದೃಢಪಟ್ಟಿತ್ತು ಎಂದರು.

ಕೋವಿಡ್: 1,500 ಪರೀಕ್ಷೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ತಡೆಗೆ ಮುಂಜಾಗ್ರತಾ ಕ್ರಮವಾಗಿ ನಗರದಲ್ಲಿ ಪ್ರತಿನಿತ್ಯ 1,500 ಕೋವಿಡ್ ಪರೀಕ್ಷೆಗಳನ್ನು ನಡೆಸಬೇಕು ಎಂದು ಬಿಬಿಎಂಪಿ ಅಧಿಕಾರಿಗಳಿಗೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸೂಚಿಸಿದರು.

ಕೇರಳದಲ್ಲಿ ಕೊರೊನಾ ವೈರಾಣುವಿನ ರೂಪಾಂತರಿ ಜೆಎನ್.1 ಪತ್ತೆಯಾಗಿರುವ ಕಾರಣ ನಗರದಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಬಿಬಿಎಂಪಿ ಹಾಗೂ ಇಲಾಖೆ ಅಧಿಕಾರಿಗಳ ಜತೆಗೆ ಅವರು ಬುಧವಾರ ಸಭೆ ನಡೆಸಿದರು.

ಈಗಾಗಲೇ ಮಾಡಿಕೊಂಡಿರುವ ಸಿದ್ಧತೆಗಳ ಬಗ್ಗೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಂದ ಮಾಹಿತಿ ಪಡೆದುಕೊಂಡ ಅವರು, ಕೋವಿಡ್ ನಿಯಂತ್ರಣಕ್ಕೆ ಸಂಬಂಧಿಸಿದಂತೆ ವಿಶೇಷ ನಿಗಾ ಇರಿಸಲು ಸೂಚಿಸಿದರು. ಇಲಾಖೆ ಪ್ರಧಾನ ಕಾರ್ಯದರ್ಶಿ ಟಿ.ಕೆ. ಅನಿಲ್ ಕುಮಾರ್, ಆಯುಕ್ತ ಡಿ. ರಂದೀಪ್, ಎನ್‌ಎಚ್‌ಎಂ ನವೀನ್ ಭಟ್ ಇದ್ದರು.

‘ಬಿಬಿಎಂಪಿ ವ್ಯಾಪ್ತಿಯ ಆಸ್ಪತ್ರೆಗಳಲ್ಲಿ ವೈದ್ಯಕೀಯ ಆಮ್ಲಜನಕ ಸಂಪರ್ಕ ಹೊಂದಿರುವ ಹಾಸಿಗೆಗಳ ಜತೆಗೆ ತೀವ್ರ ನಿಗಾ ಘಟಕ (ಐಸಿಯು) ಹಾಸಿಗೆಗಳು ಕೊರತೆಯಾಗದಂತೆ ನೋಡಿಕೊಳ್ಳಬೇಕು. ಮುಖಗವಸು ಧರಿಸುವ ಬಗ್ಗೆ ಜನರಿಗೆ ಜಾಗೃತಿ ಮೂಡಿಸಬೇಕು’ ಎಂದು ಅಧಿಕಾರಿಗಳಿಗೆ ತಿಳಿಸಿದರು.

ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ರೂಪಾಂತರಿ ವೈರಾಣು ಪತ್ತೆಗೆ ಸಂಬಂಧಿಸಿದಂತೆ ವೈರಾಣುವಿನ ವಂಶವಾಹಿ ಸಂರಚನಾ ವಿಶ್ಲೇಷಣೆ (ಜಿನೋಮಿಕ್ ಸಿಕ್ವೆನ್ಸಿಸ್) ಪರೀಕ್ಷೆ ನಡೆಸಲು ರಾಜ್ಯ ಸರ್ಕಾರವೇ ನಿರ್ಧರಿಸಿದೆ. ಈ ಬಗ್ಗೆ ಕೇಂದ್ರದ ಮಾರ್ಗಸೂಚಿ ಇಲ್ಲದಿದ್ದರೂ, ವೈರಾಣುವಿನ ವಂಶವಾಹಿ ಸಂರಚನಾ ವಿಶ್ಲೇಷಣೆಗೆ ಕ್ರಮವಹಿಸಲಾಗಿದೆ. ಈ ಪರೀಕ್ಷೆಗೆ 50 ಮಾದರಿಗಳು ಅಗತ್ಯ. ಮಾದರಿ ಸಂಗ್ರಹಕ್ಕೆ ಕ್ರಮ ವಹಿಸಲಾಗಿದೆ’ ಎಂದರು.

‘ಹೊಸ ವರ್ಷದ ಆಚರಣೆಗೆ ನಿರ್ಬಂಧ ಹಾಕುವ ಬಗ್ಗೆ ಸರ್ಕಾರದ ಮುಂದೆ ಯಾವುದೇ ಪ್ರಸ್ತಾಪವಿಲ್ಲ. ಶನಿವಾರ ವೇಳೆಗೆ ಪರೀಕ್ಷೆ ಹೆಚ್ಚಿಸಿದಾಗ ಪ್ರಕರಣಗಳು ಒಂದಷ್ಟು ಹೆಚ್ಚಾಗಬಹುದು. ಪರಿಸ್ಥಿತಿ ನೋಡಿಕೊಂಡು ಮುಂದಿನ ನಿರ್ಧಾರ ಕೈಗೊಳ್ಳಲಾಗುತ್ತದೆ’ ಎಂದು ಹೇಳಿದರು.

ತುಮಕೂರು: ವೃದ್ಧನಿಗೆ ಜೆಎನ್.1 ಸೋಂಕು ದೃಢ

ತುಮಕೂರು: ನಗರದ ಹನುಮಂತರಪುರ ಬಡಾವಣೆಯ 66 ವರ್ಷದ ವ್ಯಕ್ತಿಯೊಬ್ಬರಿಗೆ ಕೋವಿಡ್ ರೂಪಾಂತರಿ ತಳಿ ಜೆಎನ್.1 ದೃಢಪಟ್ಟಿದೆ. ಸದ್ಯ ಅವರ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದೆ.

ಹೃದಯ ಸಮಸ್ಯೆಗೆ ಚಿಕಿತ್ಸೆ ಪಡೆಯಲು ಬೆಂಗಳೂರಿನ ಜಯದೇವ ಹೃದ್ರೋಗ ಆಸ್ಪತ್ರೆಗೆ ತೆರಳಿದ್ದ ಸಮಯದಲ್ಲಿ ಜೆಎನ್.1 ಸೋಂಕು ದೃಢಪಟ್ಟಿದೆ.

ಕೋಚ್ ರೆಸ್ಟೋರೆಂಟ್

‘ರೈಲು ಕೋಚ್ ರೆಸ್ಟೋರೆಂಟ್’ ಆರಂಭಿಸಲು ರೈಲು ಬೋಗಿಯನ್ನು ಬುಧವಾರ ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ (ಕೆಎಸ್‌ಆರ್) ರೈಲು ನಿಲ್ದಾಣಕ್ಕೆ ತರಲಾಯಿತು –ಪ್ರಜಾವಾಣಿ ಚಿತ್ರ

‘ಪ್ರಮುಖ ವಿಷಯ ಪ್ರಸ್ತಾಪಕ್ಕೆ ಅವಕಾಶ ಸಿಗಲಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಳಗಾವಿಯ ವಿಧಾನಮಂಡಲ ಅಧಿವೇಶನದಲ್ಲಿ ನಾವು ಪರಿಣಾಮಕಾರಿಯಾಗಿಯೇ ಎಲ್ಲ ವಿಷಯಗಳನ್ನು ಪ್ರಸ್ತಾಪಿಸಿದ್ದೇವೆ. ಆದರೆ, ಸರ್ಕಾರವೇ ಕೆಲವು ವಿಷಯಗಳ ಪ್ರಸ್ತಾಪಕ್ಕೆ ಅವಕಾಶ ನೀಡಲಿಲ್ಲ’ ಎಂದು ವಿರೋಧಪಕ್ಷದ ನಾಯಕ ಆರ್.ಅಶೋಕ ದೂರಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಡಿ.ಕೆ.ಶಿವಕುಮಾರ್ ಮತ್ತು ಜಮೀರ್ ಅಹಮದ್ ಪ್ರಕರಣಗಳ ಚರ್ಚೆಗೆ ಅವಕಾಶವನ್ನೇ ಕೊಡಲಿಲ್ಲ ಎಂದರು.

‘ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ನಿಮಗೆ ಏಕೆ ಸಾಧ್ಯವಾಗಲಿಲ್ಲ’ ಎಂಬ ಸುದ್ದಿಗಾರರ ಪ್ರಶ್ನೆಗೆ, ‘ನಾವು ಬಯಸಿದ ಎಲ್ಲ ವಿಷಯಗಳನ್ನೂ ಪ್ರಾಮಾಣಿಕವಾಗಿ ಪ್ರಸ್ತಾಪಿಸಿದ್ದೇವೆ’ ಎಂದರು.

‘ನಾಯಕರ ಮಧ್ಯೆ ಯಾವುದೇ ಸಮಸ್ಯೆಗಳಿಲ್ಲ. ಸಣ್ಣ ಪುಟ್ಟ ಸಮಸ್ಯೆಗಳಿದ್ದರೆ ಅವುಗಳನ್ನು ಪಕ್ಷದ ವೇದಿಕೆಯಲ್ಲೇ ನಾಲ್ಕು ಗೋಡೆಗಳ ಮಧ್ಯೆ ಬಗೆಹರಿಸಿಕೊಳ್ಳುತ್ತೇವೆ. ಮುಖ್ಯಮಂತ್ರಿ ಹುದ್ದೆಗಾಗಿನ ಕಿತ್ತಾಟ ಕಾಂಗ್ರೆಸ್ ಪಕ್ಷದಲ್ಲಿ ಇನ್ನೂ ಮುಗಿದಿಲ್ಲ’ ಎಂದು ಹೇಳಿದರು.

‘ಜೆಡಿಎಸ್ ಮುಖಂಡ ಎಚ್.ಡಿ.ಕುಮಾರಸ್ವಾಮಿ ಅವರು ಹೇಳಿರುವಂತೆ ಲೋಕಸಭೆ ಚುನಾವಣೆ ಬಳಿಕ ಸರ್ಕಾರ ಪತನವಾಗಬಹುದು. ಕರ್ನಾಟಕ ಕಾಂಗ್ರೆಸ್‌ನಲ್ಲಿ ಅಜಿತ್ ಪವಾರ್ ಯಾರು ಆಗುತ್ತಾರೆ ಎಂಬುದನ್ನು ಕಾದು ನೋಡಬೇಕು. ಸರ್ಕಾರ ಉರುಳುತ್ತದೆ ಎಂದು ನಾನು ಹೇಳುತ್ತಿಲ್ಲ. ಆಪರೇಷನ್ ಮಾಡುವ ಉದ್ದೇಶವೂ ಬಿಜೆಪಿಗೆ ಇಲ್ಲ. ಕುಮಾರಸ್ವಾಮಿ ಹೇಳಿದ್ದನ್ನು ಮಾತ್ರ ತಿಳಿಸಿದ್ದೇನೆ’ ಎಂದು ಅಶೋಕ ಹೇಳಿದರು.

ಅಧಿವೇಶನ ತೃಪ್ತಿ ತಂದಿಲ್ಲ: ಎಸ್‌.ಆರ್. ವಿಶ್ವನಾಥ್

‘ಬೆಳಗಾವಿ ಅಧಿವೇಶನ ನನಗೆ ತೃಪ್ತಿ ತಂದಿಲ್ಲ. ವಿಪಕ್ಷವಾಗಿ ನಾವು ಇನ್ನಷ್ಟು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಬಹುದಿತ್ತು’ ಎಂದು ಬಿಜೆಪಿ ಶಾಸಕ ಎಸ್.ಆರ್.ವಿಶ್ವನಾಥ್ ಹೇಳಿದ್ದಾರೆ.

ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಭೇಟಿಯ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

‘ನಾವು ಸಾಕಷ್ಟು ವಿಷಯಗಳನ್ನು ಅಧಿವೇಶನದಲ್ಲಿ ಪ್ರಸ್ತಾಪಿಸಬಹುದಿತ್ತು. ಆದರೆ, ವಿರೋಧ ಪಕ್ಷವಾಗಿ ನಮ್ಮ ನಿರ್ವಹಣೆ ನಿರೀಕ್ಷೆ ಮಟ್ಟಕ್ಕೆ ಇರಲಿಲ್ಲ. ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಬಹುದಾದ ಹಲವು ವಿಷಯಗಳಿದ್ದವು. ಉತ್ತರಕರ್ನಾಟಕ ಬಗ್ಗೆ ಚರ್ಚೆ ಎಂದು ರಾಜೀ ಮಾಡಿಕೊಂಡೆವು’ ಎಂದು ಹೇಳಿದರು.

‘ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಏಳು ತಿಂಗಳಾಗಿದೆ. ಆರ್.ಅಶೋಕ ಅವರು ಹೊಸದಾಗಿ ವಿರೋಧಪಕ್ಷದ ನಾಯಕರಾಗಿದ್ದಾರೆ. ಅವರು ಇನ್ನೂ ಸುಧಾರಣೆ ಆಗಬೇಕಾಗಿದೆ. ನಮ್ಮಲ್ಲಿ ನಾಯಕತ್ವದ ಕೊರತೆ ಇಲ್ಲ’ ಎಂದರು.

‘ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸು ಎಂದು ಯಡಿಯೂರಪ್ಪ ಹಿಂದೊಮ್ಮೆ ಹೇಳಿದ್ದಾಗ ಓಡಿ ಹೋಗಿದ್ದೆ. ಚಿಕ್ಕಬಳ್ಳಾಪುರ ಕ್ಷೇತ್ರಕ್ಕೆ ನನ್ನ ಮಗನಿಗೆ ಟಿಕೆಟ್ ಕೊಡುವಂತೆ ಕೇಳಿದ್ದೇನೆ. ಸರ್ವೆ ಮಾಡಲಿ. ಆ ಬಳಿಕ ಯಾರಿಗೆ ಬೇಕಾದರೂ ಕೊಡಲಿ’ ಎಂದರು.

ನಟಿ ಹೇಮಾ ಚೌಧರಿಗೆ ಶಸ್ತ್ರಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖ್ಯಾತ ಚಿತ್ರನಟಿ ಹೇಮಾ ಚೌಧರಿ ಅವರು ಜಯನಗರದ ಅಪೊಲೊ ಆಸ್ಪತ್ರೆಯಲ್ಲಿ ಬುಧವಾರ ಮೆದುಳಿನ ಶಸ್ತ್ರಚಿಕಿತ್ಸೆಗೆ ಒಳಗಾದರು.

ಎರಡು ದಿನಗಳ ಹಿಂದೆ ಹೇಮಾ ಚೌಧರಿ ಅವರಿಗೆ ಬ್ರೈನ್ ಹ್ಯಾಮರೇಜ್ ಆಗಿತ್ತು. ಹೀಗಾಗಿ ಅವರನ್ನು ಆಸ್ಪತ್ರೆಗೆ ಸೇರಿಸಿ ತೀವ್ರ ನಿಗಾ ಘಟಕದಲ್ಲಿ ಇರಿಸಲಾಗಿತ್ತು ಎಂದು ಕುಟುಂಬದ ಮೂಲಗಳು ಹೇಳಿವೆ. ಕೆಲ ಕಾಲ ಅವರು ಚಿಕಿತ್ಸೆಗೆ ಸರಿಯಾಗಿ ಸ್ಪಂದಿಸದೇ ಇದಿದ್ದು ಅವರ ಕುಟುಂಬ ವರ್ಗ ಹಾಗೂ ಅಭಿಮಾನಿಗಳಲ್ಲಿ ಆತಂಕ ಮೂಡಿಸಿತ್ತು.

ಹೇಮಾ ಅವರ ಪುತ್ರ ಐರ್ಲೆಂಡ್‌ನಲ್ಲಿದ್ದು, ಬುಧವಾರ ಸಂಜೆ ವೇಳೆಗೆ ಆಸ್ಪತ್ರೆಗೆ ಆಗಮಿಸಿ ತಾಯಿಯ ಯೋಗಕ್ಷೇಮ ವಿಚಾರಿಸಿದರು. 70ರ ದಶಕದಲ್ಲೇ ಚಿತ್ರರಂಗಕ್ಕೆ ಕಾಲಿಟ್ಟ ಹೇಮಾ ಕನ್ನಡ, ತೆಲುಗು, ತಮಿಳು, ಮಲಯಾಳ ಸಿನಿಮಾಗಳಲ್ಲಿ ನಟಿಸಿದ್ದಾರೆ.

ಕೆಎಸ್‌ಆರ್‌ಟಿಸಿ ಮುದ್ರಣಾಲಯ ಮೇಲ್ದರ್ಜೆಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೇಲ್ದರ್ಜೆಗೆ ಏರಿಸಲಾಗಿರುವ ಕೆಎಸ್‌ಆರ್‌ಟಿಸಿ ಮುದ್ರಣಾಲಯ ಮತ್ತು ಕ್ರೀಡಾ ಸಂಕೀರ್ಣಕ್ಕೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಬುಧವಾರ ಚಾಲನೆ ನೀಡಿದರು.

‘1952ರಲ್ಲಿ ಈ ಮುದ್ರಣಾಲಯ ಆರಂಭವಾಗಿತ್ತು. ಇದೀಗ ₹39.83 ಲಕ್ಷ ವೆಚ್ಚದಲ್ಲಿ ಕಾಂಕ್ರೀಟ್ ನೆಲಹಾಸು, ಹೆಚ್ಚುವರಿ ಬೆಳಕಿನ ವ್ಯವಸ್ಥೆಗಳನ್ನು ಮಾಡಿ ಮೇಲ್ದರ್ಜೆಗೆ ಏರಿಸಲಾಗಿದೆ. ಬಸ್ ಟಿಕೆಟ್ ಮುದ್ರಣ, ಇಟಿಎಂ–ರೋಲ್‌ಗಳು, ವಿವಿಧ ರೀತಿಯ ಪಾಸ್‌ಗಳು, ಪೂರ್ವ ಮುದ್ರಿತ ಕಂಪ್ಯೂಟರ್ ಸ್ಟೇಷನರಿ ಸೇರಿದಂತೆ ವಿವಿಧ ಲೇಖನ ಸಾಮಗ್ರಿಗಳನ್ನು ಮುದ್ರಿಸಲಾಗುತ್ತಿದೆ. ಕೆಎಸ್‌ಆರ್‌ಟಿಸಿಗೆ ಸೀಮಿತಗೊಳ್ಳದೇ, ಬಿಎಂಟಿಸಿ, ಎನ್‌ಡಬ್ಲ್ಯುಕೆಆರ್‌ಟಿಸಿ, ಕೆಕೆಆರ್‌ಟಿಸಿ ಸಂಸ್ಥೆಗಳಿಗೂ ಪೂರೈಸುತ್ತಿದೆ’ ಎಂದು ರಾಮಲಿಂಗಾರೆಡ್ಡಿ ತಿಳಿಸಿದರು.

ಬೆಂಗಳೂರಿನ ಕೆಎಸ್‌ಆರ್‌ಟಿಸಿ ಕೇಂದ್ರ ಕಚೇರಿಯ ಬಳಿ ಬುಧವಾರ ಮೇಲ್ದರ್ಜೆಗೇರಿಸಿದ ನಿಗಮದ ಮುದ್ರಣಾಲಯದಲ್ಲಿ ಪ್ರಿಂಟಿಂಗ್ ವೀಕ್ಷಿಸುತ್ತಿರುವ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ –ಪ್ರಜಾವಾಣಿ ಚಿತ್ರ

52 ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದು, 176 ವಿವಿಧ ಬಗೆಯ ಮುದ್ರಿತ ಸ್ಟೇಷನರಿಗಳನ್ನು ಸಂಚಾರ ಶಾಖೆ, ಆರ್ಥಿಕ ಶಾಖೆ, ಉಗ್ರಾಣ ಶಾಖೆಗಳಿಗೆ, ವಿವಿಧ ಇಲಾಖೆಗಳಿಗೆ ಪೂರೈಸುತ್ತಿದೆ. ಇದರಿಂದ ₹ 6 ಕೋಟಿ ಆದಾಯ ಬರುತ್ತಿದೆ. ಇದಲ್ಲದೇ ವಾರ್ಷಿಕ ಆಡಳಿತ ವರದಿ, ಲೆಕ್ಕಪರಿಶೋಧನಾ ವರದಿ, ಲೆಟರ್‌ಹೆಡ್, ವಿಸಿಟಿಂಗ್ ಕಾರ್ಡ್, ಕರಪತ್ರ, ಬ್ಯಾಡ್ಜ್, ಅಂಚೆ ಫೋಲ್ಡರ್, ಎನ್ವಲಪರ್, ಕಾಪಿಯರ್ ಪೇಪರ್‌ಗಳನ್ನು ಮುದ್ರಿಸುತ್ತಿರುವುದರಿಂದ ₹ 50 ಲಕ್ಷ ಆದಾಯ ಗಳಿಸುತ್ತಿದೆ ಎಂದು ವಿವರಿಸಿದರು.

ನಿರ್ವಾಹಕರ ಉಪಯೋಗಕ್ಕಾಗಿ ಬಳಸುವ ಟಿಕೆಟ್ ರೋಲ್ ತಯಾರಿಸುವ ಥರ್ಮಲ್ ರೋಲ್ ಸ್ಲಿಟಿಂಗ್ ಯಂತ್ರಗಳನ್ನು ಅಳವಡಿಸಲಾಗಿದೆ. ಇದರಿಂದ ₹ 8 ಕೋಟಿ ಆದಾಯ ಪಡೆಯುತ್ತಿದೆ. ಅಂಗವಿಕಲರ ಪಾಸ್, ಸಿಟಿ ಪಾಸ್, ಬ್ಲೈಂಡ್ ಪಾಸ್, ತಿಂಗಳ ಪಾಸ್‌ಗಳನ್ನು ಮುದ್ರಿಸುತ್ತಿದೆ ಎಂದರು.

ಕ್ರೀಡಾ ಸಂಕೀರ್ಣ: ಕಾರ್ಮಿಕರ ಆರೋಗ್ಯ ನಿರ್ವಹಣೆ, ಒತ್ತಡ ನಿವಾರಣೆಗಾಗಿ ಇದ್ದ ಕ್ರೀಡಾ ಸಂಕೀರ್ಣವನ್ನು ₹ 69.07 ಲಕ್ಷದಲ್ಲಿ ಅಭಿವೃದ್ಧಿ ಪಡಿಸಿ ಮೇಲ್ದರ್ಜೆಗೆ ಏರಿಸಲಾಗಿದೆ. ಶಟಲ್, ಟೇಬಲ್ ಟೆನಿಸ್, ಕೇರಂ, ಚೆಸ್ ಕ್ರೀಡೆಗಳನ್ನು ಅಳವಡಿಸಲಾಗಿದೆ. ಮರದ ನೆಲಹಾಸು, ಕಾಂಕ್ರಿಟ್ ನೆಲಹಾಸು, ಛಾವಣಿ ದುರಸ್ತಿ ಮಾಡಲಾಗಿದೆ ಎಂದು ಸಚಿವರು ತಿಳಿಸಿದರು.

ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್, ನಿರ್ದೇಶಕಿ (ಸಿಬ್ಬಂದಿ ಮತ್ತು ಜಾಗೃತ) ನಂದಿನಿ ದೇವಿ ಪಾಲ್ಗೊಂಡಿದ್ದರು.

15 ಬೊಲೆರೊ ಜೀಪುಗಳ ಸೇರ್ಪಡೆ

ಕಾರ್ಯಾಚರಣೆ ಉತ್ತಮಗೊಳಿಸಲು, ಅಪಘಾತ ಸಂದರ್ಭದಲ್ಲಿ ಬಳಸಲು, ಮಾರ್ಗ ತನಿಖಾ ಕಾರ್ಯಕ್ಕೆ ಉಪಯೋಗಿಸಲು 15 ಬೊಲೆರಪ ಜೀಪುಗಳನ್ನು ಕೆಎಸ್ ಆರ್‌ಟಿಸಿಗೆ ಸೇರ್ಪಡೆಗೊಳಿಸಲಾಯಿತು. ಅಲ್ಲಿಗೆ ಬೊಲೆರೊ ಜೀಪುಗಳ ಸಂಖ್ಯೆ 50ಕ್ಕೆ ಏರಿದೆ.

ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಹಾಗೂ ಸಾಗರ ವಿಧಾನಸಭಾ ಕ್ಷೇತ್ರದ ಶಾಸಕ ಬೇಳೂರು ಗೋಪಾಲಕೃಷ್ಣ ಅವರನ್ನು ಸನ್ಮಾನಿಸಲಾಯಿತು. ಸಂಘದ ಪ್ರಮುಖರಾದ ಸಿಂಧೂರ ಶಿವಕುಮಾರ್, ಡಾ. ರಾಜನಂದಿನಿ ಕಾಗೋಡು, ಮಾಜಿ ಸಚಿವ ಕಾಗೋಡ ತಿಮ್ಮಪ್ಪ, ರಾಜೇಂದ್ರ, ಚಿತ್ರ ನಿರ್ಮಾಪಕ ಎಸ್.ಎ. ಚಿನ್ನೇಗೌಡ, ಬಿಲ್ಲವ ಸಂಘದ ಅಧ್ಯಕ್ಷ ಎಂ. ವೇದಕುಮಾರ್ ಪಾಲ್ಗೊಂಡಿದ್ದರು

ರಾಮ ಲಲ್ಲಾ ಪ್ರಾಣ ಪ್ರತಿಷ್ಠಾಪನೆ ಖರ್ಗೆ, ಸೋನಿಯಾಗೆ ಆಹ್ವಾನ

ನವದೆಹಲಿ(ಪಿಟಿಐ): ಅಯೋಧ್ಯೆಯಲ್ಲಿ ಜನವರಿ 22ರಂದು ನಡೆಯಲಿರುವ ರಾಮ ಲಲ್ಲಾ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮಕ್ಕೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ನಾಯಕಿ ಸೋನಿಯಾ ಗಾಂಧಿ ಹಾಗೂ ಲೋಕಸಭೆಯಲ್ಲಿ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಅವರಿಗೆ ಆಹ್ವಾನ ನೀಡಲಾಗಿದೆ.

ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಆಹ್ವಾನ ನೀಡಿದೆ. ಕಾಂಗ್ರೆಸ್ ನಾಯಕರು ಕಾರ್ಯಕ್ರಮಕ್ಕೆ ಹಾಜರಾಗುವ ಸಾಧ್ಯತೆ ಕಡಿಮೆ ಎಂದು ಮೂಲಗಳು ಹೇಳಿವೆ.

ಚಂಡೀಗಢದಲ್ಲಿ ರೋಲರ್ ಹಾಕಿ ರಾಷ್ಟ್ರೀಯ ಸ್ಪರ್ಧೆ

ಕರ್ನಾಟಕಕ್ಕೆ ಒಂದು ಬೆಳ್ಳಿ, ಎರಡು ಕಂಚು

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಚಂಡೀಗಢದಲ್ಲಿ ನಡೆದ 61ನೇ ರಾಷ್ಟ್ರೀಯ ರೋಲರ್ ಹಾಕಿ ಚಾಂಪಿಯನ್‌ಷಿಪ್‌ನಲ್ಲಿ ಸಬ್ ಜೂನಿಯರ್ ಬಾಲಕಿಯರ ವಿಭಾಗದಲ್ಲಿ ಕಗ್ಗದಾಸಪುರದ ಆರ್ಯ ಮಂಜುನಾಥ್ ಅವರ ನೇತೃತ್ವದ ಕರ್ನಾಟಕ ತಂಡ ಗಮನಾರ್ಹ ಸಾಧನೆ ಮಾಡಿದೆ.

ಪಂದ್ಯದಲ್ಲಿ ಒಂದು ಬೆಳ್ಳಿ, ಎರಡು ಕಂಚು ಪದಕ ಗಳಿಸಿದೆ.

ಆರ್ಯ ಮಂಜುನಾಥ್ ಅವರ ತಂಡ ತಮಿಳುನಾಡು, ತೆಲಂಗಾಣ, ಜಮ್ಮು– ಕಾಶ್ಮೀರ ಮತ್ತು ಆಂಧ್ರಪ್ರದೇಶ ತಂಡವನ್ನು ಮಣಿಸಿತು. ನಂತರ, ಚಂಡೀಗಢದ ಜೊತೆಗೆ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಸೋಲನ್ನಪ್ಪಿತು. ಬಳಿಕ ಮೂರನೇ ಸ್ಥಾನಕ್ಕಾಗಿ ಕೇರಳ ತಂಡದ ಜೊತೆಗೆ ನಡೆದ ಹಣಾಹಣೆಯಲ್ಲಿ 3-1 ಪಾಯಿಂಟ್‌ಗಳಿಂದ ಗೆಲುವು ಸಾಧಿಸಿತು.

ತಂಡದಲ್ಲಿದ್ದವರು: ಮಾನ್ಯತಾ (ಕ್ಯಾಪ್ಟನ್), ಆರ್ಯ ಮಂಜುನಾಥ್ (ಉಪ ನಾಯಕಿ), ಯಶಸ್ವಿನಿ, ಚಿನ್ಮಯಿ, ಮಾನ್ಯ, ಅಪೂರ್ವ, ಕೀರ್ತಿ ಮುಂಡಗೋಡು, ಮಾನಸಿ ಬೆಳಗಾವಿ, ಆರಾಧ್ಯ ಮೆನನ್ ಕಾರವಾರ. ಕರ್ನಾಟಕ ತಂಡದ ಆಟಗಾರರಿಗೆ ದಿಲೀಪ್ ಹಣಬರ ತರಬೇತಿ ನೀಡಿದ್ದರು.

ಚಿನ್ನ, ಬೆಳ್ಳಿ ಗೆದ್ದ ಕಗ್ಗದಾಸಪುರದ ಆರ್ಯ ಮಂಜುನಾಥ್ ಅವರ ನೇತೃತ್ವದ ಕರ್ನಾಟಕ ತಂಡ

ಕೆಇಎ: ಪ್ರಾಂಶುಪಾಲರ ತಾತ್ಕಾಲಿಕ ಮೆರಿಟ್ ಪಟ್ಟಿ ಪ್ರಕಟ

ಬೆಂಗಳೂರು: ಸರ್ಕಾರಿ ಪದವಿ ಕಾಲೇಜುಗಳಲ್ಲಿ ಖಾಲಿ ಇರುವ 310 ಪ್ರಾಂಶುಪಾಲರ ಹುದ್ದೆಗಳಿಗೆ ಆಯ್ಕೆಯಾದವರ ತಾತ್ಕಾಲಿಕ ಮೆರಿಟ್ ಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಬುಧವಾರ ರಾತ್ರಿ ಪ್ರಕಟಿಸಿದೆ.

ಒಟ್ಟು 812 ಮಂದಿಯ ಮೆರಿಟ್ ಪಟ್ಟಿಯನ್ನು ಕೆಇಎ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ್ದು, ಆಕ್ಷೇಪಣೆ ಸಲ್ಲಿಸಲು ಒಂದು ವಾರ ಸಮಯ ನೀಡಲಾಗಿದೆ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಒಂದೇ ರೀತಿಯ ಅಂಕ ಮತ್ತು ಒಂದೇ ರೀತಿಯ ಜನ್ಮ ದಿನಾಂಕ ಇರುವವರು ಹಲವರು ಇದ್ದು ಅಂತಹವರಿಗೆ ರ‍್ಯಾಂಕ್ ನೀಡುವುದು ಕಷ್ಟ ಆಗಿದೆ. ಹೀಗಾಗಿ ಈ ವಿಷಯದಲ್ಲಿ ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳಬೇಕು ಎಂಬುದರ ಬಗ್ಗೆ ಸರ್ಕಾರದಿಂದ ಸಲಹೆ ಪಡೆಯಲಾಗುವುದು ಎಂದು ಅವರು ವಿವರಿಸಿದ್ದಾರೆ.

ಒಟ್ಟು 64 ಅಂಕ ಪಡೆದವರು ಮೆರಿಟ್ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿ ಇದ್ದಾರೆ. ಕಲ್ಯಾಣ ಕರ್ನಾಟಕ ಕೋಟಾದಲ್ಲಿ 56 ಅಂಕ ಪಡೆದವರು ಮೆರಿಟ್ ಪಟ್ಟಿಯಲ್ಲಿ ಮೊದಲಿಗರಾಗಿದ್ದಾರೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಜುಲೈ 30ರಂದು ಲಿಖಿತ ಪರೀಕ್ಷೆ ನಡೆಸಿತ್ತು.

ಸ್ವಯಂಚಾಲಿತ ಸಿಗ್ನಲಿಂಗ್‌ಗೆ ಅಸ್ತು

ಬೆಂಗಳೂರು: ಯಶವಂತಪುರ–ಅರಸೀಕೆರೆ ನಡುವೆ ಸ್ವಯಂಚಾಲಿತ ಸಿಗ್ನಲಿಂಗ್ ವ್ಯವಸ್ಥೆಯನ್ನು ಜಾರಿಗೊಳಿಸಲು ರೈಲ್ವೆ ಮಂಡಳಿ ಅನುಮೋದನೆ ನೀಡಿದೆ.

165.86 ಕಿಲೋಮೀಟರ್ ದೂರ ಇರುವ ಈ ಮಾರ್ಗದಲ್ಲಿ ₹218.75 ಕೋಟಿ ಅಂದಾಜು ವೆಚ್ಚದಲ್ಲಿ ಸ್ವಯಂಚಾಲಿತ ಸಿಗ್ನಲಿಂಗ್ ಯೋಜನೆ ಅನುಷ್ಠಾನಗೊಳ್ಳಲಿದೆ. ಇದರಿಂದ ಪ್ರಯಾಣಿಕ, ಸರಕು ಸಾಗಣೆ ರೈಲುಗಳ ಸಂಚಾರಕ್ಕೆ ಅನುಕೂಲವಾಗಲಿದೆ.

ನಗರದಲ್ಲಿ ಇಂದು

ಸಿರಿಧಾನ್ಯ ಬಳಕೆಯ ಬಗ್ಗೆ ವಿಚಾರಗೋಷ್ಠಿ: ಮುಖ್ಯ ಅತಿಥಿಗಳು: ಚಲುವರಾಯಸ್ವಾಮಿ, ವೈ.ಎಸ್. ಪಾಟೀಲ, ವಿ. ಅನ್ಬುಕುಮಾರ್, ಆಯೋಜನೆ: ಕೃಷಿ ಇಲಾಖೆ, ಸ್ಥಳ: ಡಿಜಿಬಿ ಸಭಾಂಗಣ, ಮೌಂಟ್ ಕಾರ್ಮೆಲ್ ಕಾಲೇಜು, ಬೆಳಿಗ್ಗೆ 10

ಕ್ಷಯರೋಗದ ಬಗ್ಗೆ ಅರಿವು ಮೂಡಿಸಲು ‘ರಾಜ್ಯಮಟ್ಟದ ಕ್ರಿಕೆಟ್ ಪಂದ್ಯಾವಳಿ’: ಉದ್ಘಾಟನೆ: ದಿನೇಶ್ ಗುಂಡೂರಾವ್, ಗೌರವ ಅತಿಥಿ: ಡಿ. ರಂದೀಪ್, ನವೀನ್ ಭಟ್, ಆಯೋಜನೆ: ಕರ್ನಾಟಕ ರಾಜ್ಯ ಆರೋಗ್ಯ ಇಲಾಖೆ ಕ್ಷಯರೋಗ ವಿಭಾಗ ನೌಕರರ ಸಂಘ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಎನ್‌ಎಚ್‌ಎಂ ನೌಕರರ ಸಂಘ, ಸ್ಥಳ: ರೈಲ್ವೆ ಮೈದಾನ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದ ಹಿಂಭಾಗ, ಬೆಳಿಗ್ಗೆ 10

ಸಂಸ್ಥಾಪನಾಧ್ಯಕ್ಷ ದಿವಂಗತ ಎಂ.ಎಸ್. ರಾಮಯ್ಯ ಅವರ ಸ್ಮರಣಾರ್ಥ ಸ್ವಯಂಪ್ರೇರಿತ ರಕ್ತದಾನ ಶಿಬಿರ: ಮುಖ್ಯ ಅತಿಥಿ: ಎಂ.ಆರ್. ಸೀತಾರಾಮ್, ಉಪಸ್ಥಿತಿ: ಎಂ.ಆರ್. ರಾಮಯ್ಯ, ಬಿ.ಎಸ್. ರಾಮಪ್ರಸಾದ್, ಜಿ. ರಾಮಚಂದ್ರ, ಅಧ್ಯಕ್ಷತೆ: ಎನ್.ವಿ.ಆರ್. ನಾಯ್ಡು, ಪ್ರದೀಪ್ ಕುಮಾರ್ ದಿಕ್ಷಿತ್, ಆಯೋಜನೆ ಹಾಗೂ ಸ್ಥಳ: ಎಂ.ಎಸ್. ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಎಂ.ಎಸ್. ರಾಮಯ್ಯ ನಗರ, ಬೆಳಿಗ್ಗೆ 11

2023–24ನೇ ಸಾಲಿನ ಶೈಕ್ಷಣಿಕ ಸಾಲಿನ ಸಾಂಸ್ಕೃತಿಕ, ಕ್ರೀಡೆ, ಎನ್.ಸಿ.ಸಿ., ಎನ್.ಎಸ್.ಎಸ್., ರೋವರ್ಸ್ ಮತ್ತು ರೇಂಜರ್ಸ್, ರೆಡ್ ಕ್ರಾಸ್, ಕನ್ನಡ ಸಂಘ ಹಾಗೂ ಇತರೆ ಚಟುವಟಿಕೆ ಉದ್ಘಾಟನೆ: ರಿಜ್ವಾನ್ ಅರ್ಷದ್, ಮುಖ್ಯ ಅತಿಥಿ: ಎಚ್. ಚಂದ್ರಶೇಖರ್, ಅಧ್ಯಕ್ಷತೆ: ಪಿ.ಟಿ. ಶ್ರೀನಿವಾಸ ನಾಯಕ, ಆಯೋಜನೆ ಹಾಗೂ ಸ್ಥಳ: ಸರ್ಕಾರಿ ಕಲಾ ಕಾಲೇಜು, ಬಿ.ಆರ್. ಅಂಬೇಡ್ಕರ್ ವೀಧಿ, ಬೆಳಿಗ್ಗೆ 11

ನೃತ್ಯ ದಿಶಾ ಟ್ರಸ್ಟಿನ ವಿದ್ಯಾರ್ಥಿಗಳು

ಭರತನಾಟ್ಯ ಪ್ರದರ್ಶನ: ದರ್ಶಿನಿ ಮಂಜುನಾಥ್ ನೇತೃತ್ವದಲ್ಲಿ ನೃತ್ಯ ದಿಶಾ ಟ್ರಸ್ಟಿನ ವಿದ್ಯಾರ್ಥಿಗಳಿಂದ, ಆಯೋಜನೆ ಹಾಗೂ ಸ್ಥಳ: ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ, 45ನೇ ಅಡ್ಡರಸ್ತೆ, ಜಯನಗರ 5ನೇ ಬಡಾವಣೆ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

68ನೇ ಕರ್ನಾಟಕ ರಾಜ್ಯೋತ್ಸವ ಸಮಾರಂಭ: ಮುಖ್ಯ ಅತಿಥಿ: ಬಂದಗದ್ದೆ ಲಕ್ಷ್ಮೀನಾರಾಯಣ ಸುರೇಶ, ವಿಶೇಷ ಉಪನ್ಯಾಸ: ನಾ. ಸೋಮೇಶ್ವರ, ಅಧ್ಯಕ್ಷತೆ: ಉಜ್ವಲ್ ಕುಮಾರ್ ಘೋಷ್, ಆಯೋಜನೆ: ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಸ್ಥಳ: ಕೃಷಿ ತಂತ್ರಜ್ಞರ ಭವನ, ಕ್ವೀನ್ಸ್ ರಸ್ತೆ, ಮಧ್ಯಾಹ್ನ 2.30

ಗಾಂಧಿ ವಿಚಾರಧಾರೆ ಚಿಂತನ ಮಂಥನ ಕಾರ್ಯಕ್ರಮ: ಅಧ್ಯಕ್ಷತೆ: ಎಚ್.ಎನ್. ಸುಬ್ರಹ್ಮಣ್ಯ, ಮುಖ್ಯ ಅತಿಥಿಗಳು: ವಿ. ವೆಂಕಟಶಿವಾರೆಡ್ಡಿ, ಎಚ್.ಎಸ್. ಸುರೇಶ್, ಉಪನ್ಯಾಸ: ಕೆ.ಸಿ. ಶಿವರಾಮ್, ಆಯೋಜನೆ ಹಾಗೂ ಸ್ಥಳ: ದಿ. ನ್ಯಾಷನಲ್ ಕಾಲೇಜು, ಬಸವನಗುಡಿ, ಮಧ್ಯಾಹ್ನ 3.30

ಶಿವಾರಪಟ್ಟಣ ವಾಸುದೇವ ರಾವ್ ನಾರಾಯಣಸ್ವಾಮಿ ರಾವ್ ಜನ್ಮಶತಮಾನೋತ್ಸವ ಸಮಾರಂಭದ ಉದ್ಘಾಟನಾ ಕಾರ್ಯಕ್ರಮ: ವಿಶೇಷ ಸಂಗೀತ ಕಛೇರಿ: ಹರೀಶ್ ಶಿವರಾಮಕೃಷ್ಣನ್ ಮತ್ತು ಸಂಗಡಿಗರು, ಆಯೋಜನೆ: ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ ಟ್ರಸ್ಟ್, ಸ್ಥಳ: ಎಸ್.ವಿ. ನಾರಾಯಣಸ್ವಾಮಿ ರಾವ್ ನಿವಾಸ, #21/1, ಯಜ್ಞ ಸದನ, ಎಸ್.ವಿ.ಎನ್.ರಾವ್ ಮಾರ್ಗ, 4ನೇ ಮುಖ್ಯ ರಸ್ತೆ, 2ನೇ ಕ್ರಾಸ್, ಚಾಮರಾಜಪೇಟೆ, ಸಂಜೆ 5

ಪ್ರೊ.ಎಲ್.ಎಸ್. ಶೇಷಗಿರಿ ರಾವ್ ಸ್ಮರಣೆ: ನುಡಿನಮನ: ರಾ.ನಂ. ಚಂದ್ರಶೇಖರ, ಪುಷ್ಪ ನಮನ: ಎಲ್. ವೆಂಕಟಪ್ಪ, ಅಧ್ಯಕ್ಷತೆ: ಶ್ರೀರಾಮೇಗೌಡ, ಆಯೋಜನೆ ಹಾಗೂ ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡನಗರ, ಸಂಜೆ 6.30

ಹರಿದಾಸ ಮಂಜರಿ: ವಾಣಿ ಜಗದೀಶ್, ಭಾರ್ಗವಿ, ಲತಾ ಸಂತೋಷ್ ಮತ್ತು ಮನಸ್ವಿ, ವಾದ್ಯ ಸಹಕಾರ: ಬ್ರಹ್ಮಚಾರಿ ಮಾಲೂರು, ಶಂಕರ್ ಹೊಸಕೋಟೆ ಸ್ಥಳ: ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಒಂದನೇ ಮುಖ್ಯರಸ್ತೆ, ಪವಮಾನಪುರ, ಸಂಜೆ 7

ತುಮಕೂರು ತಲುಪಿದ ‘ಉಪ್ಪಾರ ಜನ ಕಲ್ಯಾಣ ಯಾತ್ರೆ’

‘ಉಪ್ಪಾರರಿಗೆ ಹೆಚ್ಚಿನ ಮೀಸಲಾತಿ ನೀಡಿ’

ಪ್ರಜಾವಾಣಿ ವಾರ್ತೆ

ತುಮಕೂರು: ಮೀಸಲಾತಿ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಉಪ್ಪಾರ ಸಮುದಾಯದಿಂದ ಹಮ್ಮಿಕೊಂಡಿರುವ ‘ಭಗೀರಥ ಭಾರತ ಉಪ್ಪಾರ ಜನ ಕಲ್ಯಾಣ ರಥಯಾತ್ರೆ’ಯು ಬುಧವಾರ ನಗರ ತಲುಪಿತು.

ಬಿಜಿಎಸ್ ವೃತ್ತದ ಬಳಿ ರಥಯಾತ್ರೆಯನ್ನು ಅದ್ದೂರಿಯಾಗಿ ಬರಮಾಡಿಕೊಂಡು ಮೆರವಣಿಗೆಗೆ ಚಾಲನೆ ನೀಡಲಾಯಿತು. ಅಲಂಕೃತ ವಾಹನದಲ್ಲಿ ಭಗೀರಥರ ಪುತ್ಥಳಿಯ ಮೆರವಣಿಗೆ ನಡೆಯಿತು. ಅಶೋಕ ರಸ್ತೆಯ ಮೂಲಕ ಸಾಗಿ ಸ್ವಾತಂತ್ರ್ಯ ಚೌಕ, ಜಿಲ್ಲಾಧಿಕಾರಿ ಕಚೇರಿ ಮುಖಾಂತರ ಶ್ರೀರಾಮ ನಗರದ ಉಪ್ಪಾರ ಸಮುದಾಯ ಭವನದ ಬಳಿ ಕೊನೆಗೊಂಡಿತು. ಭವನದಲ್ಲಿ ಅಖಿಲ ಉಪ್ಪಾರ (ಸಗರ ವಂಶ) ವಿದ್ಯಾಭಿವೃದ್ಧಿ ಸಂಘದಿಂದ ವೇದಿಕೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಹೊಸದುರ್ಗ ತಾಲ್ಲೂಕಿನ ಭಗೀರಥ ಪೀಠದ ಪುರುಷೋತ್ತಮಾನಂದ ಪುರಿ ಸ್ವಾಮೀಜಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ‘ಸಮಾಜದಲ್ಲಿ ಅತ್ಯಂತ ಹಿಂದುಳಿದ ಸಮುದಾಯವಾದ ಉಪ್ಪಾರರಿಗೆ ಹೆಚ್ಚಿನ ಮೀಸಲಾತಿಯ ಸೌಲಭ್ಯ ಸಿಗಬೇಕು. ಎಲ್ಲರಿಗೂ ಮೀಸಲಾತಿ ದೊರೆತರೆ ಸಮಾಜ ಮುಖ್ಯವಾಹಿನಿಗೆ ಬರಲು ಸಾಧ್ಯವಾಗುತ್ತದೆ’ ಎಂದು ಹೇಳಿದರು.

ಶೈಕ್ಷಣಿಕ, ರಾಜಕೀಯ ಮತ್ತು ಸಾಮಾಜಿಕವಾಗಿ ಸಮುದಾಯ ಮುನ್ನೆಲೆಗೆ ಬರಬೇಕಿದೆ. ಸಮಾಜವನ್ನು ಸಂಘಟಿಸುವ ಕೆಲಸ ನಿರಂತರವಾಗಿ ಸಾಗಬೇಕು. ಇದೇ ಉದ್ದೇಶದಿಂದ ಜನ ಕಲ್ಯಾಣ ರಥಯಾತ್ರೆ ಆರಂಭಿಸಲಾಗಿದೆ. ರಥಯಾತ್ರೆಯು ಗಂಗಾನದಿ ತೀರದಲ್ಲಿ ಶುರುವಾಗಿ ಇಲ್ಲಿಯ ತನಕ ಸಾಗಿ ಬಂದಿದೆ ಎಂದರು.

ರಥಯಾತ್ರೆಯ ನೇತೃತ್ವ ವಹಿಸಿಕೊಂಡಿರುವ ಹರೀಶ್ ಚೌಹಾಣ್ ಮೆಹ್ತಾ, ‘ದೇಶದಲ್ಲಿ ಉಪ್ಪಾರ ಸಮುದಾಯದ 20 ಕೋಟಿ ಜನರಿದ್ದಾರೆ. ಎಲ್ಲ ರಾಜ್ಯಗಳಲ್ಲೂ ಸಮುದಾಯದ ಜನರು ಬದುಕುತ್ತಿದ್ದಾರೆ. ಅವರು ಎಲ್ಲರನ್ನು ಒಗ್ಗೂಡಿಸಿ, ಒಂದು ವೇದಿಕೆಗೆ ತರಲು ಸೆ. 27ರಂದು ದೆಹಲಿಯಲ್ಲಿ ರಥಯಾತ್ರೆಗೆ ಚಾಲನೆ ನೀಡಲಾಯಿತು. ಸಂಘಟನೆಯ ಜತೆಗೆ ಜಾಗೃತರನ್ನಾಗಿಸುವ ಕೆಲಸ ಪರಿಣಾಮಕಾರಿಯಾಗಿ ನಡೆಯುತ್ತಿದೆ’ ಎಂದು ಮಾಹಿತಿ ನೀಡಿದರು.

ಉಪ್ಪಾರ ಸಮುದಾಯದ ಮುಖಂಡ ಅರ್ಜುನ್ ತಮ್ಮಣ್ಣ ನಾಯಕವಾಡಿ ಮಾತನಾಡಿದರು.

ತುಮಕೂರಿನಲ್ಲಿ ಬುಧವಾರ ಭಗೀರಥ ಭಾರತ ಉಪ್ಪಾರ ಜನ ಕಲ್ಯಾಣ ರಥಯಾತ್ರೆಯ ಪ್ರಯುಕ್ತ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಭಗೀರಥರ ಪುತ್ಥಳಿಗೆ ಪುಷ್ಪ ನಮನ ಸಲ್ಲಿಸಲಾಯಿತು. ಭಗೀರಥ ಪೀಠದ ಪುರುಷೋತ್ತಮಾನಂದ ಪುರಿ ಸ್ವಾಮೀಜಿ, ರಥಯಾತ್ರೆಯ ನೇತೃತ್ವ ವಹಿಸಿಕೊಂಡಿರುವ ಹರೀಶ್ ಚೌಹಾಣ್ ಮೆಹ್ತಾ, ಮುಖಂಡ ಅರ್ಜುನ್ ತಮ್ಮಣ್ಣ ನಾಯಕವಾಡಿ ಇತರರು ಹಾಜರಿದ್ದರು

ಸ್ಪರ್ಧಾ ವಾಣಿ

ನದಿದಡದ ನಗರಗಳ ಒಕ್ಕೂಟ

ಗುರುಶಂಕರ್ ಕೆ.ಪಿ

ರಾಷ್ಟ್ರೀಯ ಶುದ್ಧ ಗಂಗಾ ಅಭಿಯಾನ ಸಂಸ್ಥೆಯು ದುಬೈನಲ್ಲಿ ಆಯೋಜನೆಯಾಗಿರುವ ಸಿ.ಓ.ಪಿ-28 ಸಮಾವೇಶದಲ್ಲಿ ನದಿ ದಂಡೆಯಲ್ಲಿರುವ ಜಾಗತಿಕ ನಗರಗಳ ಒಕ್ಕೂಟವನ್ನು ಆಯೋಜಿಸಿದೆ. ಇದೇ ಸಂದರ್ಭದಲ್ಲಿ ರಾಷ್ಟ್ರೀಯ ಶುದ್ಧಗಂಗಾ ಅಭಿಯಾನ ಸಂಸ್ಥೆಯು ಮಿಸಿಸಿಪಿ ನಗರದ ಸುತ್ತಮುತ್ತಲಿನ ಪಟ್ಟಣಗಳು ಮತ್ತು ನಗರಗಳ ಸಂಸ್ಥೆಯೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದೆ.

ಅಮೆರಿಕದ, ಮಿಸಿಸಿಪಿ ನದಿಯ ಸುತ್ತಮುತ್ತಲಿನ ಪ್ರದೇಶದಲ್ಲಿ 124ನಗರಗಳು ಮತ್ತು ಪಟ್ಟಣಗಳು ನೆಲೆಯಾಗಿದ್ದು, ಇವುಗಳನ್ನು ಪ್ರತಿನಿಧಿಸುವ ಸಂಸ್ಥೆಯೊಂದಿಗೆ ಶುದ್ಧಗಂಗಾ ಅಭಿಯಾನ ಸಂಸ್ಥೆಯು, ನದಿ ದಂಡೆಯಲ್ಲಿರುವ ನಗರಗಳ ಒಕ್ಕೂಟದ ಪರವಾಗಿ ಸಹಿ ಹಾಕಿದೆ.

ಜಾಗತಿಕ ನದಿ ದಂಡೆಯಲ್ಲಿರುವ ನಗರಗಳ ಒಕ್ಕೂಟ: ಇದು ಅಂತರರಾಷ್ಟ್ರೀಯ ಒಕ್ಕೂಟವಾಗಿದ್ದು, ಜಾಗತಿಕ ಮಟ್ಟದಲ್ಲಿ ನದಿ ಪಾತ್ರಗಳನ್ನು ಸಂರಕ್ಷಿಸಲು ಮತ್ತು ಸುಸ್ಥಿರ ನಿರ್ವಹಣೆಗೆ ಸ್ಥಾಪಿಸಲಾಗಿದೆ.

ಈ ಒಕ್ಕೂಟದಲ್ಲಿ ಭಾರತ, ಈಜಿಪ್ಟ್, ನೆದರ್ಲೆಂಡ್, ಡೆನ್ಮಾರ್ಕ್, ಆಸ್ಟ್ರೇಲಿಯಾ, ಕಾಂಬೋಡಿಯಾ, ಜಪಾನ್, ಭೂತಾನ್ ಮತ್ತು ಘಾನ ರಾಷ್ಟ್ರಗಳು ಸಹಭಾಗಿತ್ವವನ್ನು ಹೊಂದಿವೆ. ಜಾಗತಿಕ ಮಟ್ಟದಲ್ಲಿ 11 ರಾಷ್ಟ್ರಗಳ ನದಿ ದಂಡೆಗಳ ಮೇಲಿರುವ 275 ಪಟ್ಟಣಗಳನ್ನು ಮತ್ತು ನಗರಗಳನ್ನು ಈ ಒಕ್ಕೂಟದ ವ್ಯಾಪ್ತಿಗೆ ತರುವಲ್ಲಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಉದ್ದೇಶ: ಈ ಒಕ್ಕೂಟದಲ್ಲಿ ವಿವಿಧ ಸರ್ಕಾರಗಳ ಪ್ರತಿನಿಧಿಗಳು, ಪರಿಸರ ಸಂಸ್ಥೆಗಳು, ಹಣಕಾಸು ಸಂಸ್ಥೆಗಳು, ನಗರಪಾಲಿಕೆಗಳ ಪ್ರತಿನಿಧಿಗಳು ಭಾಗವಹಿಸಿ ಪರಸ್ಪರ ಮಾಹಿತಿಯನ್ನು ಹಂಚಿಕೊಳ್ಳುತ್ತಾರೆ. ವಿವಿಧ ತಂತ್ರಜ್ಞಾನಗಳನ್ನು ಬಳಸಿ ನದಿಗಳನ್ನು ಸಂರಕ್ಷಿಸುವ ಯೋಜನೆಯಿದೆ. ಪರಸ್ಪರ ಜ್ಞಾನ ಹಂಚಿಕೆಯಿಂದ ಜಾಗತಿಕ ಮಟ್ಟದಲ್ಲಿ ಕ್ರಾಂತಿಕಾರಿ ಬದಲಾವಣೆಯನ್ನು ತರಬಹುದು.

ಮಿಸಿಸಿಪಿ ನದಿ ಸುತ್ತಲಿನ ನಗರ– ಪಟ್ಟಣಗಳ ಉಪಕ್ರಮ: ಈ ಸಂಸ್ಥೆಯನ್ನು 2012ರಲ್ಲಿ ಸ್ಥಾಪಿಸಲಾಯಿತು ಮಿಸಿಸಿಪಿ ನದಿಯನ್ನು ಸಮರ್ಪಕವಾಗಿ ಸಂರಕ್ಷಿಸಲು ಮತ್ತು ನಿರ್ವಹಿಸಲು ಈ ಸಂಸ್ಥೆಯನ್ನು ಸ್ಥಾಪಿಸಲಾಗಿದ್ದು, ವಾಷಿಂಗ್ ಟನ್‌ನಲ್ಲಿ ಕೇಂದ್ರ ಕಚೇರಿಯನ್ನು ಸ್ಥಾಪಿಸಲಾಗಿದೆ. ಕಾರ್ಯನಿರ್ವಹಣಾ ವಲಯಗಳು - ನದಿ ನೀರಿನ ಗುಣಮಟ್ಟ ಕಾಪಾಡುವಿಕೆ, ಆವಾಸ ಸ್ಥಾನದ ಸಂರಕ್ಷಣೆ, ಪ್ರವಾಹ ಸಮಸ್ಯೆಗಳು ಉಂಟಾದಾಗ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವುದು, ನದಿ ಕೇಂದ್ರಿತ ಮನರಂಜನಾ ಚಟುವಟಿಕೆಗಳನ್ನು ಕೈಗೊಳ್ಳುವುದು ಹಾಗೂ ನದಿಯ ಮೇಲೆ ಅವಲಂಬಿತವಾಗಿರುವ ಜನವಸತಿಗಳು ಸುಸ್ಥಿರ ಆರ್ಥಿಕ ವ್ಯವಸ್ಥೆ ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ನದಿ ನಗರಗಳ ಒಕ್ಕೂಟ: ನದಿ ನಗರಗಳ ಒಕ್ಕೂಟವನ್ನು 2021ರಲ್ಲಿ ಸ್ಥಾಪಿಸಲಾಯಿತು. ಸ್ಥಾಪನೆಯಾದ ಸಂದರ್ಭದಲ್ಲಿ ನದಿ ಪಕ್ಕದಲ್ಲಿರುವ 30 ನಗರಗಳು ಒಕ್ಕೂಟದ ಭಾಗವಾದವು. ಭಾರತದ 110 ನಗರಗಳು ಒಕ್ಕೂಟದ ಭಾಗವಾಗಿದೆ. ಡೆನ್ಮಾರ್ಕಿನ 'ಆರ್ಹಸ್' ನಗರವು ಕೂಡ ಒಕ್ಕೂಟದ ಭಾಗವಾಗಿದೆ.

ಉದ್ದೇಶ: ನದಿ ವ್ಯವಸ್ಥೆಯನ್ನು ಸಂರಕ್ಷಿಸಲು ನಗರಪಾಲಿಕೆಗಳು ಕೈಗೊಂಡಿರುವ ಉತ್ತಮ ಕ್ರಮಗಳನ್ನು ಇತರೆ ನಗರಗಳಿಗೆ ತಿಳಿಸಿ ಭಾರತದಾದ್ಯಂತ ನದಿ ನೀರಿನ ಸುಸ್ಥಿರ ನಿರ್ವಹಣೆಗೆ ಸಂಸ್ಥೆ ಮುಂದಾಗಿದೆ.

ರಾಷ್ಟ್ರೀಯ ಶುದ್ಧ ಗಂಗಾ ಅಭಿಯಾನ: ಈ ಸಂಸ್ಥೆಯನ್ನು ಆಗಸ್ಟ್ 2011ರಲ್ಲಿ ಸೊಸೈಟಿ ರಿಜಿಸ್ಟ್ರೇಷನ್ ಆ್ಯಕ್ಟ್-1860ರ ಅನ್ವಯ ಸರ್ಕಾರದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಯಾಗಿ ಸ್ಥಾಪಿಸಲಾಗಿದೆ.

ಪರಿಸರ ಸಂರಕ್ಷಣಾ ಕಾಯ್ದೆ-1986ರ ಅನ್ವಯ ರಾಷ್ಟ್ರೀಯ ಗಂಗಾ ನದಿ ಪಾತ್ರ ಪ್ರಾಧಿಕಾರವನ್ನು ಸ್ಥಾಪಿಸಿದ್ದು, ಈ ಪ್ರಾಧಿಕಾರದಲ್ಲಿ ತೆಗೆದುಕೊಳ್ಳುವ ನಿರ್ಧಾರಗಳನ್ನು ಅನುಷ್ಠಾನಗೊಳಿಸುವ ಸಂಸ್ಥೆಯಾಗಿ ರಾಷ್ಟ್ರೀಯ ಶುದ್ಧಗಂಗಾ ಅಭಿಯಾನ ಸಂಸ್ಥೆ ಕಾರ್ಯನಿರ್ವಹಿಸುತ್ತಿತ್ತು.

2016ರಲ್ಲಿ ರಾಷ್ಟ್ರೀಯ ಗಂಗಾ ನದಿ ಪಾತ್ರ ಪ್ರಾಧಿಕಾರವನ್ನು ವಿಸರ್ಜಿಸಿ, ಈ ಸಂಸ್ಥೆಗೆ ಪರ್ಯಾಯವಾಗಿ ರಾಷ್ಟ್ರೀಯ ಗಂಗಾ ನದಿ ಪುನಶ್ಚೇತನ, ಸಂರಕ್ಷಣೆ ಮತ್ತು ನಿರ್ವಹಣಾ ಸಂಸ್ಥೆಯನ್ನು ಸ್ಥಾಪಿಸಲಾಗಿದೆ.

ಈ ಸಂಸ್ಥೆಯ ಸ್ಥಾಪನೆಯ ನಂತರ, ಸಂಸ್ಥೆ ಕೈಗೊಳ್ಳುವ ನಿರ್ಧಾರಗಳನ್ನು ರಾಷ್ಟ್ರೀಯ ಶುದ್ಧ ಗಂಗಾ ಅಭಿಯಾನ ಸಂಸ್ಥೆಯು ಅನುಷ್ಠಾನಗೊಳಿಸುತ್ತಿದೆ.

ಈ ಸಂಸ್ಥೆಯ ಉದ್ದೇಶ: ಗಂಗಾ ನದಿಯ ಮಾಲಿನ್ಯವನ್ನು ತಗ್ಗಿಸುವುದು. ಗಂಗಾ ನದಿಯ ಪುನಶ್ಚೇತನ ಕಾರ್ಯವನ್ನು ಕೈಗೊಳ್ಳುವುದು. ಪರಸ್ಪರ ಇಲಾಖೆಗಳ ನಡುವೆ ಸಮನ್ವಯತೆ ಮತ್ತು ಸಹಭಾಗಿತ್ವ ಸಾಧಿಸಿ ಸೂಕ್ತ ಯೋಜನೆಗಳನ್ನು ಹಮ್ಮಿಕೊಳ್ಳುವುದು ಮತ್ತು ನಿರ್ವಹಿಸುವುದು. ಈ ಸಂಸ್ಥೆಯು ನಮಾಮಿ ಗಂಗೆ ಕಾರ್ಯಕ್ರಮವನ್ನು ಜೂನ್ 2014ರಿಂದ ಅನುಷ್ಠಾನಕ್ಕೆ ತರುತ್ತಿದೆ.

ಸೊಸೈಟೀಸ್ ರಿಜಿಸ್ಟ್ರೇಷನ್ ಆ್ಯಕ್ಟ್-1860 ಅನ್ವಯ ಸಂಘಟನಾ ಸ್ವರೂಪ: ಐದು ಹಂತದ ಶ್ರೇಣಿಕೃತ ವ್ಯವಸ್ಥೆಯನ್ನು ಸ್ಥಾಪಿಸಿದ್ದು, ಮೊದಲ ಹಂತದಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಗಂಗಾ ಮಂಡಳಿಯನ್ನು ಸ್ಥಾಪಿಸಲಾಗಿದೆ. ಎರಡನೇ ಹಂತದಲ್ಲಿ ಕೇಂದ್ರ ಜಲಶಕ್ತಿ ಸಚಿವರ ಅಧ್ಯಕ್ಷತೆಯಲ್ಲಿ ಟಾಸ್ಕ್ ಫೋರ್ಸ್ ಸ್ಥಾಪಿಸಲಾಗಿದೆ. ಮೂರನೇ ಹಂತದಲ್ಲಿ ರಾಷ್ಟ್ರೀಯ ಶುದ್ಧಗಂಗಾ ಅಭಿಯಾನ ಸಂಸ್ಥೆಯು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತದೆ. ನಾಲ್ಕನೇ ಹಂತದಲ್ಲಿ ರಾಜ್ಯ ಗಂಗಾ ಸಮಿತಿಗಳು ಮತ್ತು ಐದನೇ ಹಂತದಲ್ಲಿ ಜಿಲ್ಲಾ ಗಂಗಾ ಸಮಿತಿಗಳು ಗಂಗಾ ನದಿ ಮತ್ತು ಅದರ ಉಪನದಿಗಳು ಹರಿಯುವ ಜಿಲ್ಲೆಗಳಲ್ಲಿ ಸ್ಥಾಪಿಸಲಾಗಿದೆ.

ನಮಾಮಿ ಗಂಗೆ ಕಾರ್ಯಕ್ರಮ

ಕೇಂದ್ರ ಜಲಶಕ್ತಿ ಸಚಿವಾಲಯ ಅನುಷ್ಠಾನಗೊಳಿಸುತ್ತಿರುವ ಸಮಗ್ರ ಗಂಗೆ ಸಂರಕ್ಷಣಾ ಅಭಿಯಾನವಾಗಿದೆ. ರಾಜ್ಯ ಮಟ್ಟದಲ್ಲಿಯೂ ಕೂಡ ನಿರ್ವಹಣಾ ಗುಂಪುಗಳನ್ನು ಸ್ಥಾಪಿಸಲಾಗಿದೆ.

2014 ರಿಂದ 2020ರವರೆಗೂ ನಮಾಮಿ ಗಂಗೆ ಕಾರ್ಯಕ್ರಮದ ಮೊದಲ ಹಂತವನ್ನು ಪೂರ್ಣಗೊಳಿಸಿದ ನಂತರ ಎರಡನೇ ಹಂತದ ಕಾರ್ಯಕ್ರಮವನ್ನು 2021 ರಿಂದ 2026 ರ ವರೆಗೂ ಜಾರಿಗೆ ತರಲಾಗುತ್ತಿದೆ.

ಎರಡನೇ ಹಂತದ ಕಾರ್ಯಕ್ರಮದಲ್ಲಿ ಸಣ್ಣ ನದಿಗಳು ಮತ್ತು ಜೌಗು ಪ್ರದೇಶಗಳನ್ನು ಪುನಶ್ಚೇತನಗೊಳಿಸಲಾಗುತ್ತಿದೆ.

ತೋಟಗಾರಿಕೆ ಕ್ಷೇತ್ರದಲ್ಲಿ ಕೆಲಸ ಮಾಡುವಿರಾ?

ಮಂಜುನಾಥ್ ಭದ್ರಶೆಟ್ಟಿ

ಕೇಂದ್ರ ಸರ್ಕಾರದ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯದ ಅಡಿ ಕಾರ್ಯನಿರ್ವಹಿಸುವ ರಾಷ್ಟ್ರೀಯ ತೋಟಗಾರಿಕಾ ಮಂಡಳಿ (NHB) ತನ್ನ ಅಧಿಕಾರಿ ವರ್ಗದ 'ಗ್ರೂಪ್ ಎ' ಮತ್ತು 'ಗ್ರೂಪ್ ಬಿ' ಹುದ್ದೆಗಳಿಗೆ ಡಿಸೆಂಬರ್ 16ರಿಂದ ನೇಮಕಾತಿ ಪ್ರಕ್ರಿಯೆ ನಡೆಸುತ್ತಿದೆ. ಈ ನೇಮಕಾತಿ ಪ್ರಕ್ರಿಯೆಯ ವಿವರಗಳನ್ನು ಇಲ್ಲಿ ತಿಳಿಯೋಣ.

'ಗ್ರೂಪ್ ಎ' ನಲ್ಲಿ ಮಂಡಳಿ 'ಉಪ ನಿರ್ದೇಶಕ' (DD) 19 ಹುದ್ದೆಗಳು ಹಾಗೂ ಮಂಡಳಿಯ 'ಹಿರಿಯ ತೋಟಗಾರಿಕಾ ಅಧಿಕಾರಿ' (SHO) ಎಂಬ 25 ಹುದ್ದೆಗಳಿಗೆ ಆನ್‌ಲೈನ್ ಅರ್ಜಿ ಆಹ್ವಾನಿಸಿದ್ದು ಮುಂದಿನ ತಿಂಗಳು ಜನವರಿ 5 ಅರ್ಜಿ ಸಲ್ಲಿಸಲು ಕಡೆಯ ದಿನ.

ಈ ಎರಡೂ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಎಸ್‌ಸಿ/ಎಸ್‌ಟಿ ಅಭ್ಯರ್ಥಿಗಳಿಗೆ ₹500 ಹಾಗೂ ಸಾಮಾನ್ಯ, ಒಬಿಸಿ, ಇಡಬ್ಲ್ಯುಎಸ್ ಅಭ್ಯರ್ಥಿಗಳಿಗೆ ₹1,000 ಹಾಗೂ ಯೋಜನಾ ನಿರ್ವಸತಿ ಅಭ್ಯರ್ಥಿಗಳಿಗೆ (PWD) ಯಾವುದೇ ಶುಲ್ಕವಿಲ್ಲ.

ಉಪ ನಿರ್ದೇಶಕ –19 ಹುದ್ದೆಗಳು (ಗ್ರೂಪ್ ಎ)

ಶೈಕ್ಷಣಿಕ ಅರ್ಹತೆ: ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಬಯಸುವವರು ತೋಟಗಾರಿಕೆ/ಕೃಷಿ/ಪೋಸ್ಟ್ ಹಾರ್ವೆಸ್ಟ್ ಟೆಕ್ನಾಲಜಿ/ಅಗ್ರಿಕಲ್ಚರ್ ಎಕನಾಮಿಕ್ಸ್/ಅಗ್ರಿಕಲ್ಚರ್ ಎಂಜಿನಿಯರಿಂಗ್/ಪೋಸ್ಟ್ ಹಾರ್ವೆಸ್ಟ್ ಮ್ಯಾನೇಜ್‌ಮೆಂಟ್/ಫುಡ್ ಟೆಕ್ನಾಲಜಿ/ಫುಡ್ ಸೈನ್ಸ್ ಈ ಯಾವುದಾರೂ ಒಂದು ವಿಷಯದಲ್ಲಿ ಅಂಗೀಕೃತ ವಿಶ್ವವಿದ್ಯಾಲಯದಿಂದ ಪದವಿ ಹೊಂದಿರಬೇಕು. ಜೊತೆಗೆ ಸಂಬಂಧಿಸಿದ ಕ್ಷೇತ್ರದಲ್ಲಿ 5 ವರ್ಷದ ಸೇವಾನುಭವ ಹೊಂದಿರಬೇಕು.

ವಯೋಮಿತಿ: ಸಾಮಾನ್ಯ ವರ್ಗದವರು ಗರಿಷ್ಠ 40 ವರ್ಷ ವಯಸ್ಸು ದಾಟಿರಬಾರದು. ಎಸ್‌ಸಿ/ಎಸ್‌ಟಿ 45, ಒಬಿಸಿ 43.

ವೇತನ ಶ್ರೇಣಿ: ₹56,100–1,77,500

ಆಯ್ಕೆ ವಿಧಾನ: ಉಪ ನಿರ್ದೇಶಕ ಹುದ್ದೆಗಳು ಗ್ರೂಪ್ 'ಎ' ವಿಭಾಗದ ಅಧಿಕಾರಿ ಹುದ್ದೆಗಳಾಗಿದ್ದು ಇದಕ್ಕೆ ಮೂರು ಹಂತಗಳಲ್ಲಿ ಪರೀಕ್ಷೆ ನಡೆಯಲಿದೆ. ಮೊದಲು 150 ಅಂಕಗಳಿಗೆ 150 ಪ್ರಶ್ನೆಗಳ ಕಂಪ್ಯೂಟರ್ ಆಧಾರಿತ ಪರೀಕ್ಷೆ (ಸಿಬಿಟಿ) ಇದ್ದು, ಪರೀಕ್ಷಾ ಅವಧಿ 2 ಗಂಟೆ. ನಕಾರಾತ್ಮಕ ಅಂಕಗಳು ಇರುವುದಿಲ್ಲ. ಈ ಪರೀಕ್ಷೆಯಲ್ಲಿ ಪಾಸಾದವರು ಎರಡನೇ ಹಂತದ ಪರೀಕ್ಷೆಗೆ ಅರ್ಹ. ಎರಡನೇ ಹಂತದಲ್ಲಿ 100 ಅಂಕದ ವಿವರಣಾತ್ಮಕ ಪರೀಕ್ಷೆ ಇರುತ್ತದೆ. ಈ ಪರೀಕ್ಷಾ ಅವಧಿ 2 ಗಂಟೆ. ಎರಡನೇ ಹಂತದಲ್ಲಿ ಪಾಸಾದವರಿಗೆ ಸಂದರ್ಶನ ಇರುತ್ತದೆ. ಸಂದರ್ಶನಕ್ಕೆ 25 ಅಂಕಗಳನ್ನು ನಿಗದಿಪಡಿಸಲಾಗಿದೆ. ಮೊದಲ ಹಾಗೂ ಎರಡನೇ ಹಂತದ ಪರೀಕ್ಷೆಯ ಅಂಕಗಳನ್ನು ಪರಿಗಣಿಸಿ ಸಂದರ್ಶನಕ್ಕೆ ಕರೆಯಲಾಗುತ್ತದೆ.

ಹಿರಿಯ ತೋಟಗಾರಿಕಾ ಅಧಿಕಾರಿ –25 ಹುದ್ದೆಗಳು (ಗ್ರೂಪ್ ಬಿ)

ಶೈಕ್ಷಣಿಕ ಅರ್ಹತೆ: ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಬಯಸುವವರು ಕೃಷಿ/ತೋಟಗಾರಿಕೆ/ಫುಡ್ ಟೆಕ್ನಾಲಜಿ/ಪೋಸ್ಟ್ ಹಾರ್ವೆಸ್ಟ್ ಟೆಕ್ನಾಲಜಿ/ಅಗ್ರಿಕಲ್ಚರ್ ಎಕನಾಮಿಕ್ಸ್/ಅಗ್ರಿಕಲ್ಚರ್ ಎಂಜಿನಿಯರಿಂಗ್/ಫುಡ್ ಸೈನ್ಸ್ ಈ ಯಾವುದಾರೂ ಒಂದು ವಿಷಯದಲ್ಲಿ ಅಂಗೀಕೃತ ವಿಶ್ವವಿದ್ಯಾಲಯದಿಂದ ಪದವಿ ಹೊಂದಿರಬೇಕು.

ವಯೋಮಿತಿ: ಸಾಮಾನ್ಯ ವರ್ಗದವರು ಗರಿಷ್ಠ 30 ವರ್ಷ ವಯಸ್ಸು ದಾಟಿರಬಾರದು. ಎಸ್‌ಸಿ/ಎಸ್‌ಟಿ 35, ಒಬಿಸಿ 33.

ವೇತನ ಶ್ರೇಣಿ: ₹35,400–1,12,400

ಆಯ್ಕೆ ವಿಧಾನ: ಹಿರಿಯ ತೋಟಗಾರಿಕಾ ಅಧಿಕಾರಿ ಹುದ್ದೆಗಳು 'ಗ್ರೂಪ್ ಬಿ' ವಿಭಾಗದ ಅಧಿಕಾರಿ ವರ್ಗದ ಹುದ್ದೆಗಳಾಗಿದ್ದು ಇದಕ್ಕೆ 2 ಹಂತಗಳಲ್ಲಿ ಪರೀಕ್ಷೆ ನಡೆಯಲಿದೆ. ಮೊದಲ ಹಂತದಲ್ಲಿ 150 ಅಂಕಗಳಿಗೆ 150 ಪ್ರಶ್ನೆಗಳ ಕಂಪ್ಯೂಟರ್ ಆಧಾರಿತ ಪರೀಕ್ಷೆ (ಸಿಬಿಟಿ) ಇರುತ್ತದೆ. ಪರೀಕ್ಷಾ ಅವಧಿ 2 ಗಂಟೆ. ನಕಾರಾತ್ಮಕ ಅಂಕಗಳು ಇರುವುದಿಲ್ಲ.

ಈ ಪರೀಕ್ಷೆಯಲ್ಲಿ ಪಾಸಾದವರು 1 ಅನುಪಾತ 10ರಲ್ಲಿ ಎರಡನೇ ಹಂತದ ಪರೀಕ್ಷೆಗೆ ಅರ್ಹ. ಎರಡನೇ ಹಂತದಲ್ಲಿ 100 ಅಂಕಕ್ಕೆ ವಿವರಣಾತ್ಮಕ ಪರೀಕ್ಷೆ ಇರುತ್ತದೆ. ಪರೀಕ್ಷಾ ಅವಧಿ 2 ಗಂಟೆ. ಈ ಹುದ್ದೆಗಳಿಗೆ ಸಂದರ್ಶನ ಇರುವುದಿಲ್ಲ. ಮೆರಿಟ್ ಆಧಾರದಲ್ಲಿ ಆಯ್ಕೆ ಪಟ್ಟಿ ಪ್ರಕಟಿಸಲಾಗುತ್ತದೆ.

ಎನ್‌ಟಿಎ ವತಿಯಿಂದ ಪರೀಕ್ಷೆಗಳು

ಈ ಎರಡೂ ಹುದ್ದೆಗಳಿಗೆ ಕೇಂದ್ರ ಸರ್ಕಾರದ ಶಿಕ್ಷಣ ಸಚಿವಾಲಯದ ಉನ್ನತ ಶಿಕ್ಷಣ ಇಲಾಖೆಯ ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ (NTA) ಪರೀಕ್ಷೆಗಳನ್ನು ನಡೆಸಲಿದೆ. ಪರೀಕ್ಷಾ ದಿನಾಂಕಗಳು ಇನ್ನೂ ಘೋಷಣೆ ಆಗಿಲ್ಲ. ಪರೀಕ್ಷಾ ವಿಷಯಗಳು, ಪಠ್ಯಕ್ರಮ, ಹುದ್ದೆಗಳ ವರ್ಗೀಕರಣ ಹಾಗು ಇತರೆ ಹೆಚ್ಚಿನ ಮಾಹಿತಿಗೆ ರಾಷ್ಟ್ರೀಯ ತೋಟಗಾರಿಕಾ ಮಂಡಳಿಯ ಅಧಿಕೃತ ವೆಬ್‌ಸೈಟ್ **www.nhb.gov.in** ಪರಿಶೀಲಿಸಬೇಕು. ಸಂಪರ್ಕಕ್ಕೆ 9625622301.

NHB ಬಗ್ಗೆ

ರಾಷ್ಟ್ರೀಯ ತೋಟಗಾರಿಕಾ ಮಂಡಳಿಯು 1984 ರಲ್ಲಿ ಸ್ಥಾಪನೆಯಾಗಿದ್ದು ಕೇಂದ್ರ ಸರ್ಕಾರದ ಕೃಷಿ ಹಾಗೂ ರೈತರ ಕಲ್ಯಾಣ ಸಚಿವಾಲಯದ ಅಡಿ ಕಾರ್ಯನಿರ್ವಹಿಸುವ ಒಂದು ಸ್ವತಂತ್ರ ಸಂಸ್ಥೆಯಾಗಿದೆ. ಇದರ ಕೇಂದ್ರ ಕಚೇರಿಯು ಹರಿಯಾಣದ ಗುರುಗ್ರಾಮದಲ್ಲಿದೆ. ದೇಶದಾದ್ಯಂತ 29 ಕ್ಷೇತ್ರಿಯ ಕಾರ್ಯಾಲಯಗಳಿವೆ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಇಂಗ್ಲಿಷ್

ಎಸ್‌ಎಸ್‌ಎಲ್‌ಸಿ – ಕನ್ನಡ ಮಾಧ್ಯಮ

Second Language ENGLISH

Unit-1 Poem

Grandma Climbs a Tree

Read and appreciate

3. 'For being happier in a tree than in a lift'. What is suggested through this line? Exchange your views with your partner.

Ans: Grandma was very skilled in tree climbing since the age of six and maintained her skill even at an old age sixty two. She could climb tree in a trice and enjoyed it than being stand still in a lift.

4. "There was not a tree, she hadn't been up' is an expression.

Rewrite the above sentences without using 'not' (note: the meaning should be the same)

Give some more examples from outside the text to illustrate the effective use of double negatives.

Ans: There were no trees left, that grandama hadn't climed

Some more examples of double negatives:

a) All the witnesses claimed that didn't see nothing.

b) The pilot can't find no place to land.

c) There is no way you can do nothing about this.

C. Read the line 'she would be up in the branches in a trice'.

What picture do you get in your mind when you read this? May be it is the picture of the grandma climbing a tree deftly even like a monkey.

Now read the following lines and say what pictures or images you that come to your mind. Try to draw these pictures if you can.

1. An aged woman confined to bed.

Ans: It gives picture of a frail, difficult to walk forced to stay on bed.

2. Every breeze / whispered of summer and dancing leaves.

Ans: A low Wind speed of summer is whispering in ears that summer is here and it is being complimented by dry leaves fallen to ground start dancing as if to music.

3. Being happier in a tree than in a lift.

Answer: We get a picture of a being happier while breathing fresh air on a tree than stale air in a claustrophobic lift.

POEM

Quality of mercy

About Author : William Shakespeare

William Shakespeare was born on April 23, 1564, in Stratford-on-Avon. He was regarded as the foremost dramatist of his time. His sonnets were composed between 1593 and 1601. The Sonnets of Shakespeare, consists of 154 sonnets, all written in the form of three quatrains and a couplet that is now recognized as Shakespearean. The sonnets fall into two groups: sonnets 1-126, addressed to a beloved friend, a handsome and noble young man, and sonnets 127-512, to a malignant but fascinating "Dark Lady", whom the poet loves in spite of himself. Nearly all of Shakespeare's sonnets examine the inevitable decay of time, and the immortalization of beauty and love in poetry.

In his and plays, Shakespeare invited thousands of words. His impressive expansion of the English language, according to the Oxford English Dictionary, includes such words as : birthplace. Blood sucking, courtship, dewdrop, downstairs, radiance, schoolboy, still born, watchdog etc

Shakespeare wrote more than 30 plays. These are usually divided into four categories: histories, comedies, tragedies, and romances. His earliest plays were primarily comedies and histories such as Henry VI and The Comedy Of Errors, but in 1596, Shakespeare wrote Romeo and Juliet, his second tragedy, and over the next dozen years he would return to the form, writing the plays for which he is now best known: Julius Caesar, Hamlet, Othello, King Lear, Macbeth and Antony and Cleopatra. In his final year, Shakespeare turned to the romantic with Cymbeline, A Winter's Tale, and The Tempest.

Understand the poem

1. Mercy is compared with something in the first two lines of the poem. What is it? How is this comparison apt? Justify your answer.

Ans: The quality of mercy is compared with gentle drop of rain from heaven. It does not hurt. The comparison is apt as the showing mercy does not hurt the giver or taker instead it gives blessings of gentle peace to both.

(Contd…….)

ಎಸ್ಸೆಸ್ಸೆಲ್ಸಿ- ಸಮಾಜ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC BIOLOGY

II PUC : BIOLOGY

REPRODUCTION

REPRODUCTIVE HEALTH

Answer the following:-

7. What is Tubectomy?

Ans:- (………..Contd)

the two severed ends of the tubes separate. Therefore, the ovum is prevented from passing into the uterus and the sperms cannot reach the ovum.

8. What is Laparoscopic sterilization?

Ans:- Laparoscopic sterilization is also a method of female sterilization. After giving a local or general anesthesia, a harmless gas is introduced into the abdomen to create a gas bubble. The bubble expands in the abdominal cavity and pushes the intestines away from the pelvic cavity so that the uterine tubes could be easily seen.

A small incision is made at the lower rim of the umbilicus to insert a laparoscope to locate, cut and close the uterine tubes. Once the tubes are sealed, the instrument is removed, the gas is released and the incision is dressed with a bandage. The person can resume normal work after a few hours.

9) Which is the irreversible method of birth control?

Ans:- Removal of Gonads and Uterus is a perfect method of birth control. But once performed it cannot be reversed. Removal of Gonads effects because the gonads play an important role in the endocrine system. Therefore, these operations are performed only if the organs are diseased or damaged. Removal of testis is called castration, removal of ovary is called oophorectomy and Removal of uterus is called hysterectomy.

PRINCIPLES OF INHERITANCE AND VARIATION

1. What is genetics?

Ans:- Genetics is a branch of biological science which deals with heredity and variations.

2. Who is the father of Genetics?

Ans:- Gregor Johann Mendel is the father of Genetics.

3. Name the scientists who rediscovered the work of Mendel?

Ans:- The scientists who rediscovered the work of Mendel were Hugo de Vries of Holland, Karl Correns of Germany and Eric Von Tschermark of Austria.

4. What is Heredity?

Ans:- Heredity is the process of transmission of characters from one generation to the other or it is the process of inheritance of characters from the parent to the offspring.

5. What is variation?

Ans:- The minor differences that exist among the offsprings of the same parents are called variations. Such variations occur in both plants and animals.

6. Which are the two types of variation?

Ans:- The two types of variations are – Hereditary variations and environmental variations.

7. What do you mean by alleles?

Ans:- Alleles are pair of genes controlling a pair of contrasting characters.

8. What is a phenotype?

Ans:- The visible external morphological character is called the phenotype.

9. What is a genotype?

Ans:- The genes responsible for the expression of visible external morphological character is called the genotype.

10. What is monohybrid cross?

Ans:- Monohybrid cross is a cross involving two plants differing in only one character (only height, colour of the flower, shape of the seed, etc.,).

11. What do you mean by monohybrid?

Ans:- The hybrid resulting from a monohybrid cross is called a monohybrid.

12. What is the phenotypic ratio in the monohybrid cross?

Ans:- The phenotypic ratio in the monohybrid cross is 3 : 1.

13. What is the genotypic ratio in the monohybrid cross?

Ans:- The genotypic ratio in the monohybrid cross is 1 : 2 : 1.

14. What is dihybrid cross?

Ans.- Dihybrid cross is a cross involving two plants which differ only with respect to two sets of characters.

15. What do you mean by dihybrid?

Ans:- The hybrid resulting from a dihybrid cross is called a dihybrid.

16. What is the phenotypic ratio in the dihybrid cross?

Ans:- The phenotypic ratio in the dihybrid cross is 9 : 3 : 3 : 1

17. What is the genotypic ratio in the dihybrid cross?

Ans:- The genotypic ratio in the dihybrid cross is 1 : 2 : 1 : 2 : 4 : 2 : 1 : 2 : 1.

18. What is a test cross?

Ans:- A test cross is defined as a back cross performed between the F_1 generation (individual) and its double recessive parent.

19. What is a dominant gene?

Ans:- Dominant gene is the one which expresses itself by suppressing the expression of its counterpart. E.g., the gene for tallness is expressed suppressing the gene for dwarfness. This is conventionally represented as 'T'.

20. What is a recessive gene?

Ans:- Recessive gene is the one, which is not expressed in the presence of the dominant gene. E.g., the gene for dwarfness is expressed only in the absence of the dominant gene for tallness. This is conventionally represented as 't'.

21. Which are the different types of crossing over? *(Contd……..)*

ಎತ್ತಿನಹೊಳೆಗೆ ₹9,177 ಕೋಟಿ ಅನುದಾನ: ಕೇಂದ್ರಕ್ಕೆ ಒತ್ತಾಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಯಲುಸೀಮೆಯ ಜಿಲ್ಲೆಗಳಿಗೆ ನೀರು ಒದಗಿಸುವ ಉದ್ದೇಶ ಹೊಂದಿರುವ ಎತ್ತಿನಹೊಳೆ ಯೋಜನೆಗೆ ಕೇಂದ್ರ ಸರ್ಕಾರವು ₹9,177 ಕೋಟಿ ಅನುದಾನ ನೀಡಬೇಕು ಎಂದು ಉಪಮುಖ್ಯಮಂತ್ರಿ ಹಾಗೂ ಜಲ ಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್ ಒತ್ತಾಯಿಸಿದರು.

ಸಂಸತ್ ಭವನದಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಬುಧವಾರ ಭೇಟಿ ಮಾಡಿದ ಅವರು ಈ ಮನವಿ ಮಾಡಿದರು. ಜಲಜೀವನ್ ಮಿಷನ್‌ನಲ್ಲಿ ಯೋಜನೆಗೆ ಅನುದಾನ ನೀಡಬೇಕು ಎಂದು ಅಕ್ಟೋಬರ್ ತಿಂಗಳಲ್ಲಿ ಕೇಂದ್ರ ಜಲಶಕ್ತಿ ಸಚಿವಾಲಯಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ. ಈ ಪ್ರಸ್ತಾವಕ್ಕೆ ಅನುಮೋದನೆ ನೀಡಿ ವಿಶೇಷ ಅನುದಾನ ನೀಡಬೇಕೆಂದು ವಿನಂತಿಸಿದರು.

ಕರ್ನಾಟಕ ಭವನ: ಜೂನ್ ಗಡುವು

ನೂತನ ಕರ್ನಾಟಕ ಭವನದ ಕಾಮಗಾರಿಯನ್ನು ಬುಧವಾರ ವೀಕ್ಷಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಜೂನ್ ತಿಂಗಳೊಳಗೆ ಕಾಮಗಾರಿ ಪೂರ್ಣಗೊಳಿಸಲು ತಾಕೀತು ಮಾಡಿದರು.

ಗಡುವಿನೊಳಗೆ ಕಾಮಗಾರಿ ಪೂರ್ಣಗೊಳಿಸದಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿದರು. ಯೋಜನಾ ವೆಚ್ಚ ವಿಪರೀತವಾಗಿ ಹೆಚ್ಚಾಗಿರುವುದಕ್ಕೆ ಅತೃಪ್ತಿ ವ್ಯಕ್ತಪಡಿಸಿದರು. ₹120 ಕೋಟಿ ವೆಚ್ಚದಲ್ಲಿ ಕರ್ನಾಟಕ ಭವನವನ್ನು ನಿರ್ಮಾಣ ಮಾಡಲಾಗುತ್ತಿದೆ.

ನಿರ್ಮಲಾ ಸೀತಾರಾಮನ್ ಅವರಿಗೆ ಡಿ.ಕೆ.ಶಿವಕುಮಾರ್ ಹೂಗುಚ್ಛ ನೀಡಿದರು

ಪ್ರಮುಖ ಬೇಡಿಕೆಗಳು

- ಬೆಂಗಳೂರಿನಲ್ಲಿ ಸಂಚಾರ ದಟ್ಟಣೆ ಕಡಿಮೆ ಮಾಡಲು 60 ಕಿ.ಮೀ. ಉದ್ದದ ಸುರಂಗ ಮಾರ್ಗ ನಿರ್ಮಿಸಲು ಉದ್ದೇಶಿಸಿದ್ದು, ಇದಕ್ಕೆ ₹30 ಸಾವಿರ ಕೋಟಿ ಆಗಲಿದೆ. ಇದಕ್ಕೆ ಕೇಂದ್ರ ಸರ್ಕಾರ ಅನುದಾನ ನೀಡಬೇಕು.
- ನಮ್ಮ ಮೆಟ್ರೊದ ಮೂರನೇ ಹಂತದ ಯೋಜನೆಯ ಪ್ರಸ್ತಾವವನ್ನು ಕೇಂದ್ರಕ್ಕೆ ಸಲ್ಲಿಸಲಾಗಿದ್ದು, ಇನ್ನೂ ಒಪ್ಪಿಗೆ ಸಿಕ್ಕಿಲ್ಲ. 37 ಕಿ.ಮೀ. ಉದ್ದದ ಮೂರನೇ ಎ ಹಂತವು ವಿಸ್ತೃತ ಯೋಜನಾ ಹಂತದಲ್ಲಿದೆ. ನಮ್ಮ ಮೆಟ್ರೊ ವಿಸ್ತರಣೆಗೆ ಕೇಂದ್ರ ಸರ್ಕಾರ ನೆರವು ಕೊಡಬೇಕು.
- ಬೆಂಗಳೂರಿನಲ್ಲಿ ಪ್ರವಾಹ ತಡೆಗಟ್ಟಲು ₹3 ಸಾವಿರ ಕೋಟಿಯ ಯೋಜನೆ ರೂಪಿಸಿ ಆರ್ಥಿಕ ಸಹಕಾರಕ್ಕಾಗಿ ವಿಶ್ವ ಬ್ಯಾಂಕ್‌ಗೆ ಸಲ್ಲಿಸಲಾಗಿದೆ. ಈ ಪ್ರಸ್ತಾವಕ್ಕೆ ಕೇಂದ್ರದ ಆರ್ಥಿಕ ವ್ಯವಹಾರಗಳ ಸಚಿವಾಲಯದ ಅನುಮೋದನೆ ಬೇಕಿದೆ. ಇದಕ್ಕೆ ಒಪ್ಪಿಗೆ ನೀಡಬೇಕು.
- ಕೃಷ್ಣಾ ಮೇಲ್ದಂಡೆ ಯೋಜನೆಗೆ ಗೆಜೆಟ್ ಅಧಿಸೂಚನೆ ಹೊರಡಿಸಬೇಕು ಹಾಗೂ ರಾಷ್ಟ್ರೀಯ ಯೋಜನೆಯಾಗಿ ಘೋಷಿಸಬೇಕು. ಮೇಕೆದಾಟು ಯೋಜನೆಗೆ ಒಪ್ಪಿಗೆ ನೀಡಬೇಕು. ಭದ್ರಾ ಮೇಲ್ದಂಡೆ ಯೋಜನೆಗೆ ಕೂಡಲೇ ಅನುದಾನ ಬಿಡುಗಡೆ ಮಾಡಬೇಕು. ಇದನ್ನು ರಾಷ್ಟ್ರೀಯ ಯೋಜನೆಯಾಗಿ ಘೋಷಿಸಬೇಕು.
- ಕಳಸಾ-ಬಂಡೂರಿ ಯೋಜನೆಗೆ ಪರಿಸರ ಅನುಮೋದನೆ ಕೊಡಬೇಕು.

23ರಂದು ಉನ್ನತ ಮಟ್ಟದ ಸಮಿತಿ ಸಭೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾರನ್ನು ಬುಧವಾರ ಭೇಟಿಯಾಗಿ ಪ್ರಕೃತಿ ವಿಕೋಪ ಕುರಿತಂತೆ ಉನ್ನತ ಮಟ್ಟದ ಸಮಿತಿ ಸಭೆಯನ್ನು ಕೂಡಲೇ ಕರೆದು, ರಾಜ್ಯಕ್ಕೆ ಬರ ಪರಿಹಾರ ಬಿಡುಗಡೆಗೆ ಕ್ರಮ ವಹಿಸುವಂತೆ ಆಗ್ರಹಿಸಿದರು. 'ಬರ ಪರಿಹಾರಕ್ಕೆ ರಾಜ್ಯ ಸರ್ಕಾರ ಮನವಿ ಸಲ್ಲಿಸಿ ಮೂರು ತಿಂಗಳುಗಳು ಕಳೆದಿವೆ. ಆದರೆ, ಕೇಂದ್ರ ಸರ್ಕಾರ ಈವರೆಗೆ ಉನ್ನತ ಮಟ್ಟದ ಸಮಿತಿಯ ಸಭೆ ನಡೆಸಿಲ್ಲ. ಕೂಡಲೇ ಸಭೆ ಕರೆಯಬೇಕು' ಎಂದು ವಿನಂತಿಸಿದರು. ಇದೇ 23ರಂದು ನಡೆಯುವ ಸಭೆ ಯಲ್ಲಿ ಪರಿಹಾರ ಬಿಡುಗಡೆ ಕುರಿತು ತೀರ್ಮಾನಿಸಲಾಗುವುದು ಎಂದು ಶಾ ತಿಳಿಸಿದರು.

ವಿವಸ್ತ್ರ ಪ್ರಕರಣ: ಮೂವರು ಸಿಐಡಿ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ತಾಲ್ಲೂಕಿನ ಹೊಸ ವಂಟಮೂರಿಯಲ್ಲಿ ಮಹಿಳೆಯನ್ನು ಬೆತ್ತಲೆಗೊಳಿಸಿ, ಹಲ್ಲೆ ಮಾಡಿದ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮೂವರು ಆರೋಪಿಗಳನ್ನು ಸಿಐಡಿ ಅಧಿಕಾರಿಗಳು ಬುಧವಾರ ವಿಚಾರಣೆಗಾಗಿ ವಶಕ್ಕೆ ತೆಗೆದು ಕೊಂಡಿದ್ದಾರೆ.

11 ಆರೋಪಿಗಳು ನ್ಯಾಯಾಂಗ ಬಂಧನದಲ್ಲಿದ್ದರು. ಇವರ ಪೈಕಿ ಮೊದಲ ಮೂವರು ಪುರುಷ ಆರೋಪಿಗಳನ್ನು ಹೆಚ್ಚಿನ ವಿಚಾರಣೆಗಾಗಿ ವಶಕ್ಕೆ ನೀಡುವಂತೆ ಸಿಐಡಿ ಅಧಿಕಾರಿಗಳು ನ್ಯಾಯಾಲಯಕ್ಕೆ ಕೋರಿದ್ದರು.

'ಬುಧವಾರ ವಿಚಾರಣೆ ಕೈಗೆತ್ತಿಕೊಂಡ ಇಲ್ಲಿನ 4ನೇ ಜೆಎಂಎಫ್‌ಸಿ ನ್ಯಾಯಾಲಯವು ಆದೇಶ ಹೊರಡಿಸಿತು. ಈ ಮೂವರ ಪೈಕಿ ಇಬ್ಬರು ನಾಲ್ಕು ವರ್ಷಗಳ ಹಿಂದೆ ನಡೆದ ಕೊಲೆ ಪ್ರಕರಣದಲ್ಲೂ ದೋಷಿಗಳಾಗಿದ್ದಾರೆ. ಜಾಮೀನು ಪಡೆದು ಅವರು ಹೊರಗಿದ್ದರು. ಹೀಗಾಗಿ, ಸಿಐಡಿ ಅಧಿಕಾರಿಗಳು ಅವರನ್ನು ಮತ್ತೆ ವಶಕ್ಕೆ ಪಡೆದು ಸ್ಥಳ ಮಹಜರು ನಡೆಸಿದರು' ಎಂದು ಮೂಲಗಳು ತಿಳಿಸಿವೆ.

ಇದಕ್ಕೂ ಮುನ್ನ ಕಾಕತಿ ಪೊಲೀಸ್ ಠಾಣೆಗೆ ಭೇಟಿ ನೀಡಿದ ಸಿಐಡಿಪ್ರಭಾರಿ ಡಿಐಜಿ ಸುಧೀರಕುಮಾರ ರೆಡ್ಡಿ ಅವರ ನೇತೃತ್ವದ ತಂಡವು, ಠಾಣೆಯ 15 ಸಿಬ್ಬಂದಿಯನ್ನು ವಿಚಾರಣೆ ಮಾಡಿತು.

'ಮಹಿಳೆ ವಿವಸ್ತ್ರಗೊಳಿಸಿದ ಹೊಸ ವಂಟಮೂರಿ ಗ್ರಾಮವು ಕಾಕತಿ ಠಾಣೆಯಿಂದ ಎಷ್ಟು ಅಂತರದಲ್ಲಿದೆ? ಎಷ್ಟು ಗಂಟೆಗೆ ಘಟನೆ ನಡೆದಿದೆ? ಮಾಹಿತಿ ಎಷ್ಟು ಗಂಟೆಗೆ ಬಂದಿದೆ, ಪೊಲೀಸರು ಎಷ್ಟೊತ್ತಿಗೆ ಸ್ಥಳಕ್ಕೆ ಧಾವಿಸಿದ್ದಾರೆ ಎಂಬ ವಿವರವನ್ನು ಸಿಬ್ಬಂದಿಯಿಂದ ಪಡೆದರು' ಎಂದು ಮೂಲಗಳು ತಿಳಿಸಿವೆ.

ಮತ್ತೊಂದು ಪ್ರೇಮ ಪ್ರಕರಣ: ಬೆಳಗಾವಿ ಸಮೀಪದ ಉದ್ಯಮಬಾಗದಲ್ಲಿ ಪ್ರೇಮ ವಿವಾಹಕ್ಕೆ ಸಂಬಂಧಪಟ್ಟಂತೆ ಯುವಕನ ತಂದೆಯನ್ನು ಯುವತಿಯ ಕಡೆಯವರು ಥಳಿಸಿದ ಘಟನೆ ತಡವಾಗಿ ವರದಿಯಾಗಿದೆ.

ಪುಣೆಯಲ್ಲಿ ಕೆಲಸ ಮಾಡುತ್ತಿದ್ದ ಉದ್ಯಮಬಾಗದ ಯುವಕನೊಬ್ಬ ಅಲ್ಲಿನ ಯುವತಿಯೊಬ್ಬರನ್ನು ಪ್ರೀತಿಸಿದ್ದ. ಆದರೆ, ಇವರ ಮದುವೆಗೆ ಯುವತಿ ಮನೆಯವರು ಒಪ್ಪಿಗೆ ನೀಡಿರಲಿಲ್ಲ. ಡಿಸೆಂಬರ್ 10ರಂದು ಯುವತಿ ಮನೆ ಬಿಟ್ಟು, ಡಿ.12ರಂದು ಮದುವೆಯಾಗಿ ಯುವಕ ನ ಮನೆಗೆ ಬಂದಿದ್ದರು. ಯುವಕನ ಮನೆಯವರು ಇಬ್ಬರಿಗೂ ಆಶ್ರಯ ನೀಡಿದ್ದರು.

ಯುವತಿ ಕಡೆಯುವರು ಡಿಸೆಂಬರ್ 15ರಂದು ಯುವಕನ ತಂದೆ ಹಾಗೂ ಸಹೋದರನ ಮೇಲೆ ಹಲ್ಲೆ ಮಾಡಿದ್ದಾರೆ ಎಂದು ಉದ್ಯಮಬಾಗ ಠಾಣೆಯಲ್ಲಿ ದೂರು ದಾಖಲಿಸಲಾಗಿತ್ತು. ಈ ಸಂಬಂಧ ಎಂಟು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೂವರು ಐಎಎಸ್ ಅಧಿಕಾರಿಗಳ ವರ್ಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉನ್ನತ ಶಿಕ್ಷಣ ಇಲಾಖೆಯ ಕಾರ್ಯದರ್ಶಿಯಾಗಿ ಎಂ.ಎಸ್. ಶ್ರೀಕರ್ ಅವರನ್ನು ವರ್ಗಾವಣೆ ಮಾಡಿ ಆದೇಶಿಸಲಾಗಿದೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಕಾರ್ಯದರ್ಶಿಯಾಗಿದ್ದ ಶ್ರೀಕರ್ ಅವರನ್ನು ಇತ್ತೀಚೆಗೆ ಡಿಪಿಎಆರ್‌ನ ಆಡಳಿತ ಸುಧಾರಣಾ ವಿಭಾಗದ ಕಾರ್ಯದರ್ಶಿಯಾಗಿ ವರ್ಗಾವಣೆ ಮಾಡಲಾಗಿತ್ತು.

ಆಹಾರ ಇಲಾಖೆಯ ಆಯುಕ್ತರಾಗಿರುವ ಎಂ. ಕನಗವಲ್ಲಿ ಅವರನ್ನು ಕರ್ನಾಟಕ ಕೌಶಲ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕಿಯಾಗಿ ವರ್ಗಾವಣೆ ಮಾಡಲಾಗಿದೆ. ಸ್ಥಳ ನಿರೀಕ್ಷಣೆಯಲ್ಲಿದ್ದ ವಾಸಿರೆಡ್ಡಿ ವಿಜಯ ಜ್ಯೋತ್ಸ್ನಾ ಅವರಿಗೆ ಆಹಾರ ಇಲಾಖೆಯ ಆಯುಕ್ತ ಹುದ್ದೆ ನೀಡಲಾಗಿದೆ.

ಪ್ರಧಾನಿ–ಎಚ್‌ಡಿಕೆ ಭೇಟಿ ಇಂದು

ನವದೆಹಲಿ: ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಗುರುವಾರ ಬೆಳಿಗ್ಗೆ 11 ಗಂಟೆಗೆ ಭೇಟಿಯಾಗಿ ಸಮಾಲೋಚನೆ ನಡೆಸಲಿದ್ದಾರೆ.

'ಕಳೆದ ವಾರ ಪ್ರಧಾನಿ ಅವರನ್ನು ಭೇಟಿಯಾಗಬೇಕಿತ್ತು. ಆದರೆ, ಸಾಧ್ಯವಾಗಿರಲಿಲ್ಲ. ಗುರುವಾರ ಭೇಟಿ ಮಾಡಿ ಚರ್ಚಿಸುತ್ತೇನೆ. ಇದೊಂದು ಸೌಜನ್ಯದ ಭೇಟಿ. ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್-ಬಿಜೆಪಿ ಸೀಟು ಹಂಚಿಕೆ ಕುರಿತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೊಂದಿಗೆ ಸಮಾಲೋಚನೆ ನಡೆಸಲಾಗುತ್ತದೆ. ಆದಷ್ಟು ಶೀಘ್ರದಲ್ಲಿ ಸೀಟು ಹಂಚಿಕೆ ಅಂತಿಮಗೊಳಿಸಲು ಯೋಜಿಸಲಾಗಿದೆ' ಎಂದರು.

ಮಹಾರಾಷ್ಟ್ರ: ಅಳಿವಿನತ್ತ ಕನ್ನಡ ಶಾಲೆಗಳು

ಬೆಂಗಳೂರು: ಕರ್ನಾಟಕ ಗಡಿ ಭಾಗದ ಸರ್ಕಾರಿ ಕನ್ನಡ ಶಾಲೆಗಳಿಗೆ ಮಹಾರಾಷ್ಟ್ರ ಸರ್ಕಾರ ಹಲವು ವರ್ಷಗಳಿಂದ ಶಿಕ್ಷಕರನ್ನು ನೇಮಕ ಮಾಡದ ಕಾರಣ ಹಲವು ಶಾಲೆಗಳು ಬಾಗಿಲು ಮುಚ್ಚುವ ಸ್ಥಿತಿಗೆ ತಲುಪಿವೆ.

ಕನ್ನಡ ಶಾಲೆಗಳ ಕಡೆಗಣನೆ ಕುರಿತು ಗಡಿನಾಡ ಕನ್ನಡ ಸಂಘಟನೆಗಳ ಮುಖಂಡರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಕನ್ನಡ ಶಾಲೆಗಳಲ್ಲಿ ಬಹುತೇಕ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಕನ್ನಡ ಭಾಷೆ ಹಾಗೂ ಮಾಧ್ಯಮದಲ್ಲಿ ಬೋಧಿಸುವ ಶಿಕ್ಷಕರ ಕೊರತೆಯ ಕಾರಣ ಮಕ್ಕಳು ಕನ್ನಡ ಶಾಲೆಗಳಿಂದ ವಿಮುಖವಾಗುತ್ತಿದ್ದಾರೆ. ಸಾಂಗಲಿ ಮತ್ತು ಸೊಲ್ಲಾಪುರ ಜಿಲ್ಲೆಗಳ ಗಡಿ ಭಾಗಗಳಲ್ಲಿ ಶಿಕ್ಷಕರ ಸಮಸ್ಯೆ ತೀವ್ರವಾಗಿದೆ. ಮಹಾರಾಷ್ಟ್ರ ಸರ್ಕಾರ 2010ರಲ್ಲಿ ಕನ್ನಡ ಶಿಕ್ಷಕರನ್ನು ನೇಮಕ ಮಾಡಿತ್ತು. ಆ ನಂತರ ನೇಮಕಾತಿ ಪ್ರಕ್ರಿಯೆಗಳೇ ನಡೆದಿಲ್ಲ. ಆದರೆ, ಮರಾಠಿ ಶಿಕ್ಷಕರ ನೇಮಕ ಮಾಡಲಾಗುತ್ತಿದೆ. ಕನ್ನಡ ಶಾಲೆಗಳಿಗೆ ತಾರತಮ್ಯ ಮಾಡಲಾಗುತ್ತಿದೆ ಎಂದು ದೂರಿದ್ದಾರೆ.

ಮಹಾರಾಷ್ಟ್ರದಲ್ಲಿ ಶಿಕ್ಷಕರ ಅರ್ಹತಾ ಪರೀಕ್ಷೆಯನ್ನು (ಟಿಇಟಿ) ಮರಾಠಿ ಮಾಧ್ಯಮದಲ್ಲಿಯೇ ಬರೆಯಬೇಕಿದೆ. ಹಾಗಾಗಿ, ಟಿಇಟಿ ಉತ್ತೀರ್ಣರಾದ ಕನ್ನಡಿಗರ ಸಂಖ್ಯೆ ಕಡಿಮೆ ಇದೆ. ಭಾಷಾ ಅಲ್ಪಸಂಖ್ಯಾತ ಅಭ್ಯರ್ಥಿಗಳಿಗೆ ಟಿಇಟಿ ಕಡ್ಡಾಯ ಮಾಡಬಾರದು ಎಂದು ಶಿಕ್ಷಕ ಸಂಘಟನೆಯ ಮುಖಂಡ ಅಮೋಲ್ ಶಿಂಧೆ ಆಗ್ರಹಿಸಿದರು.

ದೆಹಲಿ ಪೊಲೀಸರು ಮೈಸೂರಲ್ಲಿ ಬೀಡು

ಮೈಸೂರು: ಸಂಸತ್ತಿನ ಭದ್ರತಾ ಲೋಪ ಪ್ರಕರಣದ ಕುರಿತು ತನಿಖೆ ನಡೆಸಲು ಬಂದಿರುವ ದೆಹಲಿ ಪೊಲೀಸರ ತಂಡವು ನಗರದಲ್ಲೇ ಮೊಕ್ಕಾಂ ಹೂಡಿದ್ದು, ಬುಧವಾರವೂ ಮನೋರಂಜನ್ ಮನೆಯಲ್ಲಿ ಪರಿಶೀಲನೆ ನಡೆಸಿತು. ವಿಜಯನಗರದ ಎರಡನೇ ಹಂತದಲ್ಲಿರುವ ಮನೆಗೆ ಸಂಜೆ 5ಕ್ಕೆ ಆಗಮಿಸಿದ ಇಬ್ಬರು ಅಧಿಕಾರಿಗಳು ಸುಮಾರು ಒಂದು ಗಂಟೆ ಕಾಲ ಮಾಹಿತಿ ಸಂಗ್ರಹಿಸಿದರು. 'ಕುಟುಂಬದ ಆರ್ಥಿಕ ಮೂಲಗಳ ಕುರಿತ ಮಾಹಿತಿ ಸಂಗ್ರಹಿಸುತ್ತಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಆರೋಪಿ ಹಾಗೂ ಆತನ ತಂದೆ ದೇವರಾಜೇ ಗೌಡ ಅವರ ಬ್ಯಾಂಕ್ ಸ್ಟೇಟ್‌ಮೆಂಟ್‌ಗಳನ್ನು ಅಧಿಕಾರಿಗಳು ಪಡೆದಿದ್ದು, ಉದ್ಯೋಗದಲ್ಲಿ ಇಲ್ಲದಿದ್ದರಿಂದ ಆರೋಪಿಯು ಹೇಗೆ ಹಣ ಹೊಂದಿಸುತ್ತಿದ್ದ ಎಂಬ ಬಗ್ಗೆ ಮಾಹಿತಿ ಸಂಗ್ರಹಿಸಲಾಗುತ್ತಿದೆ' ಎಂದು ತಿಳಿದು ಬಂದಿದೆ.

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಖರೀದಿ ಶಾಖೆ, ಚಾವಿಸನಿನಿ, ಮೈಸೂರು–570017,
ದೂರವಾಣಿ: 9448994705 ಇ–ಮೇಲ್: gmpurc@cescmysore.org ವೆಬ್‌ಸೈಟ್:www.cescmysore.org
ಸಂಖ್ಯೆ:ಚಾವಿಸನಿನಿ/ಪ್ರ.ವ್ಯ/ಉ.ಪ್ರ.ವ್ಯ(ಖ)/ಸ.ಪ್ರ.ವ್ಯ(ಖ–2)/2023–24/16941 ದಿನಾಂಕ: 16.12.2023
ಅಲ್ಪಾವಧಿ ಟೆಂಡರ್ ಪ್ರಕಟಣೆ (ವಿದ್ಯುನ್ಮಾನ ಸಂಗ್ರಹಣಾ ವೇದಿಕೆ)
ಚಾ.ವಿ.ಸ.ನಿ.ನಿ ವತಿಯಿಂದ ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಸಾಮಗ್ರಿಗೆ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಿದೆ.

ಕ್ರ.ಸಂ	ವಿವರಗಳು	ವಿಚಾರಣೆ ಸಂಖ್ಯೆ/ದಿನಾಂಕ
1.	ಚಾವಿಸನಿನಿಗೆ ರಾಬಿಟ್ ಎಸಿಎಸ್‌ಆರ್ ವಾಹಕವನ್ನು ಸರಬರಾಜು ಮಾಡಲು	ಸಿ2–5583/08–12–2023

ಟೆಂಡರ್‌ನಲ್ಲಿ ಭಾಗವಹಿಸುವ ಬಗ್ಗೆ ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ **https://kppp.karnataka.gov.in** ನಲ್ಲಿ **ದಿನಾಂಕ:21.12.2023** ರ ನಂತರ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ **ಹೆಲ್ಪ್‌ಲೈನ್ +91–8046010000, +91–8068948777** ಗೆ ಅಥವಾ ಇ–ಮೇಲ್ ವಿಳಾಸ **support@eprochelpdesk.com** ವ್ಯವಹರಿಸಲು ಕೋರಲಾಗಿದೆ.
ವಿದ್ಯುತ್ ಸಂಬಂಧಿಸಿದ ದೂರುಗಳಿಗೆ ಕರೆ ಮಾಡಿ : 1912
ಸಹಿ/– ಪ್ರಧಾನ ವ್ಯವಸ್ಥಾಪಕರು(ಖರೀದಿ) ಚಾ.ವಿ.ಸ.ನಿ.ನಿ, ಮೈಸೂರು
DIPR/MYS/KAVITA/799/2022-23

ಕರ್ನಾಟಕ ಸರ್ಕಾರ
ಕಾರ್ಯದರ್ಶಿಗಳ ಕಾರ್ಯಾಲಯ
ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ
ಮಹದೇಶ್ವರಬೆಟ್ಟ, ಹನೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ
ದೂರವಾಣಿ ಸಂಖ್ಯೆ : 08225–272128 ಫ್ಯಾಕ್ಸ್ ಸಂಖ್ಯೆ : 08225–272123
Email : sec.mmtemple@gmail.com
ಸಂಖ್ಯೆ : ಶ್ರೀ ಮ.ಮ.ಕ್ಷೇತ್ರ.ಅ.ಪ್ರಾ/ಗುತ್ತಿಗೆ/8/ಪಿಆರ್/42/2023–24 ದಿನಾಂಕ : 13–12–2023
ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ
ಕರ್ನಾಟಕ ಸಾರ್ವಜನಿಕ ಕೆ.ಪಿ.ಪಿ ಪೋರ್ಟಲ್ ಮುಖಾಂತರ ಮಾತ್ರ

ಕ್ರ.ಸಂ.	ಹಕ್ಕುಬಾಧ್ಯತೆ ವಿವರ	ಗುತ್ತಿಗೆ ಅವಧಿ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ ಮೊತ್ತ (ಶೇ. 1 ರೂ.ಗಳಲ್ಲಿ)
1	ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ಮುಡಿ ಮತ್ತು ಮುಡಿ ಕಾಣಿಕೆ ವಸೂಲಾತಿಯ ಹಕ್ಕು ಬಾಧ್ಯತೆಯನ್ನು ಇ–ಟೆಂಡರ್‌ನಲ್ಲಿ ದಿನಾಂಕ : 01–01–2024 ರಿಂದ ದಿನಾಂಕ : 31–12–2024 ರವರೆಗೆ 1 ವರ್ಷದ ಅವಧಿಗೆ ಪಡೆಯುವ ಬಗ್ಗೆ	1 ವರ್ಷ	300.00	3,00,000=00

ವಿವರಗಳನ್ನು https://kppp.karnataka.gov.in/ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಹೆಚ್ಚಿನ ವಿವರಗಳಿಗೆ ಕಛೇರಿಯ ಅವಧಿಯಲ್ಲಿ ಶ್ರೀ ಜಿ.ಎಲ್. ಚಂದ್ರಶೇಖರ್, ಉಪ ಕಾರ್ಯದರ್ಶಿ ರವರ ಮೊಬೈಲ್ ನಂ. 9902593369 ರವರಿಂದ ಮಾಹಿತಿ ಪಡೆಯಬಹುದು. ಸ್ಪಷ್ಟೀಕರಣಬೇಕಾದಲ್ಲಿ ಕಾರ್ಯದರ್ಶಿಯವರ ಮೊಬೈಲ್ ನಂ. 8277682882 ಸಂಪರ್ಕಿಸ ತಕ್ಕದ್ದು.
ಇ–ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ವೇಳಾಪಟ್ಟಿ ಈ ಕೆಳಕಂಡಂತಿದೆ.

ಕ್ರ.ಸಂ.	ಷರಾ	ದಿನಾಂಕ	ವಿವರ
1	ಇ–ಪೋರ್ಟಲ್‌ನಲ್ಲಿ ಟೆಂಡರ್ ಪ್ರಕ್ರಿಯೆಗಳು ಚಾಲ್ತಿಗೆ ಬರುವ ದಿನಾಂಕ	13–12–2023	ರ ನಂತರ
2	ಇ–ಟೆಂಡರ್ ಸಲ್ಲಿಸುವ ಕೊನೆ ದಿನಾಂಕ ಮತ್ತು ವೇಳೆ	27–12–2023	ಸಂಜೆ 5.00 ಗಂಟೆವರೆಗೆ
3	ಇ–ಟೆಂಡರ್ ತೆರೆಯುವ ದಿನಾಂಕ ಮತ್ತು ವೇಳೆ	28–12–2023	ಇ–ಟೆಂಡರ್ ಸಂಜೆ 5.00 ಗಂಟೆಯ ನಂತರ ತೆರೆಯಲಾಗುವುದು.

ಸಹಿ/– ಕಾರ್ಯದರ್ಶಿ
ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ, ಮಹದೇಶ್ವರಬೆಟ್ಟ

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಟೆಂಡರ್‌ಗಳಿಗಾಗಿ ಆಹ್ವಾನ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಬೆಂಗಳೂರು ಜಲ ಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಏಜೆನ್ಸಿಗಳಿಂದ ಟೆಂಡರುಗಳನ್ನು ಆಹ್ವಾನಿಸಿದೆ.

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ(ರೂ.ಗಳಲ್ಲಿ) / ಇಎಂಡಿ ಮೊತ್ತ (ರೂ.ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
ಮುಖ್ಯ ಅಭಿಯಂತರರ ಕಛೇರಿ (ಪೂರ್ವ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009					
1	ದಕ್ಷಿಣ ಪೂರ್ವ–1	ಬೆಂಜಮಂ/ಕಾನಿಅ(ದಪೂ)–1/ಪಿಬಿ/2736/ 2023–24 ದಿನಾಂಕ: 18.12.2023	ರೂ. 26,58,945/– / ರೂ. 62,800/–	05.01.2024 ರ ಸಂಜೆ 4:00 ಗಂಟೆಯವರೆಗೆ	06.01.2024 ಸಂಜೆ 5:00 ಗಂಟೆಯ ನಂತರ
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ದಕ್ಷಿಣ ಪೂರ್ವ–1)					
2	ದಕ್ಷಿಣ ಪೂರ್ವ–2	ಬೆಂಜಮಂ/ಕಾನಿಅ(ದಪೂ–2)/ತಾಂಅ/ಪಿಬಿ/2456/ 2023–24 ದಿನಾಂಕ: 20.12.2023	ರೂ. 44,34,072/– / ರೂ. 1,04,600/–	05.01.2024 ರ ಸಂಜೆ 4:00 ಗಂಟೆಯವರೆಗೆ	08.01.2024 ಮಧ್ಯಾಹ್ನ 3:00 ಗಂಟೆಯ ನಂತರ
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ದಕ್ಷಿಣ ಪೂರ್ವ–2)					
ಮುಖ್ಯ ಅಭಿಯಂತರರ ಕಛೇರಿ (ತ್ಯಾನೀನಿ–ಪೂರ್ವ), 5ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009					
3	(ತ್ಯಾನೀನಿ–ಎನ್) ಕೆ&ಟಿ ವ್ಯಾಲಿ	ಬೆಂಜಮಂ/ಇಡಬ್ಲ್ಯೂ(ಎನ್)ಕೆಟಿ/ಪಿಬಿ/991/ 2023–24 ದಿನಾಂಕ: 20.12.2023 (2ನೇ ಕರೆ)	ರೂ. 82.80 ಲಕ್ಷಗಳು / ರೂ. 1.656 ಲಕ್ಷಗಳು	28.12.2023 ರ ಸಂಜೆ 5.30 ಗಂಟೆಯವರೆಗೆ	29.12.2023 ರ ಸಂಜೆ 4:30 ಗಂಟೆಗೆ
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ತ್ಯಾನೀನಿ–ಎನ್) ಕೆ&ಟಿ ವ್ಯಾಲಿ					
ಮುಖ್ಯ ಅಭಿಯಂತರರ ಕಛೇರಿ (ವಿನ್ಯಾಸ & ಗು.ಅ), 9ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009					
4	ಡಿಸಿ & ಬಿಎಂ	ಬೆಂಜಮಂ/ಕಾನಿಅ(ಡಿಸಿ&ಬಿಎಂ)/ಪಿಬಿ/1736/ 2023–24 ದಿನಾಂಕ: 14.12.2023	ರೂ. 31,24,583/– / ರೂ. 78,115/–	28.12.2023 ರ ಸಂಜೆ 4:00 ಗಂಟೆಯವರೆಗೆ	29.12.2023 ರ ಸಂಜೆ 4:00 ಗಂಟೆಯ ನಂತರ
5		ಬೆಂಜಮಂ/ಕಾನಿಅ(ಡಿಸಿ&ಬಿಎಂ)/ಪಿಬಿ/1738/ 2023–24 ದಿನಾಂಕ: 14.12.2023	ರೂ. 8,58,940/– / ರೂ. 25,500/–		
6		ಬೆಂಜಮಂ/ಕಾನಿಅ(ಡಿಸಿ&ಬಿಎಂ)/ಪಿಬಿ/1777/ 2023–24 ದಿನಾಂಕ: 15.12.2023	ರೂ. 39,94,674/– / ರೂ. 94,500/–		
7		ಬೆಂಜಮಂ/ಕಾನಿಅ(ಡಿಸಿ&ಬಿಎಂ)/ಪಿಬಿ/1779/ 2023–24 ದಿನಾಂಕ: 15.12.2023	ರೂ. 9,13,888.76 / ರೂ. 22,900/–		
8		ಬೆಂಜಮಂ/ಕಾನಿಅ(ಡಿಸಿ&ಬಿಎಂ)/ಪಿಬಿ/1781/ 2023–24 ದಿನಾಂಕ: 15.12.2023 (2ನೇ ಕರೆ)	ರೂ. 55,36,618/– / ರೂ. 1,10,800/–		
9		ಬೆಂಜಮಂ/ಕಾನಿಅ(ಡಿಸಿ&ಬಿಎಂ)/ಪಿಬಿ/1783/ 2023–24 ದಿನಾಂಕ: 15.12.2023 (ಪರಿಶಿಷ್ಟ ಜಾತಿಗೆ ಮೀಸಲಿರಿಸಿದೆ)	ರೂ. 14,53,943/– / ರೂ. 18,500/–		
10		ಬೆಂಜಮಂ/ಕಾನಿಅ(ಡಿಸಿ&ಬಿಎಂ)/ಪಿಬಿ/1799/ 2023–24 ದಿನಾಂಕ: 15.12.2023	ರೂ. 44,09,798/– / ರೂ. 88,500/–		
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಡಿಸಿ&ಬಿಎಂ)					

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಗಳನ್ನು **https://kppp.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
ವಾಸಾಸಂಇ/ವಾಪ್ರ/ಜಿಎ/2650/2023–24

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ, ಆನಂದರಾವ್ ವೃತ್ತ, ಬೆಂಗಳೂರು – 560009
ಸಂ: ಕಾಪಾಅ/ಪಂರಾಇಂವಿ/ಬೆಂಗ್ರಾಂ/ಟೆಂ–04/ತಾಂಶಾ/2023–24 ದಿನಾಂಕ: 20.12.2023
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ: 04/2023–24 (ಕೆ.ಪಿ.ಪಿ ಪೋರ್ಟಲ್ ಮುಖಾಂತರ)
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ನ್ನು ನಾಲ್ಕನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರಿಂದ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದಡಿ ಅನುಮೋದನೆಯಾದ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ ಇವರು ಆಹ್ವಾನಿಸಿರುತ್ತಾರೆ. ಸದರಿ ಕಾಮಗಾರಿಗೆ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 28.12.2023 ಸಂಜೆ 4.30 ಗಂಟೆಯವರೆಗೆ** ನಿಗಧಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ವಿವರಗಳನ್ನು **http://kppp.karnataka.gov.in** ವೆಬ್‌ಸೈಟ್ ನಲ್ಲಿ ಪಡೆಯಬಹುದಾಗಿದೆ.
ಸಹಿ/– ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ, ಬೆಂಗಳೂರು
DIPR/CP/2641/SPAN/2023-24

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ. 8, ಎಂಎಸ್‌ಬಿ–1, 6ನೇ ಮತ್ತು 7ನೇ ಮಹಡಿ, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು–560052
ಸಂ.: ಕವಶಿಸಸ/ಸಕಾಅ–10/ಟೆಂಡರ್–02/2023–24 ದಿನಾಂಕ: 20.12.2023
ಟೆಂಡರ್ ಪ್ರಕಟಣೆ (ಇ–ಟೆಂಡರ್ ಮೂಲಕ ಮಾತ್ರ)
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ಉಡುಪಿ ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆ ಹಾಗೂ ಶ್ರೀಮತಿ ಇಂದಿರಾಗಾಂಧಿ ವಸತಿ ಶಾಲೆಗಳಿಗೆ, ದುರಸ್ತಿ ಹಾಗೂ ನೀರು ಸರಬರಾಜು ಕಾಮಗಾರಿಗಳಿಗೆ ಕ್ರಮವಾಗಿ (**ಟೆಂಡರ್ ಇಂಡೆಂಟ್ ಸಂಖ್ಯೆ 18, 91, 13(SC), 16(ST), 63, 64 & 65**) ಇ–ಪೋರ್ಟಲ್ ಮುಖಾಂತರ ದಿನಾಂಕ: **20.12.2023**ರಂದು ಟೆಂಡರನ್ನು ಕರೆಯಲಾಗಿದ್ದು, ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: **03.01.2024**ರಂದು ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ **http://kppp.karnataka.gov.in** ರಲ್ಲಿ ನೋಡಬಹುದಾಗಿದೆ.
ಸೂಚನೆ: ಅಲ್ಪಾವಧಿ ಟೆಂಡರ್ ಪ್ರಕಟಣೆಯಲ್ಲಿ ವ್ಯತ್ಯಾಸವಿದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಅದನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.
ಸಹಿ/– ಸಹಾಯಕ ಕಾರ್ಯಪಾಲಕ ಅಭಿಯಂತರರು, ಕ.ವ.ಶಿ.ಸ.ಸಂ.
ವಾಸಾಸಂಇ/ವಾಪ್ರ/ಎಲ್‌ಸಿ/2645/2023–24

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ.
ಸಂ:ಕಾ.ಸಾ.ಚಿ/ಪಿ.ಬಿ–3/ಅ.ಟೆಂಡರ್ ಅವಧಿ ವಿಸ್ತರಣೆ 49&53–1/2023–24 ದಿನಾಂಕ: 18–12–2023
ಅಲ್ಪಾವಧಿ ಟೆಂಡರ್ ಅವಧಿ ವಿಸ್ತರಣೆ
ಉಲ್ಲೇಖ:ಸಂ:ಕಾ.ಸಾ.ಚಿ/ಪಿ.ಬಿ–3/ಟೆಂಡರ್ ಪ್ರಕಟಣೆ–ಐ.ಎಫ್.ಟಿ–49&53–1/ 2023–24 ದಿನಾಂಕ: 18–12–2023
ಕರ್ನಾಟಕ ಸರ್ಕಾರ ಮಾನ್ಯ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ & ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ ಇವರು ಕೆಟಿಪಿಪಿ ಆಕ್ಟ್–2000 ನಿಯಮದಂತೆ, ಹಾಗೂ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–2 ನಿಬಂಧನೆಗಳಿಗೊಳಪಟ್ಟಂತೆ ಐ.ಎಫ್.ಟಿ–49&53 ರಲ್ಲಿ ಕರೆಯಲಾದ ಕಾಮಗಾರಿಗಳ ಪೈಕಿ ಕಾರಣಾಂತರಗಳಿಂದ ಮರುಟೆಂಡರ್ ಕರೆಯಬೇಕಾಗಿರುತ್ತದೆ. ಆದ್ದರಿಂದ ಐ.ಎಫ್.ಟಿ–49 & 53 ರಲ್ಲಿ ಕರೆಯಲಾದ ಚಳ್ಳಕರೆ ತಾಲ್ಲೂಕಿನ ಒಟ್ಟಾರೆ 02 ಕಾಮಗಾರಿಗಳ (ಗರಿಷ್ಠ ಅಂದಾಜು ಮೊತ್ತ: ರೂ.35.00 ಲಕ್ಷ, ಕನಿಷ್ಠ ಅಂದಾಜು ಮೊತ್ತ: ರೂ.25.00 ಲಕ್ಷ) ಪ್ರಚುರವನ್ನು ಈ ಕೆಳಗಿನಂತೆ ನಿಗಧಿಪಡಿಸಲಾಗಿರುತ್ತದೆ. ದಿನಾಂಕ: 19–12–2023 ರಿಂದ ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ಬಗ್ಗೆ ವಿಚಾರಿಸಲು/ ಮಾಹಿತಿ ಪಡೆಯಲು ಕೊನೆಯ ದಿನಾಂಕ: 27–12–2023 ಸಾಯಂಕಾಲ 5.30 ರವರೆಗೆ, ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 28–12–2023 ರ ಸಾಯಂಕಾಲ 4.00 ಗಂಟೆಯವರೆಗೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ ದಿನಾಂಕ: 29–12–2023 ಸಾಯಂಕಾಲ 04–30 ಗಂಟೆಯ ನಂತರ (ಸಾಧ್ಯವಾದಲ್ಲಿ),ಸದರಿ ಕಾಮಗಾರಿಯಲ್ಲಿ ಟೆಂಡರ್ ಮೊತ್ತ ಅಥವಾ ಇ.ಎಂ.ಡಿ.ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್‌ನ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಮೂದಿಸಿರುವ ಮೊತ್ತ ಅಂತಿಮವಾಗಿರುತ್ತವೆ. ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯಿಂದ (08194–231811) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ: 080–25501216/ 080–25501227 ರಿಂದ ಪಡೆಯಬಹುದು.
DIPR/CTA/KSMCA/431/2023-24
ಸಹಿ/–ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ & ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರವರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು–570 006
ಸಂ.ಕಾಅ/ಗ್ರಾಕುನೀ&ನೈವಿ/ಮೈ/ಇ–ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
ಇ–ಟೆಂಡರ್ ಪ್ರಕಟಣೆ ಸಂಖ್ಯೆ: 24/2023–24 ದಿನಾಂಕ: 15.12.2023
ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರುರವರು ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಬೆಂಗಳೂರುರವರ ಸಹಯೋಗದೊಂದಿಗೆ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ/ಎನ್‌ರೋಲ್ ಏಜೆನ್ಸಿ ರವರು ಟೆಂಡರ್ ನಮೂನೆ RFP ರೀತ್ಯಾ ಪದ್ಧತಿಯಂತೆ ಗ್ರಾ.ಕು.ನೀ & ನೈ ವ್ಯಾಪ್ತಿಯ Selection and Empanelment of Implementation Support Resource Agencies (ISRA) (NGO's/ VO's/ SHG's) for providing services related to Implementation of IEC & HRD activities under Jal Jeevan Mission (JJM) in rural areas under Rural Drinking Water & Sanitation Dept. of Mysuru District (ಅಂದಾಜು ಮೊತ್ತ ರೂ.134.76 ಲಕ್ಷಗಳು) ಸರ್ವೀಸ್ ಕಾಮಗಾರಿಗೆ ಇ–ಪ್ರಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್‌ಲೈನ್ ನಲ್ಲಿ ಸಲ್ಲಿಸಲು ನಿಗಧಿತ ಅವಧಿ ದಿನಾಂಕ: 19.12.2023 ರಿಂದ 26.12.2023 ರವರೆಗೆ ಮತ್ತು ಟೆಂಡರ್ ತೆರೆಯುವ ದಿ: 27.12.2023ರ ಸಂಜೆ.5.00 ಘಂಟೆಯ ನಂತರ. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (e-procurement portal) ವೆಬ್ ಸೈಟ್‌ನಲ್ಲಿ ಪಡೆಯಬಹುದು. https://kppp.karnataka.gov.in ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು (ಫೋನ್ ನಂ.0821–2460495) ರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.
DIPR/DDMYS/KSMCA/789/2023-24
ಸಹಿ/– ಕಾರ್ಯಪಾಲಕ ಅಭಿಯಂತರು

ಕರ್ನಾಟಕ ಸರ್ಕಾರ
ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಕೊಪ್ಪ ವಿಭಾಗ, ಕೊಪ್ಪ – 577126
ಇ–ಮೇಲ್ : dcfkoppa@gmail.com ದೂರವಾಣಿ : 08265–221266
ಸಂಖ್ಯೆ:ಎ4:ಆತಪ್ರ:ವಜೀ:ಸಿಆರ್:21/2023–24 ದಿನಾಂಕ:14–12–2023
ಪತ್ರಿಕಾ ಪ್ರಕಟಣೆ
ಕೊಪ್ಪ ಅರಣ್ಯ ವಿಭಾಗದ ವ್ಯಾಪ್ತಿಯಲ್ಲಿ ಅರಣ್ಯ ಪ್ರದೇಶದ ಸುತ್ತಮುತ್ತಲಿನ ಗ್ರಾಮಗಳಲ್ಲಿ ಕಾಡುಕೋಣಗಳ ಹಾವಳಿ ಹೆಚ್ಚಾಗಿದ್ದು, ಸದರಿ ಕಾಡುಕೋಣಗಳು ರೈತರ ತೋಟ ಹಾಗೂ ಜಮೀನುಗಳಲ್ಲಿ ಸಂಚರಿಸುತ್ತಿದ್ದು, ಇದರಿಂದಾಗಿ ಮಾನವ ಪ್ರಾಣಹಾನಿ ಹಾಗೂ ಬೆಳೆ ನಾಶ ಪ್ರಕರಣಗಳು ಅತೀ ಹೆಚ್ಚು ಸಂಖ್ಯೆಯಲ್ಲಿ ದಾಖಲಾಗುತ್ತಿದೆ. ಸದರಿ ಕಾಡುಕೋಣಗಳು ಯಾವ ಪ್ರದೇಶದಲ್ಲಿ ಹೆಚ್ಚಾಗಿ ಕಂಡುಬರುತ್ತಿದೆ ಎಂಬುದನ್ನು ಪತ್ತೆ ಮಾಡಿ ಅವುಗಳ ಸಂಖ್ಯೆಯನ್ನು ಅಂದಾಜಿಸಿ ಏಣಿಕೆ ಕಾರ್ಯ ಕೈಗೊಂಡು ವರದಿ ಸಲ್ಲಿಸುವ ಸಲುವಾಗಿ SOP ಪ್ರಕಾರ ಈ ಹಿಂದೆ ವನ್ಯಪ್ರಾಣಿಗಳ ಬಗ್ಗೆ ಇಂತಹ ಸರ್ವೆ ಕಾರ್ಯಗಳನ್ನು ಮಾಡಿ ಅನುಭವ Expression of Intrest ಅನ್ನು ಅದಕ್ಕೆ ತಗುಲುವ ಪೂರಕ ವೆಚ್ಚದ ದಾಖಲಾತಿಗಳೊಂದಿಗೆ ವಿವರವನ್ನು ಸಲ್ಲಿಸಲು ಆಹ್ವಾನಿಸಲಾಗಿದೆ. ಸದರಿ ದಾಖಲಾತಿ ಮತ್ತು ವೆಚ್ಚದ ವಿವರವನ್ನು ದಿನಾಂಕ : 26–12–2023 ರೊಳಗೆ ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯಲ್ಲಿ ಪಡೆಯಬಹುದಾಗಿದೆ.
ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ, ಕೊಪ್ಪ ವಿಭಾಗ, ಕೊಪ್ಪ.

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಜಿಲ್ಲಾ ಪಂಚಾಯತಿ ಕಟ್ಟಡ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು – 560070.
ಸಂಖ್ಯೆ:ಕಾಅ/ಪಂರಾಇಂವಿ/ಬೆಂನ/ಎಇ–2/ಟೆಂಡರ್/21/2023–24 ದಿನಾಂಕ: 20–12–2023
ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ 2023–24ನೇ ಸಾಲಿನ ಜಿಲ್ಲಾ ಪಂಚಾಯತ್ ವಿವಿಧ ಲೆಕ್ಕಶೀರ್ಷಿಕೆಯಡಿ ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: **28–12–2023 ರಂದು ಸಂಜೆ 4.00 ಗಂಟೆಯವರೆಗೆ** ಪಡೆದು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿವಾರು ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್: **https://kppp.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.
ಸಹಿ/– ಕಾರ್ಯಪಾಲಕ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.
ವಾಸಾಸಂಇ/ವಾ.ಪ್ರ/2655/ಅಡ್ವರ್ಟೋರ್/2023–24

ಕರ್ನಾಟಕ ಸರ್ಕಾರ
ಸಾರಿಗೆ ಇಲಾಖೆ
ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ, ಕೆ.ಆರ್. ಪುರಂ, ಬೆಂಗಳೂರು.
ನಂ. ಪ್ರಾಸಾಅ/ಕೆ.ಆರ್.ಪುರ/ಕಟ್ಟಡ/2023–24 ದಿನಾಂಕ: 20.12.2023
ಇ–ಟೆಂಡರ್ ಪ್ರಕಟಣೆ
ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ, ಕೆ.ಆರ್.ಪುರ ಕಛೇರಿಯು ಭಟ್ಟರಹಳ್ಳಿ, ವಿಗ್ನೋನಗರ ಅಂಚೆ, ಬೆಂಗಳೂರು–560049 ಇದರ ಬಳಿ ಕಾರ್ಯನಿರ್ವಹಿಸುತ್ತಿದ್ದು, **ಕಛೇರಿಯ ಸ್ವಚ್ಛತಾ (House keeping) ನಿರ್ವಹಣೆಗೆ** ಅರ್ಹ ಸಂಸ್ಥೆಗಳಿಂದ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆಗಳು ವಿವರಗಳನ್ನು ಅಂತರ್ಜಾಲ ಮೂಲಕ ವೆಬ್‌ಸೈಟ್ ವಿಳಾಸ **www.kppp.karnataka.gov.in** ಸಂಪರ್ಕಿಸಿ ಪಡೆಯಬಹುದಾಗಿದೆ. ಸಂಸ್ಥೆಗಳು ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿಯನ್ನು ದೂರವಾಣಿ ಸಂಖ್ಯೆ: (**House keeping) 080–460010000 / 080–68948777** ಮೂಲಕ ಸಂಪರ್ಕಿಸಿ ಸಹಾಯವನ್ನು ಪಡೆಯಬಹುದು.
ಇ–ಪೋರ್ಟಲ್ ಮೂಲಕ ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 08.01.2024ರ ಸಂಜೆ 4.00 ಗಂಟೆ ಆಗಿರುತ್ತದೆ.
ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: **080–25617951 / 9449864053**ನ್ನು ಸಂಪರ್ಕಿಸಬಹುದು.
ಜಂಟಿ ಸಾರಿಗೆ ಆಯುಕ್ತರು, ಬೆಂಗಳೂರು ನಗರ ರವರ ಆದೇಶದ ಮೇರೆಗೆ
ಸಹಿ/– ಪ್ರಾದೇಶಿಕ ಸಾರಿಗೆ ಅಧಿಕಾರಿ ಕೆ.ಆರ್. ಪುರ, ಬೆಂಗಳೂರು.
DIPR/CP/YC/2648/2023-24

ಆಯುಷ್ ಇಲಾಖೆ
ಸರ್ಕಾರಿ ಯುನಾನಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಡಾ:ಸಿದ್ಧಯ್ಯ ಪುರಾಣಿಕ್ ರಸ್ತೆ, ಬಸವೇಶ್ವರನಗರ, ಬೆಂಗಳೂರು–560079.
gumcprincipal1975@gmail.com ದೂರವಾಣಿ ಸಂಖ್ಯೆ: 080–23116061
ಸಂಖ್ಯೆ: ಸಯುಮ/06/ಸರಬ/ನ್ಯಾಮ್/2022–23 (ಭಾಗ–1) ದಿನಾಂಕ: 20.12.2023
ಇ–ಟೆಂಡರ್ ಅಧಿಸೂಚನೆ (ಕಾಲ್–2)
ದ್ವಿ ಲಕೋಟೆ ಪದ್ಧತಿ ಟೆಂಡರ್ (ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್)
ಪ್ರಾಚಾರ್ಯರು, ಸರ್ಕಾರಿ ಯುನಾನಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಬಸವೇಶ್ವರನಗರ, ಬೆಂಗಳೂರು ರವರಿಂದ ಮಹಾವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳಾದ ನಿಸ್ವಾನ್ ವಾ ಕಬಾಲತ್ (OBG) ಹಾಗೂ ಅಮ್ರಾಜ್ ಜಿಲ್ದ್ ವಾ ತಜ್ಞೀನಿಯತ್ (SKIN & DERMATOLOGY) ವಿಭಾಗಗಳಿಗೆ ರಾಷ್ಟ್ರೀಯ ಆಯುಷ್ ಅಭಿಯಾನದ ಅನುದಾನದಿಂದ ಅವಶ್ಯವಿರುವ ಯಂತ್ರೋಪಕರಣಗಳು, ಪೀಠೋಪಕರಣಗಳು, ಎಲೆಕ್ಟ್ರಾನಿಕ್ಸ್ ಮತ್ತು ಎಲೆಕ್ಟ್ರಿಕಲ್ ವಸ್ತುಗಳು ಮತ್ತು ಯುನಾನಿ ಪುಸ್ತಕಗಳ ಸರಬರಾಜಿಗಾಗಿ ಅನುಭವಿ ಮತ್ತು ಆಸಕ್ತ ಹಾಗೂ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999–2000 ನಿಯಮಗಳು ಮತ್ತು ಮುಂದುವರೆದ ನಿಯಮಗಳನ್ವಯ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೌಲ್ಯ ರೂ:36.00ಲಕ್ಷಗಳು. (ರೂಪಾಯಿಗಳು ಮೂವತ್ತಾರು ಲಕ್ಷ ಮಾತ್ರ).
1) ಟೆಂಡರ್ ಬಿಡ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವುದು – **ದಿನಾಂಕ: 20.12.2023 ಅಪರಾಹ್ನ 3.00 ನಂತರ** 2) ಭರ್ತಿ ಮಾಡಲಾದ ಟೆಂಡರ್‌ನ್ನು ಸಲ್ಲಿಸುವುದು – ದಿನಾಂಕ: **03.01.2024 ಅಪರಾಹ್ನ 3.00 ವರೆಗೆ.** 3) ಆನ್‌ಲೈನ್ ಟೆಂಡರ್‌ನ್ನು ತೆರೆಯುವುದು – **ದಿನಾಂಕ: 05.01.2024ರ ಪೂವಾಹ್ನ 11.30 ಗಂಟೆಗೆ.**
ಇತರೆ ಯಾವುದೇ ಮಾಹಿತಿಯನ್ನು ಕಚೇರಿಯ ಸಮಯದಲ್ಲಿ ಕೆಳಕಂಡವರನ್ನು ಸಂಪರ್ಕಿಸಿ ಪಡೆಯಬಹುದು.
ಸಹಿ/– ಟೆಂಡರ್ ಆಹ್ವಾನಿಸುವ ಪ್ರಾಧಿಕಾರ/ಪ್ರಾಚಾರ್ಯರು
ಸರ್ಕಾರಿ ಯುನಾನಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಬಸವೇಶ್ವರನಗರ, ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ/2644/ಆಕಾರ್/2023–24

ಪುರಸಭಾ ಕಾರ್ಯಾಲಯ ಬೊಮ್ಮಸಂದ್ರ
ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–560 099
ಸ್ವಚ್ಛ ಭಾರತ
ಫೋನ್: 080–27834655, E-Mail: itstaff_ulb_bommasandra@yahoo.com
ಸಂ:TMCB/ENG/MF/Tender 08/2023-24 ದಿನಾಂಕ:20.12.2023
ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
(ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ KW1&2 ರ ನಿಬಂಧನೆಗಳಂತೆ ಅರ್ಜಿ ಆಹ್ವಾನಿಸಲಾಗಿದೆ)
2023–24ನೇ ಸಾಲಿನ ಬೊಮ್ಮಸಂದ್ರ ವಿವಿಧ ಅನುದಾನದಡಿ, ಒಟ್ಟು 19 ಕಾಮಗಾರಿಗಳ ಒಟ್ಟು ಮೊತ್ತ ರೂ. 185.33ಲಕ್ಷಗಳಿಗೆ ಐಟಂವಾರು ಮತ್ತು ಇ–ಪ್ರೊಕ್ಯೂರ್‌ಮೆಂಟ್‌ನ ದ್ವಿ–ಲಕೋಟೆ ಪದ್ಧತಿಯಲ್ಲಿ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **https://kppp.karnataka.gov.in** ಮೂಲಕ ಟೆಂಡರ್ ಸಲ್ಲಿಸುವುದು.
ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ಅಲ್ಪಾವಧಿ ಟೆಂಡರ್‌ಗಳಿಗೆ ಕೊನೆಯ ದಿನಾಂಕ: **27.12.2023ರ ಸಮಯ: 17:00 ಗಂಟೆಯವರೆಗೆ.** ಟೆಂಡರ್‌ನ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: **28.12.2023ರ ಸಮಯ: 17:30 ಗಂಟೆಗೆ.** ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ: **01.01.2024ರ ಸಮಯ: 11:00 ಗಂಟೆಗೆ.** ಪೂರ್ಣಾವಧಿ ಟೆಂಡರ್‌ಗಳಿಗೆ ಕೊನೆಯ ದಿನಾಂಕ : **06.01.2024, ಸಮಯ: 17:00 ಗಂಟೆಯವರೆಗೆ.** ಟೆಂಡರ್‌ನ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: **08.01.2024ರ ಸಮಯ: 17:30 ಗಂಟೆಗೆ.** ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ: **10.01.2024ರ ಸಮಯ: 11:00 ಗಂಟೆಗೆ.** ಹೆಚ್ಚಿನ ವಿವರಗಳಿಗಾಗಿ (itstaff_ulb_bommasandra@yahoo.com) ಅಥವಾ ಪುರಸಭೆಯ ಅಭಿಯಂತರರನ್ನು ಸಂಪರ್ಕಿಸುವುದು.
ಸಹಿ/– ಅಧ್ಯಕ್ಷರು ಪುರಸಭೆ, ಬೊಮ್ಮಸಂದ್ರ | ವಾಸಾಸಂಇ/ವಾಪ್ರ/ಜಿಎ/2651/2023–24 | ಸಹಿ/– ಮುಖ್ಯಾಧಿಕಾರಿ ಪುರಸಭೆ, ಬೊಮ್ಮಸಂದ್ರ



❦ ಸುಭಾಷಿತ ❦
ಜೀವನ ಎಂಬುದು ಒಂದು ಬೈಸಿಕಲ್ ಇದ್ದಂತೆ. ಸಮತೋಲನ ಕಾಯ್ದುಕೊಳ್ಳಬೇಕೆಂದರೆ, ನೀವು ಸದಾ ಚಲನಶೀಲರಾಗಿ ಇರಬೇಕಾಗುತ್ತದೆ.
–ಆಲ್ಬರ್ಟ್ ಐನ್‌ಸ್ಟೀನ್

ಕೋವಿಡ್ ಪ್ರಕರಣ ಹೆಚ್ಚಳ ಎಚ್ಚರಿಕೆ ಇರಲಿ, ಆತಂಕ ಬೇಡ

ನೆರೆರಾಜ್ಯ ಕೇರಳದಲ್ಲಿ ಕೆಲವೇ ದಿನಗಳಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ತೀವ್ರಗತಿಯಲ್ಲಿ ಏರಿಕೆ ಆಗಿರುವುದರಿಂದ ಕರ್ನಾಟಕದಲ್ಲೂ ಎಚ್ಚರಿಕೆಯ ಹಾಗೂ ಮುಂಜಾಗ್ರತೆಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ನಿಗಾ ವ್ಯವಸ್ಥೆಯನ್ನು ಹೆಚ್ಚಿಸಲಾಗಿದ್ದು, ಕೋವಿಡ್ ಪರೀಕ್ಷೆಯ ಪ್ರಮಾಣವನ್ನೂ ನಿತ್ಯ ಐದು ಸಾವಿರಕ್ಕೆ ಏರಿಕೆ ಮಾಡಲು ನಿರ್ಧರಿಸಲಾಗಿದೆ. 60 ವರ್ಷಕ್ಕಿಂತ ಹೆಚ್ಚಿನ ವಯೋಮಾನದವರು, ಹೃದಯ ಹಾಗೂ ಮೂತ್ರಪಿಂಡದ ಸಮಸ್ಯೆಗೆ ಒಳಗಾದವರು, ಗರ್ಭಿಣಿಯರು, ಬಾಣಂತಿಯರು ಮತ್ತು ಕೊರೊನಾ ಸೋಂಕಿನ ವಿವಿಧ ಲಕ್ಷಣಗಳನ್ನು ಹೊಂದಿರುವವರು ಮುಖಗವಸು ಧರಿಸಬೇಕು ಎಂಬ ಸಲಹೆಯನ್ನು ಆರೋಗ್ಯ ಇಲಾಖೆ ನೀಡಿದೆ. ಹೆಚ್ಚಿನ ನಿಗಾ ವಹಿಸಬೇಕು ಹಾಗೂ ಸೋಂಕಿತರ ಗಂಟಲು ಮತ್ತು ಮೂಗಿನ ದ್ರವದ ಮಾದರಿಯನ್ನು ವೈರಾಣುವಿನ ವಂಶವಾಹಿ ಸಂರಚನಾ ಪರೀಕ್ಷೆಗೆ ಕಳುಹಿಸಬೇಕು ಎಂದು ಕೇಂದ್ರ ಸರ್ಕಾರ ಸಹ ಮಾರ್ಗಸೂಚಿಯನ್ನು ಹೊರಡಿಸಿದೆ. ಆಸ್ಪತ್ರೆಗಳ ಸನ್ನದ್ಧ ಸ್ಥಿತಿಯನ್ನು ಪರಿಶೀಲಿಸುವಂತೆಯೂ ನಿರ್ದೇಶನ ನೀಡಿದೆ. ಈಗ ಹರಡುತ್ತಿರುವುದು ಕೊರೊನಾ ಸೋಂಕಿನ ಹೊಸ ಉಪತಳಿ ‘ಜೆಎನ್.1’ ಎಂಬ ಕಾರಣಕ್ಕಾಗಿಯೇ ಇಷ್ಟೆಲ್ಲ ಧಾವಂತ. ಈ ಸೋಂಕು ಮಾನವನ ರೋಗನಿರೋಧಕ ಶಕ್ತಿಗೆ ಸಡ್ಡು ಹೊಡೆಯುವ ಸಾಮರ್ಥ್ಯ ಹೊಂದಿದ್ದು, ಲಸಿಕೆ ಪಡೆದವರನ್ನೂ ಬಾಧಿಸಬಲ್ಲದು ಎನ್ನುವುದು ತಜ್ಞರ ಅಭಿಮತ. ಅಲ್ಲದೆ, ಬಹುತೇಕರು ಲಸಿಕೆ ಹಾಕಿಸಿಕೊಂಡು ಹಲವು ತಿಂಗಳುಗಳೇ ಆಗಿರುವುದರಿಂದ ಈ ಹೊಸ ಉಪತಳಿಯ ಉಪಟಳ ಹೆಚ್ಚಾಗಬಹುದು ಎಂದೂ ವಿಶ್ಲೇಷಿಸಲಾಗಿದೆ. ಆದರೆ, ಭಾರತದಲ್ಲಿ ಜೆಎನ್.1 ಅಷ್ಟೊಂದು ಅಪಾಯಕಾರಿ ಏನೂ ಆಗಲಾರದು. ಹೊಸತಳಿಯ ಸೋಂಕಿಗೆ ತಕ್ಕಂತೆ ಅದರ ನಿಯಂತ್ರಣಕ್ಕೆ ಲಸಿಕೆಗಳಲ್ಲೂ ಮಾರ್ಪಾಡು ಮಾಡಲಾಗಿದ್ದು, ಚಿಕಿತ್ಸೆ ಸಹ ಲಭ್ಯವಿದೆ ಎನ್ನುವುದು ನಿರಾಳ ಭಾವವನ್ನು ಮೂಡಿಸುವಂತಹ ಸಂಗತಿ.

ಸೋಂಕು ನಿಯಂತ್ರಿಸುವುದು ಸರ್ಕಾರದ ಕೆಲಸವೆಂದು ಮೈಮರೆಯದೆ ಜನರು ಜವಾಬ್ದಾರಿಯಿಂದ ವರ್ತಿಸಬೇಕು, ಸರ್ಕಾರದ ಮಾರ್ಗಸೂಚಿಗಳನ್ನು ತಪ್ಪದೇ ಪಾಲಿಸಬೇಕು

ಕೇರಳದಲ್ಲಿ ಒಂದೇ ವಾರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಮೂರು ಪಟ್ಟು ಹೆಚ್ಚಾಗಿದೆ. ಅಲ್ಲಿ, ಮೊದಲ ಜೆಎನ್.1 ಪ್ರಕರಣ ಪತ್ತೆಯಾಗಿದ್ದು ಡಿಸೆಂಬರ್ 8ರಂದು. ಸೋಂಕಿನಿಂದ ಬಳಲಿದ ವ್ಯಕ್ತಿ ಈಗ ಚೇತರಿಸಿಕೊಂಡಿದ್ದಾರೆ. ಆದರೆ, ಸೋಂಕುಪೀಡಿತರ ಸಂಖ್ಯೆ ದಿನದಿಂದ ದಿನಕ್ಕೆ ಏರಿಕೆ ಆಗುತ್ತಲೇ ಇದೆ. ಕೆಲವು ಪ್ರಕರಣಗಳಲ್ಲಿ ಸಾವುಗಳು ಸಂಭವಿಸಿದ ಕುರಿತೂ ವರದಿಯಾಗಿದೆ. ಆದರೆ, ಕಾಯಿಲೆಪೀಡಿತರು ಸೋಂಕಿನ ಜತೆಗೆ ಗಂಭೀರವಾದ ಇತರ ಆರೋಗ್ಯ ಸಮಸ್ಯೆಗಳಿಂದಲೂ ಬಳಲುತ್ತಿದ್ದರು ಎನ್ನುವುದನ್ನು ಕೂಡ ಗಣನೆಗೆ ತೆಗೆದುಕೊಳ್ಳಬೇಕು. ಸದ್ಯದ ಸಕ್ರಿಯ ಪ್ರಕರಣಗಳಲ್ಲಿ ಬಹುತೇಕ ಸೋಂಕುಪೀಡಿತರಿಗೆ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗುವ ಅಗತ್ಯ ಕಂಡುಬಂದಿಲ್ಲ. ಶೀತಜ್ವರ ಮಾದರಿಯ ಅನಾರೋಗ್ಯ (ಐಎಲ್ಐ) ಪ್ರಕರಣಗಳಲ್ಲಿ ಪರೀಕ್ಷೆಯ ಪ್ರಮಾಣವನ್ನು ಹೆಚ್ಚಿಸಿದ್ದು ಕೂಡ ಸೋಂಕಿನ ಪ್ರಕರಣಗಳು ಹೆಚ್ಚು ವರದಿಯಾಗಲು ಕಾರಣ. ಅಷ್ಟಾಗಿ ಚಿಕಿತ್ಸೆ ಕೂಡ ಬೇಕಾಗದೆ ಬಹುತೇಕರು ಗುಣಮುಖರಾಗಿದ್ದಾರೆ. ಕೊರೊನಾದ ಹಿಂದಿನ ಅಲೆಗಳಷ್ಟು ದೊಡ್ಡ ಪ್ರಮಾಣದಲ್ಲಿ ಜೆಎನ್.1 ಹರಡುವುದಿಲ್ಲ ಎಂದು ತಜ್ಞರು, ವೈದ್ಯರು ಹೇಳುತ್ತಿದ್ದರೂ ಪ್ರಕರಣಗಳ ಸಂಖ್ಯೆ ಏರುಗತಿಯಲ್ಲಿರುವುದು ಸಣ್ಣ ಕಳವಳವನ್ನು ಉಂಟುಮಾಡಿದೆ. ಅಲ್ಲದೆ, ಸೋಂಕು ರೂಪಾಂತರಗೊಳ್ಳುತ್ತಲೇ ಇರುವುದರಿಂದ ಬಲಿಷ್ಠ ಹೊಸತಳಿ ರೂಪುಗೊಂಡರೆ ಹೇಗೆ ಎಂಬ ಪ್ರಶ್ನೆಯೂ ಕಾಡುತ್ತಿದೆ. ಎಷ್ಟೇ ಆದರೂ ಕೊರೊನಾದಿಂದ ಅನುಭವಿಸಿದ ಕಹಿನೆನಪುಗಳು ಜನಮಾನಸದಲ್ಲಿ ಇನ್ನೂ ಮುದುಡಿ ಕುಳಿತಿವೆ.

ಕೇರಳ ಮಾತ್ರವಲ್ಲದೆ ಬೇರೆ ಕೆಲವು ರಾಜ್ಯಗಳಲ್ಲೂ ಜೆಎನ್.1 ಪ್ರಕರಣಗಳು ವರದಿಯಾಗಿವೆ. ಸಿಂಗಪುರದಿಂದ ಮರಳಿದವರ ಪೈಕಿ ದೇಶದ ವಿವಿಧ ಭಾಗಗಳ ಕನಿಷ್ಠ 15 ಜನರಲ್ಲಿ ಸೋಂಕು ಪತ್ತೆಯಾಗಿದೆ. ಈ ಸೋಂಕು ಮೊದಲು ಕಾಣಿಸಿಕೊಂಡಿದ್ದು ಅಮೆರಿಕದಲ್ಲಿ. ನಂತರ ಚೀನಾದಲ್ಲೂ ಹರಡಿದೆ. ಅಲ್ಲಿಂದ ಸಿಂಗಪುರದಲ್ಲಿ ಸಹ ಕಾಣಿಸಿಕೊಂಡಿದೆ. ಈಗ ನಮ್ಮಲ್ಲೂ ಹರಡುತ್ತಿದೆ. ಕ್ರಿಸ್ಮಸ್ ಹಾಗೂ ಹೊಸ ವರ್ಷಾಚರಣೆಯ ಈ ಸಂದರ್ಭದಲ್ಲಿ ಸೋಂಕು ಹರಡುವ ಪ್ರಮಾಣ ಇನ್ನೂ ಹೆಚ್ಚಾಗಬಹುದು. ಚಳಿಗಾಲದ ವಾತಾವರಣ ಸಹ ಸೋಂಕಿಗೆ ಇನ್ನಷ್ಟು ಬಲ ತುಂಬಬಹುದು. ವೈದ್ಯಕೀಯ ಸನ್ನದ್ಧ ಸ್ಥಿತಿಯನ್ನು ರಾಜ್ಯ ಸರ್ಕಾರ ಖಾತರಿಪಡಿಸಿಕೊಳ್ಳಬೇಕು. ಮುಂಜಾಗ್ರತೆ ವಹಿಸುವಲ್ಲಿ, ಸಮುದಾಯದ ಆರೋಗ್ಯ ಸ್ಥಿತಿಯ ಮೇಲೆ ನಿಗಾ ಇಡುವಲ್ಲಿ ಯಾವುದೇ ಲೋಪವಾಗದಂತೆ ಎಚ್ಚರಿಕೆ ವಹಿಸಬೇಕು. ಜನರೂ ಅಷ್ಟೆ. ಸೋಂಕು ನಿಯಂತ್ರಿಸುವುದು ಸರ್ಕಾರದ ಕೆಲಸವೆಂದು ಮೈಮರೆಯದೆ ಜವಾಬ್ದಾರಿಯಿಂದ ವರ್ತಿಸಬೇಕು. ಸರ್ಕಾರ ನೀಡುವ ಸೂಚನೆಗಳನ್ನು ಚಾಚೂತಪ್ಪದೆ ಪಾಲಿಸಬೇಕು. ಹಿಂದಿನ ಕಹಿ ಅನುಭವಗಳಿಂದ ನಾವು ಕಲಿಯಬೇಕಾದ ಪಾಠ ಕೂಡ ಇದೇ ಆಗಿದೆ.

ದಿನದ ಟ್ವೀಟ್

ಸಲ್ಲದ ನಡೆ

ಭಾರತದ ನ್ಯಾಯಾಂಗ ವ್ಯವಸ್ಥೆಯು ಇನ್ನಷ್ಟು ವೇಗವಾಗಿ ಕೆಲಸ ನಿರ್ವಹಿಸುವಂತೆ ಮಾಡುವುದು ಮಹತ್ವದ ಕೆಲಸ. ಹೀಗಾಗಿ, ಅತ್ಯಂತ ಮುಖ್ಯವಾದ ಈ ಅಪರಾಧ ಕಾನೂನು ಮಸೂದೆಗಳ ಬಗ್ಗೆ ಸೂಕ್ತವಾದ ಚರ್ಚೆ ಮತ್ತು ವಿಚಾರ ವಿನಿಮಯ ನಡೆಯಬೇಕಿತ್ತು. ದುರದೃಷ್ಟವಶಾತ್, ಸಂಸತ್ತಿನಲ್ಲಿ ವಿರೋಧ ಪಕ್ಷಗಳ ಅನುಪಸ್ಥಿತಿಯಲ್ಲಿ ಈ ಮಸೂದೆಗಳನ್ನು ಅಂಗೀಕರಿಸಲಾಯಿತು ಎಂಬುದು ಸದಾ ನೆನಪಿನಲ್ಲಿ ಉಳಿಯುವಂತಾಯಿತು.

ವಿಕ್ರಮ್ ಚಂದ್ರ, ಪತ್ರಕರ್ತ

ಕಿಡಿನುಡಿ

ಆರ್‌ಸಿಬಿ (ರಾಯಲ್ ಚಾಲೆಂಜರ್ಸ್ ಬೆಂಗಳೂರು) ತಂಡವು ಅಭಿಮಾನಿಗಳಿಗೆ ತನ್ನ ಪರ್ಸ್‌ನಲ್ಲಿದ್ದ ಹಣದ ಅರ್ಧದಷ್ಟನ್ನು ಕೊಟ್ಟು, ಮುಕ್ತವಾಗಿ ನಿರ್ಧಾರ ಕೈಗೊಳ್ಳಲು ಬಿಟ್ಟಿದ್ದರೆ, ಹರಾಜಿನಲ್ಲಿ ಅವರು ಈಗಿರುವುದಕ್ಕಿಂತಲೂ ಹೆಚ್ಚು ಸಮತೋಲನದಿಂದ ಕೂಡಿದ ತಂಡವನ್ನು ಆಯ್ಕೆ ಮಾಡುತ್ತಿದ್ದರು. ಜೊತೆಗೆ, ಒಂದಷ್ಟು ಹಣವನ್ನೂ ಉಳಿಸುತ್ತಿದ್ದರು. ಈ ವಿಷಯದಲ್ಲಿ ನಾನು ಸವಾಲನ್ನು ಬೇಕಾದರೂ ಹಾಕುತ್ತೇನೆ. ಒಂದು ವೃತ್ತಿಪರ ಕ್ರಿಕೆಟ್ ತಂಡವಾಗಿ ಇಂತಹ ಮೂಲಭೂತವಾದ ತಪ್ಪುಗಳನ್ನು ಮಾಡಿರುವುದನ್ನು ನಂಬಲಾಗುತ್ತಿಲ್ಲ. #ಐಪಿಎಲ್2024

ದೊಡ್ಡಗಣೇಶ್, ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ

25 ವರ್ಷಗಳ ಹಿಂದೆ

ಸೋಮವಾರ, 21-12-1998

• **ದಾಳಿ ಸ್ಥಗಿತ: ಅಮೆರಿಕ ಹಟಕ್ಕೆ ಜಗ್ಗದ ಇರಾಕ್**

ವಾಷಿಂಗ್ಟನ್, ಡಿ. 20 (ಪಿಟಿಐ)– ಇರಾಕ್ ಮೇಲಿನ ನಾಲ್ಕು ದಿನಗಳ ತಮ್ಮ ಮಿಲಿಟರಿ ದಾಳಿಯನ್ನು ಅಮೆರಿಕ ಹಾಗೂ ಬ್ರಿಟನ್ ಸ್ಥಗಿತಗೊಳಿಸಿದವು; ‘ನಮ್ಮ ಉದ್ದೇಶ ಸಾಧನೆ ಆಗಿದೆ’ ಎಂದು ಅವು ಪ್ರಕಟಿಸಿವೆ.

ಬಾಗ್ದಾದ್‌ಗೆ ಗಮನಾರ್ಹ ಹಾನಿಯಾಗಿದೆ ಎಂದು ತಿಳಿಸಿರುವ ಅಮೆರಿಕ ಹಾಗೂ ಬ್ರಿಟನ್ ‘ಅಗತ್ಯವೆನಿಸಿದರೆ ಮತ್ತೆ ದಾಳಿ ಮಾಡುವೆವು’ ಎಂಬ ಎಚ್ಚರಿಕೆಯನ್ನೂ ನೀಡಿವೆ.

ಇರಾಕನ್ನು ‘ದಂಡಿಸುವ’ ಉದ್ದೇಶದ ನಾಲ್ಕು ದಿನಗಳ ವಾಯುಸೇನಾ ಕಾರ್ಯಾಚರಣೆಯನ್ನು ನಿಲ್ಲಿಸಿರುವುದಾಗಿ ಘೋಷಿಸಿದ ಅಮೆರಿಕದ ಅಧ್ಯಕ್ಷ ಕ್ಲಿಂಟನ್ ‘ನಮ್ಮ ಉದ್ದೇಶ ಸಾಧನೆ ಆಗಿದೆ. ಸದ್ದಾಂ ಅವರ ಸಾಮೂಹಿಕ ವಿನಾಶದ ಶಸ್ತ್ರ ನಿರ್ಮಾಣ ಸವಲತ್ತುಗಳಿಗೆ, ಸೇನಾ ನೆಲೆಗಳಿಗೆ ಹಾಗೂ ಭದ್ರತಾ ನೆಲೆಗಳಿಗೆ ಗಮನಾರ್ಹ ಹಾನಿ ಉಂಟು ಮಾಡಿದ್ದೇವೆ’ ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

• **ಠಾಣೆಗೆ ವೀರಪ್ಪನ್ ಹಠಾತ್ ದಾಳಿ ಹಣ, ಬಂದೂಕು ಲೂಟಿ**

ಕೊಯಮತ್ತೂರು, ಡಿ. 20 (ಪಿಟಿಐ)– ಕುಖ್ಯಾತ ದಂತಚೋರ ವೀರಪ್ಪನ್ ತನ್ನ ಒಂಬತ್ತು ಮಂದಿ ಸಹಚರರೊಂದಿಗೆ ಈರೋಡ್ ಜಿಲ್ಲೆಯ ಅಂದಿಯೂರು ಸಮೀಪದ ವೆಲ್ಲಿತಿರುಪ್ಪೂರು ಪೊಲೀಸ್ ಠಾಣೆಗೆ ಇಂದು ರಾತ್ರಿ ಹಠಾತ್ ದಾಳಿ ನಡೆಸಿ, ರೂ. 5 ಸಾವಿರ ನಗದು, 9 ಬಂದೂಕು ಮತ್ತು ಮದ್ದುಗುಂಡುಗಳನ್ನು ಕಸಿದುಕೊಂಡು ಪರಾರಿಯಾಗಿದ್ದಾನೆ.

50 ವರ್ಷಗಳ ಹಿಂದೆ

ಶುಕ್ರವಾರ, 21-12-1973

• **ಮುಷ್ಕರ, ಲಾಕೌಟ್‌ಗಳ ಬಗ್ಗೆ ಲೋಕಸಭೆ ಕಳವಳ**

ನವದೆಹಲಿ, ಡಿ. 20– ರಾಷ್ಟ್ರದಲ್ಲಿ ಕೈಗಾರಿಕಾ ಮುಷ್ಕರಗಳು ಮತ್ತು ಲಾಕೌಟ್‌ಗಳು ಹೆಚ್ಚುತ್ತಿರುವುದರ ಬಗ್ಗೆ ಇಂದು ಲೋಕಸಭೆಯ ಸದಸ್ಯರು ತಮ್ಮ ಕಳವಳ ವ್ಯಕ್ತಪಡಿಸಿದರಲ್ಲದೆ, ಅದನ್ನು ನಿಲ್ಲಿಸಲು ಸಾಧ್ಯವಿಲ್ಲದಿದ್ದರೂ ತಪ್ಪಿಸಬಹುದಾದ ಪರಿಣಾಮಕಾರಿ ಕ್ರಮವನ್ನು ಸರ್ಕಾರ ಕೈಗೊಳ್ಳಬೇಕು ಎಂದು ಕರೆ ನೀಡಿದರು.

ರಾಷ್ಟ್ರಪತಿ ವಿ.ವಿ.ಗಿರಿ ಹಾಗೂ ಪ್ರಧಾನಿ ಇಂದಿರಾ ಗಾಂಧಿಯವರು ಸಲಹೆ ಮಾಡಿರುವಂತೆ 5ನೇ ಯೋಜನೆಯಲ್ಲಿ ಮುಷ್ಕರಗಳು ಮತ್ತು ಲಾಕೌಟ್‌ಗಳ ಮೇಲೆ ನಿರ್ಬಂಧ ವಿಧಿಸಲು ಆಡಳಿತ ಪಕ್ಷದ ಕೆಲವು ಸದಸ್ಯರು ಸಲಹೆ ನೀಡಿದರು. ನಿರ್ಬಂಧ ವಿಧಿಸಲು ಕಾರ್ಮಿಕ ಕಾನೂನುಗಳನ್ನು ಸೂಕ್ತವಾಗಿ ಬದಲಾಯಿಸಬೇಕೆಂದೂ ಅವರು ಹೇಳಿದರು.

ಹಸಿರು ಕಂಗೊಳಿಸುವಂತೆ ಮಾಡುವ ಕಾರ್ಯಯೋಜನೆ ರೂಪುಗೊಳ್ಳಬೇಕಿದೆ

ಕಾಡಿಗೂ ಇದೆ ಸಂವಿಧಾನ!

ವಿಶ್ಲೇಷಣೆ

ಅ.ನ.ಯಲ್ಲಪ್ಪ ರೆಡ್ಡಿ

ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಕೆನರಾ ಸರ್ಕಲ್ ಎಂದು ಕರೆಯಲಾಗುತ್ತಿದ್ದ ಉತ್ತರ ಕನ್ನಡ ಜಿಲ್ಲೆಯು ಮುಂಬೈ ಪ್ರೆಸಿಡೆನ್ಸಿಗೆ ಸೇರಿತ್ತು. ಇದು, ಸಹ್ಯಾದ್ರಿ ಅರಣ್ಯಶ್ರೇಣಿಯ ಬಹು ಅಮೂಲ್ಯ ವನ್ಯಸಂಪತ್ತುಳ್ಳ ಭೂಭಾಗ. ಇಲ್ಲಿನ ಕಾಡುಗಳಲ್ಲಿದ್ದ ಮರಗಳನ್ನು ಕಡಿದು ಸಿದ್ಧಪಡಿಸಿದ ಸೌದೆಯನ್ನು ಮುಂಬೈ ಸೇರಿದಂತೆ ಅನೇಕ ನಗರ, ಪಟ್ಟಣಗಳಿಗೆ ರವಾನಿಸಲಾಗುತ್ತಿತ್ತು. ಬ್ರಿಟಿಷರು ಕೆನರಾ ಪ್ರಿವಿಲೇಜಸ್ ಆ್ಯಕ್ಟ್‌ನಡಿ ಈ ಸೌದೆಗೆ ರಿಯಾಯಿತಿ ದರ ನಿಗದಿಪಡಿಸಿ, ಈ ಸಂಬಂಧದ ಖರ್ಚು ಸರಿದೂಗಿಸಲು ಹೊಂದಾಣಿಕೆ ಸೂತ್ರವೊಂದನ್ನು ರೂಪಿಸಿದ್ದರು. ಇದೇ ಕ್ರಮ ಮುಂದುವರಿದು, ಆ ಭಾಗದಲ್ಲಿ ಕೃಷಿ ಮಾಡುವವರಿಗೆ ಸೊಪ್ಪಿನಬೆಟ್ಟವನ್ನು ಬಳಸಿಕೊಳ್ಳುವ ವಿಶೇಷ ಹಕ್ಕೂ ಸಿಕ್ಕಿತು.

ಆದರೆ, ಸೌದೆಗಾಗಿ ಈ ರೀತಿ ಮರಗಳನ್ನು ಕಡಿಯುತ್ತಿದ್ದುದರಿಂದ ಸಹ್ಯಾದ್ರಿ ಪರ್ವತಶ್ರೇಣಿಯ ಲಕ್ಷಾಂತರ ಎಕರೆ ಕಾಡು ಬೆತ್ತಲಾಗುತ್ತಿತ್ತು. ಅಷ್ಟಾದರೂ ಗುತ್ತಿಗೆದಾರರಿಗೆ ಕಾಡು ಬೋಳಿಸುವ ಗುತ್ತಿಗೆಯನ್ನು ಸರ್ಕಾರ ನಿರಂತರವಾಗಿ ಕೊಡುತ್ತಲೇ ಇತ್ತು. 1984ರಲ್ಲಿ ನಾನು ಕೆನರಾ ಸರ್ಕಲ್ಲಿಗೆ ಅರಣ್ಯ ಸಂರಕ್ಷಣಾಧಿಕಾರಿಯಾಗಿ ನಿಯೋಜನೆಗೊಂಡಾಗ, ಈ ಭಾಗದಲ್ಲಿ ಮತ್ತೆ ಹಚ್ಚಹಸಿರು ನಳನಳಿಸುವಂತೆ ಮಾಡಬೇಕೆಂಬ ಸಂಕಲ್ಪ ತೊಟ್ಟೆ. ಅದರಂತೆ, ಬೋಳು ಬೆಟ್ಟಗುಡ್ಡಗಳಲ್ಲಿ ವಿವಿಧ ಜಾತಿಯ ಮರಗಳನ್ನು ಬೆಳೆಸುವ ಯೋಜನೆಗೆ (ಮಲ್ಟಿಪಲ್ ಸ್ಪೀಷೀಸ್ ಪ್ಲ್ಯಾಂಟೇಷನ್- ಎಂಎಸ್‌ಪಿ) ಚಾಲನೆ ನೀಡಲಾಯಿತು. ಕೆಲವೇ ವರ್ಷಗಳಲ್ಲಿ ಅಲ್ಲಿ ಮತ್ತೆ ಹಸಿರು ನಳನಳಿಸತೊಡಗಿತು. ಈ ಎಲ್ಲ ಬದಲಾವಣೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದ, ಪರಿಸರಪ್ರಿಯರೂ ಆಗಿದ್ದ ಸಾಹಿತಿ ಶಿವರಾಮ ಕಾರಂತರು ನನಗೊಂದು ಪತ್ರ ಬರೆದು, ಖುದ್ದು ಸ್ಥಳಕ್ಕೆ ಭೇಟಿ ನೀಡುವ ಇಂಗಿತ ವ್ಯಕ್ತಪಡಿಸಿದರು. ಅದರಂತೆ ಒಂದು ದಿನ ನಾನು ಅವರನ್ನು ಉತ್ತರ ಕನ್ನಡ ಜಿಲ್ಲೆಯ ಎಲ್ಲ ತಾಲ್ಲೂಕುಗಳ ಕಾಡುಗಳಿಗೆ ಕರೆದೊಯ್ದು, ಆಗಿರುವ ಹಾನಿ ಮತ್ತು ಅದನ್ನು ಸರಿಪಡಿಸಲು ಮಾಡಲಾಗಿರುವ ಪ್ರಯತ್ನಗಳನ್ನು ವಿವರಿಸಿದೆ. ಮುಂದೆ ಕಾರಂತರು ಬರೆದ ‘ನಮ್ಮೆಲ್ಲರಿಗೂ ಒಂದೇ ಭವಿಷ್ಯ’ ಎಂಬ ಪುಸ್ತಕದಲ್ಲಿ ಈ ಎಲ್ಲ ಉಲ್ಲೇಖಗಳೂ ಇವೆ.

ಹೀಗೆ ಸಹ್ಯಾದ್ರಿ ಅರಣ್ಯ ಪ್ರದೇಶದಲ್ಲಿ ಹಿಂದೆ ಅವ್ಯಾಹತವಾಗಿ ನಡೆದ ವನನಾಶದಿಂದ, ಆ ಭಾಗದಲ್ಲಿ ಹುಟ್ಟಿ ಹರಿಯುವ ಅನೇಕ ನದಿಗಳ ಮೂಲಗಳಿಗೆ ಹಾನಿಯಾಗಿದೆ. ಸಹ್ಯಾದ್ರಿ ಬೆಟ್ಟ ಸಾಲುಗಳಲ್ಲಿ ಸ್ಥಳೀಯವಾದ ಮತ್ತು ಬೇರೆಲ್ಲೂ ಕಾಣಸಿಗದ ಔಷಧೀಯ ಮಹತ್ವದ, ಪರಿಮಳಯುಕ್ತ ಸಸ್ಯಪ್ರಭೇದಗಳಿವೆ. ಅವುಗಳನ್ನು ಉಳಿಸಿ, ಬೆಳೆಸಿ ಸಂರಕ್ಷಿಸುವ ದಿಸೆಯಲ್ಲಿ ಪರಿಸರ ತಜ್ಞರು ಅನೇಕ ಪ್ರತಿಪಾದನೆಗಳನ್ನು ಮಾಡಿದ್ದಾರೆ. ನಾನು ಅರಣ್ಯ ಇಲಾಖೆಯ ಸಂಶೋಧನಾ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದಾಗ, ಫ್ರಾನ್ಸಿಸ್ ಬುಕಾನಿನ್ ಎಂಬಾತ ಕೆನರಾ-ಮಲಬಾರ್ ಪ್ರಾಂತ್ಯಗಳಲ್ಲಿ ಪ್ರಯಾಣಿಸಿ, ಹಲವು ಸಂಗತಿಗಳನ್ನು ಪುಸ್ತಕವೊಂದರಲ್ಲಿ ದಾಖಲಿಸಿದ್ದಾನೆ. ಸಹ್ಯಾದ್ರಿ ಭಾಗದಲ್ಲಿ ಬೆಟ್ಟಗುಡ್ಡಗಳನ್ನು ಬೆತ್ತಲೆ ಮಾಡಿದ್ದರ ಪರಿಣಾಮವೇನು, ಹೇಗೆ ಜಲಮೂಲಗಳು ಬತ್ತಿಹೋದವು, ನೀರಿನ ಹರಿವನ್ನು ತಡೆದಿದ್ದರಿಂದಾದ ದುಷ್ಪರಿಣಾಮಗಳೇನು ಎಂಬುದರ ಜೊತೆಗೆ, ಅದೆಲ್ಲದರ ಪರಿಣಾಮ ಏನಾಗಲಿದೆ ಎಂಬ ಭವಿಷ್ಯವಾಣಿಯನ್ನೂ ಆತ ನುಡಿದಿದ್ದು, ಅದು ಎಚ್ಚರಿಕೆಯ ಕರೆಗಂಟೆಯಂತಿದೆ.

ದಶಕಗಳ ಅವಧಿಯಲ್ಲಿ ಈ ಭಾಗದಲ್ಲಿ ಪ್ರಗತಿಯ ಹೆಸರಿನಲ್ಲಿ ಬಹಳಷ್ಟು ಬದಲಾವಣೆಗಳಾಗಿವೆ. ಸಾಲು ಸಾಲು ಅಣೆಕಟ್ಟೆಗಳು ನಿರ್ಮಾಣವಾಗಿವೆ. ಅದಕ್ಕಾಗಿ ಅದೆಷ್ಟೋ ಕಾಡು ನಾಶವಾಗಿದೆ. ಹಠಾತ್ ಪ್ರವಾಹಗಳಿಂದ ಗುಡ್ಡಗಳು ಕುಸಿದು ಎಷ್ಟೋ ಜನ ಮಣ್ಣುಪಾಲಾಗಿದ್ದಾರೆ, ಕೃಷಿ ನಾಶವಾಗಿದೆ, ಜನಜೀವನ ಅಸ್ತವ್ಯಸ್ತವಾಗಿದೆ. ಆದರೆ ಆಗಿರುವ ಹಾನಿಯನ್ನು ಸರಿಪಡಿಸುವುದು ಹೇಗೆ ಎಂಬುದರ ಪರಿಕಲ್ಪನೆ ಮಾತ್ರ ನಮ್ಮಲ್ಲಿನ್ನೂ ಮೂಡಿಲ್ಲ.

ಡೊನಾಲ್ಡ್ ಐಯಾನ್ ಎಂಬ ಪರಿಸರತಜ್ಞ ಪ್ರಸ್ತುತ ಸಹ್ಯಾದ್ರಿಕಾಡು ಮತ್ತು ಕ್ಯಾಲಿಫೋರ್ನಿಯಾದ ಉಷ್ಣವಲಯದ ಕಾಡುಗಳಲ್ಲಿರುವ ಸಾಮ್ಯತೆಯ ಕುರಿತು ಅಧ್ಯಯನ ನಡೆಸುತ್ತಿದ್ದಾರೆ. ನಮ್ಮ ಎಂಎಸ್‌ಪಿ ಪ್ರಯೋಗ ಅವರ ಗಮನಸೆಳೆದಿದೆ. ಉತ್ತರ ಕನ್ನಡ ಜಿಲ್ಲೆಯಾದ್ಯಂತ ಈ ಪ್ರಯೋಗವನ್ನು 1.80 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಾಡಲಾಗಿದೆ. ಇದೀಗ ಅದಕ್ಕೆ ಫುಲ್‌ಬ್ರೈಟ್ ಫೌಂಡೇಷನ್‌ನ ಅನುದಾನ ಪಡೆಯುವುದು ಕೂಡ ಸಾಧ್ಯವಾಗಿದೆ. ಈ ದಿಸೆಯಲ್ಲಿ ಸ್ಥಳೀಯ ಅರಣ್ಯಾಧಿಕಾರಿ ಸತೀಶ್ ಹೆಗಡೆ ಅವರ ನೆರವು ಗಮನಾರ್ಹವಾದದ್ದು.

1984ರಿಂದ 2023ರವರೆಗೆ ಕೆನರಾ ಅರಣ್ಯ ವಲಯದಲ್ಲಿ ದಶಕಗಳ ಕಾಲ ನಡೆದ ಎಲ್ಲ ವಿದ್ಯಮಾನಗಳ ಅಧ್ಯಯನ ನಡೆಸಿರುವ ಡೊನಾಲ್ಡ್, ಬೆತ್ತಲಾಗಿರುವ ಬೆಟ್ಟಗುಡ್ಡಗಳಲ್ಲಿ ಅಕೇಶಿಯಾವನ್ನು ಏಕವೃಕ್ಷ ಸಂತತಿಯ ರೂಪದಲ್ಲಿ ನೆಟ್ಟು ಬೆಳೆಸುವುದು ಮತ್ತು ಸ್ಥಳೀಯ ತಳಿಗಳಿಗೆ ಪ್ರಾಶಸ್ತ್ಯ ಕೊಡದಿರುವುದು ಸಮರ್ಪಕವಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಆಗಿರುವ ಮಣ್ಣುಸವಕಳಿ, ಮಣ್ಣಿನ ಗುಣಧರ್ಮದಲ್ಲಾದ ಬದಲಾವಣೆ, ಮಳೆಯ ವ್ಯತ್ಯಯದಂತಹ ಅನೇಕ ಸಂಗತಿಗಳನ್ನು ವಿಶ್ಲೇಷಿಸಿದ್ದಾರೆ. ಆರ್ಥಿಕತೆ ಮತ್ತು ಪರಿಸರ ಎರಡನ್ನೂ ಗಮನದಲ್ಲಿಟ್ಟು ಸಂತುಲನೆ ಮಾಡಿ, ಹೇಗೆ ಮುನ್ನಡೆಯಬೇಕು ಎಂಬುದನ್ನು ವಿವರಿಸಿದ್ದಾರೆ. ಈ ರೀತಿ ಬೋಳಾದ ಬೆಟ್ಟಗುಡ್ಡಗಳಲ್ಲಿ ಕಾಡು ಬೆಳೆಸುವುದಕ್ಕೆ ಅರಣ್ಯ ಇಲಾಖೆ ಮೊದಲಿಗೆ ಸರ್ಕಾರದ ಅನುಮೋದನೆಯೊಂದಿಗೆ ಕ್ರಿಯಾ ಯೋಜನೆಯೊಂದನ್ನು ಸಿದ್ಧಪಡಿಸಿಕೊಳ್ಳಬೇಕು. ಸುಪ್ರೀಂ ಕೋರ್ಟ್ ಕೂಡ ಇದನ್ನೇ ಹೇಳಿದೆ.

ನೈಜವಾದ ಕಾಡು ಎಂದರೆ ಅಲ್ಲಿ ನಂದಿ, ಮತ್ತಿ, ತೇಗದಂತಹ ಗಟ್ಟಿಮುಟ್ಟಾದ ಮರಗಳು ಹೇರಳವಾಗಿರಬೇಕು. ಜೊತೆಗೆ ಸೀಗೆಕಾಯಿ, ಅಂಟುವಾಳದಂತಹ ಕಾಡು ಉತ್ಪನ್ನಗಳನ್ನು ಕೊಡುವ ವೃಕ್ಷ-ಸಸ್ಯ ಸಂತತಿಯೂ ಇರಬೇಕು. ಕಾಡಂಚಿನಲ್ಲಿ ವಾಸಿಸುವ ಬುಡಕಟ್ಟು ಸಮುದಾಯದವರಿಗೆ ಅದರಿಂದ ಉದ್ಯೋಗಾವಕಾಶ, ಆರ್ಥಿಕ ಅನುಕೂಲ ಸಿಗಬೇಕು, ಸರ್ಕಾರಕ್ಕೂ ವಿದೇಶಿ ವಿನಿಮಯ ಮೌಲ್ಯ ಸಿಗುವಂತಿರಬೇಕು. ಔಷಧೀಯ ಸಸ್ಯಗಳು, ಪರಿಮಳಯುಕ್ತ ಸಸ್ಯಗಳ ಭಂಡಾರ ಅಲ್ಲಿರಬೇಕು. ಇದೆಲ್ಲವೂ ಸಾಧ್ಯವಾಗುವುದು ಎಂಎಸ್‌ಪಿಯನ್ನು ಅಳವಡಿಸಿಕೊಂಡಾಗ ಮಾತ್ರ. ಸರ್ಕಾರಗಳು ವಿಶೇಷ ಆರ್ಥಿಕ ವಲಯಗಳಿಗೆ (ಎಸ್‌ಇಜಡ್) ಆದ್ಯತೆ ಕೊಡುವುದರ ಬದಲು, ಹೀಗೆ ಅರಣ್ಯ ಪ್ರದೇಶವನ್ನೇ ಆರ್ಥಿಕ ವರಮಾನ ತಂದುಕೊಡುವ ವಿಶೇಷ ವಲಯವನ್ನಾಗಿ ಪರಿವರ್ತಿಸುವ, ಕಾಡಿಗೆ ಜೀವ ತುಂಬುವ ಕೆಲಸವನ್ನು ಮಾಡಬೇಕು. ಸ್ಥಳೀಯರ ಜ್ಞಾನವನ್ನು ಸಕ್ರಿಯವಾಗಿ ಬಳಸಿಕೊಳ್ಳುವ ಕಾರ್ಯವೂ ಆಗಬೇಕು.

ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಡೊನಾಲ್ಡ್ ತಮ್ಮ ಸಂಶೋಧನೆಗೆ ಉತ್ತರ ಕನ್ನಡ ಜಿಲ್ಲೆಯ ತೆರಕನಹಳ್ಳಿಯನ್ನು ಆರಿಸಿಕೊಂಡಿದ್ದಾರೆ. ವಿಶೇಷತಃ ಹಳಿಯಾಳ, ಯಲ್ಲಾಪುರ, ಸಿದ್ದಾಪುರ, ಶಿರಸಿ, ಕಾರವಾರ, ಭಟ್ಕಳ ಭಾಗದಲ್ಲಿ ಕಾಡಿದೆ. ಭೌಗೋಳಿಕವಾಗಿ ಬಹಳಷ್ಟು ಸಾಮ್ಯತೆಯೂ ಇದೆ. ಆದರೆ ಡೊನಾಲ್ಡ್ ಅವರು ಶಿರಸಿ ತಾಲ್ಲೂಕನ್ನೇ ಅಧ್ಯಯನಕ್ಕೆ ಆಯ್ದುಕೊಂಡದ್ದಕ್ಕೆ ಕಾರಣ, ಅಲ್ಲಿನ ಭೂಗುಣ. ಈ ಭಾಗದ ಮಣ್ಣು ಅತ್ಯಂತ ಫಲವತ್ತಾಗಿರುತ್ತದೆ. ಅದರಲ್ಲಿ ಕಬ್ಬಿಣ, ಮ್ಯಾಂಗನೀಸ್, ಕಾಪರ್, ಸತು ಎಲ್ಲವೂ ಇವೆ. ಹಿಂದೆ ಭೂಗರ್ಭ ಶಾಸ್ತ್ರಜ್ಞರು ಇಲ್ಲಿ ಚಿನ್ನದ ನಿಕ್ಷೇಪ ಇರುವುದನ್ನೂ ಗುರುತಿಸಿದ್ದರು. ಒಂದೊಮ್ಮೆ ಇಲ್ಲಿ ಚಿನ್ನದ ಗಣಿಗಾರಿಕೆ ಏನಾದರೂ ನಡೆದಿದ್ದರೆ, ಉತ್ತರ ಕನ್ನಡ ಜಿಲ್ಲೆ ಕೂಡ ಕೆಜಿಎಫ್‌ನಂತೆ ಬರಡಾಗುತ್ತಿತ್ತು. ಸದ್ಯ ಅದಾಗಿಲ್ಲ.

ಕಾಡು ಎಂಬುದು ಒಂದು ನಿಧಿ ಇದ್ದಂತೆ. ಕಾಡಿನ ಅಭಿವೃದ್ಧಿಗಾಗಿ ಸರ್ಕಾರ ಹೂಡಿಕೆ ಮಾಡಿದರೆ ನಷ್ಟ ಆಗುವುದಿಲ್ಲ. ಉದ್ಯಮ, ಕಾರ್ಖಾನೆಗಳಲ್ಲಾದರೆ ಪ್ರತಿವರ್ಷ ಯಂತ್ರೋಪಕರಣಗಳ ಸವಕಳಿ ಆಗುತ್ತದೆ ಮತ್ತು ಅವುಗಳ ಮೌಲ್ಯ ಕುಗ್ಗುತ್ತಾ ಹೋಗುತ್ತದೆ. ಆದರೆ ಇದಕ್ಕೆ ತದ್ವಿರುದ್ಧವಾಗಿ ಕಾಡು ವರ್ಷದಿಂದ ವರ್ಷಕ್ಕೆ ಬೆಳೆಯುತ್ತದೆ, ಮರಗಳ ಸುತ್ತಳತೆ ಹೆಚ್ಚುತ್ತಲೇ ಇರುತ್ತದೆ. ಇಲ್ಲಿ ಮೌಲ್ಯವರ್ಧನೆಯಾಗುತ್ತದೆಯೇ ವಿನಾ ಸವಕಳಿಯ ಮಾತೇ ಇಲ್ಲ. ಕಾಡನ್ನು ಉಳಿಸುವ, ಬೆಳೆಸುವ, ಸಂರಕ್ಷಿಸುವ ಹಾದಿಯಲ್ಲಿ ಯಶ ಸಿಗಬೇಕೆಂದಾದರೆ ಕಾಡಿನ ಸಂವಿಧಾನದ ಸೂಕ್ಷ್ಮ ಅರಿವು ಇರಬೇಕಾಗುತ್ತದೆ.

ಇಂದಿನ ಯುವ ಅರಣ್ಯಾಧಿಕಾರಿಗಳಿಗೆ ಇಂತಹ ವಿಷಯಗಳೆಲ್ಲ ಗೊತ್ತಿಲ್ಲವೆಂದಲ್ಲ. ಆದರೆ ಅವರು ಈ ಎಲ್ಲ ಅಂಶಗಳನ್ನು ಕ್ರೋಡೀಕರಿಸಿಕೊಂಡು, ಎಲ್ಲೆಲ್ಲಿ ಅರಣ್ಯ ನಾಶವಾಗಿದೆಯೋ ಅಲ್ಲೆಲ್ಲ ಮತ್ತೆ ಕಾಡು ಸೃಷ್ಟಿಯಾಗುವಂತೆ ಮಾಡಲು ಮುಂದಾಗಬೇಕು. ಕರ್ನಾಟಕದ ವಿಶಿಷ್ಟ ಸಹ್ಯಾದ್ರಿ ಬೆಟ್ಟಸಾಲೂ ಸೇರಿದಂತೆ ಎಲ್ಲೆಡೆ ಹಸಿರು ಕಂಗೊಳಿಸಬೇಕು. ಈ ದಿಸೆಯಲ್ಲಿ ಅವರ ಕಾರ್ಯಯೋಜನೆಗಳು ರೂಪುಗೊಳ್ಳಬೇಕು. ಇದು, ಕಾಡಿನ ಕುರಿತಾದ ಸುದೀರ್ಘ ಅನುಭವದಿಂದ ಅವರಿಗೆ ನಾನು ಹೇಳುವ ಕಿವಿಮಾತು.

ಚುರುಮುರಿ

ಓವರ್‌ಗೆ ಒಂದು ಕೋಟಿ

• ಆನಂದ

ಟಿ.ವಿ. ಮೇಲೆ ಕಣ್ಣಾಡಿಸುತ್ತಿದ್ದ ಮಡದಿ ‘ಏನ್ರೀ ಈ ಪಾಟಿ ರೇಟು’ ಎಂದು ಉದ್ಗಾರವೆತ್ತಿದಳು.

‘ಈರುಳ್ಳಿ ಬೆಲೆ ತಾನೆ? ಇಳಿಯುತ್ತೆ ನೋಡು. ರಫ್ತಿನ ಮೇಲೆ ನಿಷೇಧ ಹೇರಲಾಗಿದೆ’ ಎಂದು ಸಮಾಧಾನಪಡಿಸಲು ನೋಡಿದೆ.

‘ಅಯ್ಯೋ, ಈರುಳ್ಳಿ ಅಲ್ಲಾರಿ. ಸ್ಟಾರ್ಕ್ ಬೆಲೆ’ ಎಂದಾಗ ಇದ್ಯಾವ ಪದಾರ್ಥ ಇರಬಹುದು ಎಂದು ಆಶ್ಚರ್ಯಪಟ್ಟೆ. ‘ಕಮಿನ್ಸ್‌ಗಿಂತ ಬೆಲೆ ಹೆಚ್ಚು ರೀ’ ಎಂದು ಅನೌನ್ಸ್ ಮಾಡಿದಳು.

‘ಸ್ಟಾರ್ಕೊ ಸ್ಟಾಕೊ, ಕಮಿನ್ಸೊ ಗಿಮಿನ್ಸೊ... ಅದೇನು ನಾವು ಕೊಳ್ಳಬೇಕೆ? ಹೆಚ್ಚಲಿ ಬಿಡು’ ಎಂದು ಉದಾಸೀನದಿಂದಲೇ ಹೇಳಿದೆ.

‘ನಾವು ಕೊಳ್ಳೋದಲ್ಲ ರೀ, ನೋಡೋದು’ ಎಂದಾಗ ನನಗೆ ಆಶ್ಚರ್ಯ ಆ ಬೆಲೆಗಳಂತೆ ಹೆಚ್ಚಾಯಿತು. ‘ಅದಲ್ಲ, ಅವರು. ಐಪಿಎಲ್ ಹರಾಜಿನಲ್ಲಿ ಮಾರಾಟವಾದ ಕ್ರಿಕೆಟಿಗರು’ ಎಂದು ಸಸ್ಪೆನ್ಸ್‌ಗೆ ತೆರೆ ಎಳೆದಳು.

‘ಎಂಎಲ್ಎ ಟಿಕೆಟ್, ಎಪಿಎಂಸೀಲಿ ದಿನಸಿ, ಬೇರೆಡೆ ಮಾನ ಹರಾಜಾಗುವುದನ್ನು ಕೇಳಿದ್ದೀನಿ. ಇದೇನು ಕ್ರಿಕೆಟಿಗರನ್ನು ಹರಾಜು ಹಾಕುವುದೇ? ನಮ್ಮನ್ನು ಕೊಂಡುಕೊಳ್ಳಿ ಅಂತ ಅವರೇ ಹರಾಜಿಗೆ ನಿಲ್ತಾರೇನು?’

‘ಅಯ್ಯೋ! ನೀವೇನೂ ಫಾಲೋ ಮಾಡೋದೇ ಇಲ್ಲ. ಅವರನ್ನು ತಂಡಗಳೇ ಹರಾಜಿನಲ್ಲಿ ಬಿಡ್ ಮಾಡಿ ಖರೀದಿ ಮಾಡುತ್ತವೆ’.

‘ತಂಡಕ್ಕೆ ಅವರು ಬೇಕು ಸರಿ, ಆದರೆ ಅವರಿಗೆ ಆ ತಂಡ ಬೇಡವಾದರೆ?’

‘ಇಲ್ಲಿ ಲಾಯಲ್ಟಿ ಇರೋದು ತಂಡ ಕೊಡೋ ದುಡ್ಡಿಗೆ. ಯಾರು ಹೆಚ್ಚು ಕೊಡ್ತಾರೋ ಅವರ ಪರ ಅಷ್ಟೆ, ತಂಡ ಸೇರಿದ ಮೇಲೆ ಆ ತಂಡಕ್ಕೆ ಲಾಯಲ್ಟಿ’.

‘ಅಂದರೆ, ಯಾರು ಟಿಕೆಟ್ ಕೊಟ್ಟರೆ ಆ ಪಕ್ಷದ ಪರವಾಗಿ ಸ್ಪರ್ಧಿಸೋ ತರಹ ಅನ್ನು...’

‘ಹಾಗೇ ಅಂದ್ಕೊಳ್ಳಿ ಬೇಕಿದ್ದರೆ’.

‘ಐಪಿಎಲ್ ಅಂದ್ರೆ ಅದೇ 20 ಓವರ್ ಆಟ ತಾನೆ. ಅಂದ್ರೆ ನಿಮ್ಮ ಸ್ಟಾರ್ಕು, ಕಮಿನ್ಸು ಅವರೆಲ್ಲ ಒಂದು ಓವರ್‌ಗೆ ಒಂದು ಕೋಟಿ ಚಾರ್ಜ್ ಮಾಡ್ತಾರೆ ಅಂದಾಯಿತು’.

‘ಅಯ್ಯೋ! ನೀವೋ, ನಿಮ್ಮ ವ್ಯಾಪಾರಿ ಬುದ್ಧಿಯೋ...’

ಅಂದಹಾಗೆ, ಇದರ ಮೇಲೆ ಜಿಎಸ್‌ಟಿ ಇರುತ್ತೇನು? ವಿಚಾರಿಸಬೇಕು.

ಸಂಗತ

ಹಲ್ಲಿರುವ ಹಾವಾಗಿರಲಿ ಆಯೋಗ

ಚುನಾವಣಾ ಆಯೋಗವು ಸಂಪೂರ್ಣ ಸ್ವಾಯತ್ತವಾಗಿ ಇರಬೇಕಾಗುತ್ತದೆ

• ಪ್ರೊ. ಎಂ.ಅಬ್ದುಲ್ ರೆಹಮಾನ್ ಪಾಷ

ಲೋಕತಂತ್ರ ಉಳಿಯಬೇಕೆಂದರೆ, ಸರ್ಕಾರವನ್ನು ಆಯ್ಕೆ ಮಾಡುವ ಮತದಾರರು ಜಾಗೃತರಾಗಬೇಕು ಮತ್ತು ಚುನಾವಣೆಗಳು ನ್ಯಾಯಯುತವಾಗಿ ನಡೆಯಬೇಕು. ಸಂವಿಧಾನವನ್ನು ಗೌರವಿಸುವ ಹಲವಾರು ವ್ಯಕ್ತಿಗಳು ಮತ್ತು ಸಂಘಟನೆಗಳಿಗೆ ಇದು ಸ್ಪಷ್ಟವಾಗಿ ಮನವರಿಕೆಯಾಗಿದೆ. ಹೀಗಾಗಿ, ಮತದಾರರ ಅದರಲ್ಲೂ ಮುಖ್ಯವಾಗಿ ಮೊದಲ ಬಾರಿ ಮತ ಚಲಾಯಿಸಲಿರುವ ಲಕ್ಷಾಂತರ ಯುವಜನರಿಗೆ ತಮ್ಮ ಹೊಣೆಗಾರಿಕೆ ಕುರಿತು ಎಚ್ಚರಿಸುವ ದಿಸೆಯಲ್ಲಿ ಆಂದೋಲನಗಳು ಸಕ್ರಿಯವಾಗಿವೆ.

ಇನ್ನು, ಎಲ್ಲ ಬಗೆಯ ಚುನಾವಣೆಗಳನ್ನು ನಿಷ್ಪಕ್ಷಪಾತವಾಗಿ ಮತ್ತು ನ್ಯಾಯಯುತವಾಗಿ ನಡೆಸುವ ಹೊಣೆಗಾರಿಕೆ ಇರುವ ಚುನಾವಣಾ ಆಯೋಗವು ಸಂಪೂರ್ಣ ಸ್ವಾಯತ್ತವಾಗಿ ಇರಬೇಕಾಗುತ್ತದೆ. ಎಷ್ಟರಮಟ್ಟಿಗೆ ಎಂದರೆ, ಚುನಾವಣೆಯಲ್ಲಿ ಪ್ರಧಾನಿಯಿಂದ ಏನಾದರೂ ಅಕ್ರಮ ನಡೆದರೆ ಅವರನ್ನೂ ಕಟಕಟೆಯಲ್ಲಿ ನಿಲ್ಲಿಸುವಷ್ಟು ಸಾಮರ್ಥ್ಯ ಮತ್ತು ಕರ್ತವ್ಯನಿಷ್ಠೆ ಅದಕ್ಕೆ ಇರಬೇಕಾಗುತ್ತದೆ.

1949ರ ಜೂನ್ 1ರಂದು ಸಂವಿಧಾನ ರಚನಾ ಸಭೆಯಲ್ಲಿ ಈ ಕುರಿತು ನಡೆದ ಚರ್ಚೆಯಲ್ಲಿ ಅಂಬೇಡ್ಕರ್ ಅವರು, ‘ಚುನಾವಣೆಗಳು ಮುಕ್ತ ಮತ್ತು ನ್ಯಾಯಯುತವಾಗಿ ಇರಬೇಕು ಎಂದರೆ, ಚುನಾವಣಾ ಆಯೋಗವನ್ನು ಸರ್ಕಾರದ ನಿಯಂತ್ರಣದಿಂದ ಹೊರಗಿಡಬೇಕು’ ಎಂದಿದ್ದರು. ಆದರೆ, ಈಗಿನ ಪರಿಸ್ಥಿತಿ ಇದಕ್ಕೆ ತದ್ವಿರುದ್ಧವಾಗಿದೆ. ಚುನಾವಣಾ ಆಯೋಗವು ಅಭ್ಯರ್ಥಿಗಳಿಂದ ಆಗುವ ನೀತಿ ಸಂಹಿತೆಯ ಉಲ್ಲಂಘನೆಗಳ ವಿರುದ್ಧ ಕ್ರಮ ತೆಗೆದುಕೊಳ್ಳುವುದೇ ಅಪರೂಪ, ತೆಗೆದುಕೊಂಡರೂ ವಿರೋಧ ಪಕ್ಷದ ಅಭ್ಯರ್ಥಿಗಳ ವಿರುದ್ಧ ಮಾತ್ರ ಎಂಬಂತಾಗಿದೆ. ಮತಯಂತ್ರಗಳಲ್ಲಿನ ದೋಷ, ಎಣಿಕೆಯಲ್ಲಿನ ಅಕ್ರಮಗಳ ಕುರಿತು ಸಾವಿರಾರು ದೂರುಗಳು ದಾಖಲಾಗಿದ್ದರೂ ಅವುಗಳಲ್ಲಿ ಒಂದನ್ನೂ ಇತ್ಯರ್ಥಪಡಿಸದೆ, ಇಂತಹ ದೂರು ಕೇಳಿಬಂದಿದ್ದ ಚುನಾವಣೆಗಳ ಫಲಿತಾಂಶ ಘೋಷಣೆಯಾಗಿ, ಸರ್ಕಾರಗಳೂ ರಚನೆಯಾಗಿವೆ. ಇದಕ್ಕೆಲ್ಲಾ ಮುಖ್ಯ ಕಾರಣ, ಮುಖ್ಯ ಚುನಾವಣಾ ಆಯುಕ್ತರು (ಸಿ.ಇ.ಸಿ.) ಕೇಂದ್ರ ಸರ್ಕಾರದ ಹಿಡಿತದಲ್ಲಿದ್ದಾರೆ ಎನ್ನುವುದಾಗಿದೆ.

ಸಿ.ಇ.ಸಿ. ಸೇರಿದಂತೆ ಚುನಾವಣಾ ಆಯುಕ್ತರನ್ನು (ಇ.ಸಿ.) ಮಂತ್ರಿಮಂಡಲದ ಸಲಹೆಯಂತೆ ರಾಷ್ಟ್ರಪತಿ ನೇಮಿಸುವ ಪರಿಪಾಟ ಇತ್ತು. ಈ ದಿಸೆಯಲ್ಲಿ, ಸರ್ಕಾರದ ಪರವಾಗಿ ನಡೆಯಬಹುದಾದ ತಾರತಮ್ಯವನ್ನು ಹೋಗಲಾಡಿಸಿ, ಚುನಾವಣೆಗಳಲ್ಲಿ ಹೆಚ್ಚು ಪಾರದರ್ಶಕತೆಯನ್ನು ತರಲು ಸಂಸದರು, ಶಾಸಕರಿಂದ ಹಲವು ಸಲಹೆಗಳು ಈ ಹಿಂದೆ ಕೇಳಿಬಂದಿದ್ದವು. 2012ರ ಜೂನ್‌ನಲ್ಲಿ, ಆಗ ವಿರೋಧ ಪಕ್ಷದ ನಾಯಕರಾಗಿದ್ದ ಲಾಲ್‌ಕೃಷ್ಣ ಅಡ್ವಾಣಿ ಅವರು, ಆಯುಕ್ತರ ನೇಮಕಾತಿಯ ಶಿಫಾರಸಿಗೆ ಪ್ರಧಾನಿ, ಹೈಕೋರ್ಟ್ ನ್ಯಾಯಮೂರ್ತಿ, ಕೇಂದ್ರ ಕಾನೂನು ಸಚಿವ, ಲೋಕಸಭೆ ಮತ್ತು ರಾಜ್ಯಸಭೆಯ ವಿರೋಧ ಪಕ್ಷದ ನಾಯಕರನ್ನು ಒಳಗೊಂಡ ಸಮಿತಿ ರಚನೆಯಾಗಬೇಕು ಎಂದು ಹೇಳಿದ್ದರು. ಆದರೆ ಆ ಕುರಿತು ನಿರ್ದಿಷ್ಟ ಕ್ರಮಗಳು ಜಾರಿಯಾಗಲಿಲ್ಲ.

ಸಿ.ಇ.ಸಿ., ಇ.ಸಿ. ನೇಮಕಕ್ಕೆ ಕಾನೂನಿನಲ್ಲಿ ನಿರ್ದಿಷ್ಟ ಪ್ರಕ್ರಿಯೆಯ ವಿವರ ಇಲ್ಲ. ಈ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್ ಈ ವಿಚಾರದಲ್ಲಿ ಈ ವರ್ಷದ ಮಾರ್ಚ್‌ನಲ್ಲಿ ನಿರ್ದೇಶನವೊಂದನ್ನು ನೀಡಿದೆ. ಅದರ ಅನುಸಾರ, ಪ್ರಧಾನಿ, ಲೋಕಸಭೆಯ ವಿರೋಧ ಪಕ್ಷದ ನಾಯಕ ಮತ್ತು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಯವರು ಸಿ.ಇ.ಸಿ., ಇ.ಸಿ. ಹುದ್ದೆಗಳಿಗೆ ಯಾರನ್ನು ನೇಮಕ ಮಾಡಬೇಕು ಎಂಬುದನ್ನು ತೀರ್ಮಾನಿಸಬೇಕು ಎಂದು ಸೂಚಿಸಿತ್ತು. ಸುಪ್ರೀಂ ಕೋರ್ಟ್ ಸೂಚನೆಯ ಅನುಸಾರವಾಗಿ ಸರ್ಕಾರವು ಈ ಸಂಬಂಧ ಮಸೂದೆಯನ್ನೇನೋ ರೂಪಿಸಿದೆ. ಆದರೆ, ಸಮಿತಿಯಲ್ಲಿ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಇರುವುದು ಆಡಳಿತಾರೂಢ ಪಕ್ಷಕ್ಕೆ ತನ್ನ ಸ್ವೇಚ್ಛೆಗೆ ಬಹುದೊಡ್ಡ ಅಡಚಣೆಯಂತೆ ತೋರಿರಬೇಕು. ಹಾಗಾಗಿ ಅವರಿಗೆ ಅವಕಾಶ ಕಲ್ಪಿಸಿಲ್ಲ. ಈಗಿನ ಮಸೂದೆ ಪ್ರಕಾರ, ಸಮಿತಿಯಲ್ಲಿ ಪ್ರಧಾನಿಯ ಜೊತೆ ಅವರದೇ ಮಂತ್ರಿಮಂಡಲದ ಒಬ್ಬ ಸದಸ್ಯ ಮತ್ತು ಲೋಕಸಭೆಯ ಅತಿದೊಡ್ಡ ವಿರೋಧ ಪಕ್ಷದ ನಾಯಕ ಇರುತ್ತಾರೆ. ಈ ಮಸೂದೆಗೆ ಈಚೆಗೆ ರಾಜ್ಯಸಭೆಯಲ್ಲಿ ಅನುಮೋದನೆಯನ್ನೂ ಪಡೆಯಲಾಗಿದೆ. ಇನ್ನು ಅದು ಲೋಕಸಭೆಯಲ್ಲಿ ಅನುಮೋದನೆಗೊಂಡರೆ ಕಾಯ್ದೆಯಾಗುತ್ತದೆ.



ಸಮಿತಿಯಲ್ಲಿ ಮುಖ್ಯ ನ್ಯಾಯಮೂರ್ತಿಯೂ ಇದ್ದಿದ್ದರೆ ಮೂವರೂ ವ್ಯಕ್ತಿಗಳು ಮೂರು ವಿಭಿನ್ನ ನೆಲೆಗಳನ್ನು ಪ್ರತಿನಿಧಿಸುವವರಾಗಿರುತ್ತಿದ್ದರು. ಸರ್ವಾನುಮತವಿಲ್ಲದ ಯಾವುದೇ ನಿರ್ಣಯವು 2/1ರ ಬಹುಮತ ಪಡೆದು ಹೆಚ್ಚು ನ್ಯಾಯಸಮ್ಮತವಾಗಲು ಅವಕಾಶವಿತ್ತು. ಆದರೆ, ಈಗ ಸರ್ಕಾರದ ವತಿಯಿಂದಲೇ ಇಬ್ಬರು ಇರುವುದರಿಂದ ಅತಿದೊಡ್ಡ ವಿರೋಧ ಪಕ್ಷದ ನಾಯಕ ಇದ್ದರೂ ಅಷ್ಟೆ ಬಿಟ್ಟರೂ ಅಷ್ಟೆ, ಸರ್ಕಾರವು ತನಗೆ ಬೇಕಾದವರನ್ನು ಚುನಾವಣಾ ಆಯುಕ್ತರನ್ನಾಗಿ ಆಯ್ಕೆ ಮಾಡಬಹುದಾಗಿದೆ. ಆಗ ಆಯೋಗದ ಸ್ವಾಯತ್ತತೆ ಬರೀ ಭ್ರಮೆಯಾಗುತ್ತದೆ.

ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಆರ್.ಎಫ್. ನರಿಮನ್, ಮುಂಬೈನಲ್ಲಿ ಇದೇ ತಿಂಗಳ 15ರಂದು ‘ಭಾರತದ ಲೋಕತಂತ್ರ: ನಿಯಂತ್ರಣ ಮತ್ತು ಸಂತುಲನ’ ಎಂಬ ವಿಷಯದ ಕುರಿತು ನೀಡಿದ ಉಪನ್ಯಾಸದಲ್ಲಿ ಈ ಮಸೂದೆಯ ವಿಷಯ ಪ್ರಸ್ತಾಪಿಸಿ, ‘ಇದರಿಂದ ಚುನಾವಣಾ ಆಯುಕ್ತರು ಪಕ್ಷಪಾತಿಗಳಾಗುವ ಸಾಧ್ಯತೆ ಇರುತ್ತದೆ. ಹೀಗಾದಾಗ, ನಿಷ್ಪಕ್ಷಪಾತವಾದ ಚುನಾವಣೆ ಇರುವುದಿಲ್ಲ, ಲೋಕತಂತ್ರವೂ ಇರುವುದಿಲ್ಲ’ ಎಂದು ಎಚ್ಚರಿಸಿದ್ದಾರೆ.

ಪ್ರಜ್ಞಾವಂತರು ಇದರ ವಿರುದ್ಧ ಹೋರಾಡಿ ಗೆಲ್ಲದಿದ್ದರೆ, ಮುಂಬರುವ ದಿನಗಳಲ್ಲಿ ಚುನಾವಣೆಗಳು ಬರೀ ನಾಟಕಗಳಾಗುತ್ತವೆ, ಜಗತ್ತಿನ ಅತ್ಯಂತ ದೊಡ್ಡ ಲೋಕತಂತ್ರದಲ್ಲಿ ಸಂವಿಧಾನ ನಗಣ್ಯವಾಗುತ್ತದೆ!

ವಾಚಕರ ವಾಣಿ

ನಿರ್ಲಕ್ಷ್ಯ ಸಲ್ಲ, ಇರಲಿ ಮುಂಜಾಗ್ರತೆ

ನೆರೆಯ ಕೇರಳ ರಾಜ್ಯದಲ್ಲಿ ಕೊರೊನಾ ಸೋಂಕು ಪ್ರಕರಣಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಈ ಕಾರಣದಿಂದ ನಾಲ್ವರು ಮೃತಪಟ್ಟಿರುವುದಾಗಿ ವರದಿಯಾಗಿದೆ. ನಮ್ಮ ರಾಜ್ಯದಲ್ಲೂ ವ್ಯಕ್ತಿಯೊಬ್ಬರಿಗೆ ಕೊರೊನಾ ಸೋಂಕು ದೃಢಪಟ್ಟಿದೆ. ಆರೋಗ್ಯ ಇಲಾಖೆ ನೀಡಿದ ನಿರ್ದೇಶನಗಳು ಹಾಗೂ ಪ್ರಧಾನ ಮಾರ್ಗಸೂಚಿಗಳನ್ನು ಸಾರ್ವಜನಿಕರು ಕಟ್ಟುನಿಟ್ಟಾಗಿ ಪಾಲಿಸುವ ಮೂಲಕ ಸೋಂಕು ಬಾರದಂತೆ ನೋಡಿಕೊಳ್ಳಬೇಕಾಗಿದೆ.

ಈ ಹಿಂದೆ, ಕೊರೊನಾ ಹಾವಳಿ ತೀವ್ರ ಸ್ವರೂಪ ಪಡೆದಿದ್ದ ಸಂದರ್ಭದಲ್ಲಿ ಅನೇಕರು ಸರ್ಕಾರದ ಮಾರ್ಗಸೂಚಿಗಳನ್ನು ಸರಿಯಾಗಿ ಪಾಲಿಸದೆ ಸೋಂಕು ಉಲ್ಬಣಕ್ಕೆ ಕಾರಣರಾಗಿದ್ದರು. ಈಗ ಎಲ್ಲರೂ ತಮ್ಮ ವೈಯಕ್ತಿಕ ಆರೋಗ್ಯವನ್ನು ನಿರ್ಲಕ್ಷ್ಯ ಮಾಡದೆ, ಸಾರ್ವಜನಿಕ ಸ್ಥಳಗಳಲ್ಲಿ ಮಾಸ್ಕ್ ಧರಿಸಿಯೇ ಓಡಾಡುವ ಮೂಲಕ ಮುಂಜಾಗ್ರತೆ ವಹಿಸಬೇಕಾಗಿದೆ.

ಜಯವೀರ ಎ.ಕೆ., ಖೇಮಲಾಪುರ, ರಾಯಬಾಗ

ಪ್ರಧಾನಿ ಅಭ್ಯರ್ಥಿ: ಆತ್ಮವಿಶ್ವಾಸದ ದ್ಯೋತಕ

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ‘ಇಂಡಿಯಾ’ ಮೈತ್ರಿಕೂಟದ ಪ್ರಧಾನಿ ಅಭ್ಯರ್ಥಿಯನ್ನಾಗಿ ಘೋಷಿಸಲು ಮೈತ್ರಿಕೂಟದ ಕೆಲವು ಸದಸ್ಯರು ಸಲಹೆ ನೀಡಿರುವುದು (ಪ್ರ.ವಾ., ಡಿ. 20) ಸಮಂಜಸವಾಗಿದೆ. ‘ಮೊದಲು ನಾವೆಲ್ಲರೂ ಗೆಲ್ಲೋಣ, ಆಮೇಲೆ ಪ್ರಧಾನಿ ಬಗೆಗಿನ ಮಾತು’ ಎಂಬ ಖರ್ಗೆ ಅವರ ಹೇಳಿಕೆ ಸೌಜನ್ಯಕ್ಕಿಂತಲೂ ಹೆಚ್ಚಾಗಿ ಹತಾಶೆಯ ರೀತಿಯಲ್ಲಿಯೇ ಕೇಳಿಸುತ್ತದೆ! ಚುನಾವಣೆಯನ್ನು ಎದುರಿಸುವಾಗ ತೋರಿಸಬೇಕಾದದ್ದು ಅದನ್ನು ಖಡಾಖಂಡಿತವಾಗಿ ಗೆಲ್ಲುತ್ತೇವೆ ಎಂಬ ಹುಮ್ಮಸ್ಸನ್ನೇ ವಿನಾ ಎದುರಾಳಿಯನ್ನು ಸೋಲಿಸುತ್ತೇವೆ ಎಂಬ ಮಾತನ್ನಲ್ಲ! ರಾಷ್ಟ್ರ ಮಟ್ಟದಲ್ಲಿ ರಾಜಕೀಯ ಬದಲಾವಣೆಯ ಅಗತ್ಯದ ಬಗ್ಗೆ ತಮಗೇ ಮನವರಿಕೆಯಾಗಿರದಿದ್ದರೆ, ಜನಮಾನಸಕ್ಕೆ ಅದನ್ನು ಮುಟ್ಟಿಸುವುದಾದರೂ ಹೇಗೆ? ಆ ಆತ್ಮವಿಶ್ವಾಸದ ದ್ಯೋತಕವೇ, ಇಂತಹವರೇ ಮುಂದಿನ ಪ್ರಧಾನಿ ಎಂಬ ಘೋಷಣೆ!

ರಾಷ್ಟ್ರಕ್ಕೊಬ್ಬರು ದಲಿತ ಪ್ರಧಾನಮಂತ್ರಿ ಬೇಕು ಎಂಬುದು ಬಹುದಿನಗಳ ಕನಸು. ಈಗ ನಮಗೆ ಅಂತಹ ಒಬ್ಬ ದಿಟ್ಟ, ಸಭ್ಯ, ಅನುಭವಸ್ಥರ ಹೆಸರು ಸಿಕ್ಕಿದೆ. ದಲಿತ ಪ್ರಧಾನಿ ಎಂಬುದು ನಾಮಮಾತ್ರಕ್ಕಲ್ಲ, ಸಂವಿಧಾನದ ಆಶಯವಾದ ಸಮಸಮಾಜದ ನಿರ್ಮಾಣಕ್ಕೆ ಇದು ಅತ್ಯವಶ್ಯವೂ ಆಗಿದೆ. ಹೀಗಾಗಿ ‘ಇಂಡಿಯಾ’ದ ಕೆಲವು ಸದಸ್ಯರ ಈ ಆಶಯ ಈಡೇರಬೇಕಾದರೆ, ಕರ್ನಾಟಕದ ರಾಜ್ಯಾಡಳಿತ ಸಹ ಈಗ ಒಂದಷ್ಟು ಹೆಚ್ಚುವರಿ ಜವಾಬ್ದಾರಿ ವಹಿಸಿಕೊಳ್ಳಬೇಕಾದ ಅಗತ್ಯವಿದೆ. ಭ್ರಷ್ಟಾಚಾರಮುಕ್ತ ಆಡಳಿತ ಎನ್ನುವುದನ್ನು ಜನರ ಕಣ್ಣಿಗೆ ಕಾಣುವಂತೆ ನೈಜವಾಗಿ ಮತ್ತು ಪ್ರಾಮಾಣಿಕವಾಗಿ ತೋರಿಸಬೇಕಾಗಿದೆ. ನೇರವಾಗಿ ಹೇಳಬೇಕೆಂದರೆ, ಅಗಾಧ ಪ್ರಮಾಣದ ಕಪ್ಪುಹಣದ ಉತ್ಪಾದನೆಗೆ ಕುಮ್ಮಕ್ಕು ನೀಡುವ ಚಟುವಟಿಕೆಗಳನ್ನು ಅದು ಕಾಯಾ, ವಾಚಾ, ಮನಸಾ ಹತ್ತಿಕ್ಕಬೇಕಾಗಿದೆ.

ಆರ್.ಕೆ.ದಿವಾಕರ, ಬೆಂಗಳೂರು

ಸರಿ ಇಲ್ಲದ್ದು...

ಸಂಸತ್ ಭವನದ
ವಿದ್ಯಮಾನಗಳನ್ನು ಕಂಡು
ಯಾರೋ ಅಂದರು,
‘ಹೊಸ ಕಟ್ಟಡದ
ವಾಸ್ತು ಸರಿ ಇಲ್ಲ’.
ಅದಕ್ಕೆ ನಾನೆಂದೆ,
‘ಉಹ್ಞೂಂ...
ನಾವು ಆರಿಸಿ ಕಳಿಸಿದ
ವಸ್ತು ಸರಿ ಇಲ್ಲ’.

ಎಚ್.ಆನಂದರಾಮ ಶಾಸ್ತ್ರೀ
ಬೆಂಗಳೂರು

ತಾರ್ಕಿಕ ಚಿಂತನೆಗೆ ಹಚ್ಚುವ ವಿಚಾರ

‘ಬಸವ ಪರಂಪರೆ ಒಪ್ಪಿಕೊಳ್ಳುವವರು ವೈದಿಕ ಪರಂಪರೆಯಿಂದ ದೂರವಿರಿ’ ಎನ್ನುವ ಸಾಣೇಹಳ್ಳಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅವರ ವಿಚಾರ (ಪ್ರ.ವಾ., ಡಿ. 20) ತಾರ್ಕಿಕ ಹಾಗೂ ಸೈದ್ಧಾಂತಿಕ ಚಿಂತನೆಗಳಿಗೆ ಎಡೆ ಮಾಡಿಕೊಡುತ್ತದೆ. ಭಾರತದಲ್ಲಿ ಹುಟ್ಟಿದ ಧರ್ಮಗಳೆಲ್ಲವೂ ಅಭಿಜಾತವಲ್ಲ, ಅವು ವೈದಿಕದ ಗರ್ಭದಿಂದ ಉದಯಿಸಿ ಬಂದವು. ವೈದಿಕದಲ್ಲಿರುವ ಮಾನವವಿರೋಧಿ ಅಂಶ, ಹಿಂಸೆ, ಬಲಿ, ಅಹಿತ ಆಚರಣೆಗಳನ್ನು ವಿರೋಧಿಸಿ ಹೊರಬಂದ ನೂತನ ಧರ್ಮಗಳು. ತಮ್ಮದೇ ತತ್ವಾಚರಣೆಗಳನ್ನು ರೂಪಿಸಿಕೊಂಡಿರುವ ಬೌದ್ಧ, ಸಿಖ್, ಜೈನದಂತಹ ನೂತನ ಧರ್ಮಗಳು ವೈದಿಕ ಮತ್ತು ಸಂಸ್ಕೃತ ಭಾಷೆಗಳಿಂದ ಪ್ರಭಾವಿತವಾಗಿರುವುದನ್ನು ಅಲ್ಲಗಳೆಯಲಾಗದು! ಆ ಧರ್ಮಗಳ ಬೋಧನೆಯ ಭಾಷೆಗಳಾದ ಪಾಲಿ ಮತ್ತು ಅರ್ಧಮಾಗದಿಯು ಪ್ರಾಕೃತ ಭಾಷೆಗಳು. ಅಂದರೆ, ಸಂಸ್ಕೃತದ ಅಪಭ್ರಂಶ ಎಂಬುದು ಭಾಷಾತಜ್ಞರ ಅಭಿಪ್ರಾಯ. ಆ ಧರ್ಮಗಳಲ್ಲಿರುವ ಮಹಾತ್ಮರ ಹೆಸರುಗಳು ವೈದಿಕ ಸಂಪ್ರದಾಯಗಳಂತಿವೆ. ಯಶೋಧರ, ಶುದ್ಧೋದಕ, ಆದಿನಾಥ, ಮಹಾವೀರ, ಗುರುನಾನಕ...

ಬಸವಣ್ಣ ವೈದಿಕದ ವಿರೋಧಿಯಾಗಿರಲಿಲ್ಲ. ಅಲ್ಲಿಯ ಆಚರಣೆಗಳನ್ನು ವಿರೋಧಿಸುತ್ತಿದ್ದರು. ಅವರು ಉಪನಿಷತ್ತು, ಪುರಾಣ ಶಾಸ್ತ್ರಗಳಲ್ಲಿ ಪಾಂಡಿತ್ಯ ಪಡೆದಿರುವುದು ಅವರ ವಚನಗಳ ಅಧ್ಯಯನದಿಂದ ಮನನವಾಗುತ್ತದೆ. ಶರಣ ತತ್ವವನ್ನು ಮಾತ್ರ ಒಪ್ಪುವವರು ವೈದಿಕದ ಲಾಂಛನಗಳಾದ ಭಸ್ಮ, ರುದ್ರಾಕ್ಷಿ, ಕಾವಿ, ಲಿಂಗ, ಮಂತ್ರಗಳನ್ನು ತೊರೆದು ಶೂನ್ಯ ಲಲಾಟರಾದಾಗ ಮಾತ್ರ ವೈದಿಕದಿಂದ ದೂರವಿರಲು ಸಾಧ್ಯ.

ಪ್ರೊ. ಶಾಶ್ವತಸ್ವಾಮಿ ಮುಕ್ಕುಂದಿಮಠ, ಸಿಂಧನೂರು

ಚುನಾವಣೆ ಶೀಘ್ರ ನಡೆಸಿ

ರಾಜ್ಯದಲ್ಲಿನ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ಸರ್ಕಾರ ಆದಷ್ಟು ಬೇಗ ಚುನಾವಣೆ ನಡೆಸಬೇಕಾದ ಅಗತ್ಯವಿದೆ. ಗ್ರಾಮೀಣ ಪ್ರದೇಶದ ಸ್ಥಳೀಯ ಆಡಳಿತ ಸಂಸ್ಥೆಗಳ ಅವಧಿ ಮುಗಿದು ಹಲವು ತಿಂಗಳುಗಳೇ ಕಳೆದರೂ, ಕ್ಷೇತ್ರಗಳ ಪುನರ್ವಿಂಗಡಣೆ ಮತ್ತು ಮೀಸಲಾತಿ ನಿಗದಿ ಪ್ರಕ್ರಿಯೆಯಂತಹ ಕಾರಣಗಳಿಂದ ಚುನಾವಣೆ ನಡೆದಿಲ್ಲ. ಆಡಳಿತ ವಿಕೇಂದ್ರೀಕರಣದ ಮೂಲತತ್ವಕ್ಕೆ ವಿರುದ್ಧವಾದ ನಡೆ ಇದು.

ಸ್ಥಳೀಯ ಸಂಸ್ಥೆಗಳ ಚುನಾವಣೆ ವಿಳಂಬದಿಂದ ಗ್ರಾಮೀಣ ಪ್ರದೇಶದ ಜನರ ಕೆಲಸ ಕಾರ್ಯಗಳು ಸರಾಗವಾಗಿ ಆಗುತ್ತಿಲ್ಲ. ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳು ಇಲ್ಲವೆಂದರೆ ಅಧಿಕಾರಿಗಳು, ನೌಕರರು ಜನಸಾಮಾನ್ಯರ ಅಹೋತ್ತರಗಳು, ಸಮಸ್ಯೆಗಳಿಗೆ ಸ್ಪಂದಿಸುವಲ್ಲಿ ನಿರ್ಲಕ್ಷ್ಯ ತೋರುವ ಸಾಧ್ಯತೆಯೇ ಹೆಚ್ಚು. ಇದನ್ನು ಮನಗಂಡು ಸರ್ಕಾರ ಆದಷ್ಟು ಬೇಗ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ಚುನಾವಣೆ ನಡೆಸಬೇಕು.

ಶ್ರೀಧರ್ ಡಿ. ರಾಮಚಂದ್ರಪ್ಪ, ತುರುವನೂರು, ಚಿತ್ರದುರ್ಗ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಆರ್‌ಬಿಐನಲ್ಲಿದೆ ನಿಷ್ಕ್ರಿಯ ಖಾತೆಗಳ ₹62,224 ಕೋಟಿ

ದೇಶದ ಎಲ್ಲಾ ಬ್ಯಾಂಕ್‌ಗಳಲ್ಲಿ ನಿಷ್ಕ್ರಿಯವಾಗಿರುವ ಖಾತೆಗಳ ಒಟ್ಟು ಸಂಖ್ಯೆ ಎಷ್ಟು ಎಂಬ ಮಾಹಿತಿ ಇಲ್ಲವಾದರೂ, 10 ವರ್ಷಕ್ಕಿಂತ ಹೆಚ್ಚು ಅವಧಿಗೆ ನಿಷ್ಕ್ರಿಯವಾಗಿರುವ ಖಾತೆಗಳಲ್ಲಿನ ಠೇವಣಿಯ ವಿವರ ಲಭ್ಯವಿದೆ. ಎಲ್ಲಾ ಬ್ಯಾಂಕ್‌ಗಳಿಂದ ಅಂತಹ ಠೇವಣಿಯನ್ನು ಆರ್‌ಬಿಐ ಜಮೆ ಮಾಡಿಸಿಕೊಳ್ಳುತ್ತದೆ. ಖಾತೆ ನಿಷ್ಕ್ರಿಯವಾಗಿ ಎಷ್ಟೇ ಅವಧಿಯಾಗಿದ್ದರೂ ವಾರಸುದಾರರು ಠೇವಣಿಯನ್ನು ವಾಪಸ್ ಪಡೆಯಬಹುದು

ಪ್ರಜಾವಾಣಿ ವಾರ್ತೆ

ದೇಶದ ಎಲ್ಲಾ ಬ್ಯಾಂಕ್‌ಗಳಲ್ಲಿ ತೆರೆಯಲಾದ ಖಾತೆಗಳಲ್ಲಿ ಶೇ 20ರಷ್ಟು ಖಾತೆಗಳು ನಿಷ್ಕ್ರಿಯವಾಗಿವೆ ಎಂದು ರಾಜ್ಯಸಭೆಗೆ ಹಣಕಾಸು ಸಚಿವಾಲಯವು ಮಾಹಿತಿ ನೀಡಿದೆ. 10 ವರ್ಷಗಳಿಗೂ ಹೆಚ್ಚು ಅವಧಿ ನಿಷ್ಕ್ರಿಯವಾಗಿರುವ ಖಾತೆಗಳಲ್ಲಿ ಇರುವ ಠೇವಣಿಯನ್ನು ಆಯಾ ಬ್ಯಾಂಕ್‌ಗಳು ರಿಸರ್ವ್ ಬ್ಯಾಂಕ್‌ನ 'ಠೇವಣಿದಾರರ ಹಣಕಾಸು ಸಾಕ್ಷರತೆ ಮತ್ತು ಜಾಗೃತಿ ನಿಧಿ–ಡಿಇಎ ನಿಧಿ'ಗೆ ವರ್ಗಾಯಿಸಬೇಕು. 2022–23ನೇ ಆರ್ಥಿಕ ವರ್ಷದ ಅಂತ್ಯದ ವೇಳೆಗೆ ಬ್ಯಾಂಕ್‌ಗಳು ಹೀಗೆ ಡಿಇಎ ನಿಧಿಗೆ ವರ್ಗಾಯಿಸಿದ ಠೇವಣಿಯ ಮೊತ್ತ ₹42 ಸಾವಿರ ಕೋಟಿಗೂ ಹೆಚ್ಚು. ಈ ಠೇವಣಿಗಳಿಗೆ ಈವರೆಗೆ ಲಭ್ಯವಾಗಿರುವ ಬಡ್ಡಿ ಮತ್ತು ಆದಾಯದ ಮೊತ್ತವೇ ₹ 20 ಸಾವಿರ ಕೋಟಿ ದಾಟುತ್ತದೆ. ಹೀಗೆ 10 ವರ್ಷಗಳ ಅವಧಿಯವರೆಗೆ ವಾರಸುದಾರರಿಲ್ಲದ ಮತ್ತು ನಿಷ್ಕ್ರಿಯವಾದ ಖಾತೆಗಳಲ್ಲಿನ ಠೇವಣಿಗಳ ಮೊತ್ತ ₹62 ಸಾವಿರ ಕೋಟಿಗೂ ಅಧಿಕ.

ಯಾವುದೇ ಬ್ಯಾಂಕ್ ಖಾತೆಗಳನ್ನು ಎರಡು ವರ್ಷದವರೆಗೆ ಬಳಸದೇ ಇದ್ದರೆ, ಬ್ಯಾಂಕ್‌ಗಳು ಅವನ್ನು ನಿಷ್ಕ್ರಿಯ ಖಾತೆ ಎಂದು ಪರಿಗಣಿಸುತ್ತವೆ. ಅಂತಹ ಖಾತೆಗಳನ್ನು ಬ್ಯಾಂಕ್‌ಗಳು ನಿರ್ವಹಿಸುತ್ತಲೇ ಇರುತ್ತವೆ. ಅವುಗಳಲ್ಲಿ ಇರುವ ಠೇವಣಿಗಳಿಗೆ ಬ್ಯಾಂಕ್‌ಗಳು ಹೊಣೆಗಾರಿಕೆ ಹೊಂದಿರುತ್ತವೆ. ಖಾತೆದಾರರನ್ನು ಅಥವಾ ಖಾತೆದಾರರ ವಾರಸುದಾರರನ್ನು ಹುಡುಕಿ ಠೇವಣಿಯನ್ನು ಹಿಂದಿರುಗಿಸುವ ಹೊಣೆಗಾರಿಕೆಯೂ ಬ್ಯಾಂಕ್‌ಗಳದ್ದೇ ಆಗಿವೆ. ನೋಟಿಸ್ ನೀಡುವ ಮೂಲಕ ಖಾತೆ ನಿಷ್ಕ್ರಿಯವಾಗಿರುವ ಬಗ್ಗೆ ಬ್ಯಾಂಕ್‌ಗಳು ಖಾತೆದಾರರಿಗೆ ಮಾಹಿತಿ ನೀಡಬೇಕು. ನಂತರ ಖಾತೆಯನ್ನು ಮುಚ್ಚಲು ಮತ್ತು ಠೇವಣಿಯನ್ನು ವಾರಸುದಾರರಿಗೆ ವಾಪಸು ಮಾಡಲು ನೆರವು ನೀಡಬೇಕು. ಆದರೆ ಈ ಕೆಲಸ ಆಗುತ್ತಿಲ್ಲ ಎಂಬುದನ್ನು ನಿಷ್ಕ್ರಿಯ ಖಾತೆಗಳ ಮೂಲಕ ಡಿಇಎ ನಿಧಿಗೆ ಜಮೆಯಾಗಿರುವ ಮೊತ್ತವೇ ಹೇಳುತ್ತದೆ.

ನಿಷ್ಕ್ರಿಯ ಖಾತೆಗಳಲ್ಲಿನ ಮೊತ್ತಕ್ಕೆ ಖಾತೆದಾರರೇ ವಾರಸುದಾರರಾಗಿರುತ್ತಾರೆ. ಖಾತೆ ನಿಷ್ಕ್ರಿಯವಾಗಿ ಎಷ್ಟು ವರ್ಷವಾದರೂ ಅವರು ತಮ್ಮ ಖಾತೆ ಇರುವ ಬ್ಯಾಂಕ್‌ಗೆ ಹೋಗಿ ತಮ್ಮ ಹಣವನ್ನು ಕೇಳಬಹುದು. ಅವರ ಠೇವಣಿಯಲ್ಲಿದ್ದ ಹಣವನ್ನು ಬ್ಯಾಂಕ್‌ಗಳು ವಾಪಸು ಮಾಡಲೇಬೇಕು. ಬ್ಯಾಂಕ್‌ಗಳು ನಿಷ್ಕ್ರಿಯ ಖಾತೆಗಳ ಹಣವನ್ನು ಡಿಇಎ ನಿಧಿಗೆ ವರ್ಗಾಯಿಸಿದ್ದರೂ, ಖಾತೆದಾರರಿಗೆ ಹಣವನ್ನು ವಾಪಸ್ ಮಾಡಲೇಬೇಕು. ಹಾಗೆ ವಾಪಸ್ ಮಾಡಿದ್ದಷ್ಟೇ ಮೊತ್ತವನ್ನು ಡಿಇಎ ನಿಧಿಯಿಂದ ವಾಪಸ್ ಪಡೆಯಬಹುದು. ಆದರೆ 2018–19ನೇ ಆರ್ಥಿಕ ವರ್ಷದಿಂದ 2022–23ನೇ ಆರ್ಥಿಕ ವರ್ಷದಲ್ಲಿ ಡಿಇಎ ನಿಧಿಯಿಂದ ಹೀಗೆ ವಾಪಸ್ ಪಡೆಯಲಾದ ಮೊತ್ತ ₹ 5,729 ಕೋಟಿ ಮಾತ್ರ. ನಿಷ್ಕ್ರಿಯ ಖಾತೆಗಳ ವಾರಸುದಾರರನ್ನು ಹುಡುಕಿ, ಠೇವಣಿಯನ್ನು ಹಿಂತಿರುಗಿಸುವ ಕೆಲಸವನ್ನು ಬ್ಯಾಂಕ್‌ಗಳು ಮಾಡುತ್ತಿದ್ದರೂ ₹62 ಸಾವಿರ ಕೋಟಿಗೂ ಅಧಿಕ ಮೊತ್ತ ಡಿಇಎ ನಿಧಿಯಲ್ಲಿ ಉಳಿದಿದೆ.

ಖಾತೆದಾರರು ಮೃತಪಟ್ಟಿದ್ದರೂ, ಅವರ ಖಾತೆಯಲ್ಲಿನ ಠೇವಣಿಯನ್ನು ವಾರಸುದಾರರು ಪಡೆದುಕೊಳ್ಳಬಹುದು. ಖಾತೆದಾರರ ವಾರಸುದಾರರು ತಾವೇ ಎಂಬುದನ್ನು ದೃಢಪಡಿಸುವ ದಾಖಲೆಗಳನ್ನು ಬ್ಯಾಂಕ್‌ಗಳಿಗೆ ಸಲ್ಲಿಸಿ, ಠೇವಣಿ ವಾಪಸಾತಿಗೆ ಮನವಿ ಮಾಡಬಹುದು. ದಾಖಲೆಗಳನ್ನು ದೃಢಪಡಿಸಿಕೊಳ್ಳುವ ಬ್ಯಾಂಕ್ ಠೇವಣಿಯ ಮೊತ್ತವನ್ನು ವಾಪಸ್ ಮಾಡಲು ಕ್ರಮ ತೆಗೆದುಕೊಳ್ಳುತ್ತದೆ.

ಡಿಇಎ ನಿಧಿಗೆ ಜಮೆಯಾದ ಮೊತ್ತ (ಕೋಟಿಗಳಲ್ಲಿ)



* ಆಯಾ ವರ್ಷದಲ್ಲಿ ಈ ನಿಧಿಯಿಂದ ವೆಚ್ಚ ಮಾಡಲಾದ ಮೊತ್ತವನ್ನು ಇದು ಒಳಗೊಂಡಿಲ್ಲ

ಡಿಇಎ ನಿಧಿ

ವಾರಸುದಾರರೇ ಇಲ್ಲದ ಬ್ಯಾಂಕುಗಳ ಖಾತೆಗಳ ಹಣವನ್ನು ಹಣಕಾಸು ಸಾಕ್ಷರತೆಗಾಗಿ ಬಳಸಿಕೊಳ್ಳುವ ಯೋಜನೆಯೊಂದನ್ನು ಆರ್‌ಬಿಐ 2014ರಲ್ಲಿ ರೂಪಿಸಿದೆ. ಇದಕ್ಕೆ ಠೇವಣಿದಾರರ ಹಣಕಾಸು ಸಾಕ್ಷರತೆ ಹಾಗೂ ಜಾಗೃತಿ ನಿಧಿಯನ್ನೂ (ಡಿಇಎಎಫ್) ಆರ್‌ಬಿಐ ಸ್ಥಾಪಿಸಿದೆ. ವಾಣಿಜ್ಯ ಬ್ಯಾಂಕುಗಳು, ಪ್ರಾದೇಶಿಕ ಹಾಗೂ ಸ್ಥಳೀಯ ಬ್ಯಾಂಕುಗಳು, ನಗರ ಸಹಕಾರಿ ಬ್ಯಾಂಕುಗಳು, ರಾಜ್ಯ ಹಾಗೂ ಜಿಲ್ಲಾ ಸಹಕಾರಿ ಬ್ಯಾಂಕುಗಳು ತಮ್ಮಲ್ಲಿನ 10 ವರ್ಷಗಳಿಂದ ನಿಷ್ಕ್ರಿಯವಾಗಿರುವ ಖಾತೆಗಳಲ್ಲಿನ ಹಣವನ್ನು ಈ ನಿಧಿಗೆ ಪ್ರತಿ ತಿಂಗಳೂ ನೀಡಬೇಕು. ಈ ನಿಧಿಯ ನಿರ್ವಹಣೆಗಾಗಿ ಆರ್‌ಬಿಐ ಮಾರ್ಗಸೂಚಿಗಳನ್ನೂ ನೀಡಿದೆ.

ಠೇವಣಿದಾರರಲ್ಲಿ ಹಣಕಾಸಿನ ಸಾಕ್ಷರತೆಯನ್ನು ಮೂಡಿಸುವುದು ಈ ನಿಧಿ ಸ್ಥಾಪನೆಯ ಮುಖ್ಯ ಉದ್ದೇಶ. ಸಾಕ್ಷರತೆ ಮೂಡಿಸುವ ಸಲುವಾಗಿ ಸಂಘ, ಸಂಸ್ಥೆಗಳು ಈ ನಿಧಿಯನ್ನು ಬಳಕೆ ಮಾಡಿಕೊಳ್ಳಬಹುದಾಗಿದೆ. ಸುರಕ್ಷಿತ ಹಣಕಾಸು ವ್ಯವಹಾರ ಮಾಡುವ ಬಗೆ ಹೇಗೆ, ಹೇಗೆ ಬ್ಯಾಂಕುಗಳಲ್ಲಿ ಖಾತೆಗಳನ್ನು ತೆರೆಯಬೇಕು ಎಂಬೆಲ್ಲದರ ಕುರಿತು ಶಿಬಿರಗಳನ್ನು, ಕಾರ್ಯಾಗಾರಗಳನ್ನು ಏರ್ಪಡಿಸಬೇಕು. ಜೊತೆಗೆ, ಹಣಕಾಸು ಸಾಕ್ಷರತೆ, ಗ್ರಾಹಕರ ಹಕ್ಕುಗಳ ಕುರಿತು ಅಧ್ಯಯನ ಹಾಗೂ ಸಂಶೋಧನೆ ನಡೆಸಲು ಇಚ್ಛಿಸುವವರೂ ಈ ನಿಧಿ ಅಡಿ ಅರ್ಜಿ ಸಲ್ಲಿಸಬಹುದಿದೆ. ಈ ರೀತಿಯ ಕಾರ್ಯಕ್ರಮಗಳನ್ನು ಆಯೋಜಿಸುವ ಸಂಘ, ಸಂಸ್ಥೆಗಳು ಯಾವ ಸ್ವರೂಪದ್ದಾಗಿರಬೇಕು ಎಂಬುದರ ಕುರಿತೂ ಮಾರ್ಗಸೂಚಿಗಳಿವೆ. ಇವುಗಳು ಯಾವುದೇ ಧರ್ಮ, ಜಾತಿ– ಸಮುದಾಯಗಳಿಗೆ ಸೇರಿದ್ದಾಗಿರಬಾರದು. ಹಣಕಾಸು ಸಾಕ್ಷರತೆ ಕುರಿತ ತನ್ನ ಉದ್ದೇಶಗಳಲ್ಲಿ ಅವುಗಳಿಗೆ ಸ್ಪಷ್ಟತೆ ಇರಬೇಕು. ಯಾರಿಗೆ ನಿಧಿಯ ಹಣ ನೀಡಬೇಕು ಎಂಬುದಕ್ಕೆ ಆರ್‌ಬಿಐ ಸಮಿತಿಯನ್ನೂ ರಚಿಸಿದೆ. ಈ ಸಮಿತಿಯು ಯಾರಿಗೆ ಹಣ ನೀಡಬೇಕು, ಎಷ್ಟು ನೀಡಬೇಕು, ಸಂಘ–ಸಂಸ್ಥೆಯ ಹಿನ್ನೆಲೆ, ಕೆಲಸ ಕಾರ್ಯಗಳ ಬಗ್ಗೆ ಪರಿಶೀಲಿಸಿ ಹಣ ನೀಡುತ್ತದೆ. ಇದಕ್ಕಾಗಿ ಆರ್‌ಬಿಐ ಅರ್ಜಿಗಳನ್ನು ಆಹ್ವಾನಿಸುತ್ತದೆ. ಈ ಬಗ್ಗೆ ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಣೆ ಹೊರಡಿಸುತ್ತದೆ.

ಖಾತೆ ನಿಷ್ಕ್ರಿಯವಾಗಿದೆಯೇ?

ನಿಮ್ಮ ಮತ್ತು ನಿಮ್ಮ ಕುಟುಂಬದ ಸದಸ್ಯರ ಖಾತೆಗಳು ನಿಷ್ಕ್ರಿಯವಾಗಿವೆಯೇ? ಹಾಗಿದ್ದಲ್ಲಿ ಅಂತಹ ಖಾತೆಗಳನ್ನು ಮತ್ತೆ ಸಕ್ರಿಯ ಮಾಡಬಹುದು. ನಿಮ್ಮ ಬ್ಯಾಂಕ್ ಶಾಖೆಯನ್ನು ಸಂಪರ್ಕಿಸಿದರೆ ಆಯಿತು. ಆದರೆ ನಿಮ್ಮ ಕುಟುಂಬದ ಹಿರಿಯರು ಬ್ಯಾಂಕ್ ಖಾತೆ ಹೊಂದಿದ್ದು, ಅದನ್ನು ದೀರ್ಘ ಕಾಲದಿಂದ ಬಳಸದೇ ಇದ್ದರೆ ಮತ್ತು ಅವರು ಮೃತಪಟ್ಟು ಖಾತೆಯನ್ನು ಬಳಸದೇ ಇದ್ದರೆ ಅಂತಹ ಖಾತೆಗಳೂ ನಿಷ್ಕ್ರಿಯವಾಗಿರುತ್ತವೆ. ಅಂತಹವರ ಖಾತೆಗಳ ಪಾಸ್‌ಬುಕ್ ಇದ್ದರೆ, ಅದರ ಸ್ಥಿತಿಗತಿಯನ್ನು ಪರಿಶೀಲಿಸಬಹುದು. ಅದಕ್ಕೆಂದೇ ಆರ್‌ಬಿಐ ಉದ್ಗಮ್ ಪೋರ್ಟಲ್ ಅನ್ನು ಆರಂಭಿಸಿದೆ. ಈ ಪೋರ್ಟಲ್‌ಗೆ ಭೇಟಿ ನೀಡಿ, ಮೊಬೈಲ್ ಸಂಖ್ಯೆ ಬಳಸಿಕೊಂಡು ಬಳಕೆದಾರ ಖಾತೆಯನ್ನು ತೆರೆಯಬೇಕು. ಆನಂತರ ತೆರೆದುಕೊಳ್ಳುವ ಪುಟದಲ್ಲಿ ನಿಷ್ಕ್ರಿಯವಾದ ಬ್ಯಾಂಕ್ ಖಾತೆಯ ಸಂಖ್ಯೆ, ಬ್ಯಾಂಕ್ ಶಾಖೆ ಮತ್ತಿತರ ವಿವರಗಳನ್ನು ತುಂಬಬೇಕು. ಆಗ ಆ ಖಾತೆಗೆ ಸಂಬಂಧಿಸಿದ ವಿವರಗಳು ದೊರೆಯುತ್ತವೆ. ಅದರ ಆಧಾರದಲ್ಲಿ ಬ್ಯಾಂಕ್‌ಗೆ ಭೇಟಿ ನೀಡಿ, ಠೇವಣಿ ವಾಪಸ್ ಪಡೆಯಲು ಯತ್ನಿಸಬಹುದು.

ಉದ್ಗಮ್ ಪೋರ್ಟಲ್: unclaimed deposits gateway to access information

ಜನ ಧನ: 10 ಕೋಟಿಗೂ ಹೆಚ್ಚು ಖಾತೆ ನಿಷ್ಕ್ರಿಯ

ದೇಶದಲ್ಲಿ ಬ್ಯಾಂಕಿಂಗ್ ವ್ಯವಸ್ಥೆಗೆ ಒಳಪಡದೇ ಇರುವ ಜನರನ್ನು ಆ ವ್ಯವಸ್ಥೆಗೆ ತರುವ ಉದ್ದೇಶದಿಂದ ಕೇಂದ್ರ ಸರ್ಕಾರವು 2014ರಲ್ಲಿ ಜನ ಧನ ಯೋಜನೆಯನ್ನು ಆರಂಭಿಸಿತ್ತು. 2023ರ ಡಿಸೆಂಬರ್ 6ರವರೆಗೆ ಈ ಯೋಜನೆ ಅಡಿ ದೇಶದಾದ್ಯಂತ ತೆರೆಯಲಾದ ಖಾತೆಗಳ ಸಂಖ್ಯೆ 51 ಕೋಟಿಗೂ ಹೆಚ್ಚು. ಆದರೆ ಇವುಗಳಲ್ಲಿ ಶೇ 20ರಷ್ಟು ಖಾತೆಗಳು ನಿಷ್ಕ್ರಿಯವಾಗಿವೆ. ಅಂದರೆ ಈ ಖಾತೆ ತೆರೆದವರಲ್ಲಿ 10 ಕೋಟಿಗೂ ಹೆಚ್ಚು ಜನರು ಈ ಖಾತೆಗಳನ್ನು ಬಳಸುತ್ತಲೇ ಇಲ್ಲ. ಇವೆಲ್ಲವೂ ವಾರಸುದಾರರು ಇಲ್ಲದ ಖಾತೆಗಳಲ್ಲ. ಬದಲಿಗೆ ಬ್ಯಾಂಕಿಂಗ್ ವ್ಯವಹಾರ ತಿಳಿಯದೇ ಇರುವ ಮತ್ತು ಕೆವೈಸಿ ವಿವರ ಅಪ್‌ಡೇಟ್ ಮಾಡಲಾಗದ ಖಾತೆದಾರರ ಸಂಖ್ಯೆಯೇ ಇದರಲ್ಲಿ ಹೆಚ್ಚು ಎಂದು ಹಣಕಾಸು ಸಚಿವಾಲಯವು ರಾಜ್ಯಸಭೆಗೆ ಮಾಹಿತಿ ನೀಡಿದೆ.

ಜನ ಧನ ಖಾತೆದಾರರಿಗೆ ಜೀವವಿಮೆಯ ಸೌಲಭ್ಯ ಒದಗಿಸಲಾಗಿದೆ. ಖಾತೆದಾರರು ಮೃತಪಟ್ಟಾಗ ಅವರ ಕುಟುಂಬದವರು ವಿಮೆಯ ಹಣವನ್ನು ಕ್ಲೇಮು ಮಾಡಬಹುದು. ನಿಷ್ಕ್ರಿಯ ಎಂದು ಪಟ್ಟಿ ಮಾಡಲಾಗಿರುವ 10.34 ಕೋಟಿ ಖಾತೆಗಳಲ್ಲಿ ಮೃತಪಟ್ಟವರ ಖಾತೆಗಳೂ ಇರಬಹುದು. ಅವರ ಕುಟುಂಬದವರು ವಿಮೆ ಕ್ಲೇಮು ಮಾಡದೇ ಇರುವ ಕಾರಣಕ್ಕೆ ಅಂತಹ ಖಾತೆಗಳನ್ನು ಮುಚ್ಚಲು ಸಾಧ್ಯವಾಗಿಲ್ಲ.

ಹೀಗೆ ನಿಷ್ಕ್ರಿಯ ಎಂದು ಪಟ್ಟಿ ಮಾಡಲಾದ ಖಾತೆಗಳಲ್ಲಿ ₹12,779 ಕೋಟಿಯಷ್ಟು ಠೇವಣಿ ಇದೆ. ಜನ ಧನ ಖಾತೆಯು ಶೂನ್ಯ ಠೇವಣಿ ಸ್ವರೂಪದ ಖಾತೆಯಾಗಿದ್ದರೂ, ವಿಮೆ ಮೊತ್ತ ಎಂದು ಸ್ವಲ್ಪ ಪ್ರಮಾಣದ ಹಣವನ್ನು ಜಮೆ ಮಾಡಿಸಲಾಗಿತ್ತು. ಸರ್ಕಾರದ ವಿವಿಧ ಕಲ್ಯಾಣ ಕಾರ್ಯಕ್ರಮಗಳ ಮೊತ್ತವನ್ನು 'ನೇರ ನಗದು ವರ್ಗಾವಣೆ' ವಿಧಾನದ ಮೂಲಕ ಈ ಖಾತೆಗಳಿಗೇ ಜಮೆ ಮಾಡಲಾಗುತ್ತಿತ್ತು. ಖಾತೆದಾರರು ಜಮೆ ಮಾಡಿದ ಮೊತ್ತವೂ ಇದರಲ್ಲಿ ಸೇರಿದೆ. ಈ ಖಾತೆಗಳು ನಿಷ್ಕ್ರಿಯವಾಗಿ 10 ವರ್ಷವಾಗದೇ ಇರುವ ಕಾರಣಕ್ಕೆ, ಅವುಗಳಲ್ಲಿನ ಮೊತ್ತವನ್ನು ಆರ್‌ಬಿಐನ ಡಿಇಎ ನಿಧಿಗೂ ಜಮೆ ಮಾಡುವಂತಿಲ್ಲ. ಬ್ಯಾಂಕಿಂಗ್ ವ್ಯವಹಾರಗಳ ಬಗ್ಗೆ ಅರಿವು ಇಲ್ಲದೇ ಇರುವ ಕಾರಣಕ್ಕೆ ಖಾತೆದಾರರೂ ಈ ಮೊತ್ತವನ್ನು ಹಿಂಪಡೆಯಲು ಸಾಧ್ಯವಾಗಿಲ್ಲ. ಹೀಗಾಗಿ ಇಷ್ಟು ದೊಡ್ಡ ಮೊತ್ತದ ಠೇವಣಿಯು ಬ್ಯಾಂಕ್‌ಗಳಲ್ಲೇ ಉಳಿದಿದೆ. ಈ ಯೋಜನೆ ಅಡಿಯಲ್ಲಿ ಬ್ಯಾಂಕ್ ಖಾತೆ ತೆರೆಯಲಷ್ಟೇ ಒತ್ತು ನೀಡಲಾಗುತ್ತಿದೆ. ಜನ ಸಾಮಾನ್ಯರಿಗೆ ಬ್ಯಾಂಕಿಂಗ್ ವ್ಯವಹಾರಗಳ ಬಗ್ಗೆ ಅರಿವು ಮೂಡಿಸುವುದನ್ನು ಕಡೆಗಣಿಸಲಾಗಿದೆ ಎಂಬುದನ್ನು ಈ ದತ್ತಾಂಶಗಳು ಸೂಚಿಸುತ್ತವೆ.



ಆಧಾರ: ರಾಜ್ಯಸಭೆ ಮತ್ತು ಲೋಕಸಭೆಗೆ ಹಣಕಾಸು ಸಚಿವಾಲಯ ನೀಡಿದ ಮಾಹಿತಿಗಳು, ಆರ್‌ಬಿಐನ ವಾರ್ಷಿಕ ವರದಿಗಳು

ಸಿನಿ ಬಿಟ್ಸ್

ಹೊರಬಂತು 'ಜಸ್ಟ್ ಪಾಸ್' ಟೀಸರ್

ನಟ ಶ್ರೀ ಹಾಗೂ ಪ್ರಣತಿ ಜೋಡಿಯಾಗಿ ನಟಿಸಿರುವ 'ಜಸ್ಟ್ ಪಾಸ್' ಚಿತ್ರದ ಟೀಸರ್ ಬಿಡುಗಡೆಗೊಂಡಿದೆ. ರಾಯ್ಸ್ ಎಂಟರ್‌ಟೈನ್‌ಮೆಂಟ್ ಲಾಂಛನದಲ್ಲಿ ಕೆ.ವಿ.ಶಶಿಧರ್ ನಿರ್ಮಿಸುತ್ತಿರುವ ಚಿತ್ರಕ್ಕೆ ಕೆ.ಎಂ.ರಘು ನಿರ್ದೇಶನವಿದೆ.

'ಹೆಚ್ಚು ಅಂಕ ತೆಗೆದವರಿಗೆ ಕಾಲೇಜು ಇರುವಂತೆ, ಇದು ಜಸ್ಟ್ ಪಾಸ್ ಆದ ವಿದ್ಯಾರ್ಥಿಗಳಿಗಾಗಿಯೇ ಸ್ಥಾಪಿತವಾದ ಕಾಲೇಜಿನ ಕಥೆ. ಕಾಲೇಜಿನಲ್ಲೇ ಹೆಚ್ಚಿನ ಭಾಗದ ಚಿತ್ರೀಕರಣ ನಡೆದಿದೆ. ಬಹು ದೊಡ್ಡ ತಾರಾಬಳಗ ಹಾಗೂ ತಾಂತ್ರಿಕವರ್ಗ ನಮ್ಮ ಚಿತ್ರದಲ್ಲಿದೆ' ಎಂದು ನಿರ್ದೇಶಕ ಕೆ.ಎಂ.ರಘು ತಿಳಿಸಿದರು.

'ನಟನಾಗಬೇಕೆಂಬ ಆಸೆ ಹೊತ್ತು ಬೆಂಗಳೂರಿಗೆ ಬಂದೆ. ನನಗೆ ಯಾವ ಚಿತ್ರದಲ್ಲೂ ನಟಿಸಲು ಅವಕಾಶ ಸಿಗಲಿಲ್ಲ. ಆನಂತರ ಬೇರೆ ಉದ್ಯಮ ಆರಂಭಿಸಿ, ಈಗ ನಿರ್ಮಾಪಕನಾಗಿ ಚಿತ್ರರಂಗಕ್ಕೆ ಮರಳಿದ್ದೇನೆ. ಸಾಕಷ್ಟು ಹೊಸ ಪ್ರತಿಭೆಗಳಿಗೆ ನಮ್ಮ ಚಿತ್ರದಲ್ಲಿ ಅವಕಾಶ ನೀಡಿದ್ದೇವೆ. ಜನವರಿ ಕೊನೆಗೆ ಚಿತ್ರವನ್ನು ತೆರೆಗೆ ತರುವ ಪ್ರಯತ್ನ ನಡೆಯುತ್ತಿದೆ' ಎಂದರು ನಿರ್ಮಾಪಕ ಶಶಿಧರ್.

ಹರ್ಷವರ್ಧನ್ ರಾಜ್ ಸಂಗೀತ, ಸುಜಯ್ ಕುಮಾರ್ ಛಾಯಾಗ್ರಹಣ ಚಿತ್ರಕ್ಕಿದೆ. ರಂಗಾಯಣ ರಘು, ಗೋವಿಂದೇ ಗೌಡ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಪ್ರಣತಿ, ಶ್ರೀ

ಇದು 'ಛಾಯ' ಚಿತ್ರದ ಹಾಡು!

ಬಹುತೇಕ ಹೊಸಬರೇ ಕೂಡಿರುವ 'ಛಾಯ' ಸಿನಿಮಾದ ಹಾಡು ಇತ್ತೀಚೆಗೆ ಬಿಡುಗಡೆಗೊಂಡಿದೆ. ಹಾರರ್ ಕಥೆಯನ್ನು ಹೊಂದಿರುವ ಈ ಚಿತ್ರಕ್ಕೆ ನೃತ್ಯ ನಿರ್ದೇಶಕ ಜಗ್ಗು ಆ್ಯಕ್ಷನ್ ಕಟ್ ಹೇಳಿದ್ದಾರೆ. ನ್ಯೂ ಗ್ಲೋಬಲ್ ಕ್ರಿಯೇಶನ್ಸ್ ಮೂಲಕ ಶ್ರೀಮತಿ ನಂದ ಎಂ.ಆರ್. ಬಂಡವಾಳ ಹೂಡಿದ್ದಾರೆ.

'ನಾಲ್ಕು ಜನ ಯುವಕರು ಒಂದು ಮನೆಗೆ ಅತಿಥಿಗಳಾಗಿ ಹೋದಾಗ ಅಲ್ಲಿ ಅನೇಕ ಚಿತ್ರವಿಚಿತ್ರ ಘಟನೆಗಳು ನಡೆಯುತ್ತವೆ. ಆ ಎಲ್ಲಾ ಅನಾಹುತಗಳಿಗೆ ಕಾರಣವೇನು ಎನ್ನುವುದೇ ಚಿತ್ರದ ಪ್ರಮುಖ ಕಥಾವಸ್ತು. ಮೂರು ವರ್ಷಗಳ ಹಿಂದೆಯೇ ಸಿದ್ಧವಾಗಿತ್ತು. ಕಾರಣಾಂತರಗಳಿಂದ ಬಿಡುಗಡೆ ಮಾಡಲು ಸಾಧ್ಯವಾಗಿರಲಿಲ್ಲ. ಜನವರಿಯಲ್ಲಿ ತೆರೆಗೆ ತರಲು ನಿರ್ಧರಿಸಿದ್ದೇವೆ' ಎಂದರು ನಿರ್ದೇಶಕ ಜಗ್ಗು.

ಆನಂದ್ ಆರ್ಯ, ತೇಜುರಾಜ್ ಹಾಗೂ ಅನನ್ಯ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಮಂಜು ಕವಿ ಸಾಹಿತ್ಯ ರಚಿಸಿ, ಸಂಗೀತ ಸಂಯೋಜನೆ ಮಾಡಿದ್ದಾರೆ. ವೀನಸ್ ನಾಗರಾಜ ಮೂರ್ತಿ ಛಾಯಾಗ್ರಹಣವಿದೆ. ರಾಜಶೇಖರ್, ನಯನಕೃಷ್ಣ, ಹೇಮಂತ್ ಮುಂತಾದವರು ತಾರಾಗಣದಲ್ಲಿದ್ದಾರೆ.

ತೇಜು ರಾಜ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

✗ **'ಟಿವಿ ವಿಕ್ರಮ'** ಎನ್ನುವ ಯೂಟ್ಯೂಬ್ ವಾಹಿನಿಯಲ್ಲಿ ಪ್ರಸಾರವಾದ ಸಂದರ್ಶನದ ವಿಡಿಯೊ ತುಣುಕೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಹಿಜಾಬ್ ಧರಿಸಿದ ಮಹಿಳೆಯೊಬ್ಬರನ್ನು ಸಂದರ್ಶಿಸುತ್ತಿರುವ ವಿಡಿಯೊ ಇದಾಗಿದೆ. ಹಿಜಾಬ್ ಧರಿಸಿರುವ ಸಂದರ್ಭದಲ್ಲಿ ಪುರುಷ ದಂತ ವೈದ್ಯರ ಬಳಿ ತೆರಳಬೇಕಾದ ಸಂದರ್ಭದಲ್ಲಿ ಏನು ಮಾಡುತ್ತೀರಾ ಎಂದು ಸಂದರ್ಶಕ ಪ್ರಶ್ನೆ ಕೇಳಿದ್ದಾರೆ. 'ಅಂಥ ಸಂದರ್ಭದಲ್ಲಿ ಹಿಜಾಬ್ ತೆರೆಯುತ್ತೇನೆ. ಆದರೆ, ವೈದ್ಯರು ತಮ್ಮ ಕಣ್ಣುಗಳನ್ನು ಮುಚ್ಚಿಕೊಳ್ಳಬೇಕು' ಎಂದು ಮಹಿಳೆ ಉತ್ತರಿಸಿದ್ದಾರೆ. ಇಲ್ಲಿಗೆ ವಿಡಿಯೊ ತುಣುಕು ಕೊನೆಗೊಳ್ಳುತ್ತದೆ. ಈ ವಿಡಿಯೊವನ್ನು 'ವೈದ್ಯರ ಬಳಿಯೂ ಇವರು ಹಿಜಾಬ್ ತೆರೆಯುವುದಿಲ್ಲಂತೆ' ಎಂದು ಅಪಹಾಸ್ಯ ಮಾಡುವ ರೀತಿಯಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್‌ಗಳನ್ನು ಹಂಚಿಕೊಳ್ಳಲಾಗುತ್ತಿದ್ದು, ಈ ವಿಡಿಯೊ ತುಣುಕನ್ನು ಲಕ್ಷಗಟ್ಟಲೆ ಜನ ವೀಕ್ಷಿಸಿದ್ದಾರೆ. ಆದರೆ, ಇದು ನಿಜವಾದ ಸಂದರ್ಶನವಲ್ಲ.

✓ **ಮಹಿಳೆಯೊಂದಿಗೆ** ನಡೆಸಿದ ಪೂರ್ಣ ಸಂದರ್ಶನವನ್ನು 2022 ಫೆಬ್ರುವರಿ 18ರಂದು 'ಟಿವಿ ವಿಕ್ರಮ' ತನ್ನ ಯೂಟ್ಯೂಬ್ ಖಾತೆಯಲ್ಲಿ ಅಪ್‌ಲೋಡ್ ಮಾಡಿದೆ. ಇದೇ ಸಂದರ್ಶನದ 1.45 ನಿಮಿಷದ ವಿಡಿಯೊ ತುಣುಕು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವುದು. ವಿಡಿಯೊ ಆರಂಭವಾಗುವುದಕ್ಕೂ ಮೊದಲು ಅದು ಸೂಚನೆಯೊಂದನ್ನು ಪ್ರಕಟಿಸಿದೆ. 'ಇದು ಶಿಕ್ಷಣ ಪಡೆಯೋ ಸಮಯದಲ್ಲಿ ಮಕ್ಕಳು ಧರ್ಮವೇ ದೊಡ್ಡದು ಅಂತ ತಮ್ಮ ಭವಿಷ್ಯ ನಾಶ ಮಾಡಿಕೊಳ್ತಿರೋ ಸಂದರ್ಭದಲ್ಲಿ ಕೆಲವರಿಗೆ ಒಂದಿಷ್ಟು ಸಂದೇಶ ಕೊಡುವ ಪ್ರಯತ್ನ ಈ ಕಾಲ್ಪನಿಕ ಸಂದರ್ಶನ' ಎಂಬುದಾಗಿ ಸೂಚನೆಯಲ್ಲಿ ವಾಹಿನಿ ಹೇಳಿದೆ. ಆದ್ದರಿಂದ, ಈ ಸಂದರ್ಶನವು ನಿಜವಾದದ್ದಲ್ಲ ಮತ್ತು ಸಂಪೂರ್ಣವಾಗಿ ಕಾಲ್ಪನಿಕವಾದುದು ಎಂದು ಆಲ್ಟ್‌ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ

ತೀರ್ಪು ನೀಡುವ ಮುನ್ನ

ನುಡಿ ಬೆಳಗು

ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ಅಪ್ಪ ಮಗಳು ಪಾರ್ಕಿನಲ್ಲಿ ತಿರುಗಾಡುತ್ತಿದ್ದರು. ಅಷ್ಟು ಹೊತ್ತಿಗೆ ಅಲ್ಲೊಬ್ಬ ಕಿತ್ತಳೆ ಮಾರುವವನು ಬಂದ. ಪುಟ್ಟ ಮಗಳು 'ಅಪ್ಪಾ ಹಣ್ಣು ಕೊಡಿಸು' ಎಂದು ದುಂಬಾಲು ಬಿದ್ದಳು. ಅಪ್ಪ ಎರಡು ಕಿತ್ತಳೆ ಹಣ್ಣುಗಳನ್ನು ಖರೀದಿಸಿ ಮಗಳಿಗೆ ಕೊಟ್ಟ. ಎರಡೂ ಕೈಗಳಲ್ಲೂ ಒಂದೊಂದು ಹಣ್ಣು ಹಿಡಿದುಕೊಂಡಳು ಮಗಳು. ಅಪ್ಪ ಕೇಳಿದ 'ನನಗೆ?' ತಕ್ಷಣ ಮಗಳು ಒಂದು ಕಿತ್ತಳೆಯ ಸಿಪ್ಪೆ ಸುಲಿದು ಒಂದು ಸೊಳೆ ತಿಂದಳು. ಅಪ್ಪ ಏನನ್ನಾದರೂ ಹೇಳುವ ಮೊದಲೇ ಮತ್ತೊಂದು ಕಿತ್ತಳೆಯನ್ನೂ ಸುಲಿದು ಅದರಲ್ಲೂ ಒಂದು ಸೊಳೆ ತೆಗೆದು ತಿಂದುಬಿಟ್ಟಳು. ಅಪ್ಪನಿಗೆ ಮಗಳು ಹೀಗೇಕೆ ಮಾಡಿದಳೆಂದು ಅಚ್ಚರಿಯಾಯಿತು. ಸಂಕಟವೂ ಆಯಿತು. ಮಗಳನ್ನು ಬೆಳೆಸುವಲ್ಲಿ ತಾನೇನು ತಪ್ಪು ಮಾಡಿದೆ, ಎಲ್ಲಿ ಎಡವಿದೆ ಎಂದು ಯೋಚಿಸತೊಡಗಿದ. ಇರಲಿ, ಇನ್ನೂ ಚಿಕ್ಕವಳು. ಮುಂದೆ ತಿದ್ದಿಕೊಳ್ಳುತ್ತಾಳೆ, ತಾನು ತುಂಬ ಯೋಚನೆ ಮಾಡುತ್ತಿದ್ದೇನೆ ಎಂದುಕೊಂಡ. ಆದರೂ ಮನಸ್ಸಿನೊಳಗೆ ಕಿರಿಕಿರಿ, ತಳಮಳ. ಅವನ ತುಟಿಯ ಮೇಲಿನ ಮುಗುಳ್ನಗು ನಿಧಾನವಾಗಿ ಮಾಯವಾಯಿತು. ಅಷ್ಟು ಹೊತ್ತಿಗೆ ಎರಡೂ ಹಣ್ಣುಗಳನ್ನು ರುಚಿ ನೋಡಿದ ಮಗಳು ತನ್ನ ಎಡಗೈ ಅನ್ನು ಮುಂದೆ ಮಾಡಿ, 'ಅಪ್ಪಾ, ನೀನು ಈ ಹಣ್ಣು ತಿನ್ನು. ಇದು ಜಾಸ್ತಿ ಸಿಹಿಯಿದೆ, ತಗೋ' ಎಂದಳು. ಅಪ್ಪನಿಗೆ ನಾಚಿಕೆಯಾಯಿತು. ಇಷ್ಟು ಪುಟ್ಟ ಮಗುವನ್ನು ಆಸೆಬುರುಕಿ ಎಂದು ಕ್ಷಣಾರ್ಧದಲ್ಲಿ ತೀರ್ಮಾನ ಮಾಡಿಬಿಟ್ಟೆನಲ್ಲ ಎಂದು ಪಶ್ಚಾತ್ತಾಪ ಪಟ್ಟ. ನಿಧಾನವಾಗಿ ಅವನ ಮುಖದ ಮುಗುಳ್ನಗುವೂ ವಾಪಾಸು ಬಂದಿತು. ಮಗಳನ್ನು ಎತ್ತಿ ಮುದ್ದಾಡಿದವನ ಕಣ್ಣಂಚಿನಲ್ಲಿ ತೆಳುವಾದ ನೀರಪರದೆಯಿತ್ತು.

'ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡು' ಎಂಬ ಜನಪ್ರಿಯ ಗಾದೆ ನಮಗೆ ತಿಳಿದಿದೆ. ಮುಂಗುಸಿಯ ಬಾಯಲ್ಲಿನ ರಕ್ತ ನೋಡಿ ತನ್ನ ಮಗುವನ್ನು ಸಾಯಿಸಿಬಿಟ್ಟಿದೆ ಎಂದು ತಿಳಿದು ಅದನ್ನು ಜಜ್ಜಿದ ಗಂಗಮ್ಮನ ಕಥೆಯೂ ನಮಗೆ ಗೊತ್ತು. ಆದರೂ ಬೇರೆಯವರ ಬಗ್ಗೆ ತೀರ್ಪು ಕೊಡಲು ನಾವು ತುದಿಗಾಲಿನಲ್ಲಿ ನಿಂತಿರುತ್ತೇವೆ. ಅವರು ನಮಗೆ ಎಷ್ಟೇ ಆಪ್ತರಿರಬಹುದು, ಅವರ ಸ್ವಭಾವ ನಮಗೆ ಚಿರಪರಿಚಿತವಿರಬಹುದು. ಆದರೂ ಯೋಚಿಸದೇ ಇದು ಹೀಗೆಯೇ ಎಂದು ತೀರ್ಮಾನಕ್ಕೆ ಬಂದುಬಿಡುತ್ತೇವೆ. ಇನ್ನು ನಾವು ಒಡನಾಡದ, ನೋಡಿಯೇ ಇರದ ವ್ಯಕ್ತಿಗಳ ಬಗ್ಗೆ ತರಾತುರಿಯಲ್ಲಿ ತೀರ್ಪು ಕೊಡುವುದಂತೂ ಹಾಸ್ಯಾಸ್ಪದ! ಯಾರ ಬದುಕಿನ ಹಾದಿ ಹೇಗಿರುತ್ತದೆಯೋ ಎಂಬುದನ್ನು ಅರಿಯದೇ ಹೀಗೆ ಮಾಡುವುದು ಅತ್ಯಂತ ಸುಲಭವಾದರೂ ಅದು ನಮ್ಮ ವ್ಯಕ್ತಿತ್ವವನ್ನು ಅನಾವರಣಗೊಳಿಸುತ್ತದೆ. ಹಾಗಾಗಿ ಇನ್ನಾದರೂ ಸ್ವಘೋಷಿತ ನ್ಯಾಯಾಧೀಶರ ಪಟ್ಟದಿಂದ ಕೆಳಗಿಳಿಯೋಣ. ಏಕೆಂದರೆ ಕ್ಷುಲ್ಲಕತೆಯಿಂದ ಹೊರಬರುವ ಮೊದಲ ಹೆಜ್ಜೆಯಿದು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಗುರುವಾರ ಡಿಸೆಂಬರ್ 21, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಶುಕ್ಲ ನವಮಿ ಗಂ. 09-38 ನಕ್ಷತ್ರ: ರೇವತಿ ಗಂ. 22-09 ಯೋಗ: ವರಿಯಾನ್ ಗಂ 13-27
ಕರಣ: ಕೌಲವ ಗಂ. 09-38, ಧನು ಮಾಸದ 05 ನೇ ದಿನ, ಮಳೆನಕ್ಷತ್ರ: ಮೂಲಾ 2.
ರಾಹುಕಾಲ: ಮಧ್ಯಾಹ್ನ 01-30 – 03-00
ಸೂರ್ಯೋದಯ: 06-52 ಸೂರ್ಯಾಸ್ತ: 06-05
ಮುಸ್ಲಿಂ ದಿನಾಂಕ: 07 ಜುಮಾದುಸ್ಸಾನಿ,
ಅದೃಷ್ಟ ಸಂಖ್ಯೆ: 10, 1

ಮೇಷ: ಚಟುವಟಿಕೆಗಳಿಂದ ಬಿಡುವು ಮಾಡಿಕೊಂಡು ಮನೆಯವರೊಡನೆ ಕಾಲ ಕಳೆಯಲು ಪ್ರಯತ್ನಿಸಿ. ವಾಹನಗಳ ಅಥವಾ ಯಂತ್ರೋಪಕರಣಗಳ ಬಿಡಿ ಭಾಗಗಳ ಮಾರಾಟದಿಂದ ಲಾಭವಿರುವುದು. ಪರರ ಟೀಕೆಗೆ ಗುರಿಯಾಗುವಿರಿ.

ವೃಷಭ: ಒತ್ತಡ ತರುವ ಕೆಲಸಗಳಿಂದ ದೂರ ಉಳಿಯುವ ಯೋಚನೆಯು ಸರಿಯಾಗಿರುವುದು. ಆದಾಯ ಉತ್ತಮವಾಗಿದ್ದು ಹೂಡಿಕೆಗೆ ಒಳ್ಳೆಯ ಸಮಯವಾಗಿದೆ. ಯಾವುದೇ ಕಟ್ಟುಪಾಡಿಗೆ ಸಿಲುಕಬೇಡಿ.

ಮಿಥುನ: ಜೀವನದಲ್ಲಿನ ಸಮಸ್ಯೆಗಳು ಮತ್ತು ದುಃಖಗಳೆರಡೂ ತನ್ನ ಇರುವಿಕೆಯನ್ನು ತಿಳಿಸಲಿದೆ. ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಅವಕಾಶ ಸಿಗಲಿದೆ. ವಿದೇಶ ಪ್ರಯಾಣ ಮಾಡಬೇಕಾದ ಸಂದರ್ಭ ಬರಲಿದೆ.

ಕರ್ಕಾಟಕ: ಸಹೋದರರ ಬಗ್ಗೆ ನಿಮ್ಮಲ್ಲಿರುವ ತಪ್ಪು ಕಲ್ಪನೆಗಳನ್ನು ಹೋಗಲಾಡಿಸಿಕೊಳ್ಳಲು ಯತ್ನಿಸಿ. ಚಿನ್ನ ಬೆಳ್ಳಿ ವ್ಯಾಪಾರಸ್ಥರಿಗೆ ಅಧಿಕವಾಗಿ ಲಾಭ ಇರಲಿದೆ. ದಾಂಪತ್ಯದಲ್ಲಿ ಉತ್ತಮ ಅನ್ಯೋನ್ಯತೆಯು ವೃದ್ಧಿಯಾಗಲಿದೆ.

ಸಿಂಹ: ಸಮೀಪವರ್ತಿಗಳ ಆಶ್ವಾಸನೆ ದೊರೆತು ಶುಭಕಾರ್ಯಗಳತ್ತ ಗಮನ ಹರಿಸುವಿರಿ. ಕೆಲಸಗಳನ್ನು ಮುಂದುಹಾಕದೆ ಪೂರ್ಣಗೊಳಿಸಲು ಪ್ರಯತ್ನಿಸಿ. ಮಕ್ಕಳ ಆರೋಗ್ಯದಲ್ಲಿ ವ್ಯತ್ಯಾಸ ಉಂಟಾಗುವುದು.

ಕನ್ಯಾ: ಸ್ವಂತ ಉದ್ಯೋಗ ನಡೆಸುವವರಿಗೆ ಸಂಪಾದನೆ ಕಡಿಮೆ ಇದ್ದರೂ ಉದ್ಯೋಗ ಬದಲಾಯಿಸದೇ ಅದನ್ನೇ ಮುಂದುವರೆಸುವುದು ಉತ್ತಮ. ನಿಮ್ಮ ಕರ್ತವ್ಯದಲ್ಲಿನ ಕೊರತೆಯು ಮೇಲಧಿಕಾರಿಗಳಿಗೆ ಎದ್ದು ಕಾಣಲಿದೆ.

ತುಲಾ: ಬಹಳ ಸಮಯದಿಂದ ಇತ್ಯರ್ಥವಾಗದ ಕೌಟುಂಬಿಕ ಸಮಸ್ಯೆ ಈ ದಿನ ಬಗೆಹರಿಯುವುದು, ಅದರಲ್ಲೂ ಮುಖ್ಯವಾಗಿ ಸಹೋದರರಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲದೇ ಪರಸ್ಪರ ವಿಶ್ವಾಸದಿಂದಲೇ ಇತ್ಯರ್ಥವಾಗಲಿದೆ.

ವೃಶ್ಚಿಕ: ಲೋಹ ಕೈಗಾರಿಕೆ ಉದ್ಯಮದವರಿಗೆ ಶ್ರಮದಿಂದ ಹೆಚ್ಚಿನ ಅಭಿವೃದ್ಧಿ ಮತ್ತು ಲಾಭ ದೊರೆಯಲಿದೆ. ಬಾಲ್ಯ ಸ್ನೇಹಿತರೊಂದಿಗೆ ಸಂತಸದ ಕ್ಷಣಗಳನ್ನು ಕಳೆಯುವಿರಿ. ಅಪರೂಪದ ಅತಿಥಿಯ ಆಗಮನ ಸಂತೋಷ ತರಲಿದೆ.

ಧನು: ಜೀವನದಲ್ಲಿ ಸವಾಲಾಗಿ ಬಂದ ಗೃಹ ನಿರ್ಮಾಣದ ಜವಾಬ್ದಾರಿಯಲ್ಲಿ ಜಯವನ್ನು ಸಾಧಿಸುವ ಹಂತವನ್ನು ತಲುಪುವಿರಿ. ನೂತನ ಸಂಸ್ಥೆಯಲ್ಲಿ ಉತ್ತಮ ಉದ್ಯೋಗ ಪಡೆದುಕೊಳ್ಳುವಿರಿ. ಹೊಸ ವಾಹನ ಖರೀದಿಸುವ ಯೋಗವಿದೆ.

ಮಕರ: ಎಲೆಕ್ಟ್ರಾನಿಕ್ ಕ್ಷೇತ್ರದಲ್ಲಿರುವವರಿಗೆ ವ್ಯಾಪಾರ ವ್ಯವಹಾರಗಳಲ್ಲಿ ನಿರೀಕ್ಷೆಗೂ ಮೀರಿದ ಆದಾಯವಿದೆ. ಹೂಡಿಕೆಯ ಬಗ್ಗೆ ಮುಂದಾಲೋಚನೆ ಹಾಗೂ ಎಚ್ಚರಿಕೆಯಿಂದ ತೀರ್ಮಾನವನ್ನು ಕೈಗೊಳ್ಳುವುದು ಉತ್ತಮ.

ಕುಂಭ: ಬಹುದಿನದ ವಿಚಾರಗಳನ್ನು ಕಾರ್ಯ ರೂಪಕ್ಕೆ ತರಲು ಪ್ರಯತ್ನಿಸಿದಲ್ಲಿ ಲಾಭ ಕಾಣುವಿರಿ. ಉದ್ಯೋಗಕ್ಕಾಗಿ ನಡೆಸಿದ ತೀವ್ರ ಪ್ರಯತ್ನ ಈ ದಿನ ಫಲ ನೀಡಲಿದೆ. ವ್ಯವಸಾಯಗಾರರಿಗೆ ಹೆಚ್ಚಿನ ಬೆಳೆ ಕೈ ಸೇರುವ ನಿರೀಕ್ಷೆ ಇರುವುದು.

ಮೀನ: ನಿಮ್ಮ ಪೂರ್ವನಿಯೋಜಿತ ಕೆಲಸ ಕಾರ್ಯಗಳು ಸರ್ವರ ಸಹಾಯದಿಂದ ಮಂದಗತಿಯಲ್ಲಿ ಪೂರ್ಣಗೊಳ್ಳುವುದು. ಕೆಲಸ ಕಾರ್ಯಗಳಲ್ಲಿ ಅತಿ ಹೆಚ್ಚಿನ ಉತ್ಸಾಹವನ್ನು ಕಾಣುವಿರಿ. ಅವಿವಾಹಿತರಿಗೆ ಕಂಕಣ ಯೋಗವಿದೆ.

ಪದಬಂಧ 5536

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ನಡುವೆ ರಾಜನಿದ್ದರೂ ಅಪಜಯ ದೊರಕಿತಲ್ಲಾ? (4)
3.ಹವಾ ನಡುವಿದ್ದಾಗಲೇ ಈ ಗೆಳೆತನ! (4)
5.ಧುರಂದರನ ಮರದಲ್ಲಿರುವ ಸಿಹಿ (3)
6.ಮಂಗಳಕಾರ್ಯದಲ್ಲಿ ಕಪಿ ಬಂದಿದೆಯಲ್ಲಾ! (2)
7.ಗೋರಂಟಿಯನ್ನು ಹೀಗೂ ಹೇಳುವರು (4)
9.ನಮ್ಮ ನಾಡ ಹಬ್ಬವಿಲ್ಲಿ ತಿರುವುಮುರುವಾಗಿದೆ (3)
10.ಕಾಲವಿಲ್ಲಿ ಉಲ್ಟಾ ಆಗಿದೆ (3)
12.ಸರ ತರಲು ತೋರಿದ ಧಾವಂತ (4)
14.ಶುನಕವನ್ನು ನೋಡುತ್ತಿರುವ ಗಿಳಿ (2)
15.ಪಾಲನ್ನು ಹಿಡಿದಿರುವ ದನಗಾಹಿ (3)
17.ಕಡೆಗೂ ಖರೀದಿಸಿರುವ ಮಂತುಗೋಲು (4)
18.ಕ್ಷಮೆಯನ್ನು ನೀಡುವುದು (4)

ಮೇಲಿಂದ ಕೆಳಕ್ಕೆ
1.ಪರಂಪರೆಯಿಂದ ಪ್ರಾಪ್ತವಾಗಿರುವ ಸ್ವರ್ಗ! (4)
2.ನಿಯಮದಲ್ಲಿರುವ ನರಕಾಧಿಪತಿ! (2)
3.ಸರಕ್ಕನೆ ದಾರ ಹಿಡಿದಿರುವ ಸೈನ್ಯದ ಮುಖ್ಯಸ್ಥ (4)
4.ಸರಾಗವಾಗಿ ನುಗ್ಗಿರುವ ಗಂಡಾನೆ (3)
6.ಮಂದಬುದ್ಧಿಯವನು ತೋರಿದ ಮುಗುಳುನಗೆ (4)
8.ಈತ ಸೇನಾಧಿಪತಿ (4)
11.ಭಾರದ ವಸ್ತುಗಳನ್ನು ಎತ್ತುವ ಮೀಟುಗೋಲು (4)
13.ರಸವತ್ತಾದ ಹಣ್ಣಿನ ಖಾದ್ಯ (4)
14.ಶುಕನ್ನು ನೋಡುತ್ತಿರುವ ನಾಯಿ (3)
16.ಅಲಕ್ಷ್ಯ ಮಾಡಬೇಡಿ! ನೂರುಸಾವಿರ ಇಲ್ಲಿದೆ! (2)



5535ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಜಾಯಮಾನ 5.ಗಾರುಡಿಗ
6.ಗಟಾರ 7.ಪ್ರಪಂಚ
9.ಕಾಮನೆ
10.ಪರಿಚ್ಛೇದನ 11.ಕುಟಿಲ
12.ನಕ್ಷತ್ರ 14.ಮೀಸಲು
16.ಅನುವಾದ 17.ಕಾಡುಗಿಚ್ಚು

ಮೇಲಿಂದ ಕೆಳಕ್ಕೆ:
1. ಮಿಗಾತಿಪ್ರ 2.ಜಾಗ
3.ನಗ 4.ಅರಮನೆ
8.ಚಪಲ 9.ಕಾನನ
11.ಕುಡಿಮೀಸೆ 13.ತ್ರಯೋದಶಿ
15.ಲುಕಾ 16.ಅಚ್ಚು

ಸುಡೊಕು 5922

		5	3		8	7		2
							8	
9					2			6
							6	
	2	6	9		7			
	4		6		1		7	5
			1					7
8		7					9	1
1	9		8		6	4		3

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5921 ಸುಡೊಕು

1	5	8	4	3	2	9	7	6
3	7	6	9	8	1	2	4	5
9	2	4	6	5	7	1	8	3
8	9	5	2	7	4	6	3	1
4	6	1	5	9	3	7	2	8
7	3	2	1	6	8	5	9	4
5	4	9	3	2	6	8	1	7
2	1	7	8	4	5	3	6	9
6	8	3	7	1	9	4	5	2

ಷೇರುಪೇಟೆ ವಹಿವಾಟು 930



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	21,453
ಇಂದಿನ ಅಂತ್ಯ	21,150
▼	303
ದಿನದ ಕನಿಷ್ಠ	21,087

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹605
12 ಮೊಟ್ಟೆಗೆ	₹80
ಮೈಸೂರು	
100 ಮೊಟ್ಟೆಗೆ	₹607

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1610 (1620)
ಸೋಯಾ (ರಿಫೈನ್ಡ್)	₹900 (900)
ಸೂರ್ಯಕಾಂತಿ (ರಿಫೈನ್ಡ್)	₹905 (910)
ಪಾಮೋಲಿನ್	₹827 (828)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹326-472
ದ್ವಿತಳಿ (ಬಿ.ವಿ)	₹380-588

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹148
ಆರ್‌ಎಸ್‌ಎಸ್-5	₹144
ಗುಡ್ ಲಾಟ್	₹127

ವಿನಿಮಯ ದರ

$ ಡಾಲರ್	83.18
£ ಪೌಂಡ್	105.28
€ ಯುರೊ	91.15
¥ ಯೆನ್ (100ಕ್ಕೆ)	58

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಕೆ.ಆರ್. ಪೇಟೆ	₹8200-8200
ಪುತ್ತೂರು	₹5500-9100
ತಿಪಟೂರು	₹7500-8100
ತುರುವೇಕೆರೆ	₹8150-8150

ಷೇರು ಸೂಚ್ಯಂಕಗಳು ಭಾರಿ ಕುಸಿತ

ಒಂದೇ ದಿನ ಬಿಎಸ್‌ಇ 930, ನಿಫ್ಟಿ 303 ಅಂಶ ಇಳಿಕೆ : ಎಚ್‌ಡಿಎಫ್‌ಸಿಗೆ ಲಾಭ

ಮುಂಬೈ (ಪಿಟಿಐ): ವಾರದ ಹಿಂದೆ ನಾಗಾಲೋಟ ಕಂಡಿದ್ದ ಮುಂಬೈ ಷೇರು ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ ಮತ್ತು ರಾಷ್ಟ್ರೀಯ ಷೇರು ಸೂಚ್ಯಂಕ ನಿಫ್ಟಿ ಬುಧವಾರ ಭಾರಿ ಇಳಿಕೆ ಕಂಡಿವೆ.

ಭಾರತ ಸೇರಿದಂತೆ ವಿದೇಶಗಳಲ್ಲಿ ಮತ್ತೆ ಕಾಣಿಸಿಕೊಂಡಿರುವ ಕೋವಿಡ್-19 ಪ್ರಕರಣಗಳು ಮತ್ತು ಹೂಡಿಕೆದಾರರು ಲಾಭ ಮಾಡಿಕೊಳ್ಳಲು ಷೇರುಗಳ ಮಾರಾಟದಲ್ಲಿ ತೊಡಗಿದ್ದೇ ಈ ಕುಸಿತಕ್ಕೆ ಕಾರಣ ಎಂದು ಹೇಳಲಾಗಿದೆ.

'ಜಾಗತಿಕಮಟ್ಟದಲ್ಲಿನ ಧನಾತ್ಮಕ ಪ್ರವೃತ್ತಿಯ ಹೊರತಾಗಿಯೂ ದೇಶೀಯ ಮಾರುಕಟ್ಟೆಯಲ್ಲಿ ತೀಕ್ಷ್ಣ ಮತ್ತು ಹಠಾತ್ ಮಾರಾಟ ಪ್ರವೃತ್ತಿ ಕಂಡುಬಂದಿತು. ಬೆಲೆ ಏರಿಕೆಯು ಹೂಡಿಕೆದಾರರು ಲಾಭ ಕಾಯ್ದಿರಿಸಲು ಪ್ರೇರೇಪಿಸಿತು' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

30 ಷೇರುಗಳ ಮುಂಬೈ ಷೇರು ಸೂಚ್ಯಂಕವು 930 ಅಂಶ (ಶೇ 1.30) ಇಳಿಕೆ ಕಂಡು, 70,506 ಅಂಶಗಳಿಗೆ ಸ್ಥಿರವಾಯಿತು. ಆರಂಭಿಕ ಹಂತದಲ್ಲಿ ಸೂಚ್ಯಂಕ 475 ಅಂಶ ಏರಿಕೆಯಾಗಿ ಗರಿಷ್ಠ ಮಟ್ಟವಾದ 71,913 ಅಂಶಗಳಿಗೆ ತಲುಪಿತ್ತು.

ನಿಫ್ಟಿಯು 303 ಅಂಶ (ಶೇ 1.41) ಇಳಿಕೆಯಾಗಿ, 21,150ಕ್ಕೆ ತಲುಪಿತು. ದಿನದ ಆರಂಭಿಕ ಹಂತದಲ್ಲಿ 139 ಅಂಶ (ಶೇ 0.65) ಏರಿಕೆಯಾಗಿ 21,593 ಗರಿಷ್ಠಮಟ್ಟಕ್ಕೆ ತಲುಪಿತ್ತು.

ಬಿಎಸ್‌ಇ ಷೇರುಗಳ ಪೈಕಿ ಎಚ್‌ಡಿಎಫ್‌ಸಿ ಬ್ಯಾಂಕ್ ಮಾತ್ರ ಲಾಭ ಕಂಡಿದೆ. ಟಾಟಾ ಸ್ಟೀಲ್ ಶೇ 4.21ರಷ್ಟು ಕುಸಿದಿದೆ. ಎನ್‌ಟಿಪಿಸಿ, ಟಾಟಾ ಮೋಟರ್ಸ್, ಎಚ್‌ಸಿಎಲ್ ಟೆಕ್ನಾಲಜೀಸ್, ಮಹೀಂದ್ರ ಆ್ಯಂಡ್ ಮಹೀಂದ್ರ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಪವರ್ ಗ್ರಿಡ್, ಟೆಕ್ ಮಹೀಂದ್ರ, ಲಾರ್ಸನ್ ಆ್ಯಂಡ್ ಟೂಬ್ರೊ ಮತ್ತು ಜೆಎಸ್‌ಡಬ್ಲ್ಯು ಸ್ಟೀಲ್ ಷೇರುಗಳು ಕೂಡ ಇಳಿಕೆ ಕಂಡಿವೆ.

ಯುಟಿಲಿಟಿ (ಶೇ 4.65), ಟೆಲಿ ಕಮ್ಯುನಿಕೇಷನ್ (ಶೇ 4.36), ವಿದ್ಯುತ್ (ಶೇ 4.33), ಸೇವೆ (ಶೇ 4.20), ಲೋಹ (ಶೇ 3.57), ಸರಕು (ಶೇ 3.51), ಕೈಗಾರಿಕೆ (ಶೇ 2.85), ಬಂಡವಾಳ ಸರಕು (ಶೇ 2.83) ಷೇರುಗಳು ಇಳಿಕೆ ಕಂಡಿವೆ. ಒಟ್ಟು 3,117 ಷೇರುಗಳು ಇಳಿಕೆ ಆಗಿವೆ. 658 ಷೇರು ಏರಿಕೆಯಾಗಿದ್ದರೆ, 86 ಸ್ಥಿರವಾಗಿವೆ.

ಏಷ್ಯಾ ಮಾರುಕಟ್ಟೆಯಲ್ಲಿ ಸಿಯೋಲ್, ಟೋಕಿಯೊ ಮತ್ತು ಹಾಂಗ್‌ಕಾಂಗ್ ಸಕಾರಾತ್ಮಕ ವಹಿವಾಟು ದಾಖಲಿಸಿದವು. ಆದರೆ, ಶಾಂಘೈ ಇಳಿಕೆಯಲ್ಲಿ ಮುಕ್ತಾಯವಾಯಿತು. ಯುರೋಪ್ ಮಾರುಕಟ್ಟೆ ವಹಿವಾಟು ತೀವ್ರ ಇಳಿಕೆ ಕಂಡಿತು. ಜಾಗತಿಕ ತೈಲ ಮಾನದಂಡ ಬ್ರೆಂಟ್ ಕಚ್ಚಾತೈಲವು ಶೇ 0.76ರಷ್ಟು ಏರಿಕೆ ಆಗಿ, ಪ್ರತಿ ಬ್ಯಾರೆಲ್‌ಗೆ 79.83 ಡಾಲರ್‌ಗೆ ತಲುಪಿತು.

ಚಿನ್ನದ ದರ ₹300, ಬೆಳ್ಳಿ ₹800 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ಚಿನ್ನ ಮತ್ತು ಬೆಳ್ಳಿ ದರ ಏರಿಕೆ ಆಗಿದೆ. ಚಿನ್ನದ ದರ 10 ಗ್ರಾಂಗೆ ₹300 ಏರಿಕೆಯಾಗಿ, ₹63,100ರಂತೆ ಮಾರಾಟವಾಯಿತು.

ಬೆಳ್ಳಿ ಧಾರಣೆ ಕೆ.ಜಿಗೆ ₹800 ಹೆಚ್ಚಳವಾಗಿ, ₹78,500 ತಲುಪಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ಏರಿಕೆ ಆಗಿದ್ದು, ದೇಶೀಯ ಮಾರುಕಟ್ಟೆಯ ಮೇಲೂ ಪರಿಣಾಮ ಬೀರಿತು ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ಹೇಳಿದ್ದಾರೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಒಂದು ಔನ್ಸ್‌ಗೆ (28.34 ಗ್ರಾಂ) ಕ್ರಮವಾಗಿ 2,040 ಮತ್ತು 24.07ರಂತೆ ಏರಿಕೆಯಾಗಿ ಮಾರಾಟವಾಗಿದೆ.

ಶೇ 4ರಷ್ಟು ನಿಗದಿತ ಗುರಿಗೆ ತಗ್ಗಿಸಲಾಗದು: ಆರ್‌ಬಿಐ ವರದಿ

ಹಣದುಬ್ಬರ ಸ್ಥಿರತೆ ಕಷ್ಟಸಾಧ್ಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಒಂದು ವರ್ಷ ಕಾಲ ಕಠಿಣ ಹಣಕಾಸು ನೀತಿ ಹಾಗೂ ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡಿರುವ ಹೊರತಾಗಿಯೂ ದೇಶದಲ್ಲಿ ಹಣದುಬ್ಬರವನ್ನು ಶೇ 4ಕ್ಕೆ ಸ್ಥಿರಗೊಳಿಸುವುದು ಕಷ್ಟಸಾಧ್ಯ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಹೇಳಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಹಣದುಬ್ಬರವು ಶೇ 5.4ರಲ್ಲಿಯೇ ಮುಂದುವರಿಯಲಿದೆ. ಪರಿಣಾಮಕಾರಿಯಾದ ಆರ್ಥಿಕ ಕ್ರಮಗಳನ್ನು ಅನುಸರಿಸಿದರೆ 2024–25ನೇ ಹಣಕಾಸು ವರ್ಷದ ಮೊದಲ ಮೂರು ತ್ರೈಮಾಸಿಕದಲ್ಲಿ ಶೇ 4.6ಕ್ಕೆ ತಗ್ಗುವ ಸಾಧ್ಯತೆಯಿದೆ ಎಂದು ಬುಧವಾರ ಬಿಡುಗಡೆ ಮಾಡಿರುವ ಆರ್ಥಿಕ ಪರಿಶೀಲನಾ ವರದಿಯಲ್ಲಿ ಹೇಳಿದೆ.

ಮುಂದಿನ ಹಲವು ತಿಂಗಳ ಕಾಲ ಹಣದುಬ್ಬರವನ್ನು ಶೇ 4ರಲ್ಲಿ ಕಾಯ್ದುಕೊಳ್ಳುವ ಮೂಲಕ ಬೆಲೆಯಲ್ಲಿ ಸ್ಥಿರತೆ ಕಾಪಾಡುವ ಕುರಿತು ಆರ್‌ಬಿಐ ಹಣಕಾಸು ನೀತಿ ಸಮಿತಿಯಲ್ಲಿ ನಿರ್ಧರಿಸಲಾಗಿತ್ತು. ಆದರೆ, ಮುಂದಿನ ವರ್ಷದಲ್ಲಿ ಹಣದುಬ್ಬರವನ್ನು ನಿಗದಿತ ಗುರಿಗೆ ತಗ್ಗಿಸುವುದು ಕಷ್ಟಕರ ಎಂದು ವರದಿ ಸ್ಪಷ್ಟಪಡಿಸಿದೆ.

ಸೆಪ್ಟೆಂಬರ್ ಮತ್ತು ಅಕ್ಟೋಬರ್‌ನಲ್ಲಿ ಗ್ರಾಹಕ ಬೆಲೆ ಸೂಚ್ಯಂಕ ಆಧಾರಿತ ಚಿಲ್ಲರೆ ಹಣದುಬ್ಬರವು ಸರಾಸರಿ ಶೇ 4.9ರಷ್ಟು ಇತ್ತು. ಆಹಾರ ಪದಾರ್ಥಗಳು ಹಾಗೂ ತರಕಾರಿ ದರ ಹೆಚ್ಚಳದಿಂದಾಗಿ ನವೆಂಬರ್ ತಿಂಗಳಿನಲ್ಲಿ ಶೇ 5.55ರಷ್ಟು ಗರಿಷ್ಠ ಮಟ್ಟದಲ್ಲಿ ದಾಖಲಾಗಿತ್ತು ಎಂದು ಸರ್ಕಾರ ತಿಳಿಸಿತ್ತು.

ಡಿಸೆಂಬರ್‌ನಲ್ಲೂ ಏರಿಕೆ ಸಾಧ್ಯತೆ?

ಸೆಪ್ಟೆಂಬರ್ ಮತ್ತು ಅಕ್ಟೋಬರ್‌ನಲ್ಲಿ ಆಹಾರ ಪದಾರ್ಥಗಳ ಬೆಲೆ ಏರಿಕೆಯಾಗಿರಲಿಲ್ಲ. ನವೆಂಬರ್‌ನಲ್ಲಿ ಆಹಾರ ಪದಾರ್ಥಗಳ ಬೆಲೆ ಏರಿಕೆಯ ಬಿಸಿ ತಟ್ಟಿತ್ತು. ಡಿಸೆಂಬರ್‌ನಲ್ಲಿಯೂ ಇದು ಪುನರಾವರ್ತನೆಯಾಗುವ ಸಾಧ್ಯತೆಯಿದೆ. ಹಾಗಾಗಿ, ವರ್ಷದ ಕೊನೆಯ ತಿಂಗಳಿನಲ್ಲಿಯೂ ಚಿಲ್ಲರೆ ಹಣದುಬ್ಬರ ಏರಿಕೆಯಾಗುವ ಸಾಧ್ಯತೆ ಇದೆ ಎಂದು ಆರ್‌ಬಿಐ ಹೇಳಿದೆ.

ಆಹಾರ ಅಸಮತೋಲನದ ಪುನರಾರ್ತನೆಯು ಬೆಲೆ ಏರಿಕೆ ಮೇಲೆ ಪರಿಣಾಮ ಬೀರುತ್ತದೆ. ಹಣದುಬ್ಬರವು ಗ್ರಾಹಕರ ಖರ್ಚಿನ ಮೇಲೆ ಬರೆ ಎಳೆಯುತ್ತದೆ. ಅಲ್ಲದೆ ಆರ್ಥಿಕ ಬೆಳವಣಿಗೆಗೆ ಅಡ್ಡಿಪಡಿಸುತ್ತದೆ. ಹಾಗಾಗಿ ಇದನ್ನು ನಿಗದಿತ ಗುರಿಯಲ್ಲಿ ನಿಯಂತ್ರಿಸಬೇಕು. ಒಂದು ವೇಳೆ ನಿಯಂತ್ರಣಕ್ಕೆ ಬಾರದಿದ್ದರೆ ಆರ್ಥಿಕ ಬೆಳವಣಿಗೆಯನ್ನು ಕುಗ್ಗಿಸುತ್ತದೆ ಎಂದು ಹೇಳಿದೆ.

ಬಣ ಕಿತ್ತಾಟ: ಹಳಿ ತಪ್ಪಿದ 'ಅತಿಥಿ' ಹೋರಾಟ

ಒಂದನೇ ಪುಟದಿಂದ

'ಪಾಠಕ್ಕಾಗಿಯೇ ತಮ್ಮನ್ನು ಸಮರ್ಪಿಸಿಕೊಂಡ ವರ್ಗ, ಇತರೆ ವೃತ್ತಿ ಮಾಡುತ್ತಾ ಜತೆಗೆ ಬೋಧನೆಯನ್ನೂ ಮಾಡುತ್ತಿರುವ ವರ್ಗ ಹಾಗೂ ಬಡ್ಡಿ ವ್ಯವಹಾರ ಮಾಡುತ್ತಾ ಪ್ರತಿಷ್ಠೆಗಷ್ಟೇ ಕಾಲೇಜಿಗೆ ಬರುವ ವರ್ಗ ಸೇರಿ ಮೂರು ವರ್ಗದ ಉಪನ್ಯಾಸಕರಿದ್ದಾರೆ. ಮೊದಲ ವರ್ಗದವರಷ್ಟೇ ಹೋರಾಟಕ್ಕೆ ಬೆಂಬಲ ನೀಡುತ್ತಿದ್ದಾರೆ. ಅಂಥವರಿಂದ ಹೋರಾಟ ಗಟ್ಟಿಗೊಳ್ಳುತ್ತದೆಯೇ' ಎಂದು ಒಂದು ಸಂಘದ ಅಧ್ಯಕ್ಷರೊಬ್ಬರು ಜಾಲತಾಣದಲ್ಲಿ ಸಂದೇಶ ಹರಿಬಿಟ್ಟಿದ್ದಾರೆ.

'ಇಂತಹ ಸಂದೇಶಗಳು ನಮ್ಮನ್ನು ಘಾಸಿಗೊಳಿಸಿದೆ. ಇತರೆ ಕೆಲಸ ಮಾಡದಿದ್ದರೆ ಜೀವನ ನಡೆಸುವುದು ಕಷ್ಟವಾಗುತ್ತದೆ. ಹೀಗೆ ತೇಜೋವಧೆ ಮಾಡುವವರ ಜತೆ ನಾವು ಏಕೆ ಹೋರಾಟ ಮಾಡಬೇಕು' ಎನ್ನುತ್ತಾರೆ ಅತಿಥಿ ಉಪನ್ಯಾಸಕ ರವಿಕುಮಾರ್.

ಮೂರು ವರ್ಗದ ಉಪನ್ಯಾಸಕರ ಹೇಳಿಕೆಗಳಿಗೆ ತಿರುಗೇಟು ನೀಡಿರುವ ಮೊತ್ತೊಂದು ಬಣ, 'ಹಿಂದಿನ ಸರ್ಕಾರದ ಜತೆ ಹೊಂದಾಣಿಕೆ ಮಾಡಿಕೊಂಡ ಸಂಘಟನೆಯೊಂದು ಕೆಲಸದ ಅವಧಿ ಹೆಚ್ಚಳದ ಭರವಸೆ ಒಪ್ಪಿಕೊಂಡು ಐದು ಸಾವಿರ ಅತಿಥಿ ಉಪನ್ಯಾಸಕರ ಅನ್ನ ಕಿತ್ತುಕೊಂಡಿತು. ಇಬ್ಬರ ಅನ್ನ ಒಬ್ಬರೇ ತಿನ್ನುವುದನ್ನು ಸಮರ್ಥಿಸಿಕೊಳ್ಳುವುದು ಸರಿಯೇ' ಎಂದು ರಘುಪತಿ ಎನ್ನುವವರು ಪ್ರಶ್ನಿಸಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	1000-1100
ನಡುಗೋಲು	1250-1300
ರಾಶಿ	1350-1400
ರಾಶಿ ಉತ್ತಮ	1450-1500
ಹೆರಕಿದ್ದು	2000-2100
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1800-1850
ಹಸಿರು ಅತಿ ಉತ್ತಮ	2200-2300
ಕಾಳು ಮೆಣಸು	580
ಅಡಿಕೆ	
ಬಂಟ್ವಾಳ	
ಕೋಕ	15000-27500
ಹೊಸತು	27500-36000
ಹಳತು	42000-45500
ಹೊನ್ನಾವರ	
ಹಳೆಚಾಲಿ	36000-38000
ಕಾರ್ಕಳ	
ಹಳತು	25000-46000
ಕುಮಟ	
ಚಿಟ್ಟೆ	40101-44001
ಚಿಪ್ಪು	26099-34599
ಕೋಕ	19019-31019
ಫ್ಯಾಕ್ಟರಿ	10169-22699
ಹಳೆಚಾಲಿ	36699-39009
ಹೊಸಚಾಲಿ	33609-35109
ಕುಂದಾಪುರ	
ಹಳೆಚಾಲಿ	41000-42500
ಹೊಸಚಾಲಿ	30000-36500
ಪುತ್ತೂರು	
ಕೋಕ	11000-25000
ಹೊಸತು	27000-36500
ಶಿವಮೊಗ್ಗ	
ಬೆಟ್ಟೆ	46109-53589
ಗೊರಬಲು	25079-38599
ಹೊಸತು	45509-48259
ರಾಶಿ	37159-48359
ಸರಕು	55599-78009
ಸಿದ್ದಾಪುರ	
ಬಿಳಿಗೋಟು	30099-32989
ಚಾಲಿ	37499-38900
ಕೋಕ	29299-32069
ಕೆಂಪುಗೋಟು	28809-31289
ರಾಶಿ	43209-47299
ತಟ್ಟಿಬೆಟ್ಟೆ	41019-42309
ಶಿರಸಿ	
ಬೆಟ್ಟೆ	38099-45209
ಬಿಳಿಗೋಟು	28399-35709
ಚಾಲಿ	36608-39311
ಕೆಂಪುಗೋಟು	32999-32999
ರಾಶಿ	45699-47359

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	-	14000	-	202.40
ಎಸಿ	-	7700	-	
ಆರ್‌ಪಿ	-	11000	-	ಲಂಡನ್
ಆರ್‌ಸಿ	-	7000	-	2960 ಡಾಲರ್ಸ್

ಹೊಟ್ಟೆಯಲ್ಲಿ ₹20 ಕೋಟಿ ಮೌಲ್ಯದ ಕೊಕೇನ್ ಕ್ಯಾಪ್ಸೂಲ್!

ಒಂದನೇ ಪುಟದಿಂದ

ಇಥಿಯೋಪಿಯಾ ರಾಜಧಾನಿ ಅದಿಸ್ ಅಬಾಬಾದಿಂದ ವೈದ್ಯಕೀಯ ವೀಸಾದ ಮೇಲೆ ಬೆಂಗಳೂರಿಗೆ ಹೊರಟಿದ್ದ 40 ವರ್ಷದ ಆರೋಪಿಯ ಬಗ್ಗೆ ಭಾರತದ ವೈಮಾನಿಕ ಗುಪ್ತಚರ ತಂಡಕ್ಕೆ ಮಾದಕವಸ್ತು ಕಳ್ಳ ಸಾಗಾಟದ ಬಗ್ಗೆ ಖಚಿತ ಮಾಹಿತಿ ದೊರೆತಿತ್ತು.

ಬೆಂಗಳೂರು ನಿಲ್ದಾಣದಲ್ಲಿ ಆರೋಪಿಯನ್ನು ವಶಕ್ಕೆ ಪಡೆದು ಪರಿಶೀಲಿಸಿದ ಅಧಿಕಾರಿಗಳು ಆತನನ್ನು ಐದು ದಿನ ಆಸ್ಪತ್ರೆಗೆ ದಾಖಲಿಸಿದ್ದರು. ಅಲ್ಲಿ ಆತನ ಹೊಟ್ಟೆಯಿಂದ 99 ಕೊಕೇನ್ ತುಂಬಿದ ಕ್ಯಾಪ್ಸೂಲ್‌ಗಳನ್ನು ಹೊರಕ್ಕೆ ತೆಗೆಯಲಾಗಿದೆ. ಆರೋಪಿಯನ್ನು ಹೆಚ್ಚಿನ ವಿಚಾರಣೆಗಾಗಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಹೊಸ ವರ್ಷಾಚರಣೆ ಹಿನ್ನೆಲೆಯಲ್ಲಿ ಮಾರಾಟ ಮಾಡಲು ಕೊಕೇನ್ ಕಳ್ಳ ಸಾಗಾಟ ಮಾಡುತ್ತಿದ್ದ ಆತ ಬೆಂಗಳೂರಿನಿಂದ ದೆಹಲಿಗೆ ಹೊರಟಿದ್ದ ಎಂದು ತಿಳಿದು ಬಂದಿದೆ.

ರಸ್ತೆ ಅಭಿವೃದ್ಧಿ: ಅಮೆರಿಕಕ್ಕೆ ಸಡ್ಡು

ಐದು ವರ್ಷದಲ್ಲಿ ಗುರಿ ಸಾಧನೆ: ಸಚಿವ ನಿತಿನ್ ಗಡ್ಕರಿ ವಿಶ್ವಾಸ

ತಿರುವನಂತಪುರ (ಪಿಟಿಐ): 'ಮುಂದಿನ ಐದು ವರ್ಷಗಳಲ್ಲಿ ದೇಶದ ರಸ್ತೆ ಮೂಲಸೌಕರ್ಯವನ್ನು ಅಮೆರಿಕಕ್ಕೆ ಸರಿಸಾಟಿಯಾಗಿ ಅಭಿವೃದ್ಧಿಪಡಿಸುವ ಗುರಿ ಹೊಂದಲಾಗಿದೆ' ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

'ದೇಶದ ಮಹಾನಗರಗಳಲ್ಲಿ ಸಂಚಾರ ದಟ್ಟಣೆ ನಿವಾರಣೆ, ಪ್ರಯಾಣದ ಅವಧಿ ಕಡಿತ ಮತ್ತು ರಸ್ತೆ ಅಪಘಾತಗಳ ಸಂಖ್ಯೆ ತಗ್ಗಿಸಲು ಸಮಗ್ರ ಕಾರ್ಯ ವಿಧಾನಕ್ಕೆ ಬದ್ಧ' ಎಂದು 'ಮನೋರಮಾ ಇಯರ್‌ಬುಕ್ 2024'ಕ್ಕೆ ನೀಡಿರುವ ಸಂದರ್ಶನದಲ್ಲಿ ಅವರು ಹೇಳಿದ್ದಾರೆ.

ದೇಶದಲ್ಲಿ ರಸ್ತೆ ಸುರಕ್ಷಿತ ಮತ್ತು ಸುಸ್ಥಿತಿಗೆ ಸಚಿವಾಲಯವು ಒತ್ತು ನೀಡಿದೆ. ಇದಕ್ಕಾಗಿ ಕಳೆದ ಒಂಬತ್ತು ವರ್ಷಗಳಲ್ಲಿ ₹50 ಲಕ್ಷ ಕೋಟಿಗೂ ಹೆಚ್ಚು ಮೊತ್ತದ ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ಅಸ್ತಿತ್ವದಲ್ಲಿರುವ ನೀತಿಗಳನ್ನು ಸುಧಾರಿಸುವ ಮೂಲಕ ಗುತ್ತಿಗೆ ಮಂಜೂರಾತಿ ವಿಧಾನವನ್ನೂ ಸರಳೀಕರಿಸಿದೆ ಎಂದು ಹೇಳಿದ್ದಾರೆ.

> **ದೇಶದ ಆಟೊಮೊಬೈಲ್ ವಲಯವು ಜಪಾನ್ ಅನ್ನು ಹಿಂದಿಕ್ಕಿದೆ. ಚೀನಾ ಮತ್ತು ಅಮೆರಿಕದ ಬಳಿಕ ಮೂರನೇ ಸ್ಥಾನದಲ್ಲಿದೆ. ಇದನ್ನು ಅಗ್ರಪಟ್ಟಕ್ಕೇರಿಸಲು ನಿರ್ಧರಿಸಲಾಗಿದೆ**
> **ನಿತಿನ್ ಗಡ್ಕರಿ,** ಕೇಂದ್ರ ಸಾರಿಗೆ ಸಚಿವ

'ಗುತ್ತಿಗೆಗೆ ಅನುಮತಿ ಕೋರಿ ಗುತ್ತಿಗೆದಾರರು ನನ್ನ ಬಳಿಗೆ ಬರುವ ಅಗತ್ಯವಿಲ್ಲ. ಪಾರದರ್ಶಕತೆ, ಕಾಲಮಿತಿ, ಫಲಿತಾಂಶ ಆಧಾರಿತ ಹಾಗೂ ಸದೃಢವಾದ ನಿರ್ಧಾರ ತೆಗೆದುಕೊಳ್ಳುವ ವೇಗವನ್ನೂ ಹೆಚ್ಚಿಸಲಾಗಿದೆ. ಸಚಿವಾಲಯ, ಗುತ್ತಿಗೆದಾರರು ಮತ್ತು ಬ್ಯಾಂಕ್‌ಗಳನ್ನು ಒಂದೇ ಕುಟುಂಬವೆಂದು ಪರಿಗಣಿಸಿದ್ದೇವೆ ಎಂದು ಹೇಳಿದ್ದಾರೆ.

ಎಥೆನಾಲ್ ಬಳಕೆ: ಸಾಂಪ್ರದಾಯಿಕ ಇಂಧನ ಬಳಕೆಯನ್ನು ಕಡಿಮೆಗೊಳಿಸಲು ಎಲೆಕ್ಟ್ರಿಕ್ ಮತ್ತು ಫ್ಲೆಕ್ಸ್ ಇಂಧನ ವಾಹನಗಳನ್ನು ಪರಿಚಯಿಸಲಾಗುತ್ತಿದೆ ಎಂದಿದ್ದಾರೆ.

ಫ್ಲೆಕ್ಸ್ ಎಂಜಿನ್ ಹೊಂದಿರುವ ಕೆಲವು ವಾಹನಗಳು ಈಗ ಪೆಟ್ರೋಲ್ ಬದಲಿಗೆ ಎಥೆನಾಲ್‌ನಿಂದ ಚಲಿಸುತ್ತಿವೆ. ಪ್ರಸ್ತುತ ಎಥೆನಾಲ್ ದರ ಲೀಟರ್‌ಗೆ ₹60 ಆಗಿದೆ. ಇದು ಇಂಧನದ ಸರಾಸರಿ ವೆಚ್ಚವನ್ನು ₹15ಕ್ಕೆ ತಗ್ಗಿಸುತ್ತದೆ ಎಂದು ವಿವರಿಸಿದ್ದಾರೆ.

ಅಪಘಾತ: ಪ್ರತಿವರ್ಷ 1.50 ಲಕ್ಷ ಸಾವು

'ಕೇಂದ್ರ ಸರ್ಕಾರವು ರಸ್ತೆ ಸುರಕ್ಷತೆಗೆ ಒತ್ತು ನೀಡಿದರೂ ಅಪಘಾತಗಳ ಸಂಖ್ಯೆಯನ್ನು ಶೇ 50ರಷ್ಟು ಕಡಿಮೆ ಮಾಡಲು ಸಾಧ್ಯವಾಗುತ್ತಿಲ್ಲ' ಎಂದು ಗಡ್ಕರಿ ಹೇಳಿದ್ದಾರೆ.

'ಪ್ರತಿವರ್ಷ ಐದು ಲಕ್ಷ ಅಪಘಾತಗಳು ಸಂಭವಿಸುತ್ತಿದ್ದು, 1.50 ಲಕ್ಷ ಮಂದಿ ಮೃತಪಡುತ್ತಿದ್ದಾರೆ. ಇದರಿಂದ ಜಿಡಿಪಿಗೆ ಶೇ 3ರಷ್ಟು ನಷ್ಟ ಆಗುತ್ತದೆ' ಎಂದು ಹೇಳಿದ್ದಾರೆ.

ತಮಿಳುನಾಡಿನಲ್ಲಿ ಸುರಿದ ಮಳೆಯಿಂದಾಗಿ ತೂತ್ತುಕುಡಿ ಜಿಲ್ಲೆಯಲ್ಲಿ ಜಮೀನುಗಳು ಹಾಗೂ ಕಟ್ಟಡಗಳು ಜಲಾವೃತವಾಗಿದ್ದು ವೈಮಾನಿಕ ನೋಟದಲ್ಲಿ ಬುಧವಾರ ಕಂಡಿದ್ದು ಹೀಗೆ –ಪಿಟಿಐ ಚಿತ್ರ

ಟೋಲ್ ಸಂಗ್ರಹಕ್ಕೆ ಜಿಪಿಎಸ್ ವ್ಯವಸ್ಥೆ ಜಾರಿ

ನವದೆಹಲಿ (ಪಿಟಿಐ): 'ದೇಶದ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಇರುವ ಎಲ್ಲಾ ಟೋಲ್ ಪ್ಲಾಜಾಗಳಲ್ಲಿ ಮುಂದಿನ ವರ್ಷದ ಮಾರ್ಚ್ ವೇಳೆಗೆ ಟೋಲ್ ಸಂಗ್ರಹಕ್ಕೆ ಉಪಗ್ರಹ ಆಧಾರಿತ ಜಿಪಿಎಸ್ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲು ಸರ್ಕಾರ ಸಿದ್ಧತೆ ನಡೆಸಿದೆ' ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

ಇಲ್ಲಿ ಬುಧವಾರ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ಟೋಲ್‌ಗಳಲ್ಲಿ ಸಂಚಾರ ದಟ್ಟಣೆ ತಪ್ಪಿಸುವುದು ಇದರ ಮೂಲ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ಹೊಸ ತಂತ್ರಜ್ಞಾನ ಅಳವಡಿಕೆಗೆ ಸರ್ಕಾರ ಮುಂದಾಗಿದೆ ಎಂದು ಹೇಳಿದರು.

ಈಗಿರುವ ಟೋಲ್ ಪ್ಲಾಜಾಗಳ ಬದಲಾಗಿ ಜಿಪಿಎಸ್ ಆಧಾರಿತ ಟೋಲ್ ವ್ಯವಸ್ಥೆ ರೂಪಿಸಲಾಗುವುದು ಎಂದರು.

2018–19ರಲ್ಲಿ ಟೋಲ್‌ಗಳಲ್ಲಿ ವಾಹನಗಳ ಕಾಯುವಿಕೆ ಅವಧಿಯ 8 ನಿಮಿಷ ಇತ್ತು. 2020–21 ಮತ್ತು 2021–22ರಲ್ಲಿ ಫಾಸ್ಟ್ಯಾಗ್ ಅನುಷ್ಠಾನಗೊಂಡ ಬಳಿಕ ಈ ಅವಧಿಯು 47 ಸೆಕೆಂಡ್‌ಗಳಿಗೆ ಇಳಿಕೆಯಾಗಿದೆ ಎಂದು ಹೇಳಿದರು.

'ಪ್ರಶಸ್ತಿಯ ನಿರೀಕ್ಷೆ ಇರಲಿಲ್ಲ'

ಒಂದನೇ ಪುಟದಿಂದ

ಉಪನ್ಯಾಸಕ್ಕೆ ನಿಂತರೆ, ಕೇಳುಗರು ತಾಸುಗಟ್ಟಲೆ ಕದಲದೇ ತಮ್ಮ ಮಾತುಗಳನ್ನಾಲಿಸುವಂತೆ ಮಾಡಬಲ್ಲ ಪ್ರಖರ ವಾಗ್ಮಿ. ಕೇಳುಗರನ್ನು ಆಳವಾದ ಚಿಂತನೆಗೆ ಒಳಗೊಳ್ಳುವಂತೆ ಮಾಡಬಲ್ಲ ಆಧ್ಯಾತ್ಮಿಕ ಜಿಜ್ಞಾಸೆಗಳ ಪ್ರತಿಪಾದಕರು.

ಭಗವದ್ಗೀತೆಯ ಕುರಿತಾದ 'ಮಹಾಯುದ್ಧಕ್ಕೆ ಮುನ್ನ', ಭಾಗವತದ ಕುರಿತಾದ ಬರಹಗಳನ್ನೊಳಗೊಂಡ 'ಸಂಪಿಗೆ ಭಾಗವತ', 'ಬೆಟ್ಟ ಮಹಮದನ ಬಳಿಗೆ ಬಾರದಿದ್ದರೆ', 'ಆನಂದ ಲಹರೀ', 'ಮಾತಿಗೆ ಮುನ್ನ', 'ಭಕ್ತಿಯ ನೆಪದಲ್ಲಿ' ತಾಳ ಮದ್ದಲೆ ಕುರಿತ 'ಭವ ತಲ್ಲಣ', 'ಬಾಳು- ಸಾವು ಒಡ್ಡುತ್ತಿರುವ ಆಮಿಷ' ಮೊದಲಾದವು ಅವರ ಪ್ರಕಟಿತ ಕೃತಿಗಳು. ಅವರು ಕೃಷಿಕ ಮತ್ತು ತಾಳಮದ್ದಲೆ ಅರ್ಥಧಾರಿಯಾಗಿಯೂ ಪ್ರಸಿದ್ಧರು.

ಮುಂಬೈ ಧಾರಣೆ

ಶೇಂಗಾ

20-12-2023

ಜಾವಾ 70/80(ಹೊಸ)	11100-11200
ಜಾವಾ 80/90(ಹೊಸ)	10500-10600
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10500-10600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1620 (1630)
ಒಂದು ವಾರದ ಡೆಲಿವರಿ	1615 (1625)
ಸೋಯಾ ಕಚ್ಚಾ	862 (860)
ಪಾಮ್ ವಾರದ ಡೆಲಿವರಿ	825 (826)
ಸೂರ್ಯಕಾಂತಿ ಎಣ್ಣೆ ಕಚ್ಚಾ	845 (850)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10ಗ್ರಾಂ	62,100 (61,800)
ಬೆಳ್ಳಿ ಕೆ.ಜಿ	73,750 (73,650)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಒಂದೇ ವರ್ಷದಲ್ಲಿ ಸಾವಿರ ಕೋಟಿ ಮೌಲ್ಯದ ಜೆನೆರಿಕ್ ಔಷಧ ಮಾರಾಟ

ನವದೆಹಲಿ (ಪಿಟಿಐ): ಪ್ರಸಕ್ತ ವರ್ಷದಲ್ಲಿ ಪ್ರಧಾನ ಮಂತ್ರಿ ಭಾರತೀಯ ಜನೌಷಧಿ ಪರಿಯೋಜನಾ (ಪಿಎಂಬಿಜೆಪಿ) ಅಡಿಯಲ್ಲಿ ₹1 ಸಾವಿರ ಕೋಟಿ ಮೌಲ್ಯದ ಜೆನೆರಿಕ್ ಔಷಧಗಳನ್ನು ಮಾರಾಟ ಮಾಡಿ ಹೊಸ ಮೈಲಿಗಲ್ಲು ಸ್ಥಾಪಿಸಲಾಗಿದೆ ಎಂದು ಕೇಂದ್ರ ಸರ್ಕಾರ ಬುಧವಾರ ಹೇಳಿದೆ.

ದೇಶದ 785 ಜಿಲ್ಲೆಗಳಲ್ಲಿ ಇರುವ ಜೆನೆರಿಕ್ ಕೇಂದ್ರಗಳಲ್ಲಿ ಔಷಧ ಖರೀದಿಸುವ ಮೂಲಕ ಜನರು ಈ ವರ್ಷದಲ್ಲಿ ಸುಮಾರು ₹5 ಸಾವಿರ ಕೋಟಿ ಉಳಿತಾಯ ಮಾಡಿದ್ದಾರೆ ಎಂದು ತಿಳಿಸಿದೆ.

2014ರಲ್ಲಿ ದೇಶದಲ್ಲಿ ಕೇವಲ 80 ಕೇಂದ್ರಗಳಿದ್ದವು. ಸದ್ಯ ಇವುಗಳ ಸಂಖ್ಯೆ 10 ಸಾವಿರಕ್ಕೇರಿದೆ. ಕಳೆದ ಒಂಬತ್ತು ವರ್ಷಗಳಲ್ಲಿ ಈ ಯೋಜನೆಯಡಿ ಔಷಧ ಖರೀದಿಸುವ ಮೂಲಕ ಜನರು ₹25 ಸಾವಿರ ಕೋಟಿ ಉಳಿತಾಯ ಮಾಡಿದ್ದಾರೆ ಎಂದು ವಿವರಿಸಿದೆ.

2026ರ ಮಾರ್ಚ್ ಅಂತ್ಯದ ವೇಳೆಗೆ ದೇಶದಲ್ಲಿ ಜೆನೆರಿಕ್ ಕೇಂದ್ರಗಳ ಸಂಖ್ಯೆಯನ್ನು 25 ಸಾವಿರಕ್ಕೆ ಹೆಚ್ಚಿಸುವ ಗುರಿ ಹೊಂದಲಾಗಿದೆ. ಹೊಸ ಕೇಂದ್ರಗಳ ಸ್ಥಾಪನೆಗಾಗಿ ಆನ್‌ಲೈನ್‌ನಲ್ಲಿ ಅರ್ಜಿಯನ್ನೂ ಆಹ್ವಾನಿಸಲಾಗಿದೆ ಎಂದು ಹೇಳಿದೆ.

ಉದ್ಯೋಗಕ್ಕಾಗಿ ಭೂಮಿ ಹಗರಣ ತೇಜಸ್ವಿ, ಲಾಲುಗೆ ಇ.ಡಿ ಸಮನ್ಸ್

ನವದೆಹಲಿ (ಪಿಟಿಐ): ಉದ್ಯೋಗಕ್ಕಾಗಿ ಭೂಮಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ವಿಚಾರಣೆಗೆ ಹಾಜರಾಗುವಂತೆ ಬಿಹಾರ ಉಪ ಮುಖ್ಯಮಂತ್ರಿ ತೇಜಸ್ವಿ ಯಾದವ್ ಮತ್ತು ಅವರ ತಂದೆ ಹಾಗೂ ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್ ಅವರಿಗೆ ಜಾರಿ ನಿರ್ದೇಶನಾಲಯವು (ಇ.ಡಿ) ಸಮನ್ಸ್ ನೀಡಿದೆ.

ತೇಜಸ್ವಿ ಅವರಿಗೆ ಇದೇ 22ರಂದು ಹಾಗೂ ಲಾಲು ಅವರಿಗೆ 27ರಂದು ದೆಹಲಿಯ ಇ.ಡಿ ಕಚೇರಿಗೆ ಹಾಜರಾಗಲು ಸೂಚಿಸಲಾಗಿದೆ ಎಂದು ಮೂಲಗಳು ಬುಧವಾರ ತಿಳಿಸಿವೆ. ಈ ಪ್ರಕರಣಕ್ಕೆ ಸಂಬಂಧಿಸಿ ತೇಜಸ್ವಿ ಅವರನ್ನು ಏಪ್ರಿಲ್ 11ರಂದು ಇ.ಡಿ ಅಧಿಕಾರಿಗಳು ಎಂಟು ಗಂಟೆ ವಿಚಾರಣೆಗೆ ಒಳಪಡಿಸಿದ್ದರು. ಲಾಲು ಅವರಿಗೆ ಇದೇ ಮೊದಲ ಬಾರಿಗೆ ಸಮನ್ಸ್ ಜಾರಿಗೊಳಿಸಲಾಗಿದೆ.

ಒಂದನೇ ಯುಪಿಎ ಸರ್ಕಾರದ ಅವಧಿಯಲ್ಲಿ ಲಾಲು ಅವರು ರೈಲ್ವೆ ಸಚಿವರಾಗಿದ್ದಾಗ ಈ ಹಗರಣ ನಡೆದಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿ ಲಾಲು ಕುಟುಂಬಕ್ಕೆ ಆಪ್ತರಾಗಿರುವ ಅಮಿತ್ ಕತ್ಯಾಲ್ ಅವರನ್ನು ನವೆಂಬರ್‌ನಲ್ಲಿ ಬಂಧಿಸಲಾಗಿತ್ತು.

48 ಗಂಟೆಗಳಲ್ಲಿ ₹2.81 ಕೋಟಿ ಸಂಗ್ರಹ

ನವದೆಹಲಿ (ಪಿಟಿಐ): ಕಾಂಗ್ರೆಸ್‌ನ 'ದೇಶಕ್ಕಾಗಿ ದೇಣಿಗೆ ನೀಡಿ' (ಡೊನೇಟ್ ಫಾರ್ ದೇಶ್) ಅಭಿಯಾನದಲ್ಲಿ 48 ಗಂಟೆಗಳಲ್ಲಿ ₹2.81 ಕೋಟಿ ಸಂಗ್ರಹವಾಗಿದೆ.

1.13 ಲಕ್ಷ ಮಂದಿ ದೇಣಿಗೆ ನೀಡಿದ್ದಾರೆ ಎಂದು ಪಕ್ಷದ ಮೂಲಗಳು ಬುಧವಾರ ತಿಳಿಸಿವೆ. ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಈಚೆಗೆ ಈ ಅಭಿಯಾನಕ್ಕೆ ಚಾಲನೆ ನೀಡಿದ್ದರು.

ಶೇ 80ರಷ್ಟು ದೇಣಿಗೆ ಯುಪಿಐ ವಹಿವಾಟು ಮೂಲಕ ಲಭಿಸಿದೆ ಎಂದೂ ಮೂಲಗಳು ಹೇಳಿವೆ.

ಕೋವಿಡ್: ಮೂರು ರಾಜ್ಯದಲ್ಲಿ ಜೆಎನ್.1ರ 21 ಪ್ರಕರಣ ಪತ್ತೆ

ನವದೆಹಲಿ (ಪಿಟಿಐ): ದೇಶದಲ್ಲಿ ಇಲ್ಲಿಯವರೆಗೆ ಕೋವಿಡ್-19ರ ಜೆಎನ್.1 ಉಪತಳಿಯ 21 ಪ್ರಕರಣಗಳು ಮೂರು ರಾಜ್ಯಗಳಲ್ಲಿ ಪತ್ತೆಯಾಗಿದ್ದು, ಭಯಪಡುವ ಅಗತ್ಯವಿಲ್ಲ ಎಂದು ನೀತಿ ಆಯೋಗದ ಸದಸ್ಯ (ಆರೋಗ್ಯ) ಡಾ. ವಿ.ಕೆ.ಪೌಲ್ ಬುಧವಾರ ಹೇಳಿದ್ದಾರೆ.

ಗೋವಾದಲ್ಲಿ 19 ಜನರಲ್ಲಿ, ಕೇರಳ ಮತ್ತು ಮಹಾರಾಷ್ಟ್ರದಲ್ಲಿ ತಲಾ ಒಬ್ಬರಲ್ಲಿ ಜೆಎನ್.1 ಉಪತಳಿ ಪತ್ತೆಯಾಗಿದೆ. ಎರಡು ವಾರದಿಂದ ಕೋವಿಡ್-19ಕ್ಕೆ ದೇಶದಲ್ಲಿ 16 ಜನರು ಮೃತಪಟ್ಟಿದ್ದಾರೆ. ಹೊಸ ರೂಪಾಂತರ ತಳಿಯ ಕುರಿತು ಭಾರತೀಯ ವಿಜ್ಞಾನಿಗಳು ಸಂಶೋಧನೆ ನಡೆಸುತ್ತಿದ್ದಾರೆ ಎಂದ ಅವರು, ರಾಜ್ಯಗಳು ಕೋವಿಡ್ ಪತ್ತೆ ಪರೀಕ್ಷೆಗಳನ್ನು ಹೆಚ್ಚಿಸುವ ಮತ್ತು ಕಣ್ಗಾವಲು ವ್ಯವಸ್ಥೆಯನ್ನು ಬಲಪಡಿಸುವ ಅಗತ್ಯವಿದೆ ಎಂದು ತಿಳಿಸಿದ್ದಾರೆ.

ಕೇಂದ್ರ ಸಚಿವರ ಪರಿಶೀಲನೆ: ದೇಶದ ಆರೋಗ್ಯ ಸೌಲಭ್ಯಗಳ ಸನ್ನದ್ಧತೆಯ ಕುರಿತು ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವಿಯಾ ಬುಧವಾರ ಪರಿಶೀಲನೆ ನಡೆಸಿದರು. ಅಲ್ಲದೆ ಕೋವಿಡ್‌ನ ಹೊಸ ತಳಿಗಳ ಕುರಿತು ಎಚ್ಚರಿಕೆ ಮತ್ತು ನಿಗಾ ವಹಿಸಲು ಅವರು ರಾಜ್ಯ, ಕೇಂದ್ರಾಡಳಿತ ಪ್ರದೇಶಗಳ ಅಧಿಕಾರಿಗಳಿಗೆ ಸೂಚಿಸಿದರು.

ದೇಶದಲ್ಲಿ ಸೋಂಕಿತರ ಪ್ರಮಾಣ ಏರಿಕೆಯಾಗುತ್ತಿದ್ದರೂ, ಶೇ 92.8ರಷ್ಟು ಜನರು ಮನೆಯಲ್ಲಿಯೇ ಪ್ರತ್ಯೇಕವಾಸದಲ್ಲಿದ್ದಾರೆ. ಇದು ಸೌಮ್ಯವಾದ ಅನಾರೋಗ್ಯವನ್ನು ತೋರುತ್ತದೆ ಎಂದು ಕೇಂದ್ರ ಆರೋಗ್ಯ ಕಾರ್ಯದರ್ಶಿ ಸುಧಾಂಶ ಪಂತ್ ಹೇಳಿದರು.

614 ಪ್ರಕರಣ ಪತ್ತೆ: ದೇಶದಲ್ಲಿ ಬುಧವಾರ ಬೆಳಿಗ್ಗೆ 8ಕ್ಕೆ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿ ಹೊಸದಾಗಿ 614 ಕೋವಿಡ್ ಪ್ರಕರಣಗಳು ಪತ್ತೆಯಾಗಿವೆ. ಇದು ಮೇ 21ರ ನಂತರ ಒಂದೇ ದಿನದಲ್ಲಿ ದಾಖಲಾದ ಅತಿ ಹೆಚ್ಚಿನ ಪ್ರಕರಣಗಳಾಗಿವೆ. ದೇಶದಲ್ಲಿ ಒಟ್ಟು 2,311 ಸಕ್ರಿಯ ಪ್ರಕರಣಗಳಿವೆ ಎಂದು ಆರೋಗ್ಯ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಅಪಾಯಕಾರಿಯಲ್ಲ: 'ಕೋವಿಡ್-19ರ ರೂಪಾಂತರ ತಳಿಯಾದ ಜೆಎನ್. 1 ಅಪಾಯಕಾರಿಯಲ್ಲ. ಇದು ಕಡಿಮೆ ಪ್ರಮಾಣದ ಅಪಾಯವನ್ನುಂಟು ಮಾಡುತ್ತದೆ' ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಹೇಳಿದೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು,ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ.ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 15,000/-. ESI, PF ಸೌಲಭ್ಯವಿರುತ್ತದೆ. ಬೆಂಗಳೂರು- 56. ಸಂಪರ್ಕಿಸಿ: 7899235388, 9148525233

✓ ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

✓ ತಕ್ಷಣ ಬೇಕಾಗಿದ್ದಾರೆ. ಟಯೋಟಾ,TVS, ಬ್ರಿಟಾನಿಯಾ, ಟಾಟಾ ಮೋಟಾರ್ಸ್ ಕಂಪನಿಗಳಿಗೆ SSLC, PUC,Degree, ITIನವರು. 18,000/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9036125229

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6366430266, 8050198999

ಉಚಿತ 50ಕೆ.ಜಿ. ಬೆಳೆಯುವ ಅಣಬೆ ಬೀಜವನ್ನು ಪಡೆದು ಮನೆಯಿಂದಲೇ ತಿಂಗಳಿಗೆ 20,000ಕ್ಕು ಹೆಚ್ಚು ಸಂಪಾದಿಸಿ ಜಾಗದವಶ್ಯಕತೆಯಿಲ್ಲ. ತರಬೇತಿಗಾಗಿ 9036900002/ 8095555516

Wanted

ರಾವ್ ಸಂಸ್ಥೆಗೆವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡುಗಿಯರು ಬೇಕಾಗಿದ್ದಾರೆ ಊಟವಸತಿಯಿದೆ12,000- 17,000, 8951315839, 7022770052

WANTED FOR Bank Loan Collection Field Executive 2 Wheeler Must, Good Salary + Attractive Incentive. 10th, 12th Pass/ Any Degree. 8762900934/ 8867443657

ಪ್ರವಾಸ

Pilgrimage Tours

ಶಿರಿಡಿ ವಿಮಾನ ಪ್ರವಾಸ 4ದಿನಗಳು 110124. ಪೂರಿ, ಕೊನಾರ್ಕ್, ಭುವನೇಶ್ವರ ಪ್ರವಾಸ 4ದಿನಗಳು 120124. ಮೈತ್ರಿ ಟ್ರಾವೆಲ್ಸ್ 6360422209

Travel

27.01.2024 12.03.2024 12.04.2024 17.05.2024 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 06.02.2024 05.03.2024 ದುಬೈ,ಅಬುದಾಬಿ 5 ದಿನಗಳು. 15.03.2024 15.04.2024 21.05.2024 ನೇಪಾಳ 9 ದಿನಗಳು. 06.03.2024 12.04.2024 05.05.2024 ಭೂತಾನ್ 8 ದಿನಗಳು . 05.02.2024 25.03.2024 02.04.2024 ಶ್ರೀಲಂಕಾ 6 ದಿನಗಳು. 02.03.2024 03.04.2024 02.06.2024 ಅಸ್ಸಾಂ,ಮೇಘಾಲಯ 9 ದಿನಗಳು. 17.01.2024 27.02.2024 09.03.2024 ಗುಜರಾತ್ 8 ದಿನಗಳು. 10.02.2024 15.03.2024 ರಾಜಸ್ಥಾನ್ 10 ದಿನಗಳು. 15.03.2024 29.03.2024 16.04.2024 ಕಾಶಿ,ಗಯಾ,ಅಯೋಧ್ಯಾ 7 ದಿನಗಳು. 12.04.2024 06.05.2024 05.06.2024 ಕಾಶ್ಮೀರ್ 6 ದಿನಗಳು. 05.04.2024 25.04.2024 21.05.2024 ಶಿಮ್ಲಾ,ಕುಲುಮನಾಲಿ 8 ದಿನಗಳು. 15.02.2024 26.03.2024 ಉಜ್ಜಯಿನಿ,ಓಂಕಾರೇಶ್ವರ 10 ದಿನಗಳು. ಜೈನ್ ಟ್ರಾವೆಲ್ಸ್ ಬೆಂಗಳೂರು.03 9448402248 7022547922

★ವಿಮಾನದಲ್ಲಿ★ 10.01.2024 4ದಿನಗಳು ಉಜ್ಜೈನ್ ಓಂಕಾರೇಶ್ವರ ಪ್ರವಾಸ. 03.01.2024 10ದಿನಗಳು ರಾಜಸ್ಥಾನ ಪ್ರವಾಸ.ಆರ್.ಗಾಂಧಿ ಟೂರ್ಸ್. ತ್ಯಾಗರಾಜನಗರ, ಬೆಂಗಳೂರು.9945445809/ 9902433500

★ಆರ್.ಗಾಂಧಿ ಟೂರ್ಸ್★ ವಿಮಾನದಲ್ಲಿ 05.02.2024, 10.02.2024, 15.02.2024 6 ದಿನಗಳ ಕಾಶಿ, ಗಯಾ ಪ್ರಯಾಗ ಅಯೋಧ್ಯೆ ಪ್ಯಾಕೇಜ್. 9945445809/ 9902433500

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
www.dhclassifieds.com
ಬುಕ್ ಮಾಡಿ
ಹೆಸರು ಬದಲಾವಣೆ
ನಿಮ್ಮ ಹೆಸರು ಬದಲಾವಣೆ ಆಗಿದೆಯೇ?
ಇಂದೇ ನಿಮ್ಮ ಜಾಹೀರಾತು ಬುಕ್ ಮಾಡಿರಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
9886213331 | 9901641752
9845114560 | 9900428036
9731810277 | 080- 45557163/164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಡ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಸಂಸದರ ಅಮಾನತು ವಿಚಾರದಿಂದ ಗಮನ ಬೇರೆಡೆ ಸೆಳೆಯಲು ಬಿಜೆಪಿ ಯತ್ನ: ಕಾಂಗ್ರೆಸ್ ಆರೋಪ

ಅಣಕ ಪ್ರಕರಣ: ಮುರ್ಮು, ಮೋದಿ ಆಘಾತ

ನವದೆಹಲಿ (ಪಿಟಿಐ): ಟಿಎಂಸಿ ಸಂಸದ ಕಲ್ಯಾಣ್ ಬ್ಯಾನರ್ಜಿ ಅವರು ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಅವರನ್ನು ಅಣಕಿಸಿದ ಪ್ರಸಂಗವು ಬುಧವಾರ ರಾಷ್ಟ್ರ ರಾಜಕಾರಣದಲ್ಲಿ ಚರ್ಚೆಯ ಕೇಂದ್ರಬಿಂದು ಆಗಿತ್ತು. ಈ ವಿಚಾರವು ಸಂಸತ್ತಿನ ಒಳಗೆ ಹಾಗೂ ಹೊರಗೆ ಪ್ರಸ್ತಾಪ ಆಯಿತು. ಉಪ ರಾಷ್ಟ್ರಪತಿಯವರನ್ನು ಅಣಕಿಸಿದ್ದರ ಬಗ್ಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು ಆಘಾತ ವ್ಯಕ್ತಪಡಿಸಿದ್ದಾರೆ.

ರಾಜ್ಯಸಭೆಯ ಸಭಾಪತಿ ಕೂಡ ಆಗಿರುವ ಧನಕರ್ ಅವರು, ಸಂಸತ್ತಿಗೆ ಹಾಗೂ ಸಭಾಪತಿ ಸ್ಥಾನಕ್ಕೆ ಅವಮಾನ ಎಸಗುವುದನ್ನು ಸಹಿಸುವುದಿಲ್ಲ ಎಂದು ರಾಜ್ಯಸಭೆಯಲ್ಲಿ ಹೇಳಿದರು. ಕಲ್ಯಾಣ್ ಬ್ಯಾನರ್ಜಿ ಅವರು ತಾವು ಯಾರನ್ನೂ ನೋಯಿಸುವ ಉದ್ದೇಶ ಹೊಂದಿರಲಿಲ್ಲ ಎಂದು ತಿಳಿಸಿದ್ದಾರೆ. ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಅವರು ಕಲ್ಯಾಣ್ ಬ್ಯಾನರ್ಜಿ ಅವರ ಬೆಂಬಲಕ್ಕೆ ನಿಂತಿದ್ದಾರೆ. ಅಣಕ ಪ್ರಸಂಗವನ್ನು ಪ್ರಸ್ತಾಪಿಸುವ ಮೂಲಕ ಬಿಜೆಪಿಯು ಸಂಸದರ ಅಮಾನತು ವಿಚಾರದಿಂದ ಜನರ ಗಮನವನ್ನು ಬೇರೆಡೆ ಸೆಳೆಯಲು ಯತ್ನಿಸುತ್ತಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

'ಉಪರಾಷ್ಟ್ರಪತಿ ಅವರಿಗೆ ಸಂಸತ್ತಿನ ಆವರಣದಲ್ಲಿ ಅವಮಾನಿಸಿದ ಬಗೆಯನ್ನು ಕಂಡು ನನಗೆ ಆಘಾತ ಉಂಟಾಗಿದೆ' ಎಂದು ರಾಷ್ಟ್ರಪತಿ ಹೇಳಿದ್ದಾರೆ.

'ಚುನಾಯಿತ ಪ್ರತಿನಿಧಿಗಳು ತಮಗೆ ಅನ್ನಿಸಿದ್ದನ್ನು ಮುಕ್ತವಾಗಿ ಹೇಳಿಕೊಳ್ಳುವಂತೆ ಇರಬೇಕು. ಆದರೆ ಅವರ ಅಭಿವ್ಯಕ್ತಿಯು ಘನತೆ ಹಾಗೂ ಸೌಜನ್ಯದ ಚೌಕಟ್ಟನ್ನು ಮೀರಬಾರದು. ನಾವು ಹೆಮ್ಮೆಪಡುವ ಸಂಸದೀಯ ಪರಂಪರೆ ಹೀಗಿದೆ. ಇದನ್ನು ಚುನಾಯಿತ ಪ್ರತಿನಿಧಿಗಳು ಎತ್ತಿಹಿಡಿಯುವ ಕೆಲಸ ಮಾಡಲಿ ಎಂದು ದೇಶದ ಜನರು ನಿರೀಕ್ಷಿಸುತ್ತಾರೆ' ಎಂದು ರಾಷ್ಟ್ರಪತಿಯವರು 'ಎಕ್ಸ್'ನಲ್ಲಿ ಬರೆದಿದ್ದಾರೆ.

'ಪ್ರಧಾನಿ ನರೇಂದ್ರ ಮೋದಿ ಅವರಿಂದ ಕರೆ ಬಂದಿತ್ತು. ಕೆಲವು ಸಂಸದರು ಕೀಳು ರೀತಿಯಲ್ಲಿ ಅಣಕಿಸಿದ್ದರಿಂದ ನೋವಾಗಿದೆ ಎಂದು ಅವರು ಹೇಳಿದರು. ಕಳೆದ ಇಪ್ಪತ್ತು ವರ್ಷಗಳಿಂದ ತಾವು ಕೂಡ ಇಂತಹ ಬಗೆಯ ಅವಮಾನಗಳನ್ನು ಎದುರಿಸುತ್ತಿರುವುದಾಗಿ, ಆದರೆ ಉಪ ರಾಷ್ಟ್ರಪತಿಯಂತಹ ಸಾಂವಿಧಾನಿಕ ಹುದ್ದೆಯಲ್ಲಿ ಇರುವವರಿಗೆ ಸಂಸತ್ತಿನಲ್ಲಿಯೇ ಹೀಗೆ ಆಗಿರುವುದು ದುರದೃಷ್ಟಕರ ಎಂಬುದಾಗಿ ಅವರು ಹೇಳಿದರು' ಎಂದು ಧನಕರ್ ಅವರು ಹೇಳಿರುವುದಾಗಿ ಉಪರಾಷ್ಟ್ರಪತಿ ಅವರ ಎಕ್ಸ್ ಖಾತೆಯಲ್ಲಿ ಬರೆಯಲಾಗಿದೆ.

ಅಣಕಿಸಿದ ಪ್ರಸಂಗ ಕುರಿತಾಗಿ ಧನಕರ್ ಅವರು ರಾಜ್ಯಸಭೆಯಲ್ಲಿಯೂ ಆಕ್ರೋಶ ವ್ಯಕ್ತಪಡಿಸಿದರು. 'ನನ್ನನ್ನು ಯಾರಾದರೂ ಅಣಕಿಸಿದರೆ ನಾನು ಚಿಂತೆ ಮಾಡುವುದಿಲ್ಲ. ಆದರೆ ನಾನು ಹೊಂದಿರುವ ಹುದ್ದೆಯ ಗೌರವವನ್ನು ರಕ್ಷಿಸಿಕೊಳ್ಳಲು ಆಗಲಿಲ್ಲ ಎಂಬುದನ್ನು ನನಗೆ ಸಹಿಸಲು ಆಗದು. ಸದನದ ಘನತೆಯನ್ನು ಕಾಯುವುದು ನನ್ನ ಹೊಣೆಯೂ ಹೌದು' ಎಂದು ಹೇಳಿದರು.

ಧನಕರ್ ಅವರನ್ನು ಭೇಟಿ ಮಾಡಿರುವ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ತಮ್ಮ ಕಳವಳ ವ್ಯಕ್ತಪಡಿಸಿದ್ದಾರೆ. 'ಅಣಕಿಸುವುದು ಅಪರಾಧ ಅಲ್ಲ. ಬಿಜೆಪಿಯವರು ಮುಖ್ಯವಾದ ವಿಚಾರದ ಮೇಲಿನ ಗಮನವನ್ನು ಇನ್ನೊಂದೆಡೆ ಸೆಳೆಯಲು ಯತ್ನಿಸುತ್ತಿದ್ದಾರೆ' ಎಂದು ಕಲ್ಯಾಣ್ ಬ್ಯಾನರ್ಜಿ ಹೇಳಿದ್ದಾರೆ.

ನನ್ನನ್ನು ಅಣಕಿಸಿದ್ದು ಹಾಗೂ ಅದನ್ನು ಚಿತ್ರೀಕರಿಸಿಕೊಂಡಿದ್ದು ಉಪರಾಷ್ಟ್ರಪತಿ ಹುದ್ದೆಗೆ, ರೈತರಿಗೆ ಹಾಗೂ ನನ್ನ ಸಮುದಾಯಕ್ಕೆ ಅವಮಾನ ಎಸಗಿದಂತೆ
ಜಗದೀಪ್ ಧನಕರ್, ರಾಜ್ಯಸಭಾ ಸಭಾಪತಿ, ಉಪರಾಷ್ಟ್ರಪತಿ

ಪ್ರಧಾನಿ ಮೋದಿ, ಗೃಹ ಸಚಿವ ಶಾ ಅವರು ಸಂಸತ್ತಿನ ಭದ್ರತಾ ಲೋಪ ಬಗ್ಗೆ ಸದನದಲ್ಲಿ ಮಾತನಾಡದೆ ಇದ್ದುದಕ್ಕೆ, ಆ ವಿಷಯದ ಬಗ್ಗೆ ಹೊರಗಡೆ ಮಾತನಾಡಿರುವುದಕ್ಕೆ ಸರ್ಕಾರವು ಕ್ಷಮೆ ಕೇಳಬೇಡವೇ?
ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ಜಾತಿ ಎಳೆದು ತರುವ ಕೆಲಸ ಬೇಡ: ಖರ್ಗೆ

ನವದೆಹಲಿ (ಪಿಟಿಐ): ಪ್ರತಿ ವಿಚಾರದಲ್ಲಿಯೂ ಜಾತಿಯನ್ನು ಎಳೆದು ತರುವ ಕೆಲಸ ಆಗಬಾರದು ಎಂದು ಹೇಳಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಜ್ಯಸಭೆಯಲ್ಲಿ ತಮಗೆ ಮಾತನಾಡಲು ಅವಕಾಶ ಕೊಡದೆ ಇದ್ದಾಗಲೆಲ್ಲ ತಮ್ಮ ಜಾತಿಯ ಕಾರಣಕ್ಕಾಗಿ ಹೀಗಾಗುತ್ತಿದೆ ಎಂದು ದೂರಬೇಕೇ ಎಂದು ಪ್ರಶ್ನಿಸಿದರು.

ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಅವರನ್ನು ಟಿಎಂಸಿಯ ಕಲ್ಯಾಣ್ ಬ್ಯಾನರ್ಜಿ ಅವರು ಅಣಕಿಸಿರುವುದು ವಿವಾದ ಸೃಷ್ಟಿಸಿರುವ ಬೆನ್ನಲ್ಲೇ ಖರ್ಗೆ ಈ ಪ್ರಶ್ನೆ ಎತ್ತಿದ್ದಾರೆ. ರಾಜ್ಯಸಭೆಯ ಸಭಾಪತಿ ಕೂಡ ಆಗಿರುವ ಧನಕರ್ ಅವರು ತಮ್ಮನ್ನು ಅಣಕಿಸಿದ್ದನ್ನು ಖಂಡಿಸಿದ್ದಾರೆ. ಅಣಕಿಸಿರುವುದು ತಮ್ಮ ರೈತಾಪಿ ಹಿನ್ನೆಲೆ ಹಾಗೂ ಜಾಟ್ ಜಾತಿಗೆ ಮಾಡಿದ ಅವಮಾನ ಎಂದು ಹೇಳಿದ್ದಾರೆ. ಆಡಳಿತಾರೂಢ ಬಿಜೆಪಿ ಕೂಡ ಇದೇ ಅಭಿಪ್ರಾಯ ವ್ಯಕ್ತಪಡಿಸಿದೆ.

ಸುದ್ದಿಗಾರರ ಜೊತೆ ಮಾತನಾಡಿದ ಖರ್ಗೆ ಅವರು, 'ಸದನದ ಸದಸ್ಯರಿಗೆ ರಕ್ಷಣೆ ಒದಗಿಸುವ ಕೆಲಸವನ್ನು ಸಭಾಪತಿ ಮಾಡಬೇಕು. ಆದರೆ ಅವರೇ ಇಂತಹ ಹೇಳಿಕೆ ನೀಡುತ್ತಿದ್ದಾರೆ' ಎಂದರು. 'ನನಗೆ ರಾಜ್ಯಸಭೆಯಲ್ಲಿ ಮಾತನಾಡಲು ಹಲವು ಬಾರಿ ಅವಕಾಶ ಕೊಟ್ಟಿಲ್ಲ. ನಾನು ದಲಿತ ಎಂಬ ಕಾರಣಕ್ಕೆ ಹೀಗೆ ಮಾಡಲಾಗುತ್ತಿದೆ ಎಂದು ಹೇಳಬೇಕೇ' ಎಂದು ಖರ್ಗೆ ಪ್ರಶ್ನಿಸಿದರು.

ಜಾತಿಯ ಬಗ್ಗೆ ಸದನದ ಒಳಗೆ ಮಾತನಾಡಿ ಸದನದ ಹೊರಗಿರುವ ಜನರನ್ನು ಪ್ರಚೋದಿಸುವ ಕೆಲಸ ಮಾಡಬಾರದು ಎಂದರು.

ಸಾಂವಿಧಾನಿಕ ಹುದ್ದೆಯಲ್ಲಿ ಇರುವವರು ತಮ್ಮ ಜಾತಿಯ ಬಗ್ಗೆ ಮಾತನಾಡುವುದು ಇಡೀ ದೇಶದ ಪಾಲಿಗೆ ಬೇಸರದ ಸಂಗತಿ ಎಂದು ಕಾಂಗ್ರೆಸ್ ಮುಖಂಡ ಅಧೀರ್ ರಂಜನ್ ಚೌಧುರಿ ಹೇಳಿದರು.

ಸಂಸದರನ್ನು ಅಮಾನತು ಮಾಡಿದ ಕ್ರಮವನ್ನು ವಿರೋಧಿಸಿ ಸಂಸತ್ತಿನ ಮೆಟ್ಟಿಲುಗಳ ಮೇಲೆ ವಿರೋಧ ಪಕ್ಷಗಳ ಸದಸ್ಯರು ಮಂಗಳವಾರ ಪ್ರತಿಭಟನೆ ನಡೆಸುತ್ತಿದ್ದರು. ಈ ಸಂದರ್ಭದಲ್ಲಿ ಬ್ಯಾನರ್ಜಿ ಅವರು ಧನಕರ್ ಅವರನ್ನು ಅಣಕಿಸಿದ್ದು ವಿವಾದಕ್ಕೆ ಕಾರಣವಾಗಿದೆ. ಅಣಕವಾಡಿದ್ದನ್ನು ಬಿಜೆಪಿ ಖಂಡಿಸಿದೆ.

'ಅಮಾನತಿನ ಚರ್ಚೆ ಏಕೆ ಇಲ್ಲ?'

ನವದೆಹಲಿ (ಪಿಟಿಐ): ಸಂಸತ್ತಿನ ಉಭಯ ಸದನಗಳಿಂದ ವಿರೋಧ ಪಕ್ಷಗಳ ಸದಸ್ಯರನ್ನು ಹೊರಹಾಕಿದ್ದುದರ ಬಗ್ಗೆ ಚರ್ಚೆ ಏಕೆ ನಡೆಯುತ್ತಿಲ್ಲ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಪ್ರಶ್ನಿಸಿದರು.

ಕಲ್ಯಾಣ್ ಬ್ಯಾನರ್ಜಿ ಅವರು ಜಗದೀಪ್ ಧನಕರ್ ಅವರನ್ನು ಅಣಕಿಸಿದ್ದನ್ನು ರಾಹುಲ್ ಅವರು ಮೊಬೈಲ್ ಬಳಸಿ ಚಿತ್ರೀಕರಿಸಿಕೊಂಡಿದ್ದರು ಎನ್ನಲಾಗಿದೆ. ಇದರ ಬಗ್ಗೆ ಪ್ರಶ್ನಿಸಿದಾಗ ರಾಹುಲ್ ಅವರು, 'ಯಾರು ಅವಮಾನಿಸಿದರು, ಹೇಗೆ ಅವಮಾನಿಸಿದರು? ಸಂಸದರು ಕುಳಿತಿದ್ದರು. ನಾನು ಅವರ ವಿಡಿಯೊ ಚಿತ್ರೀಕರಿಸಿಕೊಂಡೆ. ಅದು ನನ್ನ ಫೋನ್‌ನಲ್ಲಿ ಇದೆ. ಮಾಧ್ಯಮಗಳು ಅದನ್ನು ತೋರಿಸುವುದನ್ನು ಮುಂದುವರಿಸಿವೆ, ಅದರ ಬಗ್ಗೆ ಮಾತನಾಡುತ್ತಿವೆ. ಮೋದಿಜಿ ಅವರು ಮಾತನಾಡುತ್ತಿದ್ದಾರೆ' ಎಂದರು.

'ನಮ್ಮ 100ಕ್ಕೂ ಹೆಚ್ಚು ಸಂಸದರನ್ನು ಹೊರಹಾಕಲಾಗಿದೆ. ಅದರ ಬಗ್ಗೆ ಮಾಧ್ಯಮಗಳಲ್ಲಿ ಯಾವ ಚರ್ಚೆಯೂ ಆಗುತ್ತಿಲ್ಲ... ರಫೇಲ್ ಮತ್ತು ಅದಾನಿ ಬಗ್ಗೆ ಯಾವ ಚರ್ಚೆಯೂ ಇಲ್ಲ. ತನಿಖೆಗೆ ಅವಕಾಶ ನೀಡಲಾಗುತ್ತಿಲ್ಲ ಎಂದು ಫ್ರಾನ್ಸ್ ಹೇಳಿದೆ. ಇದರ ಬಗ್ಗೆ ಚರ್ಚೆ ಇಲ್ಲ. ನಿರುದ್ಯೋಗದ ಬಗ್ಗೆ ಚರ್ಚೆ ಇಲ್ಲ' ಎಂದರು.

ಪ್ರಧಾನಿ ನರೇಂದ್ರ ಮೋದಿ ಅವರು 2017ರ ಆಗಸ್ಟ್‌ನಲ್ಲಿ ಉಪರಾಷ್ಟ್ರಪತಿ ಹಮೀದ್ ಅನ್ಸಾರಿ ಅವರಿಗೆ ಬೀಳ್ಕೊಡುಗೆ ನೀಡುವ ಸಂದರ್ಭದಲ್ಲಿ ಆಡಿದ್ದ ಮಾತುಗಳ ದೃಶ್ಯವೊಂದನ್ನು ಎಕ್ಸ್‌ನಲ್ಲಿ ಹಂಚಿಕೊಂಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಂ ರಮೇಶ್, 'ಮೋದಿ ಅವರು ಅನ್ಸಾರಿ ಅವರನ್ನು ಅಣಕಿಸಿದ್ದು ಅತ್ಯಂತ ಆಘಾತಕಾರಿ ಆಗಿತ್ತು. ಅನ್ಸಾರಿ ಅವರ ಅಸ್ಮಿತೆಯನ್ನು ಅವರ ಧರ್ಮಕ್ಕೆ ಸೀಮಿತಗೊಳಿಸುವ ಕೆಲಸ ಮೋದಿ ಅವರ ಮಾತಿನಿಂದ ಆಗಿತ್ತು' ಎಂದು ನೆನಪಿಸಿಕೊಂಡಿದ್ದಾರೆ.

ಸಿಬಿಐ ತನಿಖೆಗೆ ನೀಡಿದ್ದ ಒಪ್ಪಿಗೆ ಹಿಂಪಡೆದ 10 ರಾಜ್ಯಗಳು

ನವದೆಹಲಿ (ಪಿಟಿಐ): ತಮಿಳುನಾಡು, ತೆಲಂಗಾಣ ಸೇರಿ 10 ರಾಜ್ಯಗಳು ತಮ್ಮ ಆಡಳಿತವ್ಯಾಪ್ತಿಯಲ್ಲಿ ಪ್ರಕರಣಗಳ ತನಿಖೆ ನಡೆಸಲು ಸಿಬಿಐಗೆ ನೀಡಿದ್ದ ಸಮ್ಮತಿಯನ್ನು ಹಿಂಪಡೆದಿವೆ ಎಂದು ಲೋಕಸಭೆಗೆ ಬುಧವಾರ ತಿಳಿಸಲಾಯಿತು.

ಸಂಬಂಧಪಟ್ಟ ರಾಜ್ಯದ ಆಡಳಿತ ವ್ಯಾಪ್ತಿಯಲ್ಲಿ ತನಿಖೆ ಕೈಗೊಳ್ಳಲು ಆ ರಾಜ್ಯದ ಒಪ್ಪಿಗೆಯನ್ನು ಸಿಬಿಐ ಪಡೆದಿರಬೇಕು ಎಂದು ದೆಹಲಿ ವಿಶೇಷ ಪೊಲೀಸ್ ಸ್ಥಾಪನೆ (ಡಿಎಸ್‌ಪಿಇ) ಕಾಯ್ದೆ– 1946ರ ಸೆಕ್ಷನ್–6ರ ಅಡಿ ಹೇಳಲಾಗಿದೆ. ಪಂಜಾಬ್, ಜಾರ್ಖಂಡ್, ಕೇರಳ, ರಾಜಸ್ಥಾನ, ಛತ್ತೀಸಗಢ, ಪಶ್ಚಿಮ ಬಂಗಾಳ, ಮಿಜೋರಾಂ, ತೆಲಂಗಾಣ, ಮೇಘಾಲಯ ಮತ್ತು ತಮಿಳುನಾಡು ರಾಜ್ಯಗಳು ಒಪ್ಪಿಗೆಯನ್ನು ಹಿಂಪಡೆದಿವೆ ಎಂದು ಕೇಂದ್ರ ಸಿಬ್ಬಂದಿ ಸಚಿವಾಲಯದ ರಾಜ್ಯ ಖಾತೆ ಸಚಿವ ಜೀತೇಂದ್ರ ಸಿಂಗ್ ಅವರು ಲಿಖಿತ ರೂಪದಲ್ಲಿ ಉತ್ತರಿಸಿದರು.

ಸೆಕ್ಷನ್–6ಕ್ಕೆ ತಿದ್ದುಪಡಿ ತರುವ ಪ್ರಸ್ತಾವ ಕೇಂದ್ರ ಸರ್ಕಾರಕ್ಕೆ ಇದೆಯೇ ಎಂದು ಕೇಳಿದ ಪ್ರಶ್ನೆಗೆ ಅವರು 'ಇಲ್ಲ' ಎಂದು ಉತ್ತರಿಸಿದರು.

'ತ್ವರಿತವಾಗಿ ಖಾಲಿ ಹುದ್ದೆ ಭರ್ತಿ'

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ ಸಂಸ್ಥೆಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ತ್ವರಿತಗತಿಯಲ್ಲಿ ಭರ್ತಿ ಮಾಡಲಾಗುತ್ತಿದೆ ಎಂದು ಲೋಕಸಭೆಗೆ ಬುಧವಾರ ಲಿಖಿತ ಉತ್ತರದ ಮೂಲಕ ತಿಳಿಸಲಾಯಿತು.

ಉದ್ಯೋಗ ಸೃಷ್ಟಿಗೆ ಹೆಚ್ಚಿನ ಮಹತ್ವ ನೀಡಲು ಸರ್ಕಾರ ಬದ್ಧವಾಗಿದೆ. ಆ ನಿಟ್ಟಿನಲ್ಲಿ ದೇಶದಾದ್ಯಂತ 'ರೋಜಗಾರ್ ಮೇಳ'ಗಳನ್ನು ನಡೆಸಲಾಗುತ್ತಿದೆ. ಕೇಂದ್ರದ ಹಲವು ಸಚಿವಾಲಯಗಳು, ಇಲಾಖೆಗಳು, ಕೇಂದ್ರ ಸರ್ಕಾರದ ಸಾರ್ವಜನಿಕ ಕ್ಷೇತ್ರಗಳ ಉಪಕ್ರಮಗಳು (ಸಿಪಿಎಸ್‌ಯುಎಸ್) ಮತ್ತು ಆರೋಗ್ಯ, ಶಿಕ್ಷಣ ಸಂಸ್ಥೆಗಳು ಹಾಗೂ ಸಾರ್ವಜನಿಕ ವಲಯ ಬ್ಯಾಂಕ್‌ಗಳಂಥ ಸ್ವಾಯತ್ತ ಸಂಸ್ಥೆಗಳಲ್ಲಿ ಹೊಸ ನೇಮಕಾತಿಗಳನ್ನು ಮಾಡಿಕೊಳ್ಳಲಾಗುತ್ತಿದೆ ಎಂದು ಕೇಂದ್ರ ಸಿಬ್ಬಂದಿ ಖಾತೆ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಅವರು ತಿಳಿಸಿದರು.

'ಉದ್ಯೋಗಸೃಷ್ಟಿಯ ಜೊತೆಗೆ ಯುವಜನರಲ್ಲಿ ಉದ್ಯೋಗಾರ್ಹತೆ ಉತ್ತಮಪಡಿಸುವುದೂ ಕೇಂದ್ರ ಸರ್ಕಾರದ ಆದ್ಯತೆಯಾಗಿದೆ. ಈ ನಿಟ್ಟಿನಲ್ಲಿ ವ್ಯಾಪಾರ ಉದ್ಯಮಕ್ಕೆ ಉತ್ತೇಜನ ನೀಡಲು ಆತ್ಮನಿರ್ಭರ ಪ್ಯಾಕೇಜ್ ಘೋಷಿಸಲಾಗಿದೆ ಎಂದು ಅವರು ತಿಳಿಸಿದರು.

ಈ ಪ್ಯಾಕೇಜ್ ಅಡಿ ಸರ್ಕಾರವು ಹಲವಾರು ದೀರ್ಘಾವಧಿ ಯೋಜನೆಗಳು, ಕಾರ್ಯಕ್ರಮಗಳು ಅಥವಾ ನೀತಿಗಳಿಗೆ ಆರ್ಥಿಕ ಉತ್ತೇಜನ ನೀಡಲಿದೆ. ಇದರಿಂದ ದೇಶವು ಆತ್ಮ ನಿರ್ಭರವಾಗುವುದಲ್ಲದೇ, ದೊಡ್ಡ ಮಟ್ಟದಲ್ಲಿ ಉದ್ಯೋಗಾವಕಾಶಗಳನ್ನು ಒದಗಿಸಲು ಸಾಧ್ಯವಾಗುತ್ತದೆ ಎಂದು ಜೀತೇಂದ್ರ ಸಿಂಗ್ ಅವರು ತಿಳಿಸಿದರು.

ಇಸ್ರೇಲ್: ಕಾರ್ಮಿಕರ ಕೊರತೆ ಭಾರತದಲ್ಲಿ ಆಯ್ಕೆ ಪ್ರಕ್ರಿಯೆ

ಜೆರುಸಲೇಂ (ಪಿಟಿಐ): ಕಾರ್ಮಿಕರ ತೀವ್ರ ಕೊರತೆ ಎದುರಿಸುತ್ತಿರುವ ಇಸ್ರೇಲ್ ಕಟ್ಟಡ ನಿರ್ಮಾಣ ಉದ್ಯಮವು ಈಗ ಭಾರತಕ್ಕೆ ಮೊರೆ ಹೋಗಿದೆ.

ಸಾವಿರಾರು ಕಾರ್ಮಿಕರನ್ನು ಭಾರತದಿಂದ ಇಸ್ರೇಲ್‌ಗೆ ಕರೆತರಲಿಕ್ಕಾಗಿಯೇ ಆಯ್ಕೆದಾರರ ತಂಡವೊಂದು ಕಳೆದ ವಾರ ಭಾರತಕ್ಕೆ ಭೇಟಿ ನೀಡಿತ್ತು. ಮುಂದಿನ ವಾರ ಮತ್ತೊಂದು ತಂಡ ಭೇಟಿ ನೀಡಲಿದೆ ಎಂದು ಇಸ್ರೇಲ್ ಬಿಲ್ಡರ್ಸ್ ಅಸೋಸಿಯೇಷನ್ ಬುಧವಾರ ತಿಳಿಸಿದೆ.

'ದೆಹಲಿ, ಚೆನ್ನೈನಲ್ಲಿ ಡಿ.27ರಂದು ನೇಮಕಾತಿ ಪ್ರಕ್ರಿಯೆ ಆರಂಭಿಸುತ್ತೇವೆ. 10 ಸಾವಿರ ಕಾರ್ಮಿಕರ ನೇಮಕಾತಿಗೆ ಸರ್ಕಾರ ಅನುಮತಿ ನೀಡಿದೆ. ಈ ಸಂಖ್ಯೆ 30 ಸಾವಿರದ ತನಕವೂ ಹೆಚ್ಚಬಹುದು. 10–15 ದಿನ ಆಯ್ಕೆ ಪ್ರಕ್ರಿಯೆ ನಡೆಯಲಿದ್ದು, ಇದು ಹಲವು ತಿಂಗಳವರೆಗೂ ಮುಂದುವರಿಯಬಹುದು' ಎಂದು ಇಸ್ರೇಲ್ ಬಿಲ್ಡರ್ಸ್ ಅಸೋಸಿಯೇಷನ್‌ನ (ಐಬಿಎ) ವಕ್ತಾರರೂ ಆಗಿರುವ ಉಪ ಮಹಾನಿರ್ದೇಶಕ ಶೇ ಪೌಜ್ನರ್ ತಿಳಿಸಿದ್ದಾರೆ. 'ಕಾರ್ಮಿಕರನ್ನು ಕರೆತರುವ ಕುರಿತಂತೆ ಪ್ರಧಾನಿ ಬೆಂಜಮಿನ್ ನೆತನ್ಯಾಹು ಮಂಗಳವಾರದಂದು ಭಾರತದ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ನಡೆಸಿದ ದೂರವಾಣಿ ಸಂಭಾಷಣೆಯಲ್ಲಿ ಚರ್ಚಿಸಿದ್ದಾರೆ' ಎಂದು ಇಸ್ರೇಲ್ ಪ್ರಧಾನಮಂತ್ರಿ ಕಚೇರಿ ಹೇಳಿಕೆಯಲ್ಲಿ ತಿಳಿಸಿದೆ.

ಅಪರಾಧ ಮಸೂದೆಗಳಿಗೆ ಅಸ್ತು

ಒಂದನೇ ಪುಟದಿಂದ

ತಲೆಮರೆಸಿಕೊಂಡಿರುವ ಭಯೋತ್ಪಾದಕ ದಾವೂದ್ ಇಬ್ರಾಹಿಂ, ದೇಶಭ್ರಷ್ಟ ಉದ್ಯಮಿ ವಿಜಯ್ ಮಲ್ಯ ಮತ್ತು ಖಾಲಿಸ್ತಾನಿ ಪ್ರತ್ಯೇಕತಾವಾದಿ ಗುರುಪತ್ವಂತ್ ಸಿಂಗ್ ಪನ್ನೂ ಅಂಥವರನ್ನು ಕಾನೂನಿನ ಹಿಡಿತಕ್ಕೆ ತರಲು, 'ಆರೋಪಿಯ ಅನುಪಸ್ಥಿತಿಯಲ್ಲಿ ವಿಚಾರಣೆ' ಎಂದು ಪರಿಕಲ್ಪನೆಯನ್ನು ಮಸೂದೆಗಳಲ್ಲಿ ಅಳವಡಿಸಲಾಗಿದೆ ಎಂದರು. ಇದರ ಅಡಿಯಲ್ಲಿ ಎರಡು ವರ್ಷಗಳ ಅವಧಿಯೊಳಗೆ ವಿಚಾರಣೆ ಪೂರ್ಣಗೊಳಿಸಲಾಗುತ್ತದೆ.

'ಈ ವ್ಯಕ್ತಿಗಳು ಬೇರೆ ದೇಶಗಳಲ್ಲಿ ಅಡಗಿಕೊಂಡಿರುವ ಕಾರಣ ವಿಚಾರಣೆ ನಡೆಯುತ್ತಿಲ್ಲ. ಅವರು 90 ದಿನಗಳಲ್ಲಿ ಕೋರ್ಟ್‌ಗೆ ಹಾಜರಾಗದೆ ಇದ್ದರೆ, ಅವರ ಅನುಪಸ್ಥಿತಿಯಲ್ಲಿ ವಿಚಾರಣೆ ಶುರುವಾಗುತ್ತದೆ. ಅವರ ವಿರುದ್ಧ ಕಾನೂನು ಕ್ರಮ ಜರುಗಿಸಲು ಪಬ್ಲಿಕ್ ಪ್ರಾಸಿಕ್ಯೂಟರ್ ಒಬ್ಬರನ್ನು ನೇಮಕ ಮಾಡಲಾಗುತ್ತದೆ. ಅವರ ವಿರುದ್ಧ ಕ್ರಮ ಜರುಗಿಸಿದ ನಂತರ, ವಿದೇಶಗಳಲ್ಲಿ ಅವರ ಸ್ಥಾನಮಾನ ಬದಲಾಗುತ್ತದೆ. ಆಗ ಅವರನ್ನು ಹಿಂದಕ್ಕೆ ಕರೆತರುವುದು ಸುಲಭ ಆಗುತ್ತದೆ' ಎಂದು ಅವರು ಹೇಳಿದರು.

ಸರ್ಕಾರದ ವಿರುದ್ಧ ಅಭಿಪ್ರಾಯ ವ್ಯಕ್ತಪಡಿಸುವ ಅಧಿಕಾರ ಸಾರ್ವಜನಿಕರಿಗೆ ಇದೆ. ಆದರೆ ದೇಶದ ವಿರುದ್ಧ ಮಾತನಾಡುವುದು ಹಾಗೂ ದೇಶದ ವಿರುದ್ಧ ಎಸಗುವ ಕೃತ್ಯಗಳು ಶಿಕ್ಷಾರ್ಹ ಆಗುತ್ತವೆ ಎಂದು ಶಾ ತಿಳಿಸಿದರು.

ಗುಂಪು ಹತ್ಯೆಯನ್ನು ಈ ಮಸೂದೆಗಳು ಶಿಕ್ಷಾರ್ಹವಾಗಿಸಿವೆ. ಗುಂಪು ಹತ್ಯೆಗೆ ಮರಣದಂಡನೆ ಶಿಕ್ಷೆಯನ್ನು ನಿಗದಿ ಮಾಡಲಾಗಿದೆ. 'ಗುಂಪುಹತ್ಯೆಯ ಬಗ್ಗೆ ಕಾಂಗ್ರೆಸ್ ನಾಯಕ ಪಿ. ಚಿದಂಬರಂ ನನ್ನನ್ನು ಕೇಳಿದ್ದರು. ಆದರೆ, ದೇಶ ಮೊದಲು ಎನ್ನುವ ಬಿಜೆಪಿ ಸಿದ್ಧಾಂತವನ್ನು ಅವರು ಅರ್ಥ ಮಾಡಿಕೊಳ್ಳುವುದಿಲ್ಲ. ಅವರ ಪಕ್ಷದ ಸರ್ಕಾರವು ಗುಂಪುಹತ್ಯೆಯನ್ನು ಶಿಕ್ಷಾರ್ಹ ಆಗಿಸದೇ ಇದ್ದಿದ್ದು ಏಕೆ? ಭಾರತೀಯ ಮನಸ್ಸು ಇದ್ದರೆ ಕಾನೂನು ಅರ್ಥವಾಗುತ್ತದೆ, ಇಟಲಿಯ ಮನಸ್ಸು ಇದ್ದರೆ ಅರ್ಥ ಆಗುವುದಿಲ್ಲ' ಎಂದು ಶಾ ವ್ಯಂಗ್ಯವಾಡಿದರು. ಈ ಮಸೂದೆಗಳು ರಾಜ್ಯಸಭೆಯಲ್ಲಿ ಗುರುವಾರ ಚರ್ಚೆಗೆ ಬರುವ ನಿರೀಕ್ಷೆ ಇದೆ.

ಮತ್ತಿಬ್ಬರು ಸಂಸದರ ಅಮಾನತು

ನವದೆಹಲಿ (ಪಿಟಿಐ): ಲೋಕಸಭೆಯಲ್ಲಿ ಭಿತ್ತಿಪತ್ರಗಳನ್ನು ಪ್ರದರ್ಶಿಸಿದ ಕಾರಣಕ್ಕೆ ವಿರೋಧ ಪಕ್ಷಗಳ ಮತ್ತಿಬ್ಬರು ಸಂಸದರನ್ನು ಬುಧವಾರ ಅಮಾನತು ಮಾಡಲಾಗಿದೆ.

ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಅವರು ಮಂಡಿಸಿದ ನಿರ್ಣಯವನ್ನು ಸದನವು ಅಂಗೀಕರಿಸಿತು. ಆ ಬಳಿಕ ಕೇರಳದ ಕಾಂಗ್ರೆಸ್ (ಮಣಿ) ಸಂಸದ ಥಾಮಸ್ ಚಾಳಿಕಾಡನ್ ಮತ್ತು ಸಿಪಿಎಂ ಸಂಸದ ಎ.ಎಂ. ಆರಿಫ್ ಅವರನ್ನು ಅಮಾನತು ಮಾಡಲಾಯಿತು.

ಈ ಮೂಲಕ ಅಮಾನತುಗೊಂಡ ಲೋಕಸಭಾ ಸದಸ್ಯರ ಸಂಖ್ಯೆ 97ಕ್ಕೆ ಏರಿಕೆ ಆಗಿದೆ. ವಿರೋಧ ಪಕ್ಷಗಳ ಒಟ್ಟು 143 ಸಂಸದರು ಅಮಾನತಿನಲ್ಲಿದ್ದಾರೆ.

ಖರ್ಗೆ ಆರೋಪ: ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿ ಪಕ್ಷವು ದೇಶದಲ್ಲಿ ಏಕ ಪಕ್ಷ ಆಡಳಿತ ಸ್ಥಾಪಿಸಲು ಬಯಸಿವೆ. ಇದೇ ಕಾರಣಕ್ಕಾಗಿ ಭಾರಿ ಸಂಖ್ಯೆಯಲ್ಲಿ ಸಂಸದನ್ನು ಅಮಾನತಿನಲ್ಲಿ ಇರಿಸಲಾಗಿದೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನಖರ್ಗೆಆರೋಪಿಸಿದ್ದಾರೆ.

ಸಂಸತ್ತಿನ ಭಾರಿ ಭದ್ರತಾ ವೈಫಲ್ಯದ ಕುರಿತು ಕೇಂದ್ರ ಗೃಹ ಸಚಿವರು ಹೇಳಿಕೆ ನೀಡಬೇಕು ಎಂದು ಆಗ್ರಹಿಸಿದ ಕಾರಣಕ್ಕಾಗಿ ವಿಪಕ್ಷಗಳ ಸಂಸದರನ್ನು ಅಮಾನತಿನಲ್ಲಿ ಇರಿಸಲಾಗಿದೆ. ಸಂಸತ್ ಒಳಗೆ ಪ್ರವೇಶಿಸಲು ಆಗಂತುಕರಿಗೆ ಪಾಸ್ ನೀಡಿದ ಬಿಜೆಪಿ ಸಂಸದರ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ. ಅವರನ್ನು ಇನ್ನೂ ಪ್ರಶ್ನಿಸಲಾಗಿಲ್ಲ. ಇದು ಯಾವ ರೀತಿಯ ತನಿಖೆ' ಎಂದು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಕರ್ತವ್ಯ ಲೋಪದ ಕಾರಣಕ್ಕಾಗಿ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವ ಬದಲಾಗಿ, ಸಂಸದರ ಪ್ರಜಾಸತ್ತಾತ್ಮಕ ಹಕ್ಕನ್ನು ಕಸಿದುಕೊಂಡು ಕೇಂದ್ರ ಸರ್ಕಾರವು ಹೊಣೆಗಾರಿಕೆಯಿಂದ ನುಣುಚಿಕೊಂಡಿದೆ ಎಂದು ಕಿಡಿಕಾರಿದ್ದಾರೆ.

ವಿಪಕ್ಷಗಳ ಸಂಸದರನ್ನು ಅಮಾನತಿನಲ್ಲಿ ಇರಿಸಿರುವ ಕ್ರಮ ವಿರೋಧಿಸಿ ವಿರೋಧ ಪಕ್ಷಗಳ ನಾಯಕರು ದೆಹಲಿಯಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು. ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ, ಸೋನಿಯಾ ಗಾಂಧಿ, ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಇತರ ವಿರೋಧ ಪಕ್ಷಗಳ ನಾಯಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

'ಪ್ರಜಾಪ್ರಭುತ್ವ ಉಸಿರುಗಟ್ಟಿಸುತ್ತಿರುವ ಕೇಂದ್ರ'

ನವದೆಹಲಿ (ಪಿಟಿಐ): ಸಂಸತ್ತಿನಲ್ಲಿ ನ್ಯಾಯಬದ್ಧವಾದ ಬೇಡಿಕೆ ಇರಿಸಿದ ಕಾರಣಕ್ಕಾಗಿ ಸಂಸದರನ್ನು ಅಮಾನತು ಮಾಡುವ ಮೂಲಕ ಕೇಂದ್ರ ಸರ್ಕಾರವು ಪ್ರಜಾಪ್ರಭುತ್ವದ ಕತ್ತು ಹಿಸುಕುತ್ತಿದೆ ಎಂದು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಬುಧವಾರ ಆರೋಪಿಸಿದ್ದಾರೆ.

ಸಂವಿಧಾನ ಸದನದ (ಹಳೆ ಸಂಸತ್ ಕಟ್ಟಡ) ಸೆಂಟ್ರಲ್ ಹಾಲ್‌ನಲ್ಲಿ ನಡೆದ ಕಾಂಗ್ರೆಸ್ ಸಂಸದೀಯ ಪಕ್ಷದ ಸಭೆಯಲ್ಲಿ ಅವರು ಮಾತನಾಡಿದರು. 'ಈಚೆಗೆ ನಡೆದ ವಿಧಾನಸಭೆ ಚುನಾವಣೆಯ ಫಲಿತಾಂಶದಿಂದ ಆಗಿರುವ ನಿರಾಸೆಯನ್ನು ಲೋಕಸಭೆ ಚುನಾವಣೆಗೆ ಸಕಾರಾತ್ಮಕ ಬಲವನ್ನಾಗಿ ಬದಲಾಯಿಸಬೇಕು' ಎಂದರು.

ಐದು ರಾಜ್ಯಗಳ ವಿಧಾನಸಭೆ ಚುನಾವಣೆ ಕುರಿತು ಇದೇ ಮೊದಲ ಬಾರಿಗೆ ಸೋನಿಯಾ ಅವರು ಮಾತನಾಡಿದ್ದಾರೆ. 'ನಾವು ಸಾಕಷ್ಟು ಸವಾಲುಗಳನ್ನು ಎದುರಿಸುತ್ತಿದ್ದೇವೆ. ತಾಳ್ಮೆ, ದೃಢಚಿತ್ತವು ಸವಾಲು ಎದುರಿಸಲು ನಮಗೆ ಶಕ್ತಿ ನೀಡುತ್ತದೆ. ನಮ್ಮ ಸಿದ್ಧಾಂತ ಮತ್ತು ಮಾಲ್ಯಗಳು ಈ ಸಂದರ್ಭದಲ್ಲಿ ನಮಗೆ ದಾರಿ ದೀಪವಾಗಲಿವೆ' ಎಂದರು.

ಪ್ರತಿಭಟನೆ ನಾಳೆ

ನವದೆಹಲಿ: 143 ಸಂಸದರನ್ನು ಅಮಾನತಿನಲ್ಲಿ ಇರಿಸಿರುವುದನ್ನು ವಿರೋಧಿಸಿ ಶುಕ್ರವಾರ ಪ್ರತಿಭಟನೆ ಹಮ್ಮಿಕೊಳ್ಳುವುದಾಗಿ ವಿಪಕ್ಷಗಳ 'ಇಂಡಿಯಾ' ಮೈತ್ರಿಕೂಟವು ಬುಧವಾರ ಘೋಷಿಸಿದೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನೇತೃತ್ವದಲ್ಲಿ ಬುಧವಾರ ಮಧ್ಯಾಹ್ನ ನಡೆದ ಸಭೆಯಲ್ಲಿ ಪ್ರತಿಭಟನೆಯ ರೂಪುರೇಷೆಗಳನ್ನು ನಿರ್ಧರಿಸಲಾಯಿತು. ಅಮಾನತಿನಲ್ಲಿರುವ ಎಲ್ಲಾ ಸಂಸದರು ಪ್ರತಿಭಟನೆಯಲ್ಲಿ ಭಾಗಿಯಾಗಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಈ ವೇಳೆ ಸಂಸದರು ಸಂಸತ್ತಿನ ಅಣಕು ಪ್ರದರ್ಶನ ನಡಸಲಿದ್ದಾರೆ ಎಂದು ವರದಿಯಾಗಿತ್ತು. ಆದರೆ ಇದನ್ನು 'ಇಂಡಿಯಾ' ನಾಯಕರು ತಳ್ಳಿಹಾಕಿದ್ದಾರೆ ಎಂದು ಮೂಲಗಳು ತಿಳಿಸಿವೆ.

ವಾರಾಣಸಿ: ಮೋದಿ ವಿರುದ್ಧ ಪ್ರಿಯಾಂಕಾ ಕಣಕ್ಕೆ?

ಪ್ರಜಾವಾಣಿ ವಾರ್ತೆ

ಪ್ರಿಯಾಂಕಾ ಗಾಂಧಿ

ನವದೆಹಲಿ: ವಾರಾಣಸಿ ಲೋಕಸಭಾ ಕ್ಷೇತ್ರದಿಂದ ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ಪ್ರಿಯಾಂಕಾ ಗಾಂಧಿ ಅವರಂತಹ ರಾಜಕೀಯ ಸೂಪರ್‌ಸ್ಟಾರ್‌ಗಳನ್ನು ಕಣಕ್ಕಿಳಿಸುವ ಬಗ್ಗೆ 'ಇಂಡಿಯಾ' ಮೈತ್ರಿಕೂಟದ ಕೆಲವು ನಾಯಕರು ಸೂಚಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಬಿಜೆಪಿ ವಿರುದ್ಧ ಸೆಣಸಲು ಕಣಕ್ಕಿಳಿಸಬಹುದಾದ ಅಭ್ಯರ್ಥಿಗಳ ಕುರಿತು ಬುಧವಾರ ಇಲ್ಲಿ ನಡೆದ 'ಇಂಡಿಯಾ' ಮೈತ್ರಿಕೂಟದ ಸಭೆಯಲ್ಲಿ ಚರ್ಚಿಸಲಾಯಿತು ಎಂದು ಮೂಲಗಳು ತಿಳಿಸಿವೆ.

'ಇಂಡಿಯಾ' ಮೈತ್ರಿಕೂಟದಿಂದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರನ್ನು ಕಣಕ್ಕಿಳಿಸಬಹುದು ಎಂದು ಟಿಎಂಸಿ ಅಧ್ಯಕ್ಷೆ ಮಮತಾ ಬ್ಯಾನರ್ಜಿ ಸಲಹೆ ನೀಡಿದರು. ಆದರೆ ಈ ವಿಷಯ ಕಾರ್ಯಕ್ರಮ ಪಟ್ಟಿಯಲ್ಲಿ ಇರದ ಕಾರಣ ಇಂತಹ ಯಾವುದೇ ನಿರ್ಧಾರ ಆಗಲಿಲ್ಲ. ಈ ಸಲಹೆಗೆ ಯಾರೂ ಪ್ರತಿಕ್ರಿಯಿಸಲಿಲ್ಲ ಎಂದು ಹಿರಿಯ ನಾಯಕರೊಬ್ಬರು ಹೇಳಿದ್ದಾರೆ.

ಎಲೆಕ್ಟ್ರಾನಿಕ್ ಮತಯಂತ್ರಗಳ (ಇವಿಎಂಗಳು) ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆಯಿತು. ಆಡಳಿತಾರೂಢ ಬಿಜೆಪಿಯು ಮತಯಂತ್ರಗಳನ್ನು ದುರುಪಯೋಗಪಡಿಸಿಕೊಳ್ಳಬಹುದು ಎಂಬ ಶಂಕೆ ವ್ಯಕ್ತವಾಯಿತು. ಕಡೆಗೆ ರಾಹುಲ್ ಅವರು ಈ ವಿಷಯದ ಬಗ್ಗೆ ಚುನಾವಣಾ ಆಯೋಗಕ್ಕೆ ಮೊರೆ ಹೋಗಲು ಸೂಚಿಸಿದರು ಎಂದು ಮೂಲಗಳು ಹೇಳಿವೆ. ಅಯೋಧ್ಯೆಯಲ್ಲಿ ರಾಮಮಂದಿರ ಉದ್ಘಾಟನೆ ವಿಷಯವನ್ನು ಬಿಜೆಪಿಯು ಚುನಾವಣಾ ವಿಷಯವಾಗಿ ಬಳಸಿಕೊಳ್ಳುವ ಸಾಧ್ಯತೆ ಕುರಿತೂ ನಾಯಕರು ಕಳವಳ ವ್ಯಕ್ತಪಡಿಸಿದರು.

ಅಮೆರಿಕ ಮಾಹಿತಿ ನೀಡಿದರೆ ಪರಿಶೀಲನೆ: ಪ್ರಧಾನಿ ಮೋದಿ

ಒಂದನೇ ಪುಟದಿಂದ

'ವಿದೇಶಗಳಲ್ಲಿರುವ ಕೆಲ ಉಗ್ರಗಾಮಿ ಸಂಘಟನೆಗಳ ಚಟುವಟಿಕೆಗಳ ಬಗ್ಗೆ ಭಾರತ ಆತಂಕ ವ್ಯಕ್ತಪಡಿಸುತ್ತಲೇ ಇದೆ. ಈ ಸಂಘಟನೆಗಳು ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ಬೆದರಿಕೆ ಒಡ್ಡುವುದು ಹಾಗೂ ಹಿಂಸಾಚಾರಕ್ಕೆ ಪ್ರಚೋದನೆ ನೀಡುವುದರಲ್ಲಿ ನಿರತವಾಗಿವೆ' ಎಂದು ಮೋದಿ ಹೇಳಿದ್ದಾರೆ.

'ನಾವು ಈಗ ಬಹುಪಕ್ಷೀಯ ವ್ಯವಸ್ಥೆಯ ಕಾಲದಲ್ಲಿ ಬದುಕುತ್ತಿದ್ದೇವೆ ಎಂಬ ಸಂಗತಿಯನ್ನು ಎಲ್ಲರೂ ಒಪ್ಪಿಕೊಳ್ಳಬೇಕು. ದೇಶಗಳು ಪರಸ್ಪರ ಸಂಪರ್ಕ ಹೊಂದಿರುವ ಜೊತೆಗೆ ಪರಸ್ಪರ ಅವಲಂಬಿತವೂ ಆಗಿವೆ. ಹೀಗಾಗಿ, ದೇಶಗಳ ನಡುವಿನ ಸಹಕಾರಕ್ಕಾಗಿ ಎಲ್ಲ ವಿಚಾರಗಳಲ್ಲಿ ಸಮ್ಮತಿ ಇರಲೇಬೇಕು ಎಂದೇನಿಲ್ಲ ಎಂಬ ವಾಸ್ತವವನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು' ಎಂದು ವಿವರಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

'ಎಐ' ಸಂಶೋಧಕ ಅಲ್ಲ: ಬ್ರಿಟನ್ ಸುಪ್ರೀಂ ಕೋರ್ಟ್

ಲಂಡನ್(ರಾಯಿಟರ್ಸ್): ಯಾವುದೇ ಸಂಶೋಧನೆಗೆ ಸಂಬಂಧಿಸಿ ಪೇಟೆಂಟ್ (ಏಕಸ್ವಾಮ್ಯ) ಪಡೆಯಬೇಕಾದಲ್ಲಿ ಮಾನವ ಅಥವಾ ಸಂಸ್ಥೆಯೊಂದು ಸಂಶೋಧನೆ ಮಾಡಿರಬೇಕು. ಕೃತಕ ಬುದ್ಧಿಮತ್ತೆ (ಎಐ) ಅಥವಾ ಯಂತ್ರದ ನೆರವಿನಿಂದ ಮಾಡಿದ ಸಂಶೋಧನೆಗೆ ಪೇಟೆಂಟ್ ನೀಡಲು ಸಾಧ್ಯವಿಲ್ಲ ಎಂದು ಬ್ರಿಟನ್ ಸುಪ್ರೀಂ ಕೋರ್ಟ್ ಬುಧವಾರ ಮಹತ್ವದ ತೀರ್ಪು ನೀಡಿದೆ.

'ಕೃತಕ ಬುದ್ಧಿಮತ್ತೆಯನ್ನು ಸಂಶೋಧಕ ಎಂಬುದಾಗಿ ಪರಿಗಣಿಸಲಾಗದು' ಎಂದು ನ್ಯಾಯಮೂರ್ತಿ ಡೇವಿಡ್ ಕಿಚನ್ ತಮ್ಮ ತೀರ್ಪಿನಲ್ಲಿ ಹೇಳಿದ್ದಾರೆ.

ಅಮೆರಿಕದ ಕಂಪ್ಯೂಟರ್ ವಿಜ್ಞಾನಿ ಸ್ಟೀಫನ್ ಥೇಲರ್ ಎಂಬುವವರು ಕೃತಕ ಬುದ್ಧಿಮತ್ತೆಯಿಂದ ಕಾರ್ಯ ನಿರ್ವಹಿಸುವ 'ಡಿಎಬಿಯುಸ್' ಹೆಸರಿನ 'ಸೃಜನಶೀಲ ಯಂತ್ರ' ಬಳಸಿ ಮಾಡಿರುವ ಸಂಶೋಧನೆಗಳಿಗೆ ಪೇಟೆಂಟ್ ನೋಂದಣಿಗಾಗಿ ಬ್ರಿಟನ್‌ನ ಬೌದ್ಧಿಕ ಹಕ್ಕು ಕಚೇರಿಗೆ (ಐಪಿಒ) ಅರ್ಜಿ ಸಲ್ಲಿಸಿದ್ದರು. ಕೃತಕ ಬುದ್ಧಿಮತ್ತೆಯನ್ನು ಸಂಶೋಧಕ ಎಂಬುದಾಗಿ ಪರಿಗಣಿಸಲಾಗದು ಎಂಬ ಕಾರಣ ನೀಡಿ, ಸ್ಟೀಫನ್ ಅವರ ಅರ್ಜಿಯನ್ನು ಐಪಿಒ ತಿರಸ್ಕರಿಸಿತ್ತು. ಐಪಿಒ ಆದೇಶ ಪ್ರಶ್ನಿಸಿ ಸ್ಟೀಫನ್ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

ರೈಲ್ವೆ, ಮೆಟ್ರೊ ನಿಲ್ದಾಣದಲ್ಲಿ ಮದ್ಯ ಮಾರಾಟ: ಅಖಿಲೇಶ್ ಕಿಡಿ

ಲಖನೌ (ಪಿಟಿಐ): ರೈಲ್ವೆ ಮತ್ತು ಮೆಟ್ರೊ ನಿಲ್ದಾಣಗಳಲ್ಲಿ ಮದ್ಯ ಮಾರಾಟಕ್ಕೆ ಅವಕಾಶ ನೀಡಲು ನಿರ್ಧರಿಸಿರುವ ಉತ್ತರ ಪ್ರದೇಶದ ಬಿಜೆಪಿ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿರುವ ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್, ಅಪರಾಧ ಕೃತ್ಯಗಳು ಮತ್ತು ಮದ್ಯ ಸೇವನೆ ನಡುವೆ 'ಆಳವಾದ ಸಂಬಂಧ' ಇದೆ ಎಂದು ಕಿಡಿಕಾರಿದ್ದಾರೆ.

'ಮದ್ಯ ಸೇವನೆಯು ತುಂಬ ಒಳ್ಳೆಯದು ಎಂದು ಆಡಳಿತಾರೂಢ ಬಿಜೆಪಿ ನಂಬಿದ್ದರೆ, ಅದು ತನ್ನ ಪಕ್ಷದ ಕಚೇರಿಗಳಲ್ಲಿ ಮದ್ಯ ಮಾರಾಟ ಆರಂಭಿಸಲಿ' ಎಂದಿದ್ದಾರೆ.

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದಿದ್ದ ಸಂಪುಟ ಸಭೆ, ವಿಮಾನ ನಿಲ್ದಾಣಗಳು, ಮೆಟ್ರೊ, ರೈಲು ನಿಲ್ದಾಣಗಳು, ಕ್ರೂಸ್ ಹಡಗುಗಳಲ್ಲಿ ಮದ್ಯ ಮಾರಾಟಕ್ಕೆ ಅವಕಾಶ ನೀಡುವ ಅಬಕಾರಿ ನೀತಿಗೆ (2024–25) ಒಪ್ಪಿಗೆ ನೀಡಿತ್ತು.

'ಅಧ್ಯಕ್ಷೀಯ ಸ್ಪರ್ಧೆಗೆ ಟ್ರಂಪ್ ಅನರ್ಹ'

ವಾಷಿಂಗ್ಟನ್/ ಡೆನ್ವರ್ (ಪಿಟಿಐ/ಎಪಿ): ಮುಂದಿನ ವರ್ಷದ ಅಧ್ಯಕ್ಷೀಯ ಚುನಾವಣೆಯಲ್ಲಿ ಸ್ಪರ್ಧಿಸಲು ಟ್ರಂಪ್ ಅನರ್ಹರು ಎಂದು ಕೊಲೊರಾಡೊ ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿದೆ.

ಜತೆಗೆ, ರಿಪಬ್ಲಿಕನ್ ಅಧ್ಯಕ್ಷೀಯ ಪ್ರಾಥಮಿಕ ಮತದಾರರ ಪಟ್ಟಿಯಿಂದ ಟ್ರಂಪ್ ಅವರ ಹೆಸರನ್ನು ತೆಗೆದುಹಾಕುವಂತೆ ನ್ಯಾಯಾಲಯ ಆದೇಶಿಸಿದೆ. ಅಮೆರಿಕದ ಕ್ಯಾಪಿಟಲ್ (ಸಂಸತ್ ಭವನ) ಮೇಲೆ 2021ರಲ್ಲಿ ನಡೆದ ದಾಳಿಯಲ್ಲಿ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಪಾತ್ರವಿದ್ದ ಆರೋಪಕ್ಕಾಗಿ ನ್ಯಾಯಾಲಯ ಈ ತೀರ್ಪು ನೀಡಿದೆ.

'ಕೊಲೊರಾಡೊ ಸುಪ್ರೀಂ ಕೋರ್ಟ್‌ನ ತೀರ್ಪನ್ನು ಅಮೆರಿಕದ ಸುಪ್ರೀಂಕೋರ್ಟ್‌ನಲ್ಲಿ ಮೇಲ್ಮನವಿ ಮೂಲಕ ಪ್ರಶ್ನಿಸಲಾಗುವುದು. ಅಲ್ಲಿ ನಮಗೆ ನ್ಯಾಯ ಸಿಗುತ್ತದೆ ಎಂಬ ವಿಶ್ವಾಸವಿದೆ' ಎಂದು ಟ್ರಂಪ್ ವಕ್ತಾರ ಸ್ಟೀವನ್ ಚೆಯುಂಗ್ ಮಾಧ್ಯಮಗಳಿಗೆ ತಿಳಿಸಿದ್ದಾರೆ.

ಮಾಜಿ ಅಧ್ಯಕ್ಷರ ಅನರ್ಹತೆಯು ಸಂವಿಧಾನದ 14ನೇ ತಿದ್ದುಪಡಿ ಆಧರಿಸಿದೆ. ಅಮೆರಿಕದ ಸಂವಿಧಾನ ಬದ್ಧವಾಗಿ ಪ್ರಮಾಣ ವಚನ ಸ್ವೀಕರಿಸುವ ಅಧಿಕಾರಿಗಳು 'ದಂಗೆಯಲ್ಲಿ ತೊಡಗಿದ್ದರೆ', ಭವಿಷ್ಯದಲ್ಲಿ ಈ ಕಚೇರಿಯ ಪ್ರವೇಶವನ್ನು ತಿದ್ದುಪಡಿ ನಿಷೇಧಿಸುತ್ತದೆ.

ಕೇರಳ: ಹಲ್ಲೆ ಖಂಡಿಸಿ ಯುವ ಕಾಂಗ್ರೆಸ್, ಕೆಎಸ್‌ಯುನಿಂದ ಪ್ರತಿಭಟನೆ

ಪ್ರತಿಭಟನೆ ವಿಕೋಪಕ್ಕೆ; ಲಾಠಿ ಪ್ರಹಾರ

ತಿರುವನಂತಪುರ(ಪಿಟಿಐ): ಸಂಘಟನೆಗಳ ಕಾರ್ಯಕರ್ತರ ಮೇಲೆ ಇತ್ತೀಚೆಗೆ ನಡೆದ ದಾಳಿಗಳನ್ನು ಖಂಡಿಸಿ ಯುವ ಕಾಂಗ್ರೆಸ್ ಹಾಗೂ ಕೇರಳ ವಿದ್ಯಾರ್ಥಿ ಸಂಘಟನೆ (ಕೆಎಸ್‌ಯು) ಕಾರ್ಯಕರ್ತರು ರಾಜ್ಯದಾದ್ಯಂತ ಬುಧವಾರ ಪ್ರತಿಭಟನೆ ನಡೆಸಿದರು.

ರಾಜ್ಯ ಸರ್ಕಾರ ಆರಂಭಿಸಿರುವ ಜನಸಂಪರ್ಕ ಅಭಿಯಾನ 'ನವ ಕೇರಳ ಸದಸ್' ರಾಜಧಾನಿ ತಿರುವನಂತಪುರ ತಲುಪಿದಾಗ, ಪ್ರತಿಭಟನೆಯು ಹಿಂಸಾರೂಪ ಪಡೆಯಿತು.

ಕಣ್ಣೂರು ಜಿಲ್ಲೆಯ ಕಲ್ಲಿಯಶ್ಶೇರಿಯಲ್ಲಿ ಇತ್ತೀಚೆಗೆ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡಿದ್ದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರಿಗೆ ಕಪ್ಪು ಬಾವುಟ ತೋರಿಸಿದ್ದ ಕಾಂಗ್ರೆಸ್ ಹಾಗೂ ವಿದ್ಯಾರ್ಥಿ ಘಟಕ ಕೆಎಸ್‌ಯು ಕಾರ್ಯಕರ್ತರ ಮೇಲೆ ದಾಳಿ ನಡೆಸಲಾಗಿತ್ತು.

ಈ ದಾಳಿ ಖಂಡಿಸಿ, ಯುವ ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ರಾಹುಲ್ ಮಾಂಕೂಟ್ಟತ್ತಿಲ್ ನೇತೃತ್ವದಲ್ಲಿ ಸಂಘಟನೆ ಕಾರ್ಯಕರ್ತರು ವಿಧಾನಸಭೆ ಬಳಿ ಪ್ರತಿಭಟನೆ ಕೈಗೊಂಡಿದ್ದರು.

ಪ್ರತಿಭಟನಕಾರರನ್ನು ಉದ್ದೇಶಿಸಿ ಮಾತನಾಡಿದ ವಿಧಾನಸಭೆ ವಿರೋಧ ಪಕ್ಷದ ನಾಯಕ ವಿ.ಡಿ.ಸತೀಶನ್, 'ಕಣ್ಣೂರು ಜಿಲ್ಲೆಯಲ್ಲಿ ಪಕ್ಷದ ಯುವ ಮತ್ತು ವಿದ್ಯಾರ್ಥಿ ಘಟಕದ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಿದವರ ಮೇಲೆ ಕ್ರಮ ಕೈಗೊಳ್ಳದಿದ್ದರೆ, ಯುವ ಕಾಂಗ್ರೆಸ್ ಮತ್ತು ಕೆಎಸ್‌ಯು ಸದಸ್ಯರು ಪ್ರತಿ ದಾಳಿ ನಡೆಸುತ್ತಾರೆ' ಎಂದು ಎಚ್ಚರಿಕೆ ನೀಡಿದರು.

'ಪಕ್ಷದ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಿರುವ ಮುಖ್ಯಮಂತ್ರಿಗಳ ಗನ್‌ಮ್ಯಾನ್ ಹಾಗೂ ಭದ್ರತಾ ಸಿಬ್ಬಂದಿಯನ್ನು ಕರ್ತವ್ಯದಿಂದ ಬಿಡುಗಡೆ ಮಾಡಬೇಕು' ಎಂದ ಸತೀಶನ್, ಪ್ರತಿಯೊಂದಕ್ಕೂ ಮಿತಿ ಇರುತ್ತದೆ. ಸಂಯಮದಿಂದ ಇರುವಂತೆ ಯುವ ಕಾಂಗ್ರೆಸ್ ಮತ್ತು ವಿದ್ಯಾರ್ಥಿ ಘಟಕಕ್ಕೆ ಹೇಳಿದ್ದೇವೆ. ಈಗ ನಮ್ಮ ಈ ನಿಲುವನ್ನು ಬದಲಾಯಿಸಲು ನಾನು ಇಲ್ಲಿಗೆ ಬಂದಿದ್ದೇನೆ' ಎಂದರು.

'ಕಣ್ಣೂರು ಜಿಲ್ಲೆಯ ಕಲ್ಲಿಯಶ್ಶೇರಿಯಿಂದ ಕೊಲ್ಲಂ ವರೆಗೆ ನಮ್ಮ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಲಾಗಿದೆ. ಈ ಹಲ್ಲೆಗಳನ್ನು ಯಾರು ನಡೆಸಿದ್ದಾರೆ ಎಂಬುದು ಗೊತ್ತು. ಕಲ್ಲಿಯಶ್ಶೇರಿಯಿಂದಲೇ ನಾವು ಪ್ರತೀಕಾರ ಆರಂಭಿಸುತ್ತೇವೆ' ಎಂದು ಸತೀಶನ್ ಗುಡುಗಿದರು.

ಸತೀಶನ್ ಅವರ ಮಾತು ಮುಗಿಯುತ್ತಿದ್ದಂತೆಯೇ, ಹಿಂಸಾಚಾರ ಭುಗಿಲೆದ್ದಿತು.

ಬ್ಯಾರಿಕೇಡ್‌ಗಳನ್ನು ದಾಟಿ, ವಿಧಾನಸಭೆ ಕಾರ್ಯಾಲಯದತ್ತ ನುಗ್ಗಲು ಯುವ ಕಾಂಗ್ರೆಸ್ ಕಾರ್ಯಕರ್ತರು ಮುಂದಾದರು. ತಮ್ಮನ್ನು ತಡೆಯಲು ಬಂದ ಪೊಲೀಸರತ್ತ ಬಡಿಗೆ ಹಾಗೂ ಕಲ್ಲುಗಳನ್ನು ತೂರಿದರು. ಪ್ರತಿಭಟನಕಾರರನ್ನು ಚದುರಿಸಲು ತಂದಿದ್ದ ಜಲಫಿರಂಗಿ ವಾಹನದತ್ತಲೂ ಕಲ್ಲುಗಳನ್ನು ತೂರಿದರು.

ಆಗ, ಪೊಲೀಸರು ಜಲಫಿರಂಗಿ ಬಳಸಿ ಪ್ರತಿಭಟನಕಾರರನ್ನು ಚದುರಿಸಲು ಮುಂದಾದರು. ಪ್ರತಿಭಟನಕಾರರು ಇದಕ್ಕೆ ಜಗ್ಗದೇ, ಪೊಲೀಸರು ಹಾಗೂ ಪೊಲೀಸ್ ವಾಹನಗಳತ್ತ ಕಲ್ಲು, ಬಡಿಗೆಗಳನ್ನು ತೂರುವುದನ್ನು ಮುಂದುವರಿಸಿದರು.

ನಂತರ, ಪೊಲೀಸರು ಲಾಠಿ ಪ್ರಹಾರ ನಡೆಸುವ ಮೂಲಕ ಪ್ರತಿಭಟನಕಾರರನ್ನು ಚದುರಿಸಿದರು. ಈ ವೇಳೆ, ಯುವ ಕಾಂಗ್ರೆಸ್ ಮುಖಂಡ ಮಾಂಕೂಟ್ಟತ್ತಿಲ್ ಅವರಿಗೆ ಗಾಯಗಳಾದವು ಎಂದು ಹೇಳಲಾಗಿದೆ.

ಕೇರಳದ ಕೊಚ್ಚಿ ನಗರದಲ್ಲಿ ರಾಜ್ಯ ಸರ್ಕಾರದ ವಿರುದ್ಧ ಬುಧವಾರ ಪ್ರತಿಭಟನೆ ನಡೆಸಿದ ಯುವ ಕಾಂಗ್ರೆಸ್ ಹಾಗೂ ಕೇರಳ ವಿದ್ಯಾರ್ಥಿ ಸಂಘಟನೆ (ಕೆಎಸ್‌ಯು) ಕಾರ್ಯಕರ್ತರನ್ನು ಜಲ ಫಿರಂಗಿ ಬಳಸಿ ಪೊಲೀಸರು ಚದುರಿಸಿದರು –ಪಿಟಿಐ ಚಿತ್ರ

ರಾಜ್ಯಪಾಲರ ವಿರುದ್ಧ ಪ್ರತಿಭಟನೆ ನಡೆಸಿದ್ದ ಎಸ್‌ಎಫ್‌ಐ ಕಾರ್ಯಕರ್ತರ ವಿರುದ್ಧ ಪೊಲೀಸರು ಈ ರೀತಿಯ ಕ್ರಮ ಕೈಗೊಂಡಿದ್ದನ್ನು ನಾನು ನೋಡಿಲ್ಲ
ರಾಹುಲ್ ಮಾಂಕೂಟ್ಟತ್ತಿಲ್ ಯುವ ಕಾಂಗ್ರೆಸ್ ಅಧ್ಯಕ್ಷ

ಭಾರತ–ದಕ್ಷಿಣ ಆಫ್ರಿಕಾ ಕೊನೆಯ ಏಕದಿನ ಪಂದ್ಯ ಇಂದು

ಸರಣಿ ಗೆಲುವಿನ ಛಲ

ಕೇಪ್‌ಟೌನ್ (ಪಿಟಿಐ): ಆತಿಥೇಯ ದಕ್ಷಿಣ ಆಫ್ರಿಕಾ ಮತ್ತು ಭಾರತ ತಂಡಗಳು ಗುರುವಾರ ನಡೆಯಲಿರುವ ಏಕದಿನ ಕ್ರಿಕೆಟ್ ಸರಣಿಯ ಕೊನೆಯ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಮೂರು ಪಂದ್ಯಗಳ ಸರಣಿಯಲ್ಲಿ 1–1ರಿಂದ ಸಮಬಲ ಸಾಧಿಸಿರುವ ಉಭಯ ತಂಡಗಳು ಈಗ ಕೊನೆಯದ್ದರಲ್ಲಿ ಜಯಿಸಿ ಕಿರೀಟ ಧರಿಸುವ ಛಲದಲ್ಲಿವೆ.

ಸರಣಿಯ ಮೊದಲ ಪಂದ್ಯದಲ್ಲಿ ಭಾರತ ತಂಡವು ಬೌಲರ್‌ಗಳ ಅಮೋಘ ಆಟದ ಬಲದಿಂದ ಸುಲಭ ಜಯ ಸಾಧಿಸಿತ್ತು. ಆದರೆ ಎರಡನೇ ಪಂದ್ಯದಲ್ಲಿ ಕಳಪೆ ಬ್ಯಾಟಿಂಗ್‌ನಿಂದಾಗಿ ಸೋತಿತು.

ಆರಂಭಿಕ ಆಟಗಾರ ಋತುರಾಜ್ ಗಾಯಕವಾಡ್ ಎರಡೂ ಪಂದ್ಯಗಳಲ್ಲಿ ಉತ್ತಮ ಆರಂಭ ಮಾಡಲಿಲ್ಲ. ಆದರೆ ಸಾಯಿ ಸುದರ್ಶನ್ ತಮ್ಮ ಪದಾರ್ಪಣೆ ಸರಣಿಯಲ್ಲಿಯೇ ಸತತ ಎರಡು ಅರ್ಧಶತಕ ಹೊಡೆದು ಗಮನ ಸೆಳೆದಿದ್ದಾರೆ. ಅವರೊಂದಿಗೆ ಮೊದಲ ಪಂದ್ಯದಲ್ಲಿ ಶ್ರೇಯಸ್ ಅಯ್ಯರ್ ಮತ್ತು ಎರಡನೆಯದ್ದ-ರಲ್ಲಿ ನಾಯಕ ಕೆ.ಎಲ್. ರಾಹುಲ್ ಉಪಯುಕ್ತ ಜೊತೆ-ಯಾಟವಾಡಿದ್ದರು. ಆದರೆ ಉಳಿದ ಬ್ಯಾಟರ್‌ಗಳ ಆಟ ಅಷ್ಟಕ್ಕಷ್ಟೇ.

ಟಿ20 ಸರಣಿಯಲ್ಲಿ ಗಮನ ಸೆಳೆದಿದ್ದ ತಿಲಕ್ ವರ್ಮಾ ಇಲ್ಲಿ ತಮ್ಮ ಸಾಮರ್ಥ್ಯ ತೋರುವಲ್ಲಿ ಯಶಸ್ವಿಯಾಗಿಲ್ಲ. ಆದ್ದರಿಂದ ಈ ಪಂದ್ಯದಲ್ಲಿ ಅವರ ಬದಲಿಗೆ ರಜತ್ ಪಾಟೀದಾರ್ ಸ್ಥಾನ ಪಡೆದರೂ ಅಚ್ಚರಿಯಿಲ್ಲ. ಟೆಸ್ಟ್ ತಂಡದ ಪೂರ್ವಾಭ್ಯಾಸದ ಬಳಗಕ್ಕೆ ಸೇರಿಕೊಂಡಿರುವ ಶ್ರೇಯಸ್ ಅಯ್ಯರ್ ಈ ಪಂದ್ಯಕ್ಕೆ ಅಲಭ್ಯರಾಗಿದ್ದಾರೆ.

ಬೊಲ್ಯಾಂಡ್ ಪಾರ್ಕ್ ಕ್ರೀಡಾಂಗಣದ ಪಿಚ್, ಬ್ಯಾಟರ್‌ಗಳಿಗೆ ಉಪಯುಕ್ತವಾಗುವ ಲಕ್ಷಣಗಳಿವೆ. ಹದವಾದ ಪಿಚ್‌ನಲ್ಲಿ ಚೆಂಡು ಪುಟಿದೇಳುವ ಸಾಧ್ಯತೆ-ಗಳಿದ್ದು, ಬ್ಯಾಟರ್‌ಗಳು ಏಕಾಗ್ರತೆಯಿಂದ ಆಡಿದರೆ ರನ್ ಹೊಳೆ ಹರಿಸಲೂ ಸಾಧ್ಯವಾಗಬಹುದು.

ಭಾರತ ತಂಡದ ನಾಯಕ ಕೆ.ಎಲ್. ರಾಹುಲ್ –ಎಎಫ್‌ಪಿ ಚಿತ್ರ

ಇದರಿಂದಾಗಿ ಭಾರತದ ಬೌಲರ್‌ಗಳಿಗೆ ಕಠಿಣ ಸವಾಲು ಕೂಡ ಎದುರಾಗಬಹುದು. ಏಕೆಂದರೆ; ಆತಿಥೇಯ ತಂಡದಲ್ಲಿ ಬ್ಯಾಟಿಂಗ್ ಪಡೆ ಬಲಾಢ್ಯವಾಗಿದೆ. ಎರಡನೇ ಪಂದ್ಯದಲ್ಲಿ ಯುವಪ್ರತಿಭೆ ಟೋನಿ ಡಿ ಝೋರ್ಜಿ ಅಮೋಘ ಶತಕ ಬಾರಿಸಿದ್ದರು. ಅನುಭವಿ ಕ್ವಿಂಟನ್ ಡಿ ಕಾಕ್ ಅವರ ಸ್ಥಾನವನ್ನು ತುಂಬುವ ಭರವಸೆ ಮೂಡಿಸಿದರು.

ಅಲ್ಲದೇ ಏಡನ್ ಮರ್ಕರಂ, ಡೇವಿಡ್ ಮಿಲ್ಲರ್, ಹೆನ್ರಿಚ್ ಕ್ಲಾಸನ್ ಮತ್ತು ರೀಜಾ ಹೆನ್ರಿಕ್ಸ್ ಅವರು ತಮ್ಮ ಸಿಡಿಲಬ್ಬರದ ಬ್ಯಾಟಿಂಗ್‌ಗೆ ಹೆಸರಾದವರು. ಇವರನ್ನು ಕಟ್ಟಿಹಾಕಲು ಭಾರತದ ಅರ್ಷದೀಪ್ ಸಿಂಗ್, ಮುಕೇಶ್ ಕುಮಾರ್, ಆವೇಶ್ ಖಾನ್ ಅವರು ಶಿಸ್ತಿನ ಬೌಲಿಂಗ್ ಮಾಡುವುದು ಅನಿವಾರ್ಯ. ಎಲ್ಲಕ್ಕಿಂತ ಮುಖ್ಯವಾಗಿ ಟಾಸ್ ಗೆದ್ದ ತಂಡವು ತೆಗೆದುಕೊಳ್ಳುವ ನಿರ್ಣಯವೂ ಇಲ್ಲಿ ಮುಖ್ಯವಾಗಲಿದೆ.

ಪಂದ್ಯ ಆರಂಭ: ಸಂಜೆ 4.30 (ಭಾರತೀಯ ಕಾಲಮಾನ) ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ತಂಡಗಳು: ಕೆ.ಎಲ್. ರಾಹುಲ್ (ನಾಯಕ/ವಿಕೆಟ್‌ಕೀಪರ್), ಋತುರಾಜ್ ಗಾಯಕವಾಡ್, ಸಾಯಿ ಸುದರ್ಶನ್, ತಿಲಕ್ ವರ್ಮಾ, ರಜತ್ ಪಾಟೀದಾರ್, ರಿಂಕು ಸಿಂಗ್, ಶ್ರೇಯಸ್ ಅಯ್ಯರ್, ಸಂಜು ಸ್ಯಾಮ್ಸನ್ (ವಿಕೆಟ್‌ಕೀಪರ್), ಅಕ್ಷರ್ ಪಟೇಲ್, ವಾಷಿಂಗ್ಟನ್ ಸುಂದರ್, ಕುಲದೀಪ್ ಯಾದವ್, ಯಜುವೇಂದ್ರ ಚಾಹಲ್, ಮುಕೇಶ್ ಕುಮಾರ್, ಆವೇಶ್ ಖಾನ್, ಅರ್ಷದೀಪ್ ಸಿಂಗ್, ಆಕಾಶ್ ದೀಪ್.

ದಕ್ಷಿಣ ಆಫ್ರಿಕಾ: ಏಡನ್ ಮರ್ಕರಂ (ನಾಯಕ), ನಾಂದ್ರೆ ಬರ್ಗರ್, ಟೋನಿ ಡಿ ಝೋರ್ಜಿ, ರೀಜಾ ಹೆನ್ರಿಕ್ಸ್, ಹೆನ್ರಿಚ್ ಕ್ಲಾಸನ್, ಕೇಶವ್ ಮಹಾರಾಜ್, ಡೇವಿಡ್ ಮಿಲ್ಲರ್, ಮಿಹಲಾಲಿ ಎಂಪಾಂಗ್ವಾನಾ, ವಿಯಾನ್ ಮುಲ್ಡರ್, ಬೇರನ್ ಹೆನ್ರಿಕ್ಸ್, ರಸಿ ವ್ಯಾನ್ ಡೆರ್ ಡಸೆ, ತಬ್ರೇಜ್ ಶಂಸಿ, ಲಿಜಾದ್ ವಿಲಿಯಮ್ಸ್, ಕೈಲ್ ವೆರೆಯನ್.

ಶಮಿ, ಶೀತಲ್ ದೇವಿಗೆ ಒಲಿದ ಗೌರವ

26 ಕ್ರೀಡಾಪಟುಗಳಿಗೆ ಅರ್ಜುನ ಪುರಸ್ಕಾರ: ಐವರಿಗೆ ದ್ರೋಣಾಚಾರ್ಯ

ನವದೆಹಲಿ (ಪಿಟಿಐ): ಚೀನಾದ ಹಾಂಗ್‌ಝೌನಲ್ಲಿ ನಡೆದ ಪ್ಯಾರಾ ಏಷ್ಯನ್ ಕ್ರೀಡಾಕೂಟದ ಮಹಿಳೆಯರ ಆರ್ಚರಿಯಲ್ಲಿ ಚಿನ್ನ ಗೆದ್ದಿದ್ದ ಶೀತಲ್ ದೇವಿ ಮತ್ತು ಏಕದಿನ ವಿಶ್ವಕಪ್ ಕ್ರಿಕೆಟ್‌ನಲ್ಲಿ ಅಮೋಘ ಬೌಲಿಂಗ್ ಮಾಡಿದ್ದ ವೇಗಿ ಮೊಹಮ್ಮದ್ ಶಮಿ ಅವರಿಗೆ ಅರ್ಜುನ ಪ್ರಶಸ್ತಿ ಲಭಿಸಿದೆ.

ದೇಶದ ಅತ್ಯುನ್ನತ ಕ್ರೀಡಾ ಪ್ರಶಸ್ತಿಯಾದ ಮೇಜರ್ ಧ್ಯಾನಚಂದ್ ಖೇಲ್ ರತ್ನ ಗೌರವಕ್ಕೆ ಬ್ಯಾಡ್ಮಿಂಟನ್ ಜೋಡಿ ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಭಾಜನರಾ-ಗಿದ್ದಾರೆ. ಕೇಂದ್ರ ಕ್ರೀಡಾ ಸಚಿವಾಲಯವು ಒಟ್ಟು 26 ಕ್ರೀಡಾ ಸಾಧಕರನ್ನು ಅರ್ಜುನ ಪ್ರಶಸ್ತಿಗೆ ಆಯ್ಕೆ ಮಾಡಿದೆ. ಅದರಲ್ಲಿ ಏಷ್ಯನ್ ಮತ್ತು ಪ್ಯಾರಾ ಏಷ್ಯನ್ ಕೂಟದ ಸಾಧಕರದ್ದೇ ಸಿಂಹಪಾಲು.

ಜಮ್ಮು–ಕಾಶ್ಮೀರದ ಶೀತಲ್ ದೇವಿ ಅವರಿಗೆ ಎರಡೂ ಕೈಗಳಿಲ್ಲ. ತಮ್ಮ ಕಾಲುಗಳಿಂದಲೇ ಬಿಲ್ಲುಗಾರಿಕೆ ಮಾಡಿ ಚಿನ್ನ ಗೆದ್ದಿದ್ದರು. ಮೊಹಮ್ಮದ್ ಶಮಿ ಈಚೆಗೆ ಮುಕ್ತಾಯವಾದ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ 24 ವಿಕೆಟ್‌ಗಳನ್ನು ಗಳಿಸಿದ್ದರು. ಭಾರತ ತಂಡವು ಫೈನಲ್ ತಲುಪಲು ಪ್ರಮುಖ ಪಾತ್ರ ವಹಿಸಿದ್ದರು.

ಶೂಟರ್ ಐಶ್ವರಿ ಪ್ರತಾಪ್ ಸಿಂಗ್ ತೋಮರ್, ಕುಸ್ತಿಪಟು ಅಂತಿಮ ಪಂಘಾಲ್ ಮತ್ತು ಸುನಿಲ್ ಕುಮಾರ್, ಟೇಬಲ್ ಟೆನಿಸ್ ಆಟಗಾರ್ತಿ ಐಹಿಕಾ ಮುಖರ್ಜಿ ಅವರಿಗೂ ಅರ್ಜುನ ಪ್ರಶಸ್ತಿ ಲಭಿಸಿದೆ.ತಮಿಳುನಾಡಿನ ಚೆಸ್ ಗ್ರ್ಯಾಂ-ಡ್‌ಮಾಸ್ಟರ್ ಆರ್. ವೈಶಾಲಿ ಮತ್ತು ಅವರ ಕೋಚ್ ಆರ್.ಬಿ. ರಮೇಶ್ ಅವರಿಗೆ ಕ್ರಮವಾಗಿ ಅರ್ಜುನ ಮತ್ತು ದ್ರೋಣಾಚಾರ್ಯ ಪ್ರಶಸ್ತಿ ಲಭಿಸಿದೆ.

ಕಬಡ್ಡಿ ತರಬೇತುದಾರ ಕಾಸರಗೋಡಿನ ಈ. ಭಾಸ್ಕರನ್ ಅವರು ದ್ರೋಣಾಚಾರ್ಯ ಪ್ರಶಸ್ತಿಗೆ (ಜೀವಮಾನ) ಆಯ್ಕೆಯಾಗಿದ್ದಾರೆ.



ಶೀತಲ್ ದೇವಿ

ಮೊಹಮ್ಮದ್ ಶಮಿ

ಆರ್. ವೈಶಾಲಿ

ಮೇಜರ್ ಧ್ಯಾನ್‌ಚಂದ್ ಖೇಲ್ ರತ್ನ ಪ್ರಶಸ್ತಿ	
ಚಿರಾಗ್ ಶೆಟ್ಟಿ/ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ	ಬ್ಯಾಡ್ಮಿಂಟನ್

ದ್ರೋಣಾಚಾರ್ಯ ಪ್ರಶಸ್ತಿ (ಜೀವಮಾನ ವಿಭಾಗ)	
ಜಸ್ಕಿರತ್ ಸಿಂಗ್ ಗ್ರೆವಾಲ್	ಗಾಲ್ಫ್
ಈ. ಭಾಸ್ಕರನ್	ಕಬಡ್ಡಿ
ಜಯಂತ ಕುಮಾರ್	ಟೇಬಲ್ ಟೆನಿಸ್

ಧ್ಯಾನ್ ಚಂದ್ ಪ್ರಶಸ್ತಿ (ಜೀವಮಾನ ಸಾಧನೆ)	
ಮಂಜುಶಾ ಕನ್ವರ್	ಬ್ಯಾಡ್ಮಿಂಟನ್
ವಿನೀತ್ ಕುಮಾರ್ ಶರ್ಮಾ	ಹಾಕಿ
ಕವಿತಾ ಸೆಲ್ವರಾಜ್	ಕಬಡ್ಡಿ

ದ್ರೋಣಾಚಾರ್ಯ ಪ್ರಶಸ್ತಿ (ಸಾಮಾನ್ಯ ವಿಭಾಗ)	
ಲಲಿತ್ ಕುಮಾರ್	ಕುಸ್ತಿ
ಆರ್.ಬಿ. ರಮೇಶ್	ಚೆಸ್
ಮಹಾವೀರ್ ಪ್ರಸಾದ್ ಸೈನಿ	ಪ್ಯಾರಾ ಅಥ್ಲೆಟಿಕ್ಸ್
ಶಿವೇಂದ್ರ ಸಿಂಗ್	ಹಾಕಿ
ಗಣೇಶ್ ಪ್ರಭಾಕರನ್	ಮಲ್ಲಕಂಬ

ಅರ್ಜುನ ಪ್ರಶಸ್ತಿ ವಿಜೇತರು

ಓಜಸ್ ಪ್ರವೀಣ್ ದೇವತಾಳೆ; ಅದಿತಿ ಗೋಪಿಚಂದ್ ಸ್ವಾಮಿ (ಆರ್ಚರಿ), ಮುರಳಿ ಶ್ರೀಶಂಕರ್; ಪಾರುಲ್ ಚೌಧರಿ (ಅಥ್ಲೆಟಿಕ್ಸ್), ಮೊಹಮ್ಮದ್ ಹುಸಾಮುದ್ದೀನ್ (ಬಾಕ್ಸಿಂಗ್), ಆರ್.ವೈಶಾಲಿ (ಚೆಸ್), ಮೊಹಮ್ಮದ್ ಶಮಿ (ಕ್ರಿಕೆಟ್), ಅನುಷ್ ಅಗರವಾಲ್ (ಈಕ್ವೆಸ್ಟ್ರಿಯನ್), ದಿವ್ಯಾಕೃತಿ ಸಿಂಗ್ (ಈಕ್ವೆಸ್ಟ್ರಿಯನ್ ಡ್ರೆಸ್ಸೇಜ್), ದೀಕ್ಷಾ ದಾಗರ್ (ಗಾಲ್ಫ್), ಕೃಷ್ಣನ್ ಬಹಾದ್ದೂರ್ ಪಾಠಕ್; ಸುಶೀಲಾ ಚಾನು (ಹಾಕಿ), ಪವನ್ ಕುಮಾರ್; ರಿತು ನೇಗಿ (ಕಬಡ್ಡಿ), ನಸ್ರೀನ್ (ಕೊಕ್ಕೊ), ಪಿಂಕಿ (ಲಾನ್ ಬೌಲ್ಸ್), ಐಶ್ವರ್ಯಾ ಪ್ರತಾಪ್ ಸಿಂಗ್; ಈಶಾ ಸಿಂಗ್ (ಶೂಟಿಂಗ್), ಹರಿಂದರ್ ಪಾಲ್ ಸಿಂಗ್ ಸಂಧು (ಸ್ಕ್ವಾಷ್), ಐಹಿಕಾ ಮುಖರ್ಜಿ (ಟೇಬಲ್ ಟೆನಿಸ್), ಸುನಿಲ್ ಕುಮಾರ್; ಅಂತಿಮ ಪಂಘಾಲ್ (ಕುಸ್ತಿ), ನವೋರೆಮ್ ರೋಶಿಬಿನಾ ದೇವಿ (ವುಷು), ಶೀತಲ್ ದೇವಿ (ಪ್ಯಾರಾ ಆರ್ಚರಿ), ಅಜಯ್ ಕುಮಾರ್ ರೆಡ್ಡಿ (ಅಂಧರ ಕ್ರಿಕೆಟ್), ಪ್ರಾಚಿ ಯಾದವ್ (ಪ್ಯಾರಾ ಕೆನೋಯಿಂಗ್)

ದಾಖಲೆ ಜಯದತ್ತ ಹರ್ಮನ್ ಪಡೆ ಚಿತ್ತ

ಮಹಿಳಾ ಟೆಸ್ಟ್ ಕ್ರಿಕೆಟ್ ಇಂದಿನಿಂದ: ಭಾರತ–ಆಸ್ಟ್ರೇಲಿಯಾ ಹಣಾಹಣಿ

ಮುಂಬೈ (ಪಿಟಿಐ): ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಭಾರತ ತಂಡವು ಗುರುವಾರ ಆರಂಭವಾಗಲಿರುವ ಟೆಸ್ಟ್ ಪಂದ್ಯದಲ್ಲಿ ಆಸ್ಟ್ರೇಲಿಯಾ ಎದುರು ಆಡಲಿದೆ.

ಟೆಸ್ಟ್ ಕ್ರಿಕೆಟ್‌ನಲ್ಲಿ ಆಸ್ಟ್ರೇಲಿಯಾ ಎದುರು ಮೊದಲ ಗೆಲುವು ಸಾಧಿಸುವ ವಿಶ್ವಾಸದಲ್ಲಿ ಆತಿಥೇಯ ಬಳಗವಿವೆ. ಕಳೆದ 46 ವರ್ಷಗಳಲ್ಲಿ ಉಭಯ ತಂಡಗಳು ಹತ್ತು ಬಾರಿ ಮುಖಾಮುಖಿಯಾಗಿವೆ. ಆಸ್ಟ್ರೇಲಿಯಾ ನಾಲ್ಕು ಬಾರಿ ಜಯಿಸಿದೆ. 6 ಪಂದ್ಯಗಳು ಡ್ರಾ ಆಗಿವೆ.

ಉಭಯ ತಂಡಗಳು ಎರಡು ವರ್ಷಗಳ ಹಿಂದೆ ಕೆರಾರಾದಲ್ಲಿ ನಡೆದಿದ್ದ ಟೆಸ್ಟ್ ನಲ್ಲಿ ಹಣಾಹಣಿ ನಡೆಸಿದ್ದವು. ಅದರಲ್ಲಿ ಸ್ಮೃತಿ ಮಂದಾನ ಶತಕ ಗಳಿಸಿದ್ದರು. ಪಂದ್ಯ ಡ್ರಾ ಆಗಿತ್ತು. ಮೊದಲ ಜಯ ದಾಖಲಿಸಲು ಭಾರತಕ್ಕೆ ಈಗ ಉತ್ತಮ ಅವಕಾಶವಿದೆ.

ಈಚೆಗೆ ಇಂಗ್ಲೆಂಡ್ ವಿರುದ್ಧ ಐತಿಹಾಸಿಕ ಜಯ ಸಾಧಿಸಿದ್ದ ಭಾರತ ತಂಡವು ಆತ್ಮವಿಶ್ವಾಸದಲ್ಲಿದೆ. ಆ ಪಂದ್ಯದಲ್ಲಿ ಮಿಂಚಿದ್ದ ದೀಪ್ತಿ ಶರ್ಮಾ ಅವರ ಸ್ಪಿನ್ ದಾಳಿಯು ಆಸ್ಟ್ರೇಲಿಯಾಕ್ಕೆ ಸವಾಲಾಗುವ ಸಾಧ್ಯತೆ ಇದೆ. ವಾಂಖೆಡೆ ಕ್ರೀಡಾಂಗಣದ ಪಿಚ್ ಕೂಡ ಸ್ಪಿನ್ನರ್‌ಗಳಿಗೆ ನೆರವು ನೀಡುವ ಸಾಧ್ಯತೆ ಇದೆ.

ಆತಿಥೇಯ ತಂಡದ ಮಧ್ಯಮವೇಗಿ ರೇಣುಕಾ ಸಿಂಗ್ ಕೂಡ ಉತ್ತಮ ಲಯದಲ್ಲಿದ್ದಾರೆ. ಅವರಿಗೆ ಪೂಜಾ ವಸ್ತ್ರಾಕರ್ ಕೂಡ ಉತ್ತಮ ಬೆಂಬಲ ನೀಡಬಲ್ಲರು. ಬ್ಯಾಟಿಂಗ್ ವಿಭಾಗವೂ ಬಲಿಷ್ಠವಾಗಿದೆ. ಇಂಗ್ಲೆಂಡ್ ಎದುರು ಜೆಮಿಮಾ ರಾಡ್ರಿಗಸ್, ಯಷ್ಟಿಕಾ ಭಾಟಿಯಾ ಮತ್ತು ನಾಯಕಿ ಹರ್ಮನ್ ಅಮೋಘ ಬ್ಯಾಟಿಂಗ್ ಮಾಡಿದ್ದರು.

ಆ ಪಂದ್ಯದಲ್ಲಿ ಮೈಸೂರಿನ ಶುಭಾ ಸತೀಶ್ ಗಾಯದಿಂದ ಚೇತರಿಸಿಕೊಂ-ಡಿಲ್ಲ. ಆದ್ದರಿಂದ ಈ ಪಂದ್ಯಕ್ಕೆ ಅಲಭ್ಯ-ರಾಗಿದ್ದಾರೆ. ಅವರ ಬದಲಿಗೆ ಹರ್ಲೀನ್ ಡಿಯೊಲ್ ಸ್ಥಾನ ಪಡೆಯಬಹುದು.

40 ವರ್ಷಗಳ ಹಿಂದೆ ಆಸ್ಟ್ರೇಲಿಯಾ ಮಹಿಳಾ ತಂಡವು ಕೊನೆಯ ಬಾರಿಗೆ ಭಾರತದಲ್ಲಿ ಟೆಸ್ಟ್ ಆಡಿತ್ತು. ಇದೇ ವಾಂಖೆಡೆಯಲ್ಲಿ ಆ ಪಂದ್ಯ ನಡೆದಿತ್ತು. ದೀರ್ಘ ಅವಧಿಯ ನಂತರ ತಂಡವು ಇಲ್ಲಿಗೆ ಬಂದಿದೆ. ಈಚೆಗೆ ಮೆಗ್‌ಲ್ಯಾನಿಂಗ್ ನಿವೃತ್ತಿಯ ನಂತರ ನಾಯಕಿಯಾಗಿ ನೇಮಕವಾಗಿರುವ ಅಲೀಸಾ ಹೀಲಿ ಅವರಿಗೆ ತಮ್ಮ ಸಾಮರ್ಥ್ಯವನ್ನು ಒರೆಗೆ ಹಚ್ಚಲು ಈ ಪಂದ್ಯವು ಮಹತ್ವದ್ದಾಗಿದೆ. ಆ್ಯಷ್ಲೆ ಗಾರ್ಡನರ್, ಬೆತ್ ಮೂನಿ ಮತ್ತು ತಹಿಲಾ ಮೆಕ್‌ಗ್ರಾ ಅವರಂತಹ ಅನುಭವಿಗಳು ಇರುವುದರಿಂದ ಭಾರತ ತಂಡದ ಪೈಪೋಟಿ ಎದುರಿಸಿ ನಿಲ್ಲುವ ಉತ್ಸಾಹದಲ್ಲಿದೆ.

ಪಂದ್ಯ ಆರಂಭ: ಬೆಳಿಗ್ಗೆ 9.30
ನೇರಪ್ರಸಾರ: ಸ್ಪೋರ್ಟ್ 18

ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಬುಧವಾರ ಅಭ್ಯಾಸ ನಡೆಸಿದ ಭಾರತ ಮಹಿಳಾ ತಂಡದ ಆಟಗಾರ್ತಿಯರು –ಪಿಟಿಐ ಚಿತ್ರ

ನಾಯಿಕಡಿತದ ಗಾಯ: ಹೀಲಿ ಚೇತರಿಕೆ

ಆಸ್ಟ್ರೇಲಿಯಾ ತಂಡದ ನಾಯಕಿ ಮತ್ತು ವಿಕೆಟ್‌ಕೀಪರ್ ಅಲೀಸಾ ಹೀಲಿ ಅವರಿಗೆ 2 ತಿಂಗಳ ಹಿಂದೆ ಕೈಬೆರಳಿಗೆ ನಾಯಿ ಕಚ್ಚಿತ್ತು. ಅದರಿಂದಾಗಿ ತೀವ್ರವಾಗಿ ಗಾಯಗೊಂಡಿದ್ದ ಅವರು ಕ್ರಿಕೆಟ್‌ನಿಂದ ದೂರ ಉಳಿದಿದ್ದರು. ಬಲಗೈ ತೋರುಬೆರಳಿಗೆ ಆಗಿದ್ದ ಗಾಯಕ್ಕೆ 50 ಹೊಲಿಗೆಗಳನ್ನು ಹಾಕಲಾಗಿತ್ತು. ತಮ್ಮ ಸಾಕುನಾಯಿ ಸ್ಟಾಫರ್ಡ್‌ಶೈರ್ ಟೆರೀರ್‌ನಿಂದ ಕಡಿತಕ್ಕೊಳಗಾಗಿದ್ದರು.

‘ಬೆರಳಿನ ಗಾಯ ವಾಸಿಯಾಗಿದೆ. ಆಡಲು ಮರಳುತ್ತಿರುವುದು ಖುಷಿಯಾಗಿದೆ. ಗಾಯದಿಂದಾಗಿ ಮಹಿಳಾ ಬಿಗ್‌ಬ್ಯಾಷ್ ಲೀಗ್ ಟೂರ್ನಿ ತಪ್ಪಿಸಿಕೊಂಡೆ. ಮನೆಯಲ್ಲಿ ಕುಳಿತು ಟಿವಿಯಲ್ಲಿ ಪಂದ್ಯಗಳನ್ನು ವೀಕ್ಷಿಸಿದೆ. ಇದೀಗ ಮತ್ತೆ ಆಡಲು ಫಿಟ್ ಆಗಿದ್ದೇನೆ’ ಎಂದು ಹೀಲಿ ಹೇಳಿದರು.

ಭಾರತದ ಎದುರಿನ ಏಕೈಕ ಟೆಸ್ಟ್‌ನಲ್ಲಿ ಅವರು ವಿಕೆಟ್ ಕೀಪಿಂಗ್ ಮಾಡಲು ಸಜ್ಜಾಗಿದ್ದಾರೆ.

ಸ್ನೂಕರ್: ನತಾಶಾಗೆ ಪ್ರಶಸ್ತಿ

ಬೆಂಗಳೂರು: ಕರ್ನಾಟಕದ ನತಾಶಾ ಚೇತನ್ ಅವರು ಚೆನ್ನೈನಲ್ಲಿ ನಡೆಯುತ್ತಿರುವ 90ನೇ ರಾಷ್ಟ್ರೀಯ ಬಿಲಿಯರ್ಡ್ಸ್ ಮತ್ತು ಸ್ನೂಕರ್ ಚಾಂ-ಪಿಯನ್‌ಷಿಪ್‌ನಲ್ಲಿ ಸಬ್ ಜೂನಿಯರ್ ಬಾಲಕಿಯರ ಸ್ನೂಕರ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ.

ಫೈನಲ್‌ನಲ್ಲಿ ನತಾಶಾ ಅವರು ಗುಜರಾತ್‌ನ ಅನ್ಯಾ ಪಟೇಲ್ ಅವರನ್ನು 3-1 (35-57, 57-43, 55-42, 41-29) ಪರಾಭವ-ಗೊಳಿಸಿದರು.

ಕಳೆದ ವಾರ ಸಬ್ ಜೂನಿಯರ್ ಬಾಲಕಿಯರ ಬಿಲಿಯರ್ಡ್ಸ್ ಪ್ರಶಸ್ತಿಗೆ ನಡೆದ ಅಂತಿಮ ಸುತ್ತಿನಲ್ಲೂ ಇವರಿಬ್ಬರೂ ಮುಖಾಮುಖಿಯಾಗಿದ್ದು, ನತಾಶಾ ಜಯ ಸಾಧಿಸಿದ್ದರು.

ನತಾಶಾ ಚೇತನ್

ಎರಡನೇ ಸ್ಥಾನಕ್ಕಿಳಿದ ಗಿಲ್

ದುಬೈ (ಪಿಟಿಐ): ಭಾರತದ ಆರಂಭಿಕ ಬ್ಯಾಟರ್ ಶುಭಮನ್ ಗಿಲ್ ಅವರು ಏಕದಿನ ಕ್ರಿಕೆಟ್ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನ ಕಳೆದುಕೊಂಡಿದ್ದಾರೆ. ಪಾಕಿಸ್ತಾನ ತಂಡದ ಮಾಜಿ ನಾಯಕ ಬಾಬರ್ ಆಜಂ ಮತ್ತೆ ಮೊದಲ ಸ್ಥಾನಕ್ಕೆ ಏರಿದ್ದಾರೆ.

ಐಸಿಸಿ ಬುಧವಾರ ಬಿಡುಗಡೆ ಮಾಡಿದ ರ‍್ಯಾಂಕಿಂಗ್‌ನಲ್ಲಿ ಭಾರತದ ತಲಾ ಮೂವರು ಬ್ಯಾಟರ್‌ಗಳು ಮತ್ತು ಬೌಲರ್‌ಗಳು ಅಗ್ರ 10ರಲ್ಲಿ ಇದ್ದಾರೆ. ಹೋದ ತಿಂಗಳು ಬಾಬರ್ ಅವರನ್ನು ಹಿಂದಿಕ್ಕಿ ಅಗ್ರಸ್ಥಾನಕ್ಕೆ ಏರಿದ್ದ ಗಿಲ್, ನಂತರ ಏಕದಿನ ಪಂದ್ಯಗಳನ್ನು ಆಡಿಲ್ಲ. ಮೊದಲೆರಡು ಸ್ಥಾನದಲ್ಲಿರುವ ಬಾಬರ್ ಮತ್ತು ಗಿಲ್ ಕ್ರಮವಾಗಿ 824 ಹಾಗೂ 810 ಪಾಯಿಂಟ್ಸ್ ಹೊಂದಿದ್ದಾರೆ. ಭಾರತದ ಸ್ಟಾರ್ ಬ್ಯಾಟರ್ ವಿರಾಟ್ ಕೊಹ್ಲಿ ಮೂರನೇ, ನಾಯಕ ರೋಹಿತ್ ಶರ್ಮಾ ನಾಲ್ಕನೇ ಸ್ಥಾನದಲ್ಲಿದ್ದಾರೆ. ಶ್ರೇಯಸ್ ಅಯ್ಯರ್ ಮತ್ತು ಕೆ.ಎಲ್. ರಾಹುಲ್ ಕ್ರಮವಾಗಿ 12 ಮತ್ತು 16ನೇ ಸ್ಥಾನಕ್ಕೆ ಕುಸಿದಿದ್ದಾರೆ.

ಹಾಕಿ: ಭಾರತಕ್ಕೆ ಮಣಿದ ಫ್ರಾನ್ಸ್

ವಲೆನ್ಸಿಯಾ (ಸ್ಪೇನ್) (ಪಿಟಿಐ): ನಾಯಕ ಹರ್ಮನ್ ಪ್ರೀತ್ ಸಿಂಗ್ ಮತ್ತು ಜುಗರಾಜ್ ಸಿಂಗ್ ಅವರ ಗೋಲುಗಳ ನೆರವಿನಿಂದ ಭಾರತ ಪುರುಷರ ಹಾಕಿ ತಂಡ ಇಲ್ಲಿ ನಡೆದ ನಾಲ್ಕನೇ ಮತ್ತು ಅಂತಿಮ ಪಂದ್ಯದಲ್ಲಿ ಫ್ರಾನ್ಸ್ ತಂಡವನ್ನು 5–4 ಗೋಲುಗಳಿಂದ ಮಣಿಸಿತು. ಐದು ರಾಷ್ಟ್ರಗಳ ಟೂರ್ನಿಯಲ್ಲಿ ಭಾರತಕ್ಕೆ ಇದು ಮೊದಲ ಗೆಲುವು.

ಜುಗರಾಜ್ (20ನೇ ಮತ್ತು 60ನೇ ನಿಮಿಷ) ಗೋಲು ಗಳಿಸಿದರೆ, ಹರ್ಮನ್ ಪ್ರೀತ್ 25 ಮತ್ತು 56ನೇ ನಿಮಿಷದಲ್ಲಿ ಗೋಲು ಗಳಿಸಿದರು. ಪಂದ್ಯದ ಮೊದಲಾರ್ಧದಲ್ಲಿ ವಿವೇಕ್ ಸಾಗರ್ (16ನೇ ನಿಮಿಷ) ಒಂದು ಗೋಲು ಬಾರಿಸಿದರು.

ಟೂರ್ನಿಯಲ್ಲಿ ಸತತ ಸೋಲು ಅನುಭವಿಸಿದ್ದ ಭಾರತ, ಗೆಲುವಿನೊಂದಿಗೆ ಅಭಿಯಾನ ಕೊನೆಗೊಳಿಸಿತು. ಸ್ಪೇನ್ ವಿರುದ್ಧ 0-1, ಬೆಲ್ಜಿಯಂ ವಿರುದ್ಧ 2-7 ಹಾಗೂ ಜರ್ಮನಿ ವಿರುದ್ಧ 2-3 ಅಂತರದಲ್ಲಿ ಸೋತಿತ್ತು. ಫ್ರಾನ್ಸ್ 9ನೇ ಸ್ಥಾನದಲ್ಲಿದ್ದರೆ, ಭಾರತ ಮೂರನೇ ಸ್ಥಾನದಲ್ಲಿದೆ. ಮೊದಲ ಕ್ವಾರ್ಟರ್‌ನ 11ನೇ ನಿಮಿಷದಲ್ಲಿ ಲೂಕಾಸ್ ಮಾಂಟೆಕಾಟ್ ಗಳಿಸಿದ ಪೆನಾಲ್ಟಿ ಕಾರ್ನರ್ ಗೋಲಿನಿಂದ ಫ್ರಾನ್ಸ್ ಮುನ್ನಡೆ ಸಾಧಿಸಿತು. ವಿವೇಕ್ ಗಳಿಸಿದ ಫೀಲ್ಡ್ ಗೋಲಿನಿಂದ ಭಾರತ ಎರಡನೇ ಕ್ವಾರ್ಟರ್‌ನ ಆರಂಭದಲ್ಲಿ ಸಮಬಲ ಸಾಧಿಸಿತು. ನಂತರ ಜುಗರಾಜ್ ಪೆನಾಲ್ಟಿ ಕಾರ್ನರ್ ಮೂಲಕ ಭಾರತಕ್ಕೆ ಮುನ್ನಡೆ ತಂದುಕೊಟ್ಟರು. ಫ್ರಾನ್ಸ್ ಪರ ಎಟಿಯೆನ್ ಟೈನೆವೆಜ್ (28ನೇ ನಿಮಿಷ) ಪೆನಾಲ್ಟಿ ಸ್ಟ್ರೋಕ್ ಮೂಲಕ ಗೋಲು ಬಾರಿಸಿದರು. ಮೂರನೇ ಕ್ವಾರ್ಟರ್ ನಲ್ಲಿ ಗಾಸ್ಪರ್ಡ್ ಬೌಮ್ಗಾರ್ಟನ್ (43ನೇ ನಿಮಿಷ) ಗಳಿಸಿದ ಫೀಲ್ಡ್ ಗೋಲಿನಿಂದ ಫ್ರಾನ್ಸ್ ಸಮಬಲ ಸಾಧಿಸಿತು. ಸ್ಕೋರ್ ಸಮಬಲವಾಗುತ್ತಿ-ದ್ದಂತೆ ಅಂತಿಮ ಕ್ವಾರ್ಟರ್‌ನಲ್ಲಿ ಎರಡೂ ತಂಡಗಳು ಪರಸ್ಪರರ ರಕ್ಷಣಾ ಕೋಟೆ ದಾಟಿ ನುಗ್ಗಲು ಪ್ರಯತ್ನಿಸಿದವು.

ಸಂಕ್ಷಿಪ್ತ ಸುದ್ದಿ

ಪರ್ಹಾಮ್ ವಿರುದ್ಧ ಇರಿಗೇಶಿಗೆ ಜಯ

ಚೆನ್ನೈ (ಪಿಟಿಐ): ಭಾರತದ ಅರ್ಜುನ್ ಇರಿಗೇಶಿ ಅವರು ಇಲ್ಲಿ ನಡೆಯುತ್ತಿರುವ ಚೆನ್ನೈ ಗ್ರ್ಯಾಂಡ್ ಮಾಸ್ಟರ್ಸ್ ಚೆಸ್ ಚಾಂಪಿಯನ್‌ಷಿಪ್‌ನ ಆರನೇ ಸುತ್ತಿನ ಪಂದ್ಯದಲ್ಲಿ ಇರಾನ್ ದೇಶದ ಅಗ್ರಶ್ರೇ-ಯಾಂಕದ ಪರ್ಹಾಮ್ ಮಘಸೂದ್ ಅವರನ್ನು ಮಣಿಸಿ, ಜಂಟಿಯಾಗಿ ಎರಡನೇ ಸ್ಥಾನಕ್ಕೆ ಏರಿದರು.

ಅರ್ಜುನ್

20 ವರ್ಷದ ಅರ್ಜುನ್ ಬುಧವಾರ ಕಪ್ಪುಕಾಯಿಗಳಲ್ಲಿ ಆಡಿ 40 ನಡೆಗಳಲ್ಲಿ ಗೆಲುವು ಸಾಧಿಸಿದರು.

3.5 ಪಾಯಿಂಟ್ಸ್ ಗಳಿಸಿರುವ ಅರ್ಜುನ್ ಅವರು ಗ್ರ್ಯಾಂಡ್‌ಮಾ-ಸ್ಟರ್‌ಗಳಾದ ಭಾರತದ ಪಿ. ಹರಿಕೃಷ್ಣ ಮತ್ತು ಉಕ್ರೇನ್‌ನ ಪಾವೆಲ್ ಎಲ್ಜಾನೋವ್ ಅವರೊಂದಿಗೆ ಎರಡನೇ ಸ್ಥಾನದಲ್ಲಿದ್ದಾರೆ. ಭಾರತದ ಮತ್ತೊಬ್ಬ ಗ್ರ್ಯಾಂಡ್‌ಮಾಸ್ಟರ್ ಡಿ. ಗುಕೇಶ್ ಅವರು ಸತತ ಎರಡನೇ ಗೆಲುವಿನ ಬಳಿಕ ಪಾವೆಲ್ ಎದುರು ಡ್ರಾ ಸಾಧಿಸಿದರು. ಬಿಳಿಕಾಯಿಗಳಲ್ಲಿ ಆಡಿದ ಸ್ಥಳೀಯ ಆಟಗಾರ 30 ನಡೆಗಳಲ್ಲಿ ಡ್ರಾ ಮಾಡಿಕೊಂಡರು. ಆದಾಗಿಯೂ 4 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ.

ಇತರ ಪಂದ್ಯಗಳಲ್ಲಿ ಹರಿಕೃಷ್ಣ ಅವರು ಹಂಗೇರಿಯ ಸನನ್ ಸುಗಿರೋವ್ ಜತೆ ಡ್ರಾ ಮಾಡಿಕೊಂಡಿದ್ದಾರೆ.

ರೈಫಲ್ ಶೂಟಿಂಗ್: ನಾಳೆ ಆಯ್ಕೆ

ಬೆಂಗಳೂರು: ಪದವಿ ಪೂರ್ವ ಶಿಕ್ಷಣ ಹಂತದ 19 ವರ್ಷದೊಳಗಿನವರ ರಾಷ್ಟ್ರಮಟ್ಟದ 67ನೇ ರೈಫಲ್ ಶೂಟಿಂಗ್ ಸ್ಪರ್ಧೆಯನ್ನು ಡಿಸೆಂಬರ್ 27ರಿಂದ ಜನವರಿ1 ರವರೆಗೆ ಭೋಪಾಲ್‌ನಲ್ಲಿ ಆಯೋಜಿಸಿದೆ.

ಈ ಟೂರ್ನಿಯಲ್ಲಿ ಭಾಗವಹಿಸುವ ರಾಜ್ಯ ತಂಡದ ಆಯ್ಕೆ ಪ್ರಕ್ರಿಯೆ ಡಿಸೆಂಬರ್ 22 ರಂದು ಬೆಳಿಗ್ಗೆ 10 ಗಂಟೆಗೆ ಬೆಂಗಳೂರಿನ ಶೇಷಾದ್ರಿಪುರಂ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ನಡೆಸಲಾಗುತ್ತದೆ. ಭಾಗವಹಿಸಲು ಇಚ್ಛಿಸುವ ವಿದ್ಯಾರ್ಥಿಗಳು ನೇರವಾಗಿ ಸ್ಪರ್ಧೆಯಲ್ಲಿ ಹೆಸರು ನೋಂದಾಯಿಸಬೇಕು ಎಂದು ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ಸಾಲ್ಟ್ ಶತಕ: ಇಂಗ್ಲೆಂಡ್ ತಂಡಕ್ಕೆ ಗೆಲುವು

ಸ್ಯಾನ್ ಫೆರ್ನಾಂಡೊ (ಎಪಿ): ಸತತ ಎರಡನೇ ಶತಕ ಗಳಿಸಿದ ಫಿಲಿಪ್ ಸಾಲ್ಟ್ ನೆರವಿನಿಂದ ಇಂಗ್ಲೆಂಡ್ ತಂಡವು ವೆಸ್ಟ್ ಇಂಡೀಸ್ ವಿರುದ್ಧದ ಟಿ20 ಸರಣಿಯ ನಾಲ್ಕನೇ ಪಂದ್ಯವನ್ನು 75 ರನ್‌ಗಳಿಂದ ಜಯಿಸಿತು. ಇದರೊಂದಿಗೆ ಸರಣಿ ಗೆಲುವಿನ ಕನಸು ಜೀವಂತವಾಗಿರಿಸಿದೆ.

ಮೊದಲ 2 ಪಂದ್ಯ ವೆಸ್ಟ್‌ಇಂಡೀಸ್ ಗೆದ್ದಿದ್ದರೆ, ನಂತರದ 2 ಪಂದ್ಯ ಆಂಗ್ಲ ಪಡೆ ಜಯಿಸಿ ಸರಣಿಯು 2–2ರಿಂದ ಸಮಬಲವಾಗಿದೆ. ನಿರ್ಣಾಯಕ ಐದನೇ ಪಂದ್ಯ ಗುರುವಾರ ನಡೆಯಲಿದೆ.

ಸಾಲ್ಟ್ ಶತಕದ (119; 57ಎ, 4x8, 6x10) ನೆರವಿನಿಂದ ಇಂಗ್ಲೆಂಡ್ 20 ಓವರ್‌ಗಳಲ್ಲಿ ಮೂರು ವಿಕೆಟ್‌ಗೆ 267 ರನ್ ಗಳಿಸಿತು. ಇದು ಟಿ20 ಕ್ರಿಕೆಟ್‌ನಲ್ಲಿ ಇಂಗ್ಲೆಂಡ್ ತಂಡದ ಗರಿಷ್ಠ ಮೊತ್ತವಾಗಿದೆ. ವೆಸ್ಟ್‌ಇಂಡೀಸ್ 15.3 ಓವರ್‌ಗಳಲ್ಲಿ 192 ರನ್‌ಗೆ ಕುಸಿಯಿತು.

ಸಂಕ್ಷಿಪ್ತ ಸ್ಕೋರ್: ಇಂಗ್ಲೆಂಡ್: 20 ಓವರ್‌ಗಳಲ್ಲಿ 3 ವಿಕೆಟ್‌ಗೆ 267 (ಫಿಲಿಪ್ ಸಾಲ್ಟ್ 119, ಜೋಸ್ ಬಟ್ಲರ್ 55, ಲಿಯಾಮ್ ಲಿವಿಂಗ್‌ಸ್ಟೋನ್ ಔಟಾಗದೆ 54) ವೆಸ್ಟ್‌ಇಂಡೀಸ್: 15.3 ಓವರ್‌ಗಳಲ್ಲಿ 192 (ನಿಕೊಲಸ್ ಪೂರನ್ 39, ಆ್ಯಂಡ್ರೆ ರಸೆಲ್ 51, ರೀಸ್ ಟೋಪ್ಲಿ 37ಕ್ಕೆ 3, ಸ್ಯಾಮ್ ಕರನ್ 25ಕ್ಕೆ 2, ರೆಹಾನ್ ಅಹಮದ್ 42ಕ್ಕೆ 2):

ಫಲಿತಾಂಶ: ಇಂಗ್ಲೆಂಡ್‌ಗೆ 75 ರನ್ ಜಯ, ಪಂದ್ಯ ಆಟಗಾರ: ಫಿಲಿಪ್ ಸಾಲ್ಟ್

ಆರ್‌ಸಿಬಿ ತಂಡದ ಸಂಯೋಜನೆಗೆ ಡುಪ್ಲೆಸಿ ಸಂತಸ

ಬೆಂಗಳೂರು: ಮುಂಬರುವ ಐಪಿಎಲ್ ಟೂರ್ನಿಯಲ್ಲಿ ಸಮತೋಲನವಿರುವ ತಂಡವನ್ನು ಕಣಕ್ಕಿಳಿಸುವ ಮುಖ್ಯ ಉದ್ದೇಶಕ್ಕೆ ಸರಿಹೊಂದುವಂತಹ ಆಟಗಾರರನ್ನು ಬಿಡ್‌ನಲ್ಲಿ ಆಯ್ಕೆ ಮಾಡಲಾಗಿದೆ ಎಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನಾಯಕ ಫಫ್ ಡುಪ್ಲೆಸಿ ಹೇಳಿದ್ದಾರೆ.

ಮಂಗಳವಾರ ದುಬೈನಲ್ಲಿ ನಡೆದ ಮಿನಿ ಹರಾಜಿನಲ್ಲಿ ಆರ್‌ಸಿಬಿಯು ವೆಸ್ಟ್ ಇಂಡೀಸ್ ಬೌಲರ್ ಅಲ್ಜಾರಿ ಜೋಸೆಫ್ (₹ 11.50 ಕೋಟಿ), ನ್ಯೂಜಿಲೆಂಡ್‌ನ ಲಾಕಿ ಫರ್ಗ್ಯುಸನ್ (₹ 2 ಕೋಟಿ), ಭಾರತದ ಬೌಲರ್ ಯಶ್ ದಯಾಳ್ (₹ 5 ಕೋಟಿ), ಸೈಯದ್ ಮುಷ್ತಾಕ್ ಅಲಿ ಟೂರ್ನಿಯಲ್ಲಿ ಮಿಂಚಿದ್ದ ವಿಕೆಟ್‌ಕೀಪರ್ ಸೌರವ್ ಚೌಹಾಣ್ (₹ 20 ಲಕ್ಷ) ಮತ್ತು ಆಲ್‌ರೌಂಡರ್ ಸ್ವಪ್ನಿಲ್ ಸಿಂಗ್ (₹ 20 ಲಕ್ಷ) ಅವರನ್ನು ಖರೀದಿಸಿತ್ತು.

‘ಫ್ರ್ಯಾಂಚೈಸಿಯ ಭವಿಷ್ಯದ ಬೆಳವಣಿಗೆ ಕುರಿತು ನಾವು ಆಂತರಿಕವಾಗಿ ಬಹಳಷ್ಟು ಮಾತುಕತೆ ಮಾಡಿದ್ದೇವೆ. ಹರಾಜು ಪ್ರಕ್ರಿಯೆಗೂ ಮುನ್ನ ಬಹಳಷ್ಟು ಪೂರ್ವತಯಾರಿ ಮುಖ್ಯವಾಗಿತ್ತು. ಪ್ರತಿಯೊಂದು ವಿಭಾಗವನ್ನು ಬಲಪಡಿಸುವ ಕುರಿತು ಸೂಕ್ಷ್ಮವಾಗಿ ಚಿಂತನೆ ನಡೆಸಲಾಗಿದೆ’ ಎಂದು ಡುಪ್ಲೆಸಿ ಹೇಳಿದ್ದಾರೆ.

‘ಕಳೆದ ಬಾರಿಯ ಆವೃತ್ತಿಯ ನಂತರ ನಡೆಸಿದ ಅವಲೋಕನದಲ್ಲಿ ತಂಡವನ್ನು ಮತ್ತಷ್ಟು ಬಲಗೊಳಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಯೋಜನೆ ಮಾಡಿದೆವು. ಚಿನ್ನಸ್ವಾಮಿ ಕ್ರೀಡಾಂಗ-ಣದಲ್ಲಷ್ಟೇ ಅಲ್ಲ, ಅದರಾಚೆಯೂ ಉತ್ತಮವಾಗಿ ಆಡುವಂತಹ ತಂಡ ಸಿದ್ಧವಾಗಬೇಕೆಂದು ಪ್ರಯತ್ನಿಸಿದ್ದೇವೆ’ ಎಂದರು. ಪಂದ್ಯದ ಸಂಯೋಜನೆಯ ಕುರಿತು ಸಂತಸ ವ್ಯಕ್ತಪಡಿಸಿರುವ ಮುಖ್ಯ ಕೋಚ್ ಆ್ಯಂಡಿ ಫ್ಲವರ್, ‘ಬಳಗವು ನಿಜಕ್ಕೂ ಬಲಿಷ್ಠವಾಗಿದೆ. ಅದರಲ್ಲೂ ಬ್ಯಾಟಿಂಗ್‌ನಲ್ಲಿ ಅಗ್ರ ನಾಲ್ಕರಲ್ಲಿ ವಿರಾಟ್ ಕೊಹ್ಲಿ, ಫಫ್, ರಜತ್ ಪಾಟೀದಾರ್ ಮತ್ತು ಗ್ಲೆನ್ ಮ್ಯಾಕ್ಸ್‌ವೆಲ್ ಇದ್ದಾರೆ. ಕ್ಯಾಮರಾನ್ ಗ್ರೀನ್ ಅವರು ಬ್ಯಾಟಿಂಗ್‌ನಲ್ಲಿ ಕೂಡ ಶಕ್ತಿ ತುಂಬಬಲ್ಲರು’ ಎಂದಿದ್ದಾರೆ.

ಪುಣೇರಿ ದಿಗ್ವಿಜಯ; ಬುಲ್ಸ್ ಪರಾಜಯ

ಪ್ರೊ ಕಬಡ್ಡಿ : ಜೈಪುರ್ ಪಿಂಕ್ ಪ್ಯಾಂಥರ್ಸ್‌ಗೆ ಮಣಿದ ಯು.ಪಿ. ಯೋಧಾಸ್

• ವಿಕ್ರಂ ಕಾಂತಿಕೆರೆ

ಪುಣೆ: ಕಿಕ್ಕಿರಿದು ತುಂಬಿದ್ದ ತವರಿನ ಪ್ರೇಕ್ಷಕರ ಶಿಳ್ಳೆ–ಕೇಕೆಯ ಮಧ್ಯೆ ಬೆಂಗಳೂರು ಬುಲ್ಸ್ ತಂಡವನ್ನು ಏಕಪಕ್ಷೀಯವಾಗಿ ಮಣಿಸಿದ ಪುಣೇರಿ ಪಲ್ಟನ್ ತಂಡ ಪ್ರೊ ಕಬಡ್ಡಿ ಲೀಗ್‌ನಲ್ಲಿ ಹ್ಯಾಟ್ರಿಕ್ ಸಾಧನೆ ಮಾಡಿತು.

ಇಲ್ಲಿನ ಬಾಲೇವಾಡಿಯ ಶ್ರೀ ಶಿವ ಛತ್ರಪತಿ ಕ್ರೀಡಾ ಸಂಕೀರ್ಣದಲ್ಲಿ ಬುಧವಾರ ರಾತ್ರಿ ನಡೆದ ಪಂದ್ಯದಲ್ಲಿ ಪುಣೇರಿ 43–18 ಜಯ ಗಳಿಸಿತು. ಈ ಮೂಲಕ ಪಾಯಿಂಟ್ ಪಟ್ಟಿಯಲ್ಲಿ ಅಗ್ರ-ಸ್ಥಾನವನ್ನು ಭದ್ರಪಡಿಸಿಕೊಂಡಿತು.

ಸತತ ಸೋಲಿನಿಂದ ಚೇತರಿಸಿಕೊಂಡು ಹಿಂದಿನ 2 ಪಂದ್ಯಗಳಲ್ಲಿ ಗೆದ್ದಿದ್ದ ಬುಲ್ಸ್ ಮತ್ತೆ ಮುಗ್ಗರಿಸಿತು. 3 ಮತ್ತು 9ನೇ ನಿಮಿಷ ಗಳಲ್ಲಿ ಎದುರಾ-ಳಿಗಳನ್ನು ಆಲೌಟ್ ಮಾಡುವ ಮೂಲಕ 28–8ರ ಮುನ್ನಡೆಯೊಂದಿಗೆ ವಿರಾಮಕ್ಕೆ ತೆರಳಿದ ಪುಣೇರಿ ದ್ವಿತೀಯಾರ್ಧದಲ್ಲೂ ಭರ್ಜರಿ ಆಟವಾಡಿತು.

ರೇಡರ್ ಮೋಹಿತ್ ಗೋಯತ್ 8 ಪಾಯಿಂಟ್ ಗಳಿಸಿದರೆ ಆಲ್‌ರೌಂಡರ್ ಮಹಮ್ಮದ್ ರೇಜಾ 7 ಮತ್ತು ನಾಯಕ, ಆಲ್‌ರೌಂಡರ್ ಅಸ್ಲಾಂ ಮುಸ್ತಫಾ 6 ಪಾಯಿಂಟ್ ಕಲೆ ಹಾಕಿದರು. ಬುಲ್ಸ್‌ಗಾಗಿ ಆಲ್‌ರೌಂಡರ್ ರೋಹಿತ್ ಕುಮಾರ್ 6 ಪಾಯಿಂಟ್ ಕಲೆ ಹಾಕಿದರೆ ರೇಡಿಂಗ್‌ನಲ್ಲಿ ವಿಕಾಸ್ ಖಂಡೋಲಾ (5 ಪಾಯಿಂಟ್) ಮಾತ್ರ ಮಿಂಚಿದರು.

ಬೆಂಗಳೂರು ಬುಲ್ಸ್ ಆಟಗಾರರಿಂದ ಪಾರಾಗಲು ಪ್ರಯತ್ನಿಸಿದ ಪುಣೇರಿ ಪಲ್ಟನ್ ತಂಡದ ಮೋಹಿತ್ ಗೋಯತ್

ರಕ್ಷಿತ್ ಪೂಜಾರಿ ಪದಾರ್ಪಣೆ: ಬುಲ್ಸ್‌ನಲ್ಲಿರುವ ಏಕೈಕ ಕನ್ನಡಿಗ ರಕ್ಷಿತ್ ಪೂಜಾರಿ ದ್ವಿತೀಯಾರ್ಧದಲ್ಲಿ ಮ್ಯಾಟ್‌ಗೆ ಇಳಿಯುವ ಮೂಲಕ ಪ್ರೊ ಕಬಡ್ಡಿಗೆ ಪದಾರ್ಪಣೆ ಮಾಡಿದರು.

ಯೋಧಾ ಮಣಿಸಿದ ಜೈಪುರ: ಬುಧವಾರದ ಮೊದಲ ಪಂದ್ಯದಲ್ಲಿ ಜೈಪುರ ಪಿಂಕ್ ಪ್ಯಾಂಥರ್ಸ್ 41–24ರಲ್ಲಿ ಯು.ಪಿ.ಯೋಧಾಸ ಅನ್ನು ಮಣಿಸಿತು.

ಚುರುಕಿನ ರೇಡರ್‌ಗಳಾದ ನಾಯಕ ಪ್ರದೀಪ್ ನರ್ವಾಲ್ ಮತ್ತು ಸುರೇಂದರ್ ಗಿಲ್ ಅವರನ್ನು ಒಳಗೊಂಡ ಯೋಧಾ ಮೊದಲಾರ್ಧದಲ್ಲಿ 9–24ರ ಹಿನ್ನಡೆ ಅನುಭವಿಸಿದ್ದರೂ ದ್ವಿತೀಯಾರ್ಧದ ಅರಂಭದಲ್ಲಿ ಚೇತರಿಸಿಕೊಂಡು ಹಿನ್ನಡೆಯನ್ನು 20–29ಕ್ಕೆ ಇಳಿಸಿತು.

ಆದರೆ ಕೊನೆಯ 10 ನಿಮಿಷಗಳಲ್ಲಿ 12 ಪಾಯಿಂಟ್ ಗಳಿಸಿ ಜೈಪುರ ಜಯಭೇರಿ ಮೊಳಗಿಸಿತು. ತಂಡಕ್ಕಾಗಿ ಅರ್ಜುನ್ ದೇಶ್ವಾಲ್ ರೇಡಿಂಗ್‌ನಲ್ಲಿ 13 ಪಾಯಿಂಟ್ ಕಲೆ ಹಾಕಿದರು.

ಇಂದು ಬಿಡುವು: ಲೀಗ್‌ನ ನಾಲ್ಕನೇ ಲೆಗ್ ನಾಳೆಯಿಂದ ಚೆನ್ನೈಯಲ್ಲಿ ನಡೆಯಲಿದ್ದು ಇಂದು ಪಂದ್ಯಗಳು ಇರುವುದಿಲ್ಲ.

ನಾಳೆಯ ಪಂದ್ಯಗಳು
ತಮಿಳ್ ತಲೈವಾಸ್–ಪಟ್ನಾ ಪೈರೇಟ್ಸ್ (ರಾತ್ರಿ 8.00), ಹರಿಯಾಣ ಸ್ಟೀಲರ್ಸ್– ತೆಲುಗು ಟೈಟನ್ಸ್ (ರಾತ್ರಿ 9.00)